ದೇವರ ಮಾರ್ಗದರ್ಶನವನ್ನು

# ಹೊಂದಿಕೊಳ್ಳುವದು



ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ  ಮತ್ತು ಹಂಚಿಕೆ : ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಸೆಪ್ಟೆಂಬರ್ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಟ್ಪೈಯ್ಡ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Receiving God's Guidance)

# ದೇವರ ಮಾರ್ಗದರ್ಶನವನ್ನು
# ಹೊಂದಿಕೊಳ್ಳುವದು

# ಸಮರ್ಪಣೆ

## ನಮ್ಮ ನಂತರ ಬರಲಿರುವ ಜನಾಂಗಗಳಿಗೆ

*ನಾನಂತೂ ಅವರೊಂದಿಗೆ ಈ ಒಡಂಬಡಿಕೆಯನ್ನು ಮಾಡಿಕೊಳ್ಳುವೆನು, ನೋಡಿರಿ; ನಿಮ್ಮಲ್ಲಿ ಆವೇಶಿಸಿರುವ ನನ್ನ ಆತ್ಮವೂ ನಿಮ್ಮ ಬಾಯಿಗೆ ನಾನು ಕೊಟ್ಟಿರುವ ಮಾತುಗಳೂ ನಿಮ್ಮ ಬಾಯಿಂದಾಗಲಿ ನಿಮ್ಮ ಸಂತತಿಯ ಬಾಯಿಂದಾಗಲಿ ನಿಮ್ಮ ಸಂತತಿಯ ಸಂತಾನದ ಬಾಯಿಂದಾಗಲಿ ಇಂದಿನಿಂದ ಎಂದಿಗೂ ತೊಲಗುವದಿಲ್ಲ ಎಂದು ಯೆಹೋವನು ಅನ್ನುತ್ತಾನೆ*
(ಯೆಶಾಯ 59:21)

ನಾವು ಹೊಂದಿರುವದಕ್ಕಿಂತ ಹೆಚ್ಚಾಗಿ ಆತನ ಹೆಚ್ಚಾದ ಅನುಭವವನ್ನು ನೀವು ಹೊಂದಿಕೊಳ್ಳಿರಿ.

ಆತನ ಮಾತು, ಮುನ್ನಡೆಸುಕೆ, ಸಲಹೆ ಮತ್ತು ಮಾರ್ಗದರ್ಶನ ನಿಮಗೆ ಸ್ವಾಭಾವಿಕವಾಗಿ ಮತ್ತು ಸಹಜವಾಗಿರಲಿ.

ನಿಮ್ಮ ದಿನದಲ್ಲಿ ದೇವರ ಎಲ್ಲಾ ಚಿತ್ತವನ್ನು ನೆರವೇರಿಸುತ್ತಾ, ದೇವರ ಸ್ವಂತ ಜನರಾಗಿರಿ.

# ಪರಿವಿಡಿ


| | |
|---|---|
| 1. ದೇವರು ನಮ್ಮ ಮಾರ್ಗದರ್ಶಿ | 4 |
| 2. ದೇವರನ್ನು ವಿಚಾರಿಸುತ್ತಿದ್ದ ದಾವೀದನು | 23 |
| 3. ವಾಕ್ಯ | 34 |
| 4. ಆತ್ಮನ ಅಂತರಂಗದ ಸಾಕ್ಷಿ | 49 |
| 5. ಪವಿತ್ರಾತ್ಮನ ಧ್ವನಿ | 80 |
| 6. ಪವಿತ್ರಾತ್ಮನ ವರಗಳು | 94 |
| 7. ಕನಸುಗಳು ಮತ್ತು ದರ್ಶನಗಳು | 102 |
| 8. ಪ್ರವಾದನೆಗಳು | 114 |
| 9. ದೂತರುಗಳು | 119 |
| 10. ದೈವಿಕ ಸಮಾಲೋಚನೆ | 123 |
| 11. ನವೀಕರಣಗೊಂಡ ಮನಸ್ಸು | 130 |
| 12. ಸಮಯಗಳು ಮತ್ತು ಕಾಲಗಳು | 138 |
| 13. ಸನ್ನಿವೇಶಗಳು ಮತ್ತು ದೈವಿಕ ಸಂಘಟಿಸುಕೆಗಳು | 147 |
| 14. ಇದೆಲ್ಲವನ್ನೂ ಒಟ್ಟಿಗೆ ಇಡುವದು | 160 |

# ಪರಿಚಯ

ನಮಗೆ ಮಾರ್ಗದರ್ಶನ ಮಾಡಿ ನಮ್ಮನ್ನು ಮುನ್ನಡೆಸುತ್ತೇನೆಂದು ದೇವರು ವಾಗ್ದಾನ ಮಾಡಿದ್ದಾನೆ. ವಿಶ್ವಾಸಿಗಳ ಹಾಗೆ, ದೇವರಿಂದ ಮುನ್ನಡೆಸಲ್ಪಡುವದಕ್ಕೆ ನಾವು ಯಥಾರ್ಥವಾಗಿ ಆಶಿಸಬೇಕು. ನಮ್ಮ ಜೀತಗಳಲ್ಲಿನ ಆತನ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ಅನುಸರಿಸುವ ಪ್ರಾಮುಖ್ಯತೆಯನ್ನು ಗ್ರಹಿಸಿಕೊಳ್ಳಬೇಕು. ದೇವರ ಮಾರ್ಗಗಳು ನಮಗಾಗಿ ಉತ್ತಮವಾದವುಗಳೆಂದು ನಾವು ಗುರುತಿಸಬೇಕು. ನಮ್ಮ ಜೀವಿತಗಳಲ್ಲಿನ ಆತನ ಚಿತ್ತಕ್ಕನುಸಾರವಾಗಿ ಜೀವಿಸುವದಕ್ಕೆ ಹುಡುಕುವವರಾಗಬೇಕು.

ಈ ಪುಸ್ತಕವು ನಮ್ಮ ಜೀವಿತಗಳಿಗಾಗಿ ದೇವರ ಮಾರ್ಗದರ್ಶನವನ್ನು ಪಡೆದುಕೊಳ್ಳುವ ಕೆಲವು ಪ್ರಾಮುಖ್ಯವಾದ ರೀತಿಗಳ ಅಧ್ಯಯನವಾಗಿದೆ. ಅದೇ ವೇಳೆಯಲ್ಲಿ ದೇವರ ಮಾರ್ಗದರ್ಶನವನ್ನು ಹೇಗೆ ಗ್ರಹಿಸಿಕೊಳ್ಳಬೇಕೆನ್ನುವುದರ ಮೇಲೆ ಯಾವುದೇ ನಿಯಮವು ಇಡಲ್ಪಟ್ಟಿಲ್ಲ, ನಮ್ಮ ಜೀವಿತಗಳೊಳಗೆ ದೇವರು ಮಾತಾಡಿರುವಂತಹ ತನ್ನ ಮಾರ್ಗದರ್ಶನದ ಮೂಲಕವಾಗಿ ವಿವಿಧ ರೀತಿಗಳ ಮೇಲೆ ದೇವರ ವಾಕ್ಯವು ಯಾವುದನ್ನು ಪ್ರಕಟಿಸಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಲೇಬೇಕು. ದೊಡ್ಡದಿರಲಿ ಅಥವಾ ಚಿಕ್ಕದಿರಲಿ, ಜೀವನದ ಎಲ್ಲಾ ತೀರ್ಮಾನದ ಅಂಶಗಳ ಮೂಲಕವಾಗಿ ಆತನನ್ನು ಹಿಂಬಾಲಿಸುವದಕ್ಕೆ ಇದು ನಮ್ಮನ್ನು ಶಕ್ತರನ್ನಾಗಿಸುತ್ತದೆ.

ಆತನ ಮಾತು ಅಂದರೆ ಬರೆಯಲ್ಪಟ್ಟಿರುವ ವಾಕ್ಯಗಳ ಮೂಲಕ ಮತ್ತು ಆತನ ಆತ್ಮನ ಮುನ್ನಡೆಸುಕೆ, ಇವೆರಡು ದೇವರು ನಮ್ಮ ಜೀವಿತಗಳೊಳಗೆ ತನ್ನ ಮಾರ್ಗದರ್ಶನವನ್ನು ಮಾತಾಡುವಂತಹ ಎರಡು ಹೆಚ್ಚು ಪ್ರಮುಖ್ಯವಾದ ರೀತಿಗಳಾಗಿವೆ. ವಿಶ್ವಾಸಿಗಳಂತೆ ನಾವು ಆತನ ವಾಕ್ಯ ಮತ್ತು ಆತನ ಆತ್ಮದ ಮೂಲಕ ದೇವರ ಚಿತ್ತ ಮತ್ತು ಆದೇಶವನ್ನು ಹೇಗೆ ಗುರುತಿಸಬೇಕೆಂಬುದನ್ನು ನಾವು ತಿಳಿದುಕೊಳ್ಳಲೇಬೇಕು.

ದೇವರು ನಮ್ಮ ಜೀವಿತಗಳಲ್ಲಿ ತನ್ನ ಮಾರ್ಗದರ್ಶನವನ್ನು ಮಾತಾಡುವಂತಹ ಪ್ರಾಥಮಿಕ ರೀತಿಗಳನ್ನು ಅದೇ ರೀತಿಯಾಗಿ ಯಾವ ಇತರ ರೀತಿಗಳ ಮೂಲಕವಾಗಿಯೂ ಮಾತಾಡುತ್ತಾನೆಂಬುದನ್ನು ಈ ಪುಸ್ತಕದಲ್ಲಿ ನಾವು ವಿವರಿಸಿದ್ದೇವೆ: 1) ವಾಕ್ಯ, 2) ಶಾಶ್ವತವಾಗಿರುವ ಆತ್ಮ, 3) ಪವಿತ್ರಾತ್ಮನ ಧ್ವನಿ, 4) ಪವಿತ್ರಾತ್ಮನ ವರಗಳು, 5) ಕನಸುಗಳು ಮತ್ತು ದರ್ಶನಗಳು, 6) ಪ್ರವಾದನೆಗಳು, 7) ದೂತರುಗಳು,

8)ದೈವಿಕ ಸಮಾಲೋಚನೆ, 9) ನವೀಕರಣಗೊಂಡ ಮನಸ್ಸು, 10) ಸಮಯಗಳು ಮತ್ತು ಕಾಲಗಳು, 11) ಸನ್ನಿವೇಶಗಳು ಮತ್ತು ದೈವಿಕ. ನಂತರ ದೇವರ ಆದೇಶ ಗ್ರಹಿಸಿಕೊಳ್ಳುವದನ್ನು ಮುಟ್ಟುವದಕ್ಕೆ ಇವೆಲ್ಲವನ್ನೂ ನಾವು ಒಟ್ಟಿಗೆ ಇಡುವದು ಹೇಗೆಂಬುದನ್ನು ಮತ್ತು ದೇವರಿಂದ ನಾವು ಸ್ಪಷ್ಟವಾಗಿ ಕೇಳಿಸಿಕೊಂಡಿಲ್ಲ ಎಂಬುದು ಕಂಡುಬಂದಾಗ ಆ ಸಕಾಲಗಳಲ್ಲಿ ಏನು ಮಾಡಬೇಕೆಂಬುದನ್ನು ಚರ್ಚಿಸೋಣ.

ಹಳೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲಿಯೂ ನಾವು ನೋಡುವಂತಹ ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಲೇಬೇಕಾದ ಒಂದು ಮುಖ್ಯವಾದ ಸತ್ಯವೇನೆಂದರೆ, ಇಬ್ಬರು ಮೂವರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಸಂಗತಿಯೂ ಸ್ಥಾಪಿತವಾಗಬೇಕು (2ಕೊರಿಂಥ- 13:1, ಧರ್ಮೋಪದೇಶಕಾಂಡ-19:15 ರಿಂದ ಉಲ್ಲೇಖಿಗೊಂಡದ್ದು) ಆದ್ದರಿಂದ, ದೇವರ ಆದೇಶವನ್ನು ನಾವು ನಿಷ್ಕರ್ಷಿಸುವಂತೆ ಒಂದಕ್ಕಿಂತಲೂ ಹೆಚ್ಚು ರೀತಿಯಲ್ಲಿ ದೇವರಿಂದ ನಾವು ಸಾಂಕೇತಿಕವಾಗಿ ಕೇಳಿಸಿಕೊಳ್ಳುವವರಾಗಬೇಕು. ಇದು ದೇವರು ನಮ್ಮ ಜೀವಿತಗಳಿಗಾಗಿ ತನ್ನ ಆದೇಶವನ್ನು ಇಬ್ಬರು ಅಥವಾ ಮೂವರು ಸಾಕ್ಷಿಗಳ ಮೂಲಕವಾಗಿ ನಮಗೆ ದೃಢಪಡಿಸುವಂತದ್ದಾಗಿದೆ.

ದಾರಿಯುದ್ದಕ್ಕೂ ನಾವೆಲ್ಲರೂ ತಪ್ಪುಗಳನ್ನು ಮಾಡುತ್ತಾ ಹೋಗುವ ವೇಳೆಯಲ್ಲಿ, ನಮ್ಮ ತಪ್ಪುಗಳಿಗಿಂತಲೂ ದೇವರು ದೊಡ್ಡವನೆಂಬುದನ್ನೂ ಮತ್ತು ಹೋದ ದಾರಿಗೆ ಮತ್ತೆ ಆತನು ನಮ್ಮನ್ನು ಹಿಂದಕ್ಕೆ ತರುವದಕ್ಕೆ ಶಕ್ತನಾಗಿದ್ದು ನಮ್ಮ ಜೀವಿತಗಳಿಗೆ ಆತನ ಉತ್ತಮವಾದ ಮತ್ತು ಉನ್ನತವಾದದ್ದರೊಳಗೆ ಪ್ರಯಾಣಿಸುವದಕ್ಕೆ ನಮಗೆ ಸಹಾಯಮಾಡುತ್ತಾನೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದರ ಮೇಲೆ ನನ್ನ ವೈಯಕ್ತಿಕ ಪ್ರಯಾಣದಿಂದ ಕೆಲವು ಉದಾಹರಣೆಗಳನ್ನು, ಕಥೆಗಳನ್ನು ಮತ್ತು ಸಣ್ಣ ಕತೆಗಳನ್ನು ಹಂಚಿಕೊಳ್ಳುವದಕ್ಕೆ ಸಹ ನಾನು ಸ್ವಾತಂತ್ರ್ಯವನ್ನು ತೆಗೆದುಕೊಂಡಿದ್ದೇನೆ. ಸ್ವಯಂ ಮೇಲೆರಿಸಿಕೊಳ್ಳುವ ಯಾವುದೇ ರೀತಿಯಲ್ಲಿ ಇವು ಇಲ್ಲ ಎಂದು ನಾನು ನಂಬುತ್ತೇನೆ, ಆದರೆ ಈ ಸತ್ಯಗಳು ದಿನನಿತ್ಯದ ಜೀತಗಳಲ್ಲಿ ಹೇಗೆ ಅನ್ವಯಿಸಲ್ಪಡುತ್ತವೆಂಬುದನ್ನು ವಿವರಿಸುವದಕ್ಕೆ ಮಾತ್ರ ಉಪಯುಕ್ತವಾಗಿವೆ. ಅದೇ ವೇಳೆಯಲ್ಲಿ ಇದು ಕಲಿಯುವದಕ್ಕೆ ಉತ್ತಮವಾಗಿದ್ದು ಇನ್ನೊಬ್ಬರ ಅನುಭವಗಳ ಮೂಲಕವಾಗಿ ಉತ್ತೇಜನ ಪಡಿಸುವಂತದ್ದಾಗಿದೆ, ವೈಯಕ್ತಿಕವಾಗಿ ನಮ್ಮಲ್ಲಿ ಆತನ ಆತ್ಮನ ಕಾರ್ಯವಾಗುವಂತೆ ನಾವು ನಮ್ಮ ಜೀವಿತಗಳನ್ನು ದೇವರ ವಾಕ್ಯದ ಮೇಲೆ ಕಟ್ಟಿಕೊಳ್ಳಬೇಕು. ಯಾರೋ

ಒಬ್ಬರ ಅನುಭವದ ಮೇಲೆ ನಿಮ್ಮ ಜೀವಿತಗಳನ್ನು ಕಟ್ಟಿಕೊಳ್ಳಬೇಡಿರಿ. ಆತನ ವಾಕ್ಯದಲ್ಲಿ ದೃಢವಾಗಿ ಸ್ಥಾಪಿಸಲ್ಪಡಿರಿ. ಆತನ ಆತ್ಮಕ್ಕೆ ಅಧೀನರಾಗಿರ್ರಿ. ಆಗ ನೀವು ಜೀವನದಲ್ಲಿ ನಿಮ್ಮ ಪ್ರಯಾಣದ ಮೂಲಕ ನಿಮ್ಮನ್ನು ಮುನ್ನಡೆಸುವ ದೇವರ ನಿಮ್ಮ ಸ್ವಂತ ಅನುಭವವನ್ನು ಹೊಂದುತ್ತೀರಿ.

ದೇವರು ನಿಮ್ಮನ್ನು ಆಶೀರ್ವದಿಸಲಿ!
ಆಶಿಷ್ ರಾಯಚೂರು.

# 1

# ದೇವರು, ನಮ್ಮ ಮಾರ್ಗದರ್ಶಿ

ಜೀವಿತಗಳಲ್ಲಿ ಅನೇಕ ವಿಷಯಗಳಲ್ಲಿ ದೇವರ ಮಾರ್ಗದರ್ಶನದ ಅಗತ್ಯ ನಮಗಿದೆ. ಕೆಲವೊಂದನ್ನು ಬಹುಶ: ಚಿಕ್ಕ ತೀರ್ಮಾನಗಳೊಂದಿಗೆ ಮಾಡಬೇಕಾಗುತ್ತದೆ ಮತ್ತು ಕೆಲವೊಂದನ್ನು ದೊಡ್ಡದಾದ, ಪ್ರಮುಖವಾದ ತೀರ್ಮಾನಗಳೊಂದಿಗೆ ಮಾಡಬೇಕಾಗುತ್ತದೆ. ಜೀವನದ ವಿವಿಧ ವಿಷಯಗಳಲ್ಲಿ, ನಮ್ಮ ಮುಂದಿನ ಹೆಜ್ಜೆಗಳಿಗಾಗಿ ದೇವರ ಚಿತ್ತವನ್ನು ನಾವು ಅಗತ್ಯವಾಗಿ ತಿಳಿದುಕೊಳ್ಳಬೇಕು: ಯಾವ ಶೈಕ್ಷಣಿಕ ಭಾಗದ ಮೇಲೆ ನಾನು ಕೇಂದ್ರಿಕರಿಸಬೇಕು ಎಂಬುದನ್ನು ತಿಳಿದುಕೊಳ್ಳುವದಕ್ಕೆ ಒಬ್ಬ ವಿದ್ಯಾರ್ಥಿಯು ಆಶೆಪಡುವವನಾಗಿರಬೇಕು; ಕೆಲವೊಬ್ಬರು ಎಂತಹ ಕೆಲಸದ ಸದವಕಾಶವನ್ನು ಅಥವಾ ಜೀವನೋಪಾಯಕ್ರಮದ ದಾರಿಯನ್ನು ಅನುಸರಿಸಿ ಹೋಗುವದನ್ನು ತಿಳಿದುಕೊಳ್ಳುವದಕ್ಕೆ ಉದ್ಯೋಗದ ಜೀವನವನ್ನು ಪ್ರವೇಶಿಸುವದಕ್ಕೆ ಆಶೆಪಡುತ್ತಾರೆ; ಹಾಗೂ ಗಂಡ ಮತ್ತು ಹೆಂಡತಿಯ ಆಯ್ಕೆಯನ್ನೊಳಗೊಂಡು ಜೀವನದ ಇತರ ಪ್ರಮುಖ ತೀರ್ಮಾನಗಳು ಇವೆ; ಪ್ರಪಂಚದ ಯಾವ ಭಾಗದಲ್ಲಿ ಜೀವಿಸ ಬೇಕು; ಸ್ಥಳೀಯ ಯಾವ ಸಭೆಯಲ್ಲಿ ಭಾಗಿಯಾಗಬೇಕು ಇತ್ಯಾದಿ. ಜೀವನದ ಎಲ್ಲಾ ತೀರ್ಮಾನಗಳ ಮೂಲಕ ದೇವರನ್ನು ಅನುಸರಿಸುವದು ನಮ್ಮ ಆಶೆಯಾಗಿರಬೇಕು. ಮಾರ್ಗದರ್ಶಿಯ ಹಾಗೆ ದೇವರನ್ನು ಮತ್ತು ದಾರಿಯ ಪ್ರತಿಯೊಂದು ಹೆಜ್ಜೆಯಲ್ಲಿ ಆತನ ಮಾರ್ಗದರ್ಶನವನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ನಾವು ಹೊಂದಿರುವದು ಒಂದು ಅದ್ಭುತವಾದ ವಿಶೇಷ ಪ್ರಯೋಜನವಾಗಿದೆ.

## ಮಾರ್ಗದರ್ಶಿಸಿ ಮುನ್ನಡೆಸುವದಕ್ಕೆ ದೇವರ ವಾಗ್ದಾನ

ನಮ್ಮನ್ನು ಮಾರ್ಗದರ್ಶಿಸಿ ಮುನ್ನಡೆಸುವದಕ್ಕೆ ದೇವರು ನಮಗೆ ವಾಗ್ದಾನ ಮಾಡಿದ್ದಾನೆ ಎನ್ನುವದನ್ನು ಪ್ರಕಟಿಸುವದಕ್ಕೆ ಅನೇಕ ವಾಕ್ಯಗಳಿವೆ. ಇದು ಒಂದು ಅದ್ಭುತವಾದ ಭರವಸೆಯಾಗಿದೆ! ನಾವು ಮಾಡಬೇಕಾದ ತೀರ್ಮಾನಗಳಲ್ಲಿ ದೇವರು ನಿಷ್ಕಪಟವಾದ ಆಸಕ್ತಿಯುಳ್ಳವನಾಗಿದ್ದು ತನ್ನ ಮಾರ್ಗದರ್ಶನವನ್ನು ವಾಗ್ದಾನ ಮಾಡಿದ್ದಾನೆ.

ಕೀರ್ತನೆ–37:23–24

**23 – ಸತ್ಪುರುಷನ ಗತಿಸ್ಥಾಪನೆಯು ಯೆಹೋವನಿಂದಲೇ ಆಗಿದೆ, ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ.**

**24 – ಅವನು ಕೆಳಗೆ ಬಿದ್ದರೂ ಏಳದೆ ಹೋಗುವದಿಲ್ಲ; ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು.**

ಉತ್ತಮ ಮನುಷ್ಯನ ಹೆಜ್ಜೆಗಳು (ವಾಸ್ತವವಾಗಿ ಒಬ್ಬ ಧೈರ್ಯವಂತ ಮನುಷ್ಯನು, ಒಬ್ಬ ವೀರನಾದ ಮನುಷ್ಯ, ಒಬ್ಬ ಯೋಧ) ಕರ್ತನಿಂದ ಆಜ್ಞಾಪಿಸಲ್ಪಡುತ್ತವೆ (ಆದೇಶಿಸಲ್ಪಡುತ್ತದೆ, ಸ್ಥಾಪಿಸಲ್ಪಡುತ್ತದೆ, ಸಂಪೂರ್ಣವಾಗಿ ಮತ್ತು ದೃಢವಾಗಿ ಮಾಡಲ್ಪಡುತ್ತದೆ) ಈ ವ್ಯಕ್ತಿ ಹೋಗುವಂತಹ ರೀತಿಯಲ್ಲಿ ದೇವರು ಸಂತೋಷವನ್ನು ಪಡೆದುಕೊಳ್ಳುತ್ತಾನೆ. ಆ್ಯಂಪ್ಲಿಫೈಡ್ ಸತ್ಯವೇದವು ಹೇಳುವ ಹಾಗೆ, ದೇವರು ಅವನ ಪ್ರತಿಯೊಂದು ಹೆಜ್ಜೆಯೊಂದಿಗೆ ತಾನೇ ಕಾರ್ಯನಿರತನಾಗಿದ್ದಾನೆ. .

ದೇವರು ನಮ್ಮ ಜೀವಿತಗಳಲ್ಲಿ ತುಂಬಾ ಆಸಕ್ತಿಯುಳ್ಳವನಾಗಿದ್ದಾನೆ, ನಾವು ತೆಗೆದುಕೊಳ್ಳುವ ಹೆಜ್ಜೆಗಳಲ್ಲಿ, ನಾವು ಆರಿಸಿಕೊಳ್ಳುವ ದಾರಿ, ಮತ್ತು ನಾವು ಮಾಡುವ ತೀರ್ಮಾನಗಳಲ್ಲಿ ತುಂಬಾ ಆಸಕ್ತಿಯುಳ್ಳವನಾಗಿದ್ದಾನೆ. 'ದೇವರು ನಿಜವಾಗಿಯೂ ಚಿಂತಿಸುವದಿಲ್ಲ' ಅಥವಾ ಆತನು ಜಾಗ್ರತೆ ತೆಗೆದುಕೊಳ್ಳುವದಕ್ಕೆ ಇಷ್ಟು ದೊಡ್ಡದಾದ ಮತ್ತು ವಿಸ್ತಾರವಾದ ವಿಶ್ವವನ್ನು ಹೊಂದಿರುವಾಗ ಆತನು ಯಾಕೆ ನಮ್ಮ ಕುರಿತು ಚಿಂತಿಸಬೇಕು? ಎನ್ನುವ ಅಭಿಪ್ರಾಯವನ್ನು ನಮ್ಮಲ್ಲಿ ಕೆಲವರು ದೂರಮಾಡಿಕೊಳ್ಳುವದು ಅಗತ್ಯವಾಗಿದೆ. ಈ ಲೋಕದ ದೊಡ್ಡ ದೇವರು ತಾನೇ ನಿಮ್ಮ ಪ್ರತಿಯೊಂದು ಚಿಕ್ಕ ಮತ್ತು ದೊಡ್ಡ ಹೆಜ್ಜೆಯೊಂದಿಗೆ ಕಾರ್ಯನಿರತನಾಗಿರುತ್ತಾನೆ.

ಒಂದು ವೇಳೆ ನಾವು ತಪ್ಪುಗಳನ್ನು ಮಾಡಿದರೂ, ಮುಗ್ಗರಿಸಿದರೂ ಮತ್ತು ತೊದಲು ಮಾತನಾಡಿದರೂ ಸಹ, ಇದು ಪ್ರತಿಯೊಂದರ ಅಂತ್ಯವಲ್ಲ. ನಮ್ಮ ಉಳಿದ ಜೀವಿತಗಳಿಗಾಗಿ ನಾವು ದಂಡನೆ ಹೊಂದುವದಿಲ್ಲ. ದೇವರು ನಮ್ಮನ್ನು ಎತ್ತಿ ಹಿಡಿಯುತ್ತಾನೆ, ಅಥವಾ ಆ್ಯಂಪ್ಲಿಫೈಡ್ ಸತ್ಯವೇದವು ಹೇಳುವ ಹಾಗೆ, . . . . .ಕರ್ತನು ಸಹಾಯದಲ್ಲಿ ಮತ್ತು ಅವನನ್ನು ಎತ್ತಿ ಹಿಡಿಯುವದರಲ್ಲಿ ಅವನ ಕೈಯನ್ನು ಬಲವಾಗಿ ಹಿಡಿದುಕೊಳ್ಳುತ್ತಾನೆ.

ಕೀರ್ತನೆ–32:8–9

**8 – ಯೆಹೋವನು – ನಾನು ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು; ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು ಅನ್ನುತ್ತಾನಲ್ಲಾ.**

**9 – ಆದುದರಿಂದ ನೀವು ವಿವೇಕಹೀನರಾಗಿ ಕುದುರೆಯಂತಾಗಲಿ ಹೇಸರಕತ್ತೆಯಂತಾಗಲಿ ಇರಬೇಡಿರಿ; ಅವುಗಳು ಬಾರು ಕಡಿವಾಣಗಳಿಂದಲ್ಲದೆ ಸ್ವಾಧೀನವಾಗುವದಿಲ್ಲವಷ್ಟೆ.**

ನಮಗಾಗಿ ಎಂತಹ ಅದ್ಭುತವಾದ ವಾಗ್ದಾನಗಳ ಮತ್ತು ಭರವಸೆಯ ಮಾರ್ಗದರ್ಶನಗಳು. ಕರ್ತನು ತಾನೇ ಹೀಗೆ ಹೇಳಿದ್ದಾನೆ:

ನಾನು ನಿನ್ನನ್ನು ಉಪದೇಶಿಸುತ್ತೇನೆ : ಇಬ್ರಿಯ ಭಾಷೆಯಲ್ಲಿ 'ಉಪದೇಶ' ಎಂಬ ಶಬ್ದದ ವಿಸ್ತಾರವಾದ ಅರ್ಥವೇನೆಂದರೆ, ನಿಮ್ಮನ್ನು ಜಾಗರೂಕರನ್ನಾಗಿ, ಜ್ಞಾನವಂತರನ್ನಾಗಿ, ವಿವೇಕವುಳ್ಳವರನ್ನಾಗಿ ಮತ್ತು ಬುದ್ಧಿವಂತರನ್ನಾಗಿ ಮಾಡಿ ನಿಮಗೆ ಜಾಣತನವನ್ನು ಕೊಡುತ್ತದೆ ಎನ್ನುವಂತದ್ದಾಗಿದೆ ಇದರಿಂದ ನೀವು ಉತ್ತಮವಾದ ಯಶಸ್ಸನ್ನು ಹೊಂದಿಕೊಳ್ಳುತ್ತೀರಿ.

ನಾನು ನಿಮಗೆ ತಿಳಿಸುವೆನು(ಕಲಿಸುವೆನು) : ಇಬ್ರಿಯ ಭಾಷೆಯಲ್ಲಿ 'ಕಲಿಸುವದು' ('ಯಾರಾಹ್') ಎಂಬ ಶಬ್ದವು, ಒಂದು ಬಾಣವನ್ನು ಎಸೆಯುವಾಗ ಬೆರಳು ಗುರಿಯಿಡುವದನ್ನು ತಿಳಿಸುವದಕ್ಕೆ ಇದು ಸಾಂಕೇತಿಕವಾದ ಅರ್ಥವಾಗಿದೆ.

ನಾನು ನಿಮಗೆ ಆಲೋಚನೆ ಹೇಳುತ್ತೇನೆ : 'ಮಾರ್ಗದರ್ಶನ' ಎಂಬ ಶಬ್ದವು ಸಹ ಸಲಹೆ ಕೊಡುವದು ಅಥವಾ ಆಲೋಚನೆ ಕೊಡುವದು ಎಂದು ಅರ್ಥಕೊಡುತ್ತದೆ.

ಕರ್ತನು ನಮಗೆ ತಿಳಿಹೇಳುವದಕ್ಕೆ, ಕಲಿಸುವದಕ್ಕೆ ಮತ್ತು ಮಾರ್ಗದರ್ಶನ ಮಾಡುವದಕ್ಕೆ ವಾಗ್ದಾನ ಮಾಡಿದ್ದಾನೆ.

ಆತನ ತಿಳಿಹೇಳುವಿಕೆ, ಕಲಿಸುವಿಕೆ ಮತ್ತು ಮಾರ್ಗದರ್ಶನಕ್ಕೆ ನಮ್ಮ ಪ್ರತಿಕ್ರಿಯೆಯು ಸಹ ಮುಖ್ಯವಾದುದಾಗಿದೆ. ಆತನು ಕುದುರೆ ಮತ್ತು ಹೇಸರಕತ್ತೆ ಎಂಬ ಎರಡು ಪ್ರಾಣಿಗಳನ್ನು ಸೂಚಿಸಿದ್ದಾನೆ, ಅವು ಒಂದು ನಿಶ್ಚಿತವಾದ ದಾರಿಯಲ್ಲಿ ಹೋಗುವ ಕ್ರಮದಲ್ಲಿ ರಕ್ಷಕ ಕವಚವಾಗಿದ್ದು ದೃಢವಾಗಿ ಹಿಡಿಯಲ್ಪಟ್ಟಿರುತ್ತವೆ. ಅವು ಮುಂದೆ ಓಡಬೇಕು ಇಲ್ಲವೇ ಹಿಂದೆ ಸರಿಯಬೇಕು ಅಥವಾ ಮುಂದೆ ಹೋಗುವದಕ್ಕೆ ಅವು ತುಂಬಾ ಮೊಂಡಾದವು ಮತ್ತು ಕಠಿನವಾದವು ಆಗಿರುತ್ತವೆ. ನಾವು ಈ ಸ್ಥಿತಿಗಳಲ್ಲಿ ಯಾವುದಾದರು ಒಂದನ್ನು ದೂರವಿಡಲೇಬೇಕು.

ಕೀರ್ತನೆ–25:12

**ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನೋ ಅವನಿಗೆ ಉಚಿತವಾದ ಮಾರ್ಗವನ್ನು ಆತನು ಬೋಧಿಸುವನು.**

ನಾವು ಕರ್ತನ ಕಡೆಗೆ ಭಯಭಕ್ತಿಯಲ್ಲಿ ನಡೆದಾಗ, ನಾವು ಯಾವ ಮಾರ್ಗದಲ್ಲಿ ಹೋಗಬೇಕೆಂಬುದನ್ನು ದೇವರು ನಮಗೆ ಕಲಿಸುತ್ತಾನೆ. ಗುಡ್ ನ್ಯೂಸ್ ಬೈಬಲ್ ಈ ವಚನವನ್ನು ಕೊಡುವ ಹಾಗೆ : ಯಾರು ಕರ್ತನಲ್ಲಿ ಭಯಭಕ್ತಿಯುಳ್ಳವರಾಗಿರುತ್ತಾರೋ ಅವರು ನಡೆಯಬೇಕಾದ ಮಾರ್ಗವನ್ನು ಆತನಿಂದ ಕಲಿತುಕೊಳ್ಳುತ್ತಾರೆ.

ನಾವು ದೇವರ ಮಾತನ್ನು ಕೇಳಿ ಆತನ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಾದರೆ ನಮ್ಮ ಹೃದಯದ ಮನೋವೃತ್ತಿಯು ನಿಶ್ಚಯಿಸಲ್ಪಡುತ್ತದೆ. ನಾವು ಪೂಜ್ಯಭಾವನೆಯುಳ್ಳವರಾಗಿದ್ದರೆ, ಕರ್ತನ ಭಯದಲ್ಲಿ ನಡೆಯುವವರಾಗಿದ್ದರೆ, ನಾವು ಆತನ ಚಿತ್ತವನ್ನು ಮಾತ್ರ ಹುಡುಕುವವರಲ್ಲ ಆದರೆ ಆತನ ಚಿತ್ತವನ್ನು ಮಾಡುವದರ ಮೂಲಕ ಆತನನ್ನು ಅನುಸರಿಸುವವರಾಗಿರುತ್ತೇವೆ. ಆದ್ದರಿಂದ ಆತನಿಗೆ ಭಯಪಡುವವರನ್ನು ಕರ್ತನು ಗುರುತಿಸಿ ಅವರಿಗೆ ತನ್ನ ಮಾರ್ಗದರ್ಶನ ದೊರಕುವಂತೆ ಮಾಡುತ್ತಾನೆ.

## ದೇವರ ಚಿತ್ತದ ಪ್ರಕಟನೆ

ದೇವರ ಚಿತ್ತ ಮತ್ತು ಮಾರ್ಗದರ್ಶನದ ಸಂಬಂಧದಲ್ಲಿ ಕೆಲವು ಮೂಲ ಅಥವಾ ತಳಹದಿಯ ಸತ್ಯಗಳನ್ನು ಸ್ಥಾಪಿಸುವದಕ್ಕೆ ಪ್ರಾರಂಭದಲ್ಲಿ ಇದು ತುಂಬಾ ಉತ್ತಮವಾದುದಾಗಿದೆ. ನಾವು ಅರ್ಥಮಾಡಿಕೊಳ್ಳಲೇಬೇಕಾದ ಕೆಲವು ಒಳನೋಟಗಳು ಇಲ್ಲಿವೆ:

### 1)ದೇವರ ಚಿತ್ತ, ಮಾರ್ಗದರ್ಶನ ಮತ್ತು ಮುನ್ನಡೆಸುಕೆಯು ಯಾವಾಗಲೂ ಆತನ ಸ್ವಭಾವದೊಂದಿಗೆ ಸಮಂಜಸವಾಗಿರುತ್ತವೆ.

ದೇವರು ಬದಲಾಗದವನು. ಆತನು ಬದಲಾಗುವದಿಲ್ಲ (ಮಲಾಕಿಯ-3:6). ಆತನು ಸಕಲ ವಿಧವಾದ ಬೆಳಕಿಗೆ ತಂದೆಯೂ, ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ (ಯಾಕೋಬನು-1:17). ದೇವರು ತನ್ನ ಸ್ವಭಾವದಿಂದ ಬದಲಾಗದವನಾಗಿದ್ದಾನೆ. ದೇವರ ಚಿತ್ತ, ಉದ್ದೇಶ ಮತ್ತು ಮಾರ್ಗದರ್ಶನ ಇವೆಲ್ಲವೂ ಯಾವಾಗಲೂ ಆತನ ಸ್ವಭಾವದೊಂದಿಗೆ ಸ್ಥಿರವಾದವುಗಳಾಗಿವೆ. ಆತನು ಯಾರಾಗಿದ್ದಾನೋ ಅದರೊಂದಿಗೆ ಆತನ ಚಿತ್ತವು ಯಾವಾಗಲೂ ಹೊಂದಿಕೆಯಾಗಿರುತ್ತದೆ. ಉದಾಹರಣೆಗಾಗಿ ದೇವರು ಪರಿಶುದ್ಧನು.

ಆದ್ದರಿಂದ ಯಾವುದೋ ಅಪರಿಶುದ್ಧವಾದುದನ್ನು ಮಾಡುವದಕ್ಕೆ ನಮ್ಮನ್ನು ದೇವರು ಮುನ್ನಡೆಸಿದನೆಂದು ಯಾರೊಬ್ಬರೂ ಹೇಳುವಂತಿಲ್ಲ.

## 2) ದೇವರ ಚಿತ್ತ, ಮಾರ್ಗದರ್ಶನ ಮತ್ತು ಮುನ್ನಡೆಸುಕೆಯು ಯಾವಾಗಲೂ ಆತನ ವಾಕ್ಯದೊಂದಿಗೆ ಸಮಂಜಸವಾಗಿರುತ್ತವೆ.

ಆತನ ವಾಕ್ಯವು ವಿರೋದಿಸುವಂತದ್ದನ್ನು ಮಾಡುವದಕ್ಕೆ ದೇವರು ನಮ್ಮನ್ನು ಮುನ್ನಡೆಸುವದಿಲ್ಲ. ದೇವರ ವಾಕ್ಯವು ಸತ್ಯ (ಯೋಹಾನ–17:17), ಇದು ನಿತ್ಯವಾದುದು, ಬದಲಾಗದಿರುವಂತದ್ದು ಮತ್ತು ಪರಲೋಕದಲ್ಲಿ ಶಾಶ್ವತವಾಗಿ ಸ್ಥಾಪಿತವಾಗಿರುವಂತದ್ದಾಗಿದೆ (ಕೀರ್ತನೆ–119:89). ಪವಿತ್ರಾತ್ಮನ ಮುನ್ನಡೆಸುಕೆ ಯಾವಾಗಲೂ ಆತ್ಮನ ಪ್ರೇರಿಸುಕೆಯ ವಾಕ್ಯದೊಂದಿಗೆ ಸಮಂಜಸವಾದುದಾಗಿರುತ್ತದೆ. ಇಲ್ಲಿ ನಾವು ಆತನ ವಾಕ್ಯವು ಸರಿಯಾದುದೆಂಬ ನಮ್ಮ ತಿಳುವಳಿಕೆಯು ಸೊಕ್ಕಿನವರಾಗಿದ್ದೇವೆ. ಕೆಲವು ಸಲ, ಆತನ ವಾಕ್ಯದ ನಮ್ಮ ತಿಳುವಳಿಕೆಯ ವಿರುದ್ಧವಾಗಿ ಏನೋ ಒಂದನ್ನು ಮಾಡುವಂತೆ ದೇವರು ನಮ್ಮನ್ನು ಮುನ್ನಡೆಸುತ್ತಾನೆ. ಕೆಲವು ಉದಾಹರಣೆಗಳನ್ನು ಆಲೋಚಿಸೋಣ. ಸಬ್ಬತ್ ದಿನವನ್ನು ಅನುಸರಿಸುವ ವಿಷಯದಲ್ಲಿ ಫರಿಸಾಯರು ಆ ದಿವಸದಂದು ಯಾವ ಕೆಲಸವನ್ನೂ ಮಾಡುವದಕ್ಕೆ ಯಾರಿಗೂ ಅನುಮತಿ ಕೊಡುತ್ತಿರಲಿಲ್ಲ. ಇನ್ನೊಂದು ಕಡೆಯಲ್ಲಿ ಯೇಸು ಸಬ್ಬತ್ ದಿನದಲ್ಲಿ ಜನರನ್ನು ಸ್ವಸ್ಥಪಡಿಸುವದನ್ನು ನೋಡುತ್ತೇವೆ, ಮತ್ತು ಆತನ ಶಿಷ್ಯರು ಸಬ್ಬತ್ ದಿನದಲ್ಲಿ ಕಾಳಿನ ತೆನೆಯನ್ನು ಸಹ ಕಿತ್ತು ತಿಂದರು (ಮತ್ತಾಯ–12:1–8). ತಾನು ಸಬ್ಬತ್ ದಿನಕ್ಕೆ ಸಹ ಕರ್ತನಾಗಿದ್ದೇನೆಂದು ಯೇಸು ವಿವರಿಸಿದ್ದಾನೆ. ಅಪೊಸ್ತಲನಾದ ಪೇತ್ರನನ್ನು ಉದಾಹರಣೆಗಾಗಿ ತೆಗೆದುಕೊಳ್ಳಿರಿ. ಅವನು (ಮತ್ತು ಆದಿಸಭೆಯವರು) ಅನ್ಯರಿಗೆ ಸುವಾರ್ತೆಯನ್ನು ಸಾರುತ್ತಿರಲಿಲ್ಲ. ಆದ್ದರಿಂದ ದೇವರು ಅವನಿಗೆ ಒಂದು ದರ್ಶನವನ್ನು ಕೊಟ್ಟು, ಪೇತ್ರನು ತಿರಸ್ಕರಿಸಿದ್ದ ಅಪರಿಶುದ್ಧವಾದ ಪಕ್ಷಿಗಳನ್ನು ಮತ್ತು ಪ್ರಾಣಿಗಳನ್ನು ತಿನ್ನುವಂತೆ ಹೇಳಿದನು. ಅನಂತರದಲ್ಲಿ ಅನ್ಯರಿಗೆ ಸುವಾರ್ತೆಯನ್ನು ಸಾರುವದಕ್ಕೆ ದೇವರು ಪೇತ್ರನನ್ನೂ ಮತ್ತು ಸಭೆಯನ್ನು ಮುನ್ನಡೆಸಿದನು (ಅಪೊ. ಕೃತ್ಯ– 9 ಮತ್ತು 10).

## 3) ದೇವರ ವಾಗ್ದಾನಗಳು ದೇವರ ಚಿತ್ತದ ಒಂದು ಪ್ರಕಟನೆಗಳಾಗಿವೆ.

ದೇವರು ಏನಾದರೊಂದನ್ನು ನಮಗೆ ವಾಗ್ದಾನ ಮಾಡಲು ಕಾರಣವೇನೆಂದರೆ, ನಾವು ಅದನ್ನು ಪಡೆದುಕೊಳ್ಳುವದು ಆತನ ಉದ್ದೇಶವಾಗಿರುತ್ತದೆ. ಆದ್ದರಿಂದ

ದೇವರ ವಾಗ್ದಾನಗಳು ನಮ್ಮ ಜೀವಿತಗಳಿಗಾಗಿ ಆತನ ಚಿತ್ತದ ಒಂದು ನೇರವಾದ ಹೇಳಿಕೆಗಳಾಗಿವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

## 4) ಆತನ ಚಿತ್ತವನ್ನು ತಿಳಿದುಕೊಳ್ಳಬೇಕೆನ್ನುವದು ದೇವರ ಆಶೆಯಾಗಿದೆ

ಆತನ ಜನರಾಗಿ ನಾವು ಆತನ ಚಿತ್ತವನ್ನು ತಿಳಿದುಕೊಳ್ಳಬೇಕೆಂಬುದು ದೇವರ ನಿಜವಾದ ಆಶೆಗಳಾಗಿವೆ. ನಾವು ಆತನ ಚಿತ್ತವನ್ನು ತಿಳಿಯದೆ ಆತನ ಮಾರ್ಗದರ್ಶನವನ್ನು ಹೊಂದಿಕೊಳ್ಳದಿರುವದರಿಂದ ತಡವರಿಸುವವರು, ಎಲ್ಲಾ ರೀತಿಯ ಕಷ್ಟಗಳಿಗೆ ಒಳಗಾಗುವವರು ಮತ್ತು ನಮ್ಮ ಜೀವಿತಗಳನ್ನು ಅಸ್ತವ್ಯಸ್ತತೆ ಮಾಡಿಕೊಳ್ಳುವವರು ಆಗುತ್ತೇವೆ ಹಾಗಾಗಿ ದೇವರು ನಮ್ಮಿಂದ ತನ್ನ ಚಿತ್ತವನ್ನು ಮುಚ್ಚಿಡುವದಕ್ಕೆ ಪ್ರಯತ್ನಿಸುವದಿಲ್ಲ. ಇನ್ನೊಂದು ಕಡೆಯಲ್ಲಿ, ನಾವು ಆತನ ಚಿತ್ತವನ್ನು ತಿಳಿದುಕೊಳ್ಳುವದಕ್ಕೆ ಆತನು ಅವಕಾಶ ಮಾಡಿಕೊಡುತ್ತಾನೆ.

ಕೊಲೊಸ್ಸೆ 1ರಲ್ಲಿ ವಾಕ್ಯವು ಏನು ಕಲಿಸುತ್ತದೆಂಬುದನ್ನು ಗಮನಿಸೋಣ.

ಕೊಲೊಸ್ಸೆ-1:9-10

**9 –ಆದಕಾರಣ ನಾನು ನಿಮ್ಮ ಸುದ್ದಿಯನ್ನು ಕೇಳಿದ ದಿವಸದಿಂದ ನಿಮಗೋಸ್ಕರ ಪ್ರಾರ್ಥಿಸುವದನ್ನು ಬಿಡದೆ ನೀವು ಸಕಲ ಆತ್ಮೀಯ ಜ್ಞಾನವನ್ನೂ ಗ್ರಹಿಕೆಯನ್ನೂ ಹೊಂದಿ**

**10 – ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯಿಂದ ತುಂಬಿಕೊಂಡು ಆತನಿಗೆ ಯೋಗ್ಯರಾಗಿ ನಡೆದು ಎಲ್ಲಾ ವಿಧದಲ್ಲಿ ಆತನನ್ನು ಸಂತೋಷಪಡಿಸುವವರಾಗಿರಬೇಕೆಂತಲೂ ನೀವು ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ ದೇವಜ್ಞಾನದಿಂದ ಅಭಿವೃದ್ಧಿಯಾಗುತ್ತಿರಬೇಕು.**

## ಪ್ರಾಮುಖ್ಯವಾದ ಈ ಮೂರು ಒಳನೋಟಗಳನ್ನು ನಾವು ಗಮನಿಸೋಣ:

ಮೊದಲನೆಯದಾಗಿ, ವಿಶ್ವಾಸಿಗಳು ದೇವರ ಚಿತ್ತದ ಜ್ಞಾನದೊಂದಿಗೆ ತುಂಬುವಂತೆ ಅವರಿಗಾಗಿ ಪೌಲನು ಪ್ರಾರ್ಥಿಸಿದನು (ಅಂದರೆ ಅಲ್ಲಿ ಕೊರತೆಯಿರಲಿಲ್ಲ, ಕಡಿಮೆಯಾಗಿರಲಿಲ್ಲ, ಅವರು ಪರಿಪೂರ್ಣರಾಗಿದ್ದು ಇದರಲ್ಲಿ ಕೊರತೆಯುಳ್ಳವರಾಗಿರಲಿಲ್ಲ). 'ಜ್ಞಾನ' ಎಂಬುದರ ಗ್ರೀಕ್ ಶಬ್ದವು ('ಎಪಿಗ್ನೋಸಿಸ್') ಇದರ ಅರ್ಥ ನಿಖರವಾದ ಮತ್ತು ಸರಿಯಾದ ಜ್ಞಾನ, ಆಳವಾದ ಮತ್ತು ಸ್ಪಷ್ಟವಾದ ಜ್ಞಾನ ಎಂಬುದು. ವಿಶ್ವಾಸಿಗಳಂತೆ, ನಾವು ನಮಗಾಗಿ ಆತನ ಚಿತ್ತದ ಪೂರ್ಣವಾದ, ಸಮಗ್ರವಾದ, ನಿಖರವಾದ, ಸರಿಯಾದ, ಆಳವಾದ, ಮತ್ತು ಸ್ಪಷ್ಟವಾದ ಜ್ಞಾನಕ್ಕಾಗಿ ಪ್ರಾರ್ಥಿಸಿ ಹೊಂದಿಕೊಳ್ಳೋಣ. ಟಿಪ್ಪಣಿ: ನಾವು ಎಲ್ಲಾ ಜ್ಞಾನವನ್ನು ಹೊಂದಿದ್ದೇವೆ, ಅಥವಾ ಅಪರಿಮಿತವಾದ ಜ್ಞಾನವನ್ನು ವಶಪಡಿಸಿಕೊಂಡಿದ್ದೇವೆ, ಅಥವಾ

ಪ್ರತಿಯೊಂದರ ಕುರಿತಾಗಿ ಪ್ರತಿಯೊಂದನ್ನೂ ತಿಳಿದಿದ್ದೇವೆ ಎಂಬುದಾಗಿ ನಾವು ಅಭಿಪ್ರಾಯಪಡುತ್ತಿಲ್ಲ. ಸರ್ವಜ್ಞತೆಯು ದೇವರಿಗೆ ಮಾತ್ರ ಸಂಬಂಧಪಟ್ಟದ್ದು. ವ್ಯಯಕ್ತಿಕವಾಗಿ ನಮ್ಮ ಜೀವಿತಕ್ಕಾಗಿ ಆತನ ಚಿತ್ತವನ್ನು ತಿಳಿದುಕೊಳ್ಳುವದರ ಕುರಿತಾಗಿ ನಾವು ಮಾತಾಡುತ್ತಿದ್ದೇವೆ.

ಎರಡನೆಯದಾಗಿ, ಆತನ ಪವಿತ್ರಾತ್ಮನಿಂದ ನಮಗೆ ಕೊಡಲ್ಪಟ್ಟಿರುವ ಜ್ಞಾನ ಮತ್ತು ಗ್ರಹಿಕೆಯ ಮೂಲಕವಾಗಿ ಅಥವಾ ಜ್ಞಾನ ಮತ್ತು ಆತ್ಮೀಕ ಗ್ರಹಿಕೆಯ ಮೂಲಕವಾಗಿ ಬಂದಂತಹ ಆತನ ಚಿತ್ತವನ್ನು ತಿಳಿದುಕೊಳ್ಳುವದು. 1ಕೊರಿಂಥ–2:9–16ರಲ್ಲಿ ನಾವು ನೋಡುವ ಹಾಗೆ, ಪವಿತ್ರಾತ್ಮನು ಸಂಗತಿಗಳನ್ನು ನಮಗೆ ಪ್ರಕಟಿಸಿ ಕ್ರಿಸ್ತನ ಮನಸ್ಸನ್ನು ನಾವು ತಿಳಿದುಕೊಳ್ಳುವಂತೆ ಮಾಡಿದ್ದಾನೆ. ಆದ್ದರಿಂದ ನಾವು ಜ್ಞಾನದಲ್ಲಿ ಮತ್ತು ಆತ್ಮೀಕ ಗ್ರಹಿಕೆಯಲ್ಲಿ ಬೆಳೆಯಲೇಬೇಕು.

ಮೂರನೆಯದಾಗಿ, ಆತನ ಚಿತ್ತದ ಜ್ಞಾನದೊಂದಿಗೆ ತುಂಬುವದರ ಅಂತ್ಯದ ಫಲಿತಾಂಶವು(ಫಲವು) ಯಾವುದೆಂದರೆ –

(ಎ) ನಾವು ಕರ್ತನಿಗೆ ಅರ್ಹರಾಗಿ ನಡೆಯಬೇಕು – ಕರ್ತನನ್ನು ಗೌರವಿಸುವಂತಹ ಜೀವಿತವನ್ನು ಜೀವಿಸಬೇಕು.

(ಬಿ) ಆತನಿಗೆ ಪೂರ್ತಿಯಾಗಿ ಮೆಚ್ಚಿಕೆಯಾಗಿರುವಂತೆ ನಾವು ಜೀವಿಸಬೇಕು – ಆತನನ್ನು ಮೆಚ್ಚಿಸುವಂತಹ ಜೀವಿತವನ್ನು ಜೀವಿಸಬೇಕು.

(ಸಿ) ನಾವು ಮಾಡುವಂತ ಎಲ್ಲದರಲ್ಲಿ ಫಲಕಾರಿಗಳಾಗಿರಬೇಕು – ಮಾಡುವದಕ್ಕೆ ಆತನು ನಮ್ಮನ್ನು ಕರೆದಿರುವ ಎಲ್ಲಾದರಲ್ಲಿಯೂ ನಾವು ಹೆಚ್ಚು ಫಲಕೊಡುವವರಾಗಿರಬೇಕು.

(ಡಿ) ಆತನ ವಿಷಯದಲ್ಲಿ ನಮಗಿರುವ ತಿಳುವಳಿಕೆಯಲ್ಲಿ ವೃದ್ಧಿಯಾಗುವದನ್ನು ನಾವು ಮುಂದುವರಿಸಬೇಕು.

ಆತನ ಚಿತ್ತದ ತಿಳುವಳಿಕೆಯೊಂದಿಗೆ ನಾವು ತುಂಬಿದಾಗ ಎಂತಹ ಶಕ್ತಿಯುತವಾದ ಫಲಿತಾಂಶವು ಹೊರಬರುತ್ತದೆ. ವಿರುದ್ಧವಾದುದು ಸಹ ಪರ್ಯಾಲೋಚಿಸಲ್ಪಡುತ್ತದೆ, ಅಂದರೆ ನಾವು ಆತನ ಚಿತ್ತವನ್ನು ತಿಳಿಯದಿದ್ದರೆ, ಆತನಿಗೆ ಮೆಚ್ಚಿಕೆಯಿಲ್ಲದ ಮತ್ತು ಅಗೌರವವಾದ ಸಂಗತಿಗಳನ್ನು ನಾವು ಮಾಡುತ್ತೇವೆ, ನಾವು ಮಾಡಿದ ಕೆಲಸದಲ್ಲಿ ನಾವು ಫಲಭರಿತರಾಗಿರುವದಿಲ್ಲ, ಮತ್ತು ಆತನ ಕುರಿತಾದ ನಮ್ಮ ತಿಳುವಳಿಕೆಯಲ್ಲಿ ನಾವು ಜಡವಾಗಿ ಬಿಡುತ್ತೇವೆ.

ಎಫೆಸ ಪತ್ರಿಕೆಯಲ್ಲಿ ವಾಕ್ಯವು ನಮಗೆ ಏನು ಕಲಿಸುತ್ತದೆ ಎಂಬುದನ್ನು ಆಲೋಚಿಸೋಣ:

ಎಫೆಸ-5:8-10, 17

**8 – ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ.**

**9 – ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ.**

**10 – ಕರ್ತನಿಗೆ ಮೆಚ್ಚಿಕೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಿರಿ.**

**17 – ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬುದನ್ನು ವಿಚಾರಿಸಿ ತಿಳಿದವರಾಗಿರ್ರಿ.**

ಈಗ ನಾವು ಬೆಳಕಾಗಿದ್ದೇವೆ ಮತ್ತು ಬೆಳಕಿನ ಮಕ್ಕಳಂತೆ ನಡೆಯುತ್ತಿದ್ದೇವೆ, ನಾವು ಆತ್ಮನ ಫಲವನ್ನು ಮಾತ್ರ ಪ್ರದರ್ಶಿಸುತ್ತಿಲ್ಲ, ಆದರೆ ಕರ್ತನಿಗೆ ಸ್ವೀಕಾರಾರ್ಹವಾಗಿರುವ ನಿರ್ಣಯಿಸಲ್ಪಟ್ಟ (ಅಂದರೆ ಪರಿಶೋಧಿಸಲ್ಪಟ್ಟ, ಪರೀಕ್ಷಿಸಲ್ಪಟ್ಟ, ರುಜುವಾತುಗೊಂಡ, ವೇಚನೆಯುಳ್ಳ, ಗ್ರಹಿಸಲ್ಪಟ್ಟ) ನಮ್ಮ ಜೀವಿತವನ್ನು ಸಹ ನಾವು ಜೀವಿಸುತ್ತಿದ್ದೇವೆ. ಆಂಗ್ಲ ಭಾಷೆಯಲ್ಲಿ ಸ್ವೀಕಾರಾರ್ಹ ಎನ್ನುವ ಶಬ್ದವು ತಪ್ಪಾದ ಅಭಿಪ್ರಾಯವನ್ನು ಕೊಡುತ್ತದೆ. ಸ್ವೀಕಾರಾರ್ಹವಾಗುವದು ಅಂದರೆ ಸರಿಯಾಗಿದೆ ಮತ್ತು ಕೇವಲ ತೃಪ್ತಿಕರವಾಗಿದೆ ಎಂದು ಅರ್ಥ. ಹೇಗಿದ್ದರೂ, ಗ್ರೀಕ್‌ನಲ್ಲಿ ('euarestos') ಅಂದರೆ ಯಾವುದು ಕರ್ತನಿಗೆ ಪೂರ್ತಿಯಾಗಿ ಒಪ್ಪಿಗೆಯುಳ್ಳದ್ದೂ ಮತ್ತು ಚೆನ್ನಾಗಿ ಮೆಚ್ಚಿಕೆಯಾದದ್ದೂ ಆಗಿದೆಯೋ ಎಂದು ಅರ್ಥ. ಆದ್ದರಿಂದ, ವಿಶ್ವಾಸಿಗಳಂತೆ, ನಾವು ಕರ್ತನಿಗೆ ಯಾವುದು ಪೂರ್ತಿಯಾಗಿ ಒಪ್ಪಿಗೆಯುಳ್ಳದ್ದೂ ಮತ್ತು ಚೆನ್ನಾಗಿ ಮೆಚ್ಚಿಕೆಯಾದದ್ದೂ ಆಗಿದೆಯೋ ಅಂತಹ ದೇವರ ಚಿತ್ತವನ್ನು ಕಂಡುಕೊಳ್ಳುವ ಈ ಪ್ರಯತ್ನದಲ್ಲಿ ನಾವು ಉತ್ತೇಜಿಸಲ್ಪಡೋಣ.

ಮುಂದೆ 17ನೆಯ ವಚನದಲ್ಲಿ, ನಾವು ಬುದ್ಧಿಯಿಲ್ಲದವರಾಗಿರಬಾರದು ಎಂದು ತಿಳಿಸುತ್ತದೆ. ಥೇಯರ್ಸ್ ಗ್ರೀಕ್ ವಿವರಣೆಗಳು ಮುಂದಿರುವ ಶಬ್ದದ ಅರ್ಥಗಳನ್ನು ಹೊಂದಿದೆ ('ಆಫ್‌ರೂನ್') ಎಂಬ ಗ್ರೀಕ್ ಶಬ್ದದ ಅರ್ಥ 'ಬುದ್ಧಿಯಿಲ್ಲದ್ದು': ಕಾರಣವಿಲ್ಲದ, ಪ್ರಜ್ಞೆಯಿಲ್ಲದ, ಮೂರ್ಖ, ದಡ್ಡ, ಪ್ರತಿಫಲನ ಅಥವಾ ಬುದ್ಧಿಶಕ್ತಿಯಿಲ್ಲದ, ದುಡುಕಿನ ಕ್ರಿಯೆ ಎಂದು ಇದರ ಅರ್ಥ. ಬುದ್ಧಿಯಿಲ್ಲದಿರುವದರ ಬದಲಿಗೆ, ದೇವರ ಚಿತ್ತ ಏನೆಂಬುದನ್ನು ನಾವು ಗ್ರಹಿಸಿಕೊಳ್ಳಬೇಕು. 'ಗ್ರಹಿಕೆ' ಎನ್ನುವದಕ್ಕೆ ಗ್ರೀಕ್‌ನಲ್ಲಿ ಒಟ್ಟಿಗೆ ಇಡುವದು, ಗ್ರಹಿಸುವದು, ಮನಸ್ಸಿನಲ್ಲಿ ಒಟ್ಟಿಗೆ ಜೋಡಿಸುವದು ಅಥವಾ ಇಡುವದು, ಒಂದು ವಿರುದ್ಧವಾದ ತಿಳುವಳಿಕೆಯಲ್ಲಿ ಒಟ್ಟಾಗಿ ತರುವಂತಾದ್ದು, ಇಬ್ಬರು ಜಟ್ಟಿಗಳನ್ನು ಒಟ್ಟಿಗೆ ತರುವಂತದ್ದು, ಎಂದು ಅರ್ಥ,

ಇವು ಹೊರತೋರಿಕೆಯ ವಿರೋಧವಾದ ಕಲ್ಪನೆಗಳ ಮೂಲಕ ಆಲೋಚನೆಗಳನ್ನು ಸೂಚಿಸುವಂತವುಗಳು. ದೇವರ ಚಿತ್ತವನ್ನು ಗ್ರಹಿಸಿಕೊಳ್ಳುವದರಲ್ಲಿ ಮತ್ತು ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದರಲ್ಲಿ ನಮ್ಮ ಮನಸ್ಸಿನೊಂದಿಗೆ ದೂರವಾಗಿ ಯಾವುದನ್ನೂ ಮಾಡಬಾರದೆಂದು ಈ ವಚನವು ನಮಗೆ ಕಲಿಸುತ್ತದೆ.

ಕೆಲವು ಸಲ, ವಿಶ್ವಾಸಿಗಳು ದೇವರ ಮಾರ್ಗದರ್ಶನದ ಮತ್ತು ದೇವರ ಚಿತ್ತದ ತೋರಿಕೆಯ ಪ್ರಯತ್ನದಲ್ಲಿ, ಎಲ್ಲಾ ಉತ್ತಮವಾದ ವಿವೇಕವನ್ನೂ, ಎಚ್ಚರಿಕೆಯನ್ನೂ ಮತ್ತು ಅರ್ಥವಿಲ್ಲದ ಮಾತಿಗೆ ಕಾರಣವನ್ನೂ ದೂರ ಎಸೆಯುತ್ತಾರೆ. ನಾವು ಅವರನ್ನು ಕೆಲವೊಂದು ಸರಳವಾದ ಕಾರ್ಯರೂಪದ ಸೂಚನೆಗಳೊಂದಿಗೆ ಸಮಾಲೋಚಿಸಿದಾಗ, ಅವರು ತುಂಬಾ ಆತ್ಮೀಕವಲ್ಲದ ಮತ್ತು ಕೆಲವು ಅಂದವಾಗಿ ಕಾಣದ ಮತ್ತು ಸರಳವಾದ ಸಾಮಾನ್ಯ ತಿಳುವಳಿಕೆಯಿರುವ ಹಾಗೆ ಗಮನಿಸಲ್ಪಡುತ್ತಾರೆ. ಅನಂತರ ಅವರು ಒಂದು ದೊಡ್ಡ ಅವ್ಯವಸ್ಥೆಯೊಳಗೆ ಹೋಗುತ್ತಾರೆ, ಮತ್ತು ತಾವೇ ಹೋದಂತಹ ಆ ಅವ್ಯವಸ್ಥೆಯನ್ನು ವಿಂಗಡಿಸುವದರಲ್ಲಿ ತಮ್ಮ ಹೆಚ್ಚಾದ ಜೀವಿತವನ್ನು ವ್ಯರ್ಥಮಾಡಿಕೊಳ್ಳುತ್ತಾರೆ. ಅವರು ಕೇವಲ ಕೆಲವು ಕಾರ್ಯರೂಪದ ಸಲಹೆಗಳಿಗೆ ಮಾತ್ರ ಗಮನಕೊಡುತ್ತಿದ್ದರೆ, ದೇವರ ರಾಜ್ಯಕ್ಕಾಗಿ ಹೆಚ್ಚು ಉಪಯೋಗಕರವಾಗಿ ಅವರು ಹೇಗೆ ಇರುವದಕ್ಕಾಗುತ್ತದೆ. ನಮ್ಮ ಮೂಲಕಾರಣದ ಮನಸ್ಸಿನಿಂದ ಸೃಷ್ಟಿಸಲ್ಪಟ್ಟ ನಿರ್ಬಂಧಗಳನ್ನು ಪಕ್ಕಕ್ಕಿಡುವದಕ್ಕೆ ದೇವರ ಮಾರ್ಗದರ್ಶನದ ಅವಶ್ಯಕತೆಯ ಸಮಯಗಳಿವೆ ಎನ್ನುವದನ್ನು ನಾವು ತಿಳಿದಿರಬೇಕು. ನವೀಕರಣಗೊಂಡ ಮನಸ್ಸು ಎಂಬ ನಮ್ಮ ಅಧ್ಯಾಯದಲ್ಲಿ ಇದನ್ನು ನಾವು ಹೆಚ್ಚಾಗಿ ಚರ್ಚಿಸೋಣ.

## 5) ಉಳಿದುಕೊಂಡಿರುವ ತಿಳಿಯದಿರುವ ಸಂಗತಿಗಳು

ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ನಾವು ಹುಡುಕಿ ಆತನ ಚಿತ್ತವನ್ನು ತಿಳಿದುಕೊಳ್ಳುವದರಲ್ಲಿ, ತಿಳಿಯದಿರುವ ಕ್ಷೇತ್ರವೂ ಇದೆ ಎಂಬುದನ್ನು ನಾವು ಗುರುತಿಸಬೇಕು.

ಧರ್ಮೋ.ಕಾಂಡ–29:29

**ರಹಸ್ಯವಾದವುಗಳು ನಮ್ಮ ದೇವರಾದ ಯೆಹೋವನವು; ಆದರೆ ಆತನಿಂದ ಪ್ರಕಟವಾದವುಗಳು ಸದಾ ನಮ್ಮ ಮತ್ತು ನಮ್ಮ ಸಂತತಿ –ಯವರ ಪಾಲಾಗಿರುವದರಿಂದ ನಾವು ಈ ಧರ್ಮಶಾಸ್ತ್ರನಿಯಮಗಳನ್ನು ಅನುಸರಿಸಿ ನಡೆಯಬೇಕಾದ ಹಂಗಿನಲ್ಲಿದ್ದೇವೆ.**

ದೇವರು ತನಗಾಗಿ ಮಾತ್ರ ಕಾದಿರಿಸಿ ಇಟ್ಟುಕೊಂಡಿರುವ ಸಂಗತಿಗಳಿವೆ. ಆದ್ದರಿಂದ ನಮ್ಮ ಎಲ್ಲಾ ಪ್ರಶ್ನೆಗಳಿಗೆ ನಾವು ಹೊಂದಿಕೊಳ್ಳದಿರುವ ಉತ್ತರಗಳೊಂದಿಗೆ ನೆಮ್ಮದಿಯಾಗಿರುವದಕ್ಕೆ ನಾವು ಸಮ್ಮತಿಯುಳ್ಳವರಾಗಿರಬೇಕು. ತಿಳಿಯದಿರುವದರೊಂದಿಗೆ, ಉತ್ತರಿಸಲ್ಪಡದಿರುವದರೊಂದಿಗೆ ನಾವು ಸಮಾಧಾನದಲ್ಲಿ ಜೀವಿಸಬೇಕು, ಯಾಕೆಂದರೆ ಗ್ರಹಿಕೆಗೂ ಮೀರಿದ ಸಮಾಧಾನವನ್ನು ನಾವು ಹೊಂದಿದ್ದೇವೆ (ಫಿಲಿಪ್ಪಿ-4:6-7). ನಾವು ಅರ್ಥಮಾಡಿಕೊಳ್ಳದಿದ್ದಾಗ್ಯೂ ಸಹ ನಾವು ಹೊಂದಿಕೊಂಡಿರುವ ಸಮಾಧಾನ ಇದಾಗಿದೆ. ಈ ರೀತಿಯ ಸಮಾಧಾನದೊಳಗೆ ನಾವು ಹೆಜ್ಜೆಯಿಡುವ ರೀತಿಯು, ಹೋಗುವದಕ್ಕೆ ಆಸ್ಪದ ಕೊಟ್ಟು ದೇವರ ಕೈಯೊಳಗೆ ಸಂಗತಿಗಳನ್ನು ಸ್ವಾಧೀನಪಡಿಸುವಂತದ್ದಾಗಿದೆ.

ಅದನ್ನು ಹೇಳುವದರಲ್ಲಿ, ನಾವು ಆತನ ಚಿತ್ತದ ತಿಳುವಳಿಕೆಯೊಂದಿಗೆ ತುಂಬಿದವರಾಗಿರಬೇಕೆಂದು ಆತನು ಇಷ್ಟಪಡುತ್ತಾನೆ ಎನ್ನುವದನ್ನು ದೇವರು ಸ್ಪಷ್ಟವಾಗಿ ಸೂಚಿಸುತ್ತಾನೆ. ಹೇಗಿದ್ದರೂ, ಎಲ್ಲಿಯವರೆಗೆ ಮಾರ್ಗದರ್ಶನವು ಆತನ ಉದ್ದೇಶಗಳಿಗನುಸಾರವಾಗಿ ಜೀವಿಸಿರುವ ಜೀವನದಲ್ಲಿ ಇರುತ್ತದೋ, ಅಲ್ಲಿಯವರೆಗೆ ಆತನ ಚಿತ್ತವನ್ನು ಮಾಡುವದಕ್ಕೆ ನಾವು ಯಾವುದನ್ನು ತಿಳಯಬೇಕೆಂಬುದನ್ನು ಪ್ರಕಟಿಸುವದಕ್ಕೆ ದೇವರ ಕಡೆಯಿಂದಕ್ಕೆ ಹಿಡಿದಿಡುವಂತದ್ದು ಯಾವದೂ ಇರುವದಿಲ್ಲ.

## ದೇವರ ಚಿತ್ತದ ವಿವಿಧ ಪ್ರಕಾರಗಳಿವೆಯೋ?

ರೋಮಾ-12;1-2

**1 - ಆದದರಿಂದ ಸಹೋದರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೆ ನಿಮ್ಮ ವೇಕಪೂರ್ವಕವಾದ ಆರಾಧನೆಯು.**

**2 - ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ**

''ಉತ್ತಮ'', ''ಸ್ವೀಕಾರಾರ್ಹ'', ಮತ್ತು ''ಸಂಪೂರ್ಣ'' ಎಂಬ ದೇವರ ಚಿತ್ತದ ಮೂರು ವಿವಿಧ ಪ್ರಕಾರಗಳನ್ನು ಅಥವಾ ವರ್ಗಗಳನ್ನು ಸೂಚಿಸುವದಕ್ಕೆ ಕೆಲವರು ವಾಕ್ಯದ ಈ ಎರಡು ವಚನಗಳನ್ನು ಉಪಯೋಗಿಸುತ್ತಾರೆ. ಹೇಗಿದ್ದರೂ, ದೇವರ ಚಿತ್ತದ ಈ ಮೂರು ವಿವಿಧ ಪ್ರಕಾರಗಳ ಈ ಕಲ್ಪನೆಗೆ ನಾವು ಚಂದಾದಾರರಾಗುವದಿಲ್ಲ, ಮತ್ತು

ಇದು ನಿಜವಾಗಿಯೂ ತಪ್ಪಾದದ್ದಾಗಿದ್ದು ಸಂಧಾನದ ಜೀವಿತವನ್ನು ಜೀವಿಸುವದಕ್ಕೆ ಜನರನ್ನು ನಡೆಸುತ್ತದೆ. ಆದ್ಯಂತವಾಗಿ ಇದನ್ನು ಅಧ್ಯಯನ ಮಾಡೋಣ.

ಮೊದಲನೆಯದಾಗಿ, ದೇವರ ಚಿತ್ತ ಎನ್ನುವ ಅದೇ ಸಂಗತಿಯನ್ನು ವಿವರಿಸುವದಕ್ಕೆ ಉಪಯೋಗಿಸಲ್ಪಡುವ ಮೂರು ಬಗೆಗಳು ಉತ್ತಮವಾದದು, ಸ್ವೀಕಾರಾರ್ಹವಾದದು ಮತ್ತು ಸಂಪೂರ್ಣವಾದದು ಎಂಬುದನ್ನು ನಾವು ಗ್ರಹಿಸಿಕೊಳ್ಳಲೇಬೇಕು. ಉದಾಹರಣೆಗೆ, ಒಂದು ಸೇಬು ಕೆಂಪಾಗಿದೆ ರುಚಿಯಾಗಿದೆ ಮತ್ತು ಸುವಾಸನೆಯುಳ್ಳದ್ದಾಗಿದೆ ಎಂದು ನಾವು ಹೇಳಿದರೆ, ಒಂದೇ ಹಣ್ಣನ್ನು ವಿವರಿಸುವದಕ್ಕೆ ನಾವು ಕೇವಲ ಮೂರು ವಿವಿಧ ಬಗೆಗಳನ್ನು ಉಪಯೋಗಿಸಿದ್ದೇವೆ ಹೊರತು ಮೂರು ವಿವಿಧ ಸಂಗತಿಗಳನ್ನಲ್ಲ.

ಎರಡನೆಯದಾಗಿ, ''ಸ್ವೀಕಾರಾರ್ಹ'' ಎಂದರೆ ''ಅನುಮೋದಕ'' ಅಥವಾ ''ಅನುಮತಿ'' ಎಂದು ಅರ್ಥವಲ್ಲ. ರೋಮಾ-12:1-2 ರಲ್ಲಿ ಸ್ವೀಕಾರಾರ್ಹ ಎಂಬ ಶಬ್ದವು ಎಫೆಸ 5:10ರಲ್ಲಿ ಉಪಯೋಗಿಸಲ್ಪಟ್ಟ ಅದೇ ಗ್ರೀಕ್ ಶಬ್ದವಾಗಿದೆ, ಅಲ್ಲಿ ನಾವು ಕರ್ತನಿಗೆ ಪೂರ್ತಿ ಒಪ್ಪಿಗೆಯಾದದ್ದೂ ಮತ್ತು ಚೆನ್ನಾಗಿ ಮೆಚ್ಚಿಕೆಯಾದದ್ದೂ ಎಂಬ ಅರ್ಥವಿರುವ ('enarestos') ಎಂಬ ಗ್ರೀಕ್ ಶಬ್ದವನ್ನು ವಿವರಿಸಿದ್ದೇವೆ. ''ಸ್ವೀಕಾರಾರ್ಹ'' ಎಂಬ ಒಂದೇ ಶಬ್ದವನ್ನು ರೋಮಾ-12:1ರಲ್ಲಿ ಮತ್ತು 12:2ರಲ್ಲಿ ಉಪಯೋಗಿಸಿರುವದನ್ನು ದಯಟ್ಟು ಗಮನಿಸಿರಿ. ರೋಮಾ 12:1ರಲ್ಲಿ ನಮ್ಮ ದೇಹಗಳು ದೇವರಿಗೆ ಮೆಚ್ಚಿಕೆಯಾದದ್ದೂ ಮತ್ತು ಪರಿಶುದ್ಧವಾದದ್ದೂ ಆಗಿರಬೇಕು. ''ಸ್ವೀಕಾರಾರ್ಹ'' ಎಂಬ ಶಬ್ದವು ಪರಿಶುದ್ದತೆಯೊಂದಿಗೆ ಸರಿಸಮವಾಗಿದೆ. ರೋಮಾ 12:1ರಲ್ಲಿರುವ ''ಸ್ವೀಕಾರಾರ್ಹ'' ಎಂಬುದನ್ನು ದೇವರಿಗೆ ಅಪೂರ್ಣವಾಗಿ ಸ್ವೀಕಾರಾರ್ಹವಾದದ್ದೂ ಮತ್ತು ಅನುಮತಿಸಲ್ಪಟ್ಟದ್ದೂ ಎಂಬ ಅರ್ಥದಂತೆ ಯಾವುದೇ ರೀತಿಯಲ್ಲಿಯೂ ಭಾಷಾಂತರಿಸಬಾರದು. ಆದ್ದರಿಂದ, ನಾವು ರೋಮಾ-12:2ನ್ನು ಓದುವಾಗ, ''ಸ್ವೀಕಾರಾರ್ಹ'' ಎಂಬ ಶಬ್ದದ ನಮ್ಮ ಗ್ರಹಿಕೆಯಲ್ಲಿ ನಾವು ಸ್ಥಿರವಾಗಿ ಉಳಿದುಕೊಳ್ಳಬೇಕು. 'ಉತ್ತಮವಾದ' ಮತ್ತು ಸಂಪೂರ್ಣವಾದ' ದೇವರ ಚಿತ್ತ ಎಂಬ ರೀತಿಯಂತೆಯೇ ರೋಮಾ 12:2ರಲ್ಲಿರುವ ''ಸ್ವೀಕಾರಾರ್ಹ'' ಎಂಬ ಶಬ್ದದ ಅರ್ಥವು, ಪೂರ್ತಿ ಒಪ್ಪಿಕೊಳ್ಳುವಂತಾದ್ದು ಮತ್ತು ಚೆನ್ನಾಗಿ ಮೆಚ್ಚಿಕೆಯಾದದ್ದು ಎಂದು ಅರ್ಥವಾಗಿದೆ.

ಮೂರನೆಯದಾಗಿ, ದೇವರ ಚಿತ್ತದ ಮೂರು ಪ್ರಕಾರಗಳ ಅಂತಹ ಒಂದು ಪ್ರಕಟನೆಯಿದ್ದಿದ್ದರೆ, ಪೌಲನು ತನ್ನ ಪತ್ರಿಕೆಗಳಲ್ಲಿ ಎಲ್ಲಿಯೂ ಇದನ್ನು ತಿಳಿಸುತ್ತಿರಲಿಲ್ಲ.

ನಿಜವಾಗಿ ಹೇಳುವದಾದರೆ ಇತರ ಪತ್ರಿಕೆಗಳಲ್ಲಿ ನೋಡುವಂತೆ (ಕೊಲೊಸ್ಸೆ ಮತ್ತು ಎಫೆಸ ಪತ್ರಿಕೆಗಳಲ್ಲಿ ನಾವು ನೋಡುವ ಹಾಗೆ) ದೇವರ ಚಿತ್ತವನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳುತ್ತಿದ್ದೆವು. ನಾಲ್ಕನೆಯದಾಗಿ, ಯೇಸು ಕ್ರಿಸ್ತನ ಜೀವನ, ಬೋಧನೆ ಮತ್ತು ಸೇವೆಯ ಕಡೆಗೆ ನೋಡಿರಿ. ದೇವರ ಚಿತ್ತದ ವಿವಿಧ ಪ್ರಕಾರಗಳ ಕುರಿತಾಗಿ ಯೇಸು ನಮಗೆ ಬೋಧನೆ ಮಾಡಿರುವದು ನಮಗೆ ಕಂಡುಬರುವದಿಲ್ಲ. ಕಾಯಿಲೆಯವರು ಆತನ ಬಳಿಗೆ ಬಂದಾಗ, ಒಂದು ವೇಳೆ ಇದು ಸ್ವಸ್ಥವಾಗುವದಕ್ಕೆ ದೇವರ ಚಿತ್ತವಿದೆಯೋ ಅಥವಾ ಅವರು ರೋಗದಲ್ಲಿಯೇ ಉಳಿದುಕೊಳ್ಳುವದಕ್ಕೆ ಒಂದು ವೇಳೆ ಇದು ದೇವರ ಅಪ್ಪಣೆಯ ಚಿತ್ತವೋ ಎನ್ನುವದನ್ನು ಪ್ರತಿಯೊಬ್ಬ ರೋಗಿಯು ನಿಶ್ಚಯಿಸುವದರ ಕುರಿತು ಯೇಸು ತಂದೆಗೆ ಪ್ರಾರ್ಥಿಸುತ್ತಿರಲಿಲ್ಲ. ನಂಬಿಕೆಯಲ್ಲಿ ತನ್ನ ಬಳಿಗೆ ಬರುವವರೆಲ್ಲರನ್ನೂ ಆತನು ಗುಣಪಡಿಸಿ ಬಿಡುಗಡೆಗೊಳಿಸುತ್ತಿದ್ದನು.

ಇತರ ವಿಷಯಗಳಾಗಿರುವ (ಎ) ಮನುಷ್ಯನ ಪತನ (ಬಿ)ಇಬ್ರಿಯರು ಅರಣ್ಯದಲ್ಲಿ ಮಾಂಸವನ್ನು ಆಶಿಸಿದ್ದು (ಸಿ) ತಮ್ಮ ನೆರೆಯ ದೇಶಗಳವರಂತೆ ಇಸ್ರಾಯೇಲ್ಯರು ತಮಗೂ ಅರಸನನ್ನು ಬಯಸಿದ್ದು ಇತ್ಯಾದಿಗಳ ಕುರಿತು ಏನು. ಇದು ದೇವರ ಚಿತ್ತವಾಗಿತ್ತಾ? ಇಲ್ಲ. ದೇವರು ಇದಕ್ಕೆ ಅಪ್ಪಣೆ ಕೊಟ್ಟಿದ್ದನೋ? ಹೌದು. ಇಂತಹ ಒಂದು 'ಸ್ವೀಕಾರಾರ್ಹ ಚಿತ್ತ' ಅಥವಾ ಅಪ್ಪಣೆ ಕೊಡುವ ಚಿತ್ತ' ಎಂಬ ಸಂಗತಿ ಇದೆ ಎಂದು ಇದರ ಅರ್ಥವೋ. ಇಲ್ಲ ಇದು ಹಾಗೆ ಅರ್ಥ ಕೊಡುವದಿಲ್ಲ. ಇದು ಕೇವಲ ಅಲ್ಲಿ ಏನು ಸಂಭವಿಸಿತೋ ಅದು ದೇವರ ಚಿತ್ತವಲ್ಲ ಆದಾಗ್ಯೂ ದೇವರು ಜನರಿಗೆ ಸ್ವಇಚ್ಛೆಯನ್ನು ಕೊಟ್ಟು ಈ ಆಯ್ಕೆಗಳನ್ನು ಆರಿಸಿಕೊಳ್ಳುವದಕ್ಕೆ ಸ್ವಾತಂತ್ರ್ಯವನ್ನು ಕೊಟ್ಟಿದ್ದನು. ನಾವು ಮಾಡಿಕೊಳ್ಳುವ ಆಯ್ಕೆಗಳೊಂದಿಗೆ ಹೋಗುವದಕ್ಕೆ ದೇವರು ನಮಗೆ ಅನುಮತಿ ಕೊಟ್ಟು ನಮ್ಮೊಂದಿಗೆ ಕೆಲಸ ಮಾಡುತ್ತಾನೆ, ಸ್ಥಾಪಿಸಲ್ಪಟ್ಟ ಆತನ ಉದ್ದೇಶಗಳನ್ನು ನೋಡುವ ಕ್ರಮದಲ್ಲಿ ತಾನೇ ನಮ್ಮನ್ನು ಹಿಂದಕ್ಕೆ ಕರೆಯುತ್ತಾನೆ. ದೇವರು ತನ್ನ ಚಿತ್ತದ ಪ್ರಕಾರ ಸಂಗತಿಗಳನ್ನು ಪುನ: ವಶಕ್ಕೆ ಕೊಡುವದರ ಕುರಿತಾಗಿ ಹೋಗುತ್ತಾನೆ. ಒಂದು ಹೋಲಿಕೆಯ ಹಾಗೆ, ಇದನ್ನು ಅಲೋಚಿಸಬೇಕು: ಪಟ್ಟಣಗಳಲ್ಲಿ ಕೊಲೆಗಳಾಗುವದು ಸರ್ಕಾರದ ಇಷ್ಟ (ಅಥವಾ ಕಾನೂನು) ಅಲ್ಲ. ಆದರೆ ಕೊಲೆಗಳಾಗುತ್ತವೆ? ಹೌದು. ಹಾಗಾದರೆ ಕೊಲೆಗಳಾಗುವದಕ್ಕೆ ಅನುಮತಿಯ ಹಾಗೆ ಇದು ಸರ್ಕಾರವು ಒಂದು 'ಅಪ್ಪಣೆ ಕೊಡುವ ಕಾನೂನು' ಹೊಂದಿದೆ ಎಂದು ಇದರ ಅರ್ಥವೋ? ಎಂದಿಗೂ ಇಲ್ಲ. ಎಲ್ಲಾ ಕೊಲೆಗಳು ಕಾನೂನಿಗೆ ವಿರುದ್ಧವಾದವುಗಳೇ. ಎಲ್ಲಿ ಸಂಗತಿಗಳು ಉಲ್ಲಂಘಿಸಲ್ಪಡುತ್ತವೆಯೋ ಅಲ್ಲಿ ಕಾನೂನನ್ನು ಹೇರಿ ಅದನ್ನು ಪುನ:ಸ್ಥಾಪಿಸುವದಕ್ಕೆ ಸರ್ಕಾರವು ಕೆಲಸಮಾಡುತ್ತದೆ.

ಹಾಗಾಗಿ ಕೆಲವರು ಯಾವುದನ್ನು 'ಅಪ್ಪಣೆ ಕೊಡುವ ಚಿತ್ತ' ಎಂದು ಕರೆಯುವಂತೆ ಅದನ್ನು ಇನ್ನೊಂದು ರೀತಿಯಲ್ಲಿ ದೇವರ ಚಿತ್ತವಲ್ಲ ಎಂಬ ನಿಜವಾದ ಶಬ್ದವೆ ಮತ್ತು ಅದು ನಿಜವಾಗಿಯೂ ದೇವರ ಚಿತ್ತದ ಹೊರಗಿರುವಂತದ್ದಾಗಿದೆ.

ಅಪ್ಪಣೆ ಕೊಡುವ ದೇವರ ಚಿತ್ತದ ಒಂದು ಅಭಿಪ್ರಾಯದ ಅಪಾಯ ಯಾವುದೆಂದರೆ, ಇದು ದೇವರ ಚಿತ್ತವನ್ನು ಮಾಡುವದಕ್ಕೆ ವಿಶ್ವಾಸಿಗಳಿಗೆ ಒಂದು ತುಂಬಾ ಅನಿಶ್ಚಿತವಾದ ಸಾಮೀಪ್ಯವನ್ನು ಕೊಡುತ್ತದೆ. ನಾನು ದೀರ್ಘವಾಗಿ ದೇವರ ಚಿತ್ತದ ಹೊರಗಿಲ್ಲದಿದ್ದರೂ ದೇವರ ಚಿತ್ತದ ಅನುಮತಿಯಲ್ಲಿದ್ದರೆ ನಾನು ಸರಿಯಾಗಿರುತ್ತೇನೆ ಎನ್ನುವದು ಇದರ ಉದ್ದೇಶವಾಗಿದೆ. ಆದರೆ ಇದನ್ನು ನೇರವಾಗಿ ತೆಗೆದುಕೊಳ್ಳೋಣ – ದೇವರ ಅಪ್ಪಣೆ ಕೊಡುವ ಚಿತ್ತ ಎನ್ನುವಂತೆ ಕೆಲವರು ಕರೆಯುವದರಲ್ಲಿ ನಿಜವಾಗಿಯೂ ಇದು ದೇವರ ಚಿತ್ತದ ಹೊರಗಿರುವಂತದ್ದಾಗಿದೆ.

ಎರಡರಲ್ಲಿ ಒಂದೂ ಇಲ್ಲದೆ ಆತನಲ್ಲಿ ಯಾವುದೇ 'ನರೆತ ಭಾಗಗಳು' ಇದ್ದರೂ, ದೇವರು ಬೆಳಕಾಗಿದ್ದಾನೆ, ಆತನಲ್ಲಿ ಕತ್ತಲೆಯಿಲ್ಲ.

ಯಾವುದು ಉತ್ತಮವೋ, ಸ್ವೀಕಾರಾರ್ಹವೋ ಮತ್ತು ಸಂಪೂರ್ಣವಾದ ದೇವರ ಚಿತ್ತವೋ ಅದರಲ್ಲಿ ನಡೆದು ಅದನ್ನು ಗ್ರಹಿಸಿಕೊಳ್ಳುವದೇ ನಮ್ಮ ಗುರಿಯಾಗಿರಬೇಕು.

## ನಮ್ಮ ಜವಾಬ್ದಾರಿ: ಹುಡುಕುವದು, ಕೇಳಿಸಿಕೊಳ್ಳುವದು, ವಿಧೇಯವಾಗುವದು

ದೇವರ ಮಾರ್ಗದರ್ಶನವನ್ನು ಪಡೆದುಕೊಳ್ಳುವದರಲ್ಲಿ ಅದನ್ನು ನೆರವೇರಿಸುವದಕ್ಕೆ ನಾವು ಜವಾಬ್ದಾರಿಯನ್ನು ಅಥವಾ ಭಾಗವನ್ನು ಹೊಂದಿದ್ದೇವೆ. ನಾವು ಹುಡುಕುವವರೂ, ಕೇಳಿಸಿಕೊಳ್ಳುವವರೂ ಮತ್ತು ವಿಧೇಯರಾಗುವವರೂ ಆಗಿರಲೇಬೇಕು.

## ಹುಡುಕುವದು

ಹುಡುಕುವದು ಎಂದರೆ, ನಮಗೆ ಮಾರ್ಗದರ್ಶನ ಮಾಡಿ ದಿಕ್ಕು ತೋರಿಸುವದಕ್ಕೆ ಆಸಕ್ತಿಯಿಂದ ಆಶಿಸಿ ದೇವರನ್ನು ಕೇಳಿಕೊಳ್ಳುವದು ಎಂದು ಅರ್ಥ. ಆತನ ಚಿತ್ತವನ್ನು ತಿಳಿದುಕೊಳ್ಳುವದಕ್ಕೆ ನಮ್ಮ ಆಶೆಯನ್ನು ವ್ಯಕ್ತಪಡಿಸುವದರಿಂದ ನಾವು ಆತನನ್ನು ಮೆಚ್ಚಿಸಿ ಗೌರವಿಸುತ್ತಾ ನಡೆಯುತ್ತೇವೆ.

ನಾವು ತಿಳಿಯದಿರುವ ಸಂಗತಿಗಳ ಆತನ ಪ್ರಕಟನೆಗಳನ್ನು ಹೊಂದಿಕೊಳ್ಳುವ ಕ್ರಮದಲ್ಲಿ ನಾವು ಆತನನ್ನು ಹುಡುಕುವದಕ್ಕೂ ಮತ್ತು ಆತನನ್ನು ಕರೆಯುವದಕ್ಕೂ ದೇವರು ನಮ್ಮನ್ನು ಆಹ್ವಾನಿಸುತ್ತಾನೆ.

ಯೆರೆಮೀಯ–29:12–13

**12 –ನೀವು ನನಗೆ ಮೊರೆಯಿಡುವಿರಿ, ನನ್ನನ್ನು ಪ್ರಾರ್ಥಿಸಲು ಹೋಗುವಿರಿ; ನಾನು ಕಿವಿಗೊಡುವೆನು.**

**13 – ನೀವು ನನ್ನನ್ನು ಹುಡುಕುವಿರಿ, ಮನಃಪೂರ್ವಕವಾಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ.**

ನಮ್ಮ ಹುಡುಕುವಿಕೆಯು ಮನಃಪೂರ್ವಕವಾಗಿರಬೇಕು. ಅಂತಹ ಒಂದು ಹೃದಯದ ಮನೋಭಾವಕ್ಕೆ ದೇವರು ಪ್ರತಿಕ್ರಿಯಿಸುತ್ತಾನೆ.

ಯೆರೆಮೀಯ–33:3

**'ನನ್ನನ್ನು ಕೇಳಿಕೋ, ನಾನು ನಿನಗೆ ಸದುತ್ತರವನ್ನು ದಯಪಾಲಿಸಿ ನಿನಗೆ ತಿಳಿಯದ ಮಹತ್ತಾದ ಗೂಢಾರ್ಥಗಳನ್ನು ಗೋಚರಪಡಿಸುವೆನು'.**

ಹುಡುಕುವದು ಕಂಡುಕೊಳ್ಳುವದಕ್ಕೆ ಮುನ್ನಡೆಸುತ್ತದೆ. ನಾವು ಆಸಕ್ತಿಯಿಂದ ದೇವರ ವಿಚಾರ ಮಾಡಿ ಆತನ ಚಿತ್ತವನ್ನು ಮತ್ತು ನಮ್ಮ ಜೀವಿತಗಳಿಗಾಗಿ ನಿರ್ದೇಶನವನ್ನು ತಿಳಿದುಕೊಳ್ಳುವದಕ್ಕೆ ಆಶಿಸಿದಂತೆ, ನಾವು ಗ್ರಹಿಸಿಕೊಂಡವರಾಗಿ ಆತನ ಮಾರ್ಗದರ್ಶನವನ್ನು ಹೊಂದಿಕೊಳ್ಳುತ್ತೇವೆ.

ಮತ್ತಾಯ–7:7,8

**7 – ಬೇಡಿಕೊಳ್ಳಿರಿ ನಿಮಗೆ ದೊರೆಯುವದು; ಹುಡುಕಿರಿ ನಿಮಗೆ ಸಿಕ್ಕುವದು; ತಟ್ಟಿರಿ ನಿಮಗೆ ತೆರೆಯುವದು.**

**8 – ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನೂ ಹೊಂದುವನು, ಹುಡುಕುವವನಿಗೆ ಸಿಕ್ಕುವದು ಮತ್ತು ತಟ್ಟುವವನಿಗೆ ತೆರೆಯುವದು.**

ದೇವರ ಮಾರ್ಗದರ್ಶನದ ನಮ್ಮ ಹುಡುಕುವಿಕೆ ಮತ್ತು ಹೊಂದಿಕೊಳ್ಳುವಿಕೆಯು ವಿವಿಧ ಹೇಳಿಕೆಗಳ ಮೇಲೆ ತೆಗೆದುಕೊಳ್ಳಲ್ಪಟ್ಟಿದೆ:

## 1) ಸಂಗತಿಗಳ ಸಾಮಾನ್ಯವಾದ ಪಥದ ವೇಳೆಯಲ್ಲಿ ಆತನ ಮಾರ್ಗದರ್ಶನವನ್ನು ಹುಡುಕುವದು

ನಾವು ನಮ್ಮ ದಿನವನ್ನು ಹಾದುಹೋಗುವಾಗ, ಆತ್ಮದಲ್ಲಿ ನಾವು ನಡೆಯುತ್ತೇವೆ, ಒಂದು ನವೀಕರಣಗೊಂಡ ಮನಸ್ಸಿನೊಂದಿಗೆ ನಡೆಯುತ್ತೇವೆ, ಮತ್ತು ಯಾವಾಗಲಾದರೂ

ಪ್ರಾಮುಖ್ಯವಾದ ತೀರ್ಮಾನದ ಕ್ಷಣಗಳು ಎದ್ದಾಗ ಆತನಿಗೆ ಕಿಗೊಡುವದಕ್ಕೆ ಕಲಿಯುತ್ತೇವೆ. ಬಹುಶ: ನೀವು ಒಂದು ವ್ಯವಹಾರದ ಕೂಟದಲ್ಲಿದ್ದು ಕೆಲವು ಪ್ರಾಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಆಗ ನಿಮ್ಮ ಹೃದಯದಲ್ಲಿಯೇ ಪ್ರಾರ್ಥಿಸಿರಿ. ಆತನೊಂದಿಗೆ ಮಾತಾಡಿರಿ ಮತ್ತು ಆತನ ಸಮಾಲೋಚನೆಗಾಗಿ ಮತ್ತು ಮಾರ್ಗ ದರ್ಶನಕ್ಕಾಗಿ ಆತನನ್ನು ಕೇಳಿಕೊಳ್ಳಿರಿ. ಸಂಗತಿಗಳ ಸಾಮಾನ್ಯವಾದ ಪಥದ ಮೂಲಕವಾಗಿ ನಾವು ಹಾದುಹೋಗುವ ನಮ್ಮ ದಿನದ ವೇಳೆಯಲ್ಲಿ ದೇವರು ನಮಗೆ ಮಾರ್ಗದರ್ಶನ ಮಾಡುತ್ತಾನೆ.

## 2)ಹುಡುಕುವಿಕೆಯ ವಿಶೇಷವಾದ ಸಮಯಗಳ ವೇಳೆಯಲ್ಲಿ ಆತನ ಮಾರ್ಗದರ್ಶನವನ್ನು ಹುಡುಕುವದು

ಜೀವನದಲ್ಲಿ ಮುಖ್ಯವಾದ ತೀರ್ಮಾನಗಳನ್ನು ಮಾಡುವಾಗ ಹುಡುಕುವಿಕೆಯ ವಿಶೇಷವಾದ ಸಮಯಗಳನ್ನು ನಾವು ಒತ್ತಟ್ಟಿಗೆ ಇಡುತ್ತೇವೆ (ಇಡಬೇಕು). ಇದು ಅರ್ಥ ಕೊಡುವದೇನೆಂದರೆ, ಪ್ರಾರ್ಥಿಸುವುದಕ್ಕೆ, ಆತನ ವಾಕ್ಯದಲ್ಲಿರುವದಕ್ಕೆ, ಆರಾಧನೆಗಾಗಿ ಕೇವಲ ಆತನೊಂದಿಗೆ ಏಕಾಂತವಾಗಿರುವದಕ್ಕೆ ನಾವು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತೇವೆ, ಮತ್ತು ಆತನ ಮಾರ್ಗದರ್ಶನವನ್ನು ಹೊಂದಿಕೊಳ್ಳುವ ಸ್ಥಿತಿಯಲ್ಲಿ ನಾವೇ ಇರುತ್ತೇವೆ. ಹುಡುಕುವಿಕೆಯ ವಿಶೇಷವಾದ ಸಮಯಗಳು ಈ ರೀತಿಯ ಅರ್ಥವನ್ನು ಸಹ ಕೊಡುತ್ತವೆ, ಏನೆಂದರೆ ನಮಗಾಗಿ ಮಾಡುವದಕ್ಕೆ ಆತನು ಏನು ಆಶಿಸುತ್ತಾನೆ ಎನ್ನುವದರ ಖಚಿತತೆಯನ್ನು ನಾವು ತಿಳಿದುಕೊಳ್ಳುವವರೆಗೆ ನಾವು ಆತನಿಗಾಗಿ ಕಾಯುವದಕ್ಕೆ ಎಡೆಬಿಡದೆ ಅನೇಕ ದಿವಸಗಳನ್ನು (ವಾರಗಳನ್ನು) ಕಳೆಯುತ್ತೇವೆ.

ದೇವರ ನಿರ್ದೇಶನವನ್ನು ಹುಡುಕುವಾಗ ವಿಶೇಷವಾಗಿ ಪ್ರಮುಖವಾದ ತೀರ್ಮಾನಗಳಲ್ಲಿ ಉಪವಾಸವಿದ್ದು ಪ್ರಾರ್ಥಿಸುವದನ್ನು ಕೆಲವರು ಆಯ್ಕೆಮಾಡಿಕೊಳ್ಳುತ್ತಾರೆ. ನಮ್ಮ ಜೀವಿತಗಳಲ್ಲಿ ಆತನ ಬೆಳಕು ಭೇದಿಸಿಕೊಂಡು ಬರುತ್ತದೆ ಮತ್ತು ಕರ್ತನು ನಿರಂತರವಾಗಿ ನಮಗೆ ಮಾರ್ಗದರ್ಶನ ಮಾಡುತ್ತಾನೆ ಎಂಬುದು ಆಯ್ಕೆಯ ಉಪವಾಸದ ಫಲಿತಾಂಶಗಳಲ್ಲಿ ಒಂದು ಎನ್ನುವದನ್ನು ಯೆಶಾಯ 58 ನಮಗೆ ಕಲಿಸುತ್ತದೆ:

ಯೆಶಾಯ–58:11

**ಯೆಹೋವನು ನಿಮ್ಮನ್ನು ನಿತ್ಯವೂ ನಡಿಸುತ್ತಾ ಮರುಭೂಮಿಯಲ್ಲಿಯೂ ನಿಮ್ಮ ಆತ್ಮವನ್ನು ತೃಪ್ತಿಗೊಳಿಸಿ ನಿಮ್ಮ ಎಲುಬುಗಳನ್ನು ಸಸಾರ ಮಾಡುವನು; ನೀವು ತಂಪಾದ ತೋಟಕ್ಕೂ ನೀರಿಗೆ ಮೋಸವಿಲ್ಲದ ಬುಗ್ಗೆಗೂ ಸಮಾನವಾಗುರಿ.**

## 3) ಅನೀರಿಕ್ಷಿತ ದೇವರ ಕ್ಷಣಗಳ ವೇಳೆಯಲ್ಲಿ ಮಾರ್ಗದರ್ಶನ

ಹಾಗಾದರೆ ದೇವರು ಮಾತಾಡುವದಕ್ಕೆ ಪ್ರಾರಂಭಿಸಿ ತನ್ನ ಸಮಾಲೋಚನೆಯನ್ನು ನಮಗೆ ಪ್ರಕಟಿಸುವ ಆ ಅನೀರಿಕ್ಷಿತ ದೇವರ ಕ್ಷಣಗಳು ಇವೆ. ನಾವು ಅನಿವಾರ್ಯವಾಗಿ ಆತನ ಮಾರ್ಗದರ್ಶನಕ್ಕಾಗಿ ಕೇಳಿಕೊಳ್ಳುವದು ಅಥವಾ ಹುಡುಕುವದು ಬೇಡ, ಆದರೆ ದೇವರೇ ಒಳನುಗ್ಗಿ ನಮ್ಮೊಂದಿಗೆ ಮಾತಾಡುತ್ತಾನೆ. ಇದು ಯಾವುದೇ ರೀತಿಯಲ್ಲಿ ಬರಬಹುದು ಎನ್ನುವದನ್ನು ಮುಂದೆ ನಾವು ಈ ಪುಸ್ತಕದಲ್ಲಿ ಆಲೋಚಿಸಲಿದ್ದೇವೆ.

### ಕೇಳಿಸಿಕೊಳ್ಳುವದು

ಯೋಹಾನ: 10:1–5, 27

**1 – ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಕುರೀ ಹಟ್ಟಿಯೊಳಗೆ ಬಾಗಲಿಂದ ಬಾರದೇ ಮತ್ತೆಲ್ಲಿಂದಾದರೂ ಹತ್ತಿ ಬರುವವನು ಕಳ್ಳನೂ ಸುಲುಕೊಳ್ಳುವವನೂ ಆಗಿದ್ದಾನೆ.**

**2 – ಬಾಗಲಿಂದ ಒಳಗೆ ಬರುವವನು ಆ ಕುರಿಗಳ ಕುರುಬನು.**

**3 – ಬಾಗಲು ಕಾಯುವವನು ಅವನಿಗೆ ಬಾಗಲನ್ನು ತೆರೆಯುತ್ತಾನೆ, ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ.**

**4 – ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ. ಸ್ವಂತ ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ.**

**5 – ಅವು ಅನ್ಯರ ಸ್ವರವನ್ನು ತಿಳಿಯುವದಿಲ್ಲ; ಅನ್ಯನ ಹಿಂದೆ ಹೋಗದೆ ಅವನ ಬಳಿಯಿಂದ ಓಡಿಹೋಗುತ್ತವೆ.**

**27 – ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ.**

ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಇರುವಂತಹ ಎರಡನೆಯ ಮುಖ್ಯವಾದ ಭಾಗವು ಅದು ಕೇಳಿಸಿಕೊಳ್ಳುವದು.

ಕುರಿಗಳು ತಮ್ಮ ಕುರುಬನೊಂದಿಗಿನ ಸಂಬಂಧದಲ್ಲಿ ಏನು ಮಾಡುತ್ತವೆ ಎಂಬುದನ್ನು ಕರ್ತನಾದ ಯೇಸು ಹೇಗೆ ಹಂಚಿಕೊಂಡಿದ್ದಾನೆಂಬುದನ್ನು ಗಮನಿಸಿರಿ:

ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ – ಅವು ಕುರುಬನ ಸ್ವರವನ್ನು ಕೇಳಿಸಿಕೊಳ್ಳುವದರಲ್ಲಿರುತ್ತವೆ.

ಅವನ ಸ್ವರವನ್ನು ಅವು ತಿಳಿದಿರುವದರಿಂದ, ಕುರಿಗಳು ಅವನನ್ನು ಹಿಂಬಾಲಿಸುತ್ತವೆ ಅವು ಆತನ ಸ್ವರವನ್ನು ತಿಳಿದು ಅವನಿಗೆ ಕಿವಿಗೊಡುವದರಿಂದ ತಮ್ಮ ಕುರುಬನನ್ನು ಹಿಂಬಾಲಿಸುವದಕ್ಕೆ ಅವು ಶಕ್ತವಾಗಿರುತ್ತವೆ.

ಕುರಿಯು ಅಪರಿಚಿತರನ್ನು ಹಿಂಬಾಲಿಸುವದಿಲ್ಲ ಯಾಕೆಂದರೆ ಅದು ತಮ್ಮ ಕುರುಬನ ಸ್ವರವಲ್ಲ ಎಂಬುದನ್ನು ಅವು ಗುರುತಿಸುತ್ತವೆ.

ಇದರಂತೆಯೇ, ಕುರಿಗಳ ಹಾಗೆ, ನಾವೂ ಸಹ ಆತನ ಸ್ವರವನ್ನು ಕೇಳಿ ಗುರುತಿಸಿ ತಿಳಿದುಕೊಂಡಾಗ ನಮ್ಮ ಕುರುಬನನ್ನು ನಾವು ಹಿಂಬಾಲಿಸುತ್ತೇವೆ. ದೇವರು ಮಾತಾಡುತ್ತಿದ್ದಾನೆ. ನಾವು ಕೇಳಿಸಿಕೊಳ್ಳುತ್ತಿದ್ದೇವೆಯೋ? ನಾವು ಸರಿಯಾದ ಸ್ಥಳಗಳಲ್ಲಿ ಮತ್ತು ಸರಿಯಾದ ಸ್ವರಕ್ಕೆ ಕಿವಿಗೊಡುತ್ತಿದ್ದೇವೆಯೋ? ನಾವು ತಪ್ಪಾದ ಸ್ವರಗಳನ್ನು ಅಂದರೆ ಅಪರಿಚಿತರ ಸ್ವರವನ್ನು ದೂರವಿರಿಸುತ್ತಿದ್ದೇವೋ ಅಥವಾ ಅದಕ್ಕೆ ಎಡೆಕೊಡುತ್ತಿದ್ದೇವೋ?

ಕೀರ್ತನೆ–23:3–4

**3 – ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ.**

**4 – ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ.**

ಕುರುಬನ ದೊಣ್ಣೆಯೂ ಮತ್ತು ಕೋಲೂ ಭದ್ರತೆ ಮತ್ತು ರಕ್ಷಣೆಯ ಕೆಲಸವನ್ನು ಮಾತ್ರ ಮಾಡುವದಿಲ್ಲ ಆದರೆ ಕುರಿಗಳಿಗೆ ಮಾರ್ಗದರ್ಶನ ಮಾಡಿ ಅವುಗಳನ್ನು ಒಟ್ಟಿಗೆ ಸೇರಿಸುವ ಕೆಲಸವನ್ನೂ ಸಹ ಮಾಡುತ್ತವೆ. ಕುರುಬನು ಮುಂದೆ ಇದ್ದುಕೊಂಡು ತನ್ನ ಧ್ವನಿಯಿಂದ ಅವುಗಳನ್ನು ಕರೆಯುತ್ತಿದ್ದನು, ಅವನ ಧ್ವನಿಯನ್ನು ಹಿಂಬಾಲಿಸುತ್ತಾ ಅವು ಅವನ ಹಿಂದೆ ಹೋಗುತ್ತಿದ್ದವು, ಹೀಗೆ ಕುರುಬನು ಕುರಿಗಳನ್ನು ಮುನ್ನಡೆಸುತ್ತಿದ್ದ ಸಮಯಗಳಿದ್ದವು. ಕುರಿಗಳು ತಿಳಿದಿರುವ ದಾರಿಯನ್ನು ಹಿಡಿದಾಗ ಕುರುಬನು ಅವುಗಳ ಹಿಂದಿನಿಂದ ಹೋಗುತ್ತಿದ್ದ ಸಮಯಗಳು ಇದ್ದವು. ಕುರುಬನು ಕುರಿಗಳನ್ನು ಕರೆಯುತ್ತಾ ತನ್ನ ದೊಣ್ಣೆಯನ್ನೂ ಮತ್ತು ಕೋಲನ್ನೂ ಉಪಯೋಗಿಸಿ ಅವುಗಳನ್ನು ಸರಿಯಾದ ದಾರಿಯಲ್ಲಿ ನಡಿಸುತ್ತಾನೆ. ಕುರುಬನ ಸ್ವರ, ಅವನ ದೊಣ್ಣೆ ಮತ್ತು ಕೋಲು ಇವೆಲ್ಲವೂ ಆತನ ಕುರಿಗಳಾಗಿರುವ ನಮ್ಮನ್ನು ತಾನು ಇಷ್ಟಪಡುವ ದಾರಿಯಲ್ಲಿ ನಡೆಸಿಕೊಂಡು ಹೋಗುವ ದೇವರ ಮಾರ್ಗದರ್ಶನದ ವಿವಿಧ ಚಿತ್ರಗಳಾಗಿವೆ. ನಮ್ಮ ಕುರುಬನಾಗಿರುವ ದೇವರು ನಮಗೆ ಮಾರ್ಗದರ್ಶನ ಮಾಡುತ್ತಾನೆ. ನಾವು ಆತನಿಗೆ ಕಿಗೊಟ್ಟು ಹಿಂಬಾಲಿಸುವದಕ್ಕೆ ಇಷ್ಟವುಳ್ಳವರಾಗಿರಲೇಬೇಕು.

## ವಿಧೇಯರಾಗುವದು

ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಇರುವಂತ ಮುಖ್ಯವಾದ ಮೂರನೆಯ ಭಾಗವು ಅದು ವಿಧೇಯರಾಗುವದು. ದೇವರು ನಮಗೆ ಮಾರ್ಗದರ್ಶನ ಮಾಡುತ್ತಾನೆ ಆದ್ದರಿಂದ ನಾವು ಆತನನ್ನು ಹಿಂಬಾಲಿಸಬೇಕು.

ಜ್ಞಾನೋಕ್ತಿ–3:32

**ವಕ್ರಬುದ್ಧಿಯವನು ಯೆಹೋವನಿಗೆ ಅಸಹ್ಯನು, ಯಥಾರ್ಥರಿಗೆ ಆತನ ಸ್ನೇಹವು ದೊರೆಯುವದು.**

ದೇವರು ತನ್ನ ಸಮಾಲೋಚನೆಯ ರಹಸ್ಯವನ್ನು ನೀತಿವಂತನಿಗೆ ಪ್ರಕಟಪಡಿಸುತ್ತಾನೆ. ನೀತಿವಂತನೇ ಯಾಕೆ? ಉತ್ತರಗಳು ಯಾಕೆಂದರೆ ದೇವರ ದೃಷ್ಟಿಯಲ್ಲಿ ಯಾವುದು ಸರಿಯೋ ಅದನ್ನು ಮಾಡುವದಕ್ಕೆ ಅವು ಆಶಿಸುತ್ತವೆ. ದೇವರು ಮಾತಾಡುತ್ತಾನೆ ಹಾಗಾಗಿ ನಾವು ಆತನಿಗೆ ವಿಧೇಯರಾಗಬೇಕು ಮತ್ತು ಆತನಿಗೆ ಮೆಚ್ಚಿಕೆಯುಳ್ಳವರಾಗಿ ನಡೆಯಬೇಕು.

ದೇವರು ಮಾರ್ಗದರ್ಶಿಯಾಗಿರುತ್ತಾನೆ ಆದರೆ ನಾವು ನಂಬಿಕೆಯಿಂದ, ವಿಧೇಯತೆಯಿಂದ ಮತ್ತು ತಾಳ್ಮೆಯಿಂದ ಹಿಂಬಾಲಿಸಲೇಬೇಕು. ಕೆಲವೊಂದು ಸಲ ವಿಧೇಯರಾಗುವದು ನಮ್ಮ ಶರೀರಕ್ಕೆ ಮತ್ತು ಮನುಷ್ಯ ಆಶೆಗಳಿಗೆ 'ನೋವಿನ' ಸಂಗತಿಯಾಗಿರುತ್ತದೆ. ಆದರೆ ದೇವರ ಮಾರ್ಗದರ್ಶನದ ವಿಧೇಯತೆಯ ಅಂತ್ಯದ ಫಲಿತಾಂಶವು ಸಮಾಧಾನವಾಗಿದೆ ಎಲ್ಲವೂ ಚೆನ್ನಾಗಿರುತ್ತದೆ.

ಕೀರ್ತನೆ–37:37

**ಒಳ್ಳೇ ನಡತೆಯುಳ್ಳವನನ್ನು ನೋಡು, ಯಥಾರ್ಥನನ್ನ ಲಕ್ಷಿಸು; ಶಾಂತನಿಗೆ ಸಂತಾನವೃದ್ಧಿ ಆಗುವದು.**

## ಪರ್ಯಾಲೋಚನೆ

1) ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದು ಹೇಗೆ ಎನ್ನುವದನ್ನು ಕಲಿತುಕೊಳ್ಳುವ ಈ ಪ್ರಯಾಣವನ್ನು ನಾವು ಆರಂಭಿಸುವ ಹಾಗೆ, ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಪ್ರಮುಖವಾದ ತೀರ್ಮಾನಗಳನ್ನು ಮತ್ತು ಅಪೇಕ್ಷೆಗಳನ್ನು ನೀವು ತೆಗೆದುಕೊಳ್ಳುವ ನಿಮ್ಮ ಜೀವಿತದ ಒಂದು ಅಥವಾ ಹೆಚ್ಚಾದ ಭಾಗಗಳನ್ನು ಬರೆಯಿರಿ.

2) ಇಲ್ಲಿಯವರೆಗೆ ದೇವರೊಂದಿಗಿನ ನಿಮ್ಮ ನಡೆಯನ್ನು ಹಿಂದಿರುಗಿ ನೋಡಿರಿ, ದೇವರು ನಿಮಗೆ ಮಾರ್ಗದರ್ಶನ ಮಾಡಿದ್ದನ್ನು ನೀವು ಚೆನ್ನಾಗಿ ತಿಳಿದಿರುವ ಉದಾಹರಣೆಗಳು ಅಲ್ಲಿರುತ್ತವೆ. ಈ ಉದಾಹರಣೆಗಳಲ್ಲಿ ಕೆಲವೊಂದರ ಮೇಲೆ ಪ್ರತಿಬಿಂಬಿಸಿರಿ. ನಿಮಗಾಗಿ ದೇವರು ಮಾಡಿರುವ ನಿರ್ದೇಶನವನ್ನು ನೀವು ಹೇಗೆ ಗುರುತಿಸಿ ತಿಳಿದುಕೊಳ್ಳುತ್ತೀರಿ?

# 2

# ದೇವರನ್ನು ವಿಚಾರಿಸುತ್ತಿದ್ದ ದಾವೀದನು

ಹಳೆ ಒಡಂಬಡಿಕೆಯಲ್ಲಿ ಅರಸನಾದ ದಾವೀದನು ಕರ್ತನನ್ನು ಆಳವಾಗಿ ಪ್ರೀತಿಸುತ್ತಿದ್ದ ಮತ್ತು ತನ್ನ ಜೀವನದುದ್ದಕ್ಕೂ ದೇವರನ್ನು ಹಿಂಬಾಲಿಸುವದಕ್ಕೆ ಹುಡುಕುತ್ತಿದ್ದ ಒಬ್ಬ ಮನುಷ್ಯನಾಗಿದ್ದನು. ದೇವರು ಪ್ರವಾದಿಯಾದ ಸಮುವೇಲನ ಮೂಲಕವಾಗಿಯೂ ಸಹ ದಾವೀದನ ಕುರಿತಾಗಿ ಹೀಗೆ ಮಾತಾಡಿದ್ದಾನೆ, ''ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು, ಅವನು ನನಗೆ ಒಪ್ಪುವ ಮನುಷ್ಯನು, ಅವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವವನು'' (ಅಪೊ.ಕೃತ್ಯ–13:22, 1ಸಮು–13:14ರಿಂದ ಉಲ್ಲೇಖ). ''ಇವನು ನನಗೆ ಒಪ್ಪುವ ಮನುಷ್ಯನು'' ಎಂದು ದೇವರು ದಾವೀದನ ವಿಷಯದಲ್ಲಿ ಹೇಳಿರುವಂತಾದ್ದು ಎಂತಹ ಒಂದು ಅದ್ಭುತವಾದ ಸಾಕ್ಷಿಯಾಗಿದೆ. ಇವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವವನು! ಎಂದು ದಾೀದನ ಕುರಿತು ಹೇಳುವದಕ್ಕೆ ದೇವರು ಎಷ್ಟೊಂದು ಭರವಸೆಯುಳ್ಳವನಾಗಿದ್ದನು.

ಅದಲ್ಲದೆ ಅಪೊ.ಕೃತ್ಯಗಳ ಪುಸ್ತಕದಲ್ಲಿ, ಪೌಲನು ಪ್ರಸಂಗಿಸುವಾಗ ದಾವೀದನ ಕುರಿತು ಹೀಗೆ ಹೇಳುತ್ತಾನೆ:

ಅಪೊಸ್ತಲರ ಕೃತ್ಯಗಳು –13:36

**ದಾವೀದನಾದರೋ ತನ್ನ ಸಕಾಲದವರಿಗೆ ಸೇವೆ ಮಾಡಿದ ನಂತರ ದೈವ ಸಂಕಲ್ಪದೊಂದಿಗೆ ನಿದ್ದೆ ಹೋಗಿ ತನ್ನ ಪಿತೃಗಳ ಬಳಿಯಲ್ಲಿ ಇಡಲ್ಪಟ್ಟು ಕೊಳೆಯುವ ಅವಸ್ಥೆಯನ್ನು ಅನುಭವಿಸಿದನು.**

ದಾವೀದನು ದೇವರ ಚಿತ್ತದಿಂದ ಸೇವೆ ಮಾಡಿದನು. ಅವನು ದೇವರ ಚಿತ್ತವನ್ನು ಮಾಡಿದನು, ದೇವರ ಉದ್ದೇಶಗಳನ್ನು ಅನುಸರಿಸಿದನು ಮತ್ತು ತನ್ನ ಜೀವಿತಕ್ಕಾಗಿ ಕೊಡಲ್ಪಟ್ಟ ದೇವರ ನಿರ್ದೇಶನವನ್ನು ನೆರವೇರಿಸಿದನು.

ದಾವೀದನ ಜೀವಿತದ ರಹಸ್ಯಗಳಲ್ಲಿ ಅಥವಾ ಸಂಕೇತಗಳಲ್ಲಿ ಒಂದು ಯಾವುದೆಂದರೆ, ಅವನು ಮಾಡಿದ ತೀರ್ಮಾನಗಳಿಗಾಗಿ ಅವನು ಆಗಾಗ್ಗೆ ಕರ್ತನಿಂದ ವಿಚಾರಿಸಲ್ಪಡುವ ಮನುಷ್ಯನಾಗಿದ್ದನು.

ದಾವೀದನು ತನ್ನ ಯೌವನದಲ್ಲಿ ಕಿನ್ನರಿಯನ್ನು ಚೆನ್ನಾಗಿ ಬಾರಿಸುವವನೂ, ಪರಾಕ್ರಮಶಾಲಿಯೂ, ರಣಶೂರನೂ ವಾಕ್ಚತುರನೂ ಸುಂದರನೂ ಯೆಹೋವನ ಅನುಗ್ರಹವನ್ನು ಹೊಂದಿದವನು ಆಗಿದ್ದನು (1ಸಮು-16:18). ಪ್ರವಾದಿಯಾದ ಸಮುವೇಲನು ಅವನನ್ನು ಇಸ್ರಾಯೇಲ್ಯರ ಮುಂದಿನ ಅರಸನನ್ನಾಗಿ ಅಭಿಷೇಕಿಸಿದನು (1ಸಮು-16:12-13). ನಂತರದಲ್ಲಿ ದಾವೀದನು ಗೊಲ್ಯಾತನನ್ನು ಕೊಂದನು, ದಾವೀದನು ಬುದ್ಧಿವಂತಿಕೆಯಿಂದ ವರ್ತಿಸುತ್ತಿದ್ದನು, ವಿಶೇಷವಾಗಿ ಮೆಚ್ಚಿಕೆಯುಳ್ಳವನಾಗಿದ್ದು ಇಸ್ರಾಯೇಲ್ಯರಲ್ಲಿ ಆದರಿಸಲ್ಪಟ್ಟವನಾಗಿದ್ದನು ಮತ್ತು ಕರ್ತನು ಅವನೊಂದಿಗಿದ್ದಾನೆಂಬುದನ್ನು ಜನರು ತಿಳಿದಿದ್ದರು (1ಸಮು-18:5,7, 12,14-16,30). ಗೊಲ್ಯಾತನ ಮೇಲಿನ ಅವನ ಜಯದ ನಂತರ ಕೊಂಚ ಹೊತ್ತಿನಲ್ಲಿ ಅರಸನಾದ ಸೌಲನು ಅವನನ್ನು ಕೊಲ್ಲಬೇಕೆಂದಿದ್ದ ಕಾರಣದಿಂದ, ತನ್ನನ್ನು ರಕ್ಷಿಸಿಕೊಳ್ಳುವದಕ್ಕೆ ದಾವೀದನು ಓಡಿಹೋಗಬೇಕಾಯಿತು. ದಾವೀದನು ಓಡಿಹೋಗುವ ವೇಳೆಯಲ್ಲಿ, ಸುಮಾರು ನಾನೂರು ಜನರ ಒಂದು ಗುಂಪು ಬಂದು ದಾವೀದನನ್ನು ಸೇರಿಕೊಂಡು ಅವನನ್ನು ತಮ್ಮ ನಾಯಕನನ್ನಾಗಿ ಒಪ್ಪಿಕೊಂಡರು (1ಸಮು-22:1-2). ದಾವೀದನು ತೀರ್ಮಾನಗಳನ್ನು ಮಾಡುವಾಗ, ಹೊರಗೆ ಹೆಜ್ಜೆ ಇಡುವದಕ್ಕಿಂತ ಮೊದಲು ಅವನು ದೇವರನ್ನು ವಿಚಾರಿಸುತ್ತಿದ್ದ, ಈ ವಿಷಯದ ಮೇಲೆ ವಾಕ್ಯದಲ್ಲಿ ನಮಗಾಗಿ ಅನೇಕ ದಾಖಲೆಗಳನ್ನು ನಾವು ಹೊಂದಿದ್ದೇವೆ. ಇದು ನಮಗೆ ಸ್ಪಷ್ಟವಾಗಿ ದಾಖಲಿಸಲ್ಪಡದಿದ್ದಾಗ್ಯೂ, ಇದು ದಾವೀದನ ಪ್ರಾರಂಭದ ದಿವಸಗಳಿಂದಲೂ ಅವನ ಜೀವಿತದ ರೀತಿಯಾಗಿತ್ತು ಎಂಬುದನ್ನು ತೆಗೆದುಕೊಳ್ಳುವದಕ್ಕೆ ಇದು ಸರಿಯಾದುದಾಗಿದೆ.

ವಾಕ್ಯಗಳು ನಮಗೆ ಯಾವುದನ್ನು ದಾಖಲಿಸಿವೆ ಎನ್ನುವದನ್ನು ಆಲೋಚಿಸೋಣ:

## ನಿಮ್ಮ ಸ್ವಂತ ತಂಡದವರು ಸಂದೇಹಿಸಿದಾಗ

1ಸಮು-23:1-5

**1 – ಫಿಲಿಷ್ಟಿಯರು ಕೆಯೀಲಕ್ಕೆ ಮುತ್ತಿಗೆ ಹಾಕಿ ಅಲ್ಲಿನ ಕಣಗಳನ್ನು ಸೂರೆ ಮಾಡುತ್ತಿರುವ ವರ್ತಮಾನವು ದಾವೀದನಿಗೆ ಮುಟ್ಟಲು,**

**2 – ಅವನು, ನಾನು ಹೋಗಿ ಆ ಫಿಲಿಷ್ಟಿಯರನ್ನು ಹೊಡಿಯಬಹುದೋ ಎಂದು ಯೆಹೋವನನ್ನು ಕೇಳಿದನು. ಆತನು ಅವನಿಗೆ – ಹೋಗಿ ಫಿಲಿಷ್ಟಿಯರನ್ನು ಹೊಡೆದು ಕೆಯೀಲಾ ಊರನ್ನು ರಕ್ಷಿಸು ಎಂದು ಉತ್ತರಕೊಟ್ಟನು.**

**3 – ಆದರೆ ದಾವೀದನ ಸೈನಿಕರು ಅವನಿಗೆ – ನಮಗೆ ಯೆಹೂದ ಸೀಮೆಯಲ್ಲಿಯೇ ಇಷ್ಟು ಭಯವಿರುವಲ್ಲಿ ಫಿಲಿಷ್ಟಿಯ ಸೈನ್ಯದೊಡನೆ ಯುದ್ಧಮಾಡುವದಕ್ಕಾಗಿ ಕೆಯೀಲಕ್ಕೆ ಹೋದರೆ ಅಲ್ಲಿ ಎಷ್ಟೋ**

**ಅಧಿಕವಾದ ಭಯವುಂಟಾಗುವದಲ್ಲವೇ ಅಂದರು.**

**4 – ಆದದರಿಂದ ಅವನು ತಿರಿಗಿ ಯೆಹೋವನನ್ನು ಕೇಳಿದನು. ಆತನು – ನೀನೆದ್ದು ಕೆಯೀಲಕ್ಕೆ ಹೋಗು; ನಾನು ಫಿಲಿಷ್ಟಿಯರನ್ನು ನಿನ್ನ ಕೈಗೆ ಒಪ್ಪಿಸಿಕೊಡುವೆನು ಎಂದು ಉತ್ತರಕೊಟ್ಟನು.**

**5 – ಆಗ ದಾವೀದನು ತನ್ನ ಜನರೊಡನೆ ಕೆಯೀಲಕ್ಕೆ ಹೋಗಿ ಫಿಲಿಷ್ಟಿಯರೊಡನೆ ಯುದ್ಧಮಾಡಿ ಅವರನ್ನು ಸೋಲಿಸಿ ಅವರ ಪಶುಗಳನ್ನು ತೆಗೆದುಕೊಂಡು ಕೆಯೀಲದವರನ್ನು ರಕ್ಷಿಸಿದನು.**

ದಾವೀದನು ಕೆಯೀಲದಲ್ಲಿ ಫಿಲಿಷ್ಟಿಯರನ್ನು ಎದುರಿಸುವದಕ್ಕಾಗಿ ಕರ್ತನನ್ನು ವಿಚಾರಿಸಲು, ಕರ್ತನು ಅವನಿಗೆ ಮುಂದೆ ಹೋಗಲು ತಿಳಿಸಿದನು. ಹೇಗೂ, ನಾನೂರು ಜನರ ದಾವೀದನ ಚಿಕ್ಕದಾದ ತಂಡವು ಹೋರಾಡಲು ಹೋಗುವದಕ್ಕೆ ಭಯಗ್ರಸ್ಥರೂ ಮತ್ತು ಅನುಮಾನವುಳ್ಳವರೂ ಆಗಿದ್ದರು. ಆದ್ದರಿಂದ ದಾವೀದನು ದೇವರ ಬಳಿಗೆ ಮತ್ತೆ ಹೋಗಿ ಎರಡನೆಯ ಸಲ ವಿಚಾರಿಸಿದನು. ತನಗೆ ನಿಶ್ಚಿತವಾಗಬೇಕೆಂದು ಅವನು ಬಯಸಿದ್ದನು. ಕರ್ತನು ಮತ್ತೊಂದು ಸಲ ಹೋಗಿ ಹೋರಾಡುವಂತೆ ದಾವೀದನಿಗೆ ಹೇಳಿದನು, ಮತ್ತು ಜಯದ ಭರವಸೆಯನ್ನು ಅವನಿಗೆ ಕೊಟ್ಟನು. ದಾವೀದನು ಮತ್ತು ಅವನ ಜನರು ಜಯವನ್ನು ಅನುಭಸಿದರು. ಇದು ದಾವೀದನ ಜನರಿಗೆ ಒಂದು ದೊಡ್ಡದಾದ ಆತ್ಮಶ್ವಾಸದ ವೃದ್ಧಿಯನ್ನು ಹೊಂದಿಕೊಳ್ಳುವಂತದ್ದಾಗಿತ್ತು. ಅವರು ಸಂಖ್ಯೆಯಲ್ಲಿ ಕೇವಲ ಸ್ವಲ್ಪ ಜನರಿದ್ದರೂ ಸಹ ತಮ್ಮ ನಾಯಕನು ದೇವರನ್ನು ವಿಚಾರಿಸುತ್ತಾನೆ ಮತ್ತು ದೇವರು ಅವರನ್ನು ಮುನ್ನಡೆಸಿದಂತೆ ಅವರು ಯಶಸ್ಸನ್ನು ಕಂಡರು ಎನ್ನುವದು ಅವರಿಗೆ ಗೊತ್ತಾಯಿತು.

ನಿಮ್ಮ ಸುತ್ತಲಿರುವ ಜನರು ನಿಮ್ಮ ತಂಡದವರಾಗಿದ್ದು ನಿಮ್ಮೊಂದಿಗೆ ಪ್ರಯಾಣಿಸುವ ಅಗತ್ಯವುಳ್ಳವರಾಗಿರುತ್ತಾರೆ. ಇದು ನಿಮ್ಮ ಸ್ವಂತ ಕುಟುಂಬ, ಸ್ನೇಹಿತರು, ಆಗಿರಬಹುದು ಅಥವಾ ಸ್ಥಳೀಯ ಸಭೆಯ ಅವಸ್ಥೆಯಲ್ಲಿ ನೀವು ಮುನ್ನಡೆಸುವಂತ ಒಂದು ಗುಂಪಾಗಿರಬಹುದು; ಅಥವಾ ಒಂದು ಕೆಲಸದ ಸ್ಥಳದ ಅವಸ್ಥೆಯಲ್ಲಿ ನಿಮ್ಮ ಯೋಜನೆಯ ತಂಡ; ಅಥವಾ ಒಂದು ನಾಯಕತ್ವದ ಅವಸ್ಥೆಯಲ್ಲಿ ಇದು ನೀವು ಮುಖ್ಯಸ್ಥರಾಗಿರುವ ಸಂಘಸಂಸ್ಥೆಯಾಗಿರಬಹುದು. ನೀವು ದೇವರಿಂದ ಮಾರ್ಗದರ್ಶನವನ್ನು ಹೊಂದಿಕೊಂಡಂತೆ, ನಿಮ್ಮ ತಂಡವು ಅದನ್ನು ಒಪ್ಪದಿರುವಂತಹ ಸಮಯಗಳು ಬರಬಹುದು. ಅವರು ಆ ಮನೋಭಾವನೆಯ ಆಲೋಚನೆಯೊಂದಿಗಿರುವದಿಲ್ಲ. ದೇವರ ಬಳಿಗೆ ಮತ್ತೆ ಹೋಗಿರಿ. ಆತನನ್ನು ಹುಡುಕಿರಿ ಮತ್ತೆ ಆತನ ಮಾತನ್ನು ಕೇಳಿಸಿಕೊಳ್ಳಿರಿ. ಆತನ ಮಾತನ್ನು ನೀವು ಕೇಳಿಸಿಕೊಳ್ಳುತ್ತಿದ್ದೀರೋ ಎನ್ನುವದನ್ನು ನಿಶ್ಚಿತಪಡಿಸಿಕೊಳ್ಳಿರಿ. ಕರ್ತನು ಏನು

ಹೇಳಿದ್ದಾನೋ ಅದರೊಂದಿಗೆ ಮುಂದೆ ಹೋಗಿರಿ. ನಿಮ್ಮ ತಂಡವು ಯಶಸ್ಸನ್ನು ಕಾಣುತ್ತದೆ ಮತ್ತು ಕರ್ತನು ನಿಮ್ಮೊಂದಿಗಿದ್ದಾನೆಂಬುದನ್ನು ತಿಳಿದುಕೊಳ್ಳುತ್ತದೆ!

## ನೀವು ಒಂದು ತೀವ್ರವಾದ ತಡೆಯನ್ನು ಎದುರಿಸಿದಾಗ

1ಸಮು-30:1-8

**1 - ದಾವೀದನೂ ಅವನ ಜನರೂ ಮೂರನೆಯ ದಿನ ಚಿಕ್ಲಗ್ ಊರನ್ನು ಮುಟ್ಟಿದರು. ಅಷ್ಟರೊಳಗೆ ಅಮಾಲೇಕ್ಯರು ದಂಡೆತ್ತಿ ದಕ್ಷಿಣ ಪ್ರಾಂತಕ್ಕೂ ಚಿಕ್ಲಗ್ ಊರಿಗೂ ಬಂದು ಚಿಕ್ಲಗ್ ಊರನ್ನು ಸುಟ್ಟು ಹಾಳು ಮಾಡಿ,**

**2 -ಅದರಲ್ಲಿದ್ದ ಎಲ್ಲಾ ಹೆಂಗಸರನ್ನೂ ಚಿಕ್ಕವರನ್ನೂ ದೊಡ್ಡವರನ್ನೂ ಸೆರೆಹಿಡಿದುಕೊಂಡು ಹೋಗಿದ್ದರು; ಆದರೆ ಯಾರನ್ನೂ ಕೊಂದಿರಲಿಲ್ಲ.**

**3 - ದಾವೀದನೂ ಅವನ ಜನರೂ ತಮ್ಮ ಊರಿಗೆ ಬಂದಾಗ ಅದು ಸುಡಲ್ಪಟ್ಟಿರುವದನ್ನೂ ತಮ್ಮ ಹೆಂಡತಿಯರೂ ಗಂಡುಹೆಣ್ಣು ಮಕ್ಕಳೂ ಸೆರೆಯಾಗಿ ಒಯ್ಯಲ್ಪಟ್ಟಿರುವದನ್ನೂ ಕಂಡು,**

**4 - ಅವರು ತಮ್ಮಿಂದಾಗುವಷ್ಟು ಕಾಲ ಗಟ್ಟಿಯಾಗಿ ಅತ್ತರು.**

**5 - ದಾವೀದನ ಇಬ್ಬರು ಹೆಂಡತಿಯರಾದ ಇಜ್ರೇಲಿನವಳಾದ ಅಹೀನೋವಮಳೂ ಕರ್ಮೆಲ್ಯನಾದ ನಾಬಾಲನ ಹೆಂಡತಿಯಾಗಿದ್ದ ಅಬೀಗೈಲಳೂ ಸೆರೆಯಾಗಿ ಹೋಗಿದ್ದರು.**

**6 - ಇದಲ್ಲದೆ ಜನರು ತಮ್ಮ ಗಂಡು ಹೆಣ್ಣು ಮಕ್ಕಳಿಗಾಗಿ ಮನಸ್ಸಿನಲ್ಲಿ ಬಹಳವಾಗಿ ನೊಂದುಕೊಂಡು ದಾವೀದನನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದದರಿಂದ ಅವನು ಬಲು ಇಕ್ಕಟ್ಟಿನಲ್ಲಿ ಬಿದ್ದನು. ಆದರೂ ಅವನು ತನ್ನ ದೇವರಾದ ಯೆಹೋವನಲ್ಲಿ ತನ್ನನ್ನು ಬಲಪಡಿಸಿಕೊಂಡು,**

**7-ಅಹೀಮೆಲೆಕನ ಮಗನಾದ ಎಬ್ಯಾತಾರನಿಗೆ, ದಯವಿಟ್ಟು ಏಫೋದನ್ನು ಇಲ್ಲಿಗೆ ತೆಗೆದುಕೊಂಡು ಬಾ ಎಂದು ಹೇಳಲು ಅವನು ತಂದನು.**

**8 - ಆಗ ದಾವೀದನು ಯೆಹೋವನನ್ನು - ನಾನು ಆ ಗುಂಪನ್ನು ಹಿಂದಟ್ಟಬಹುದೋ? ಅದು ನನಗೆ ಸಿಕ್ಕುವದೋ ಎಂದು ಕೇಳಲು ಆತನು - ಹಿಂದಟ್ಟು, ಅದು ನಿನಗೆ ಸಿಕ್ಕುವದು; ನೀನು ಎಲ್ಲರನ್ನೂ ಬಿಡಿಸಿಕೊಂಡು ಬರು ಎಂದು ಉತ್ತರಕೊಟ್ಟನು.**

ದಾವೀದನ ಜೊತೆಯಲ್ಲಿದ್ದ ಜನರ ಗುಂಪು ಈಗ ಸುಮಾರು ಆರು ನೂರಕ್ಕೆ ಬೆಳೆಯಿತು (1ಸಮು-30:9). ಈ ಸಮಯದಲ್ಲಿ, ಅವರು ಒಂದು ತೀವ್ರವಾದ ಹಿನ್ನಡೆಯನ್ನು ಎದುರಿಸಿದರು. ಅವರು ಕಾರ್ಯನಿರತರಾಗಿ ದೂರದಲ್ಲಿದ್ದಾಗ, ಒಬ್ಬ ವೈರಿಯು ಆಕ್ರಮಣ ಮಾಡಿ ಎಲ್ಲವನ್ನೂ ಸುಲಿಗೆ ಮಾಡಿ ಅವರ ಕುಟುಂಬಗಳನ್ನು ಸೆರೆಹಿಡಿದುಕೊಂಡು ಹೋದನು. ಚಿಕ್ಕದಾಗಿ ಹೇಳಬೇಕೆಂದರೆ ಇದು ಒಂದು ಭೀಕರವಾದ ಸ್ಥಿತಿಯಾಗಿತ್ತು. ನಿಶ್ಚಿತವಾಗಿ ದಾವೀದನ ಮತ್ತು ಅವನ ಜನರ ಹೃದಯವು ಒಡೆದುಹೋಗಿತ್ತು. ಅವರು ಅಳತೊಡಗಿದರು. ಅವರು ನೋವಿನಿಂದ ಗೋಳಾಡಿದರು. ದಾವೀದನ ಜನರು ಅವನ ಮೇಲೆ ಕೋಪಗೊಂಡಿರು. ದಾವೀದನ

ಅವಸ್ಥೆಯನ್ನು ಊಹಿಸಿಕೊಳ್ಳಿರಿ! ಅವನು ತನ್ನ ಸ್ವಂತ ದು:ಖ ಮತ್ತು ನೋವಿನೊಂದಿಗೆ ವ್ಯವಹರಿಸುವದು ಮಾತ್ರವಲ್ಲ, ಆದರೆ ತನ್ನ ಸ್ವಂತ ತಂಡದವರ ಶಾಪವನ್ನೂ ಸಹ ಎದುರಿಸಿ ಅನುಭಸಬೇಕಾಯಿತು. ಆದಾಗ್ಯೂ, ದಾವೀದನ ಧೈರ್ಯ ಮತ್ತು ಬಲವನ್ನು ನಾವು ಇಲ್ಲಿ ನೋಡುತ್ತೇವೆ. ವಾಕ್ಯಗಳು ನಮಗೆ ಹೇಳುವದೇನೆಂದರೆ, ದಾವೀದನು ತಾನೇ ದೇವರಲ್ಲಿ ತನ್ನನ್ನು ಬಲಪಡಿಸಿಕೊಂಡನು. ಅವನು ದೇವರಿಗೆ ಮೊರೆಯಿಟ್ಟು, ಪ್ರಾರ್ಥಿಸಿ, ತನ್ನ ಕಣ್ಣೀರುಗಳ ಮೂಲಕ ಹಾಡಿ, ದೇವರನ್ನು ಪ್ರೀತಿಸಿ ಇನ್ನೂ ಹೆಚ್ಚಿನದನ್ನು ಮಾಡಬಹುದಿತ್ತು. ಆದರೆ ಅವನು ದೇವರಿಂದ ಬಲವನ್ನು ಎಳೆದುಕೊಂಡ. ದಾವೀದನು ಮಾಡಿದ ಮುಂದಿನ ಕೆಲಸವೆಂದರೆ ಅದು ದೇವರನ್ನು ವಿಚಾರಿಸಿದ್ದು. ಈ ಸ್ಥಿತಿಯಲ್ಲಿ ಅವನು ದೇವರ ಮಾರ್ಗದರ್ಶನವನ್ನು ಪಡೆದುಕೊಳ್ಳುವದಕ್ಕೆ ಬಯಸಿದನು. ಅವನು ಏನು ಮಾಡಬೇಕೆಂದು ದೇವರು ಇಷ್ಟಪಟ್ಟಿರಬಹುದು, ಬಿಕ್ಕಟ್ಟಿನ ಪರಿಸ್ಥಿತಿಗೆ ದಾವೀದನು ಹೇಗೆ ಪ್ರತಿಕ್ರಿಯಿಸಿದನು? ವೈರಿಯನ್ನು ಬೆನ್ನಟ್ಟಿ ಹೋಗುವದಕ್ಕೆ ಕರ್ತನು ದಾವೀದನಿಗೆ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಕೊಟ್ಟು ದಾವೀದನೂ ಮತ್ತು ಅವನ ಜನರು ಎಲ್ಲವನ್ನೂ ಮತ್ತೆ ವಶಪಡಿಸಿಕೊಳ್ಳುತ್ತೀರಿ ಎಂದು ಭರವಸೆ ಕೊಟ್ಟನು. ಮತ್ತು ಅವರು ಹಾಗೆ ಮಾಡಿದರು!

ಇದು ನಮಗೆ ಎಂತಹ ಒಂದು ಬಲಯುತವಾದ ಪಾಠವಾಗಿದೆ! ನಮ್ಮನ್ನು ಒಂದು ಮೂಲೆಗೆ ತಳ್ಳುವಂತಹ ಬಿಕ್ಕಟ್ಟಿನ ಪರಿಸ್ಥಿತಿಗಳನ್ನು ಮತ್ತು ತೀವ್ರತರವಾದ ಹಿನ್ನಡೆಯನ್ನೂ ನಾವು ಎದುರಿಸುವಾಗ, ದಾವೀದನು ಮಾಡಿದ ಹಾಗೆ ನಾವೂ ಮಾಡೋಣ. ನಾವು ದೇವರಲ್ಲಿ ನಮ್ಮನ್ನು ಬಲಪಡಿಸಿಕೊಂಡು ನಂತರ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು ಮತ್ತು ಯಾವ ಕ್ರಿಯೆಯನ್ನು ತೆಗೆದುಕೊಳ್ಳಬೇಕು ಎನ್ನುವದರ ಮೇಲೆ ದೇವರ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಪಡೆದುಕೊಳ್ಳಬೇಕು.

## ಜೀವಿತದಲ್ಲಿ ನೀವು ಬದಲಾವಣೆ ಹೊಂದಿದಾಗ

2ಸಮು–2:1–4

**1–ಅನಂತರ ದಾವೀದನು ಯೆಹೋವನನ್ನು – ''ನಾನು ಯೆಹೂದ ದೇಶದ ಯಾವುದಾದರೊಂದು ಪಟ್ಟಣಕ್ಕೆ ಹೋಗಬಹುದೋ'' ಎಂದು ಕೇಳಲು ಆತನು – ''ಹೋಗಬಹುದು'' ಅಂದನು. ಅವನು ತಿರಿಗಿ ''ಯಾವ ಊರಿಗೆ ಹೋಗಲಿ'' ಎಂದು ಕೇಳಿದ್ದಕ್ಕೆ – ಹೆಬ್ರೋನಿಗೆ ಹೋಗು ಎಂಬ ಉತ್ತರ ಸಿಕ್ಕಿತು.**

**2–ಆಗ ದಾವೀದನು ತನ್ನ ಇಬ್ಬರು ಹೆಂಡತಿಯರಾದ ಇಜ್ರೇಲಿನ ಅಹೀನೋವಮಳನ್ನೂ ಕರ್ಮೆಲ್ಯನಾದ ನಾಬಾಲನ ಹೆಂಡತಿಯಾಗಿದ್ದ ಅಬೀಗೈಲಳನ್ನೂ ಕರಕೊಂಡು ಅಲ್ಲಿಗೆ ಹೋದನು.**

**3–ದಾವೀದನ ಜನರೂ ತಮ್ಮ ತಮ್ಮ ಕುಟುಂಬಗಳನ್ನು ಕರಕೊಂಡು ಅವನ ಜೊತೆಯಲ್ಲಿ ಹೋಗಿ ಹೆಬ್ರೋನಿಗೆ ಸೇರಿದ ಊರುಗಳಲ್ಲಿ ವಾಸಿಸಿದರು.**

**4–ತರುವಾಯ ಯೆಹೂದ್ಯರು ಅಲ್ಲಿಗೆ ಬಂದು ದಾವೀದನನ್ನು ಅಭಿಷೇಕಿಸಿ ತಮ್ಮ ಕುಲಕ್ಕೆ ಅರಸನನ್ನಾಗಿ ಮಾಡಿಕೊಂಡರು. ''ಸೌಲನ ಶವವನ್ನು ಸಮಾಧಿ ಮಾಡಿದವರು ಯಾಬೇಷ್ ಗಿಲ್ಯಾದಿನವರೇ ಎಂಬ ಸಂಗತಿಯು ದಾವೀದನಿಗೆ ಗೊತ್ತಾಯಿತು.**

ತನ್ನನ್ನು ಕೊಲ್ಲುವದಕ್ಕೆ ಹೊಂಚುಹಾಕುತ್ತಿದ್ದ ಸೌಲನ ಕೈಗೆ ಸಿಕ್ಕದಂತೆ ದಾವೀದನು ತನ್ನ ಜೀವವನ್ನು ಉಳಿಸಿಕೊಳ್ಳುವದಕ್ಕಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಓಡಾಡುತ್ತಿದ್ದನು. ಇದ್ದಕ್ಕಿದ್ದಂತೆಯೇ ಸಂಗತಿಗಳು ಬದಲಾದವು. ಸೌಲನು ತೀರಿಹೋದನೆಂಬ ವರ್ತಮಾನವು ದಾವೀದನಿಗೆ ಸಿಕ್ಕಿತು. ಅವನನ್ನು ಕೊಲ್ಲಬೇಕೆಂದಿದ್ದ ವ್ಯಕ್ತಿಯು ಸತ್ತುಹೋಗಿದ್ದ. ಇದು ದಾವೀದನ ಜೀವಿತದಲ್ಲಿನ ಒಂದು ಬದಲಾವಣೆಯಾಗಿತ್ತು. ದಾವೀದನು ಅಲ್ಲಿಂದಿಲ್ಲಿಗೆ ಓಡಾಡುವ ಅಗತ್ಯ ಈಗ ಇಲ್ಲದಾಯಿತು. ಅವನು ಒಂದು ಸ್ಥಿರವಾದ ಮತ್ತು ಬಲವಾದ ಸ್ಥಳದೊಳಕ್ಕೆ ಹೋಗುವದಕ್ಕೆ ಶಕ್ತನಾದನು. ಮತ್ತೆ, ದಾವೀದನು ಮಾಡಿದ ಮೊದಲ ಕೆಲಸವೆಂದರೆ ಅದು ಕರ್ತನನ್ನು ವಿಚಾರಿಸಿದ್ದು. ಯೆಹೂದದ ಯಾವುದಾದರು ಒಂದು ಪಟ್ಟಣದಲ್ಲಿ ತನಗೆ ಪುನ:ಸ್ಥಳವನ್ನು ಗೊತ್ತುಪಡಿಸಿಕೊಡುತ್ತಾನೋ ಎಂದು ದಾವೀದನು ಕರ್ತನನ್ನು ಕೇಳಿದನು. ಕರ್ತನು ದೃಢಸೂಚಕವಾಗಿ ಉತ್ತರಿಸಿದಾಗ, ತಾನು ಯಾವ ಸ್ಥಳಕ್ಕೆ ಹೋಗಬೇಕೆಂದು ದಾವೀದನು ಕೇಳಿದನು. ದೇವರು ಅವನಿಗೆ ಹೆಬ್ರೋನಿಗೆ ಹೊಗುವಂತೆ ಸೂಚಿಸಿದನು. ದಾವೀದನು ಹೆಬ್ರೋನಿನಲ್ಲಿ ವಾಸಿಸಿದ ವೇಳೆಯಲ್ಲಿ ಯೆಹೂದದವರು ಬಂದು ದಾವೀದನನ್ನು ತಮ್ಮ ಅರಸನನ್ನಾಗಿ ಅಭಿಷೇಕಿಸಿದರು. ಅದ್ಭುತ! ಇಸ್ರಾಯೇಲ್ಯರ ಮೇಲೆ ಅರಸನಾಗುವದಕ್ಕೆ ಅವನಿಗಿದ್ದ ಕರೆಯ ಜೀವಿತದ ನೆರವೇರಿಕೆಯ ಮೊದಲ ಹೆಜ್ಜೆ ಇದಾಗಿತ್ತು. ದಾವೀದನು ಹೆಬ್ರೋನಿನಲ್ಲಿ ಇದ್ದ ಹಾಗೆಯೇ, ಏಳೂವರೆ ವರ್ಷಗಳ ನಂತರ, ಇಸ್ರಾಯೇಲಿನ ಎಲ್ಲಾ ನಾಯಕರುಗಳು ದಾವೀದನ ಬಳಿಗೆ ಬಂದು ಇಸ್ರಾಯೇಲ್ ದೇಶಕ್ಕೆಲ್ಲಾ ಅರಸನಾಗುವಂತೆ ದಾವೀದನನ್ನು ಆಹ್ವಾನಿಸಿದರು (2ಸಮು–5:1–5).

ದೇವರ ಮಾರ್ಗದರ್ಶನವನ್ನು ಪಡೆದುಕೊಂಡು ಆತನು ಮುನ್ನಡೆಸಿದಂತೆ ಮತ್ತು ಸೂಚಿಸಿದಂತೆ ಆತನೊಂದಿಗೆ ನಡೆಯುವದರ ಮೌಲ್ಯದ ಮೇಲಿನ ಇಲ್ಲಿರುವ ಪಾಠವು ಎಷ್ಟೊಂದು ಪ್ರಾಮುಖ್ಯವಾದುದು. ದೇವರ ಮಾರ್ಗದರ್ಶನದ ಅಡಿಯಲ್ಲಿ ಜೀವನದ ಬದಲಾವಣೆಗಳ ಮೂಲಕ ಪ್ರಯಾಣಿಸುವದು ನಮ್ಮನ್ನು ಒಂದು ಸ್ಥಿತಿಗೆ ತಂದು ನಮ್ಮ ಜೀವಿತಗಳಿಗಾಗಿ ದೇವರು ನೇಮಕಮಾಡಿರುವ ಎಲ್ಲವನ್ನೂ ನೆರವೇರಿಸುವದಕ್ಕೆ ನಮ್ಮನ್ನು ಹತ್ತಿರಕ್ಕೆ ನಡಿಸುತ್ತದೆ.

## ಅದೇ ವೈರಿ, ಅದೇ ಯುದ್ಧಭೂಮಿ, ವ್ಯತ್ಯಾಸವುಳ್ಳ ಯುದ್ಧಕೌಶಲ್ಯಗಳು.

2ಸಮು–5:17–25

**17–ಇಸ್ರಾಯೇಲ್ಯರು ದಾವೀದನನ್ನು ಅಭಿಷೇಕಿಸಿ ತಮ್ಮ ಅರಸನನ್ನಾಗಿ ಮಾಡಿಕೊಂಡರೆಂಬ ವರ್ತಮಾನವು ಫಿಲಿಷ್ಟಿಯರಿಗೆ ಮುಟ್ಟಿದಾಗ ಅವರು ಅವನನ್ನು ಹಿಡಿಯುವದಕ್ಕೆ ಹೊರಟರು. ದಾವೀದನು ಅದನ್ನು ಕೇಳಿ ದುರ್ಗಕ್ಕೆ ಹೋದನು.**

**18–ಫಿಲಿಷ್ಟಿಯರು ದೇಶದೊಳಗೆ ನುಗ್ಗಿ ರೆಫಾಯಮ್ ತಗ್ಗಿಗೆ ಬಂದು ಪಾಳೆಯ ಮಾಡಿಕೊಂಡಿದ್ದಾರೆಂದು ತಿಳಿದು,**

**19–ದಾವೀದನು ಯೆಹೋವನನ್ನು – ನಾನು ಫಿಲಿಷ್ಟಿಯರಿಗೆ ವಿರೋಧವಾಗಿ ಹೋಗಬಹುದೋ? ಅವರನ್ನು ನನ್ನ ಕೈಗೆ ಒಪ್ಪಿಸಿಕೊಡುವಿಯೋ ಎಂದು ಕೇಳಲು ಆತನು ಹೋಗು, ನಾನು ಹೇಗೂ ಅವರನ್ನು ನಿನ್ನ ಕೈಗೆ ಒಪ್ಪಿಸುವೆನು ಎಂದು ಉತ್ತರ ಕೊಟ್ಟದರಿಂದ,**

**20–ಅವನು ಹೋಗಿ ಅವರನ್ನು ಸೋಲಿಸಿ ಯೆಹೋವನು ಕಟ್ಟೆಯೊಡೆದ ಪ್ರವಾಹದಂತೆ ನನ್ನ ಶತ್ರುಗಳ ಮೇಲೆ ಬಿದ್ದು ಅವರನ್ನು ನನ್ನ ಕಣ್ಣ ಮುಂದೆಯೇ ನಾಶ ಮಾಡಿದ್ದಾನೆಂದು ಹೇಳಿ ಆ ಯುದ್ಧ ಸ್ಥಳಕ್ಕೆ ಬಾಳ್‌ಪೆರಾಚೀಮೆಂದು ಹೆಸರಿಟ್ಟನು.**

**21–ಫಿಲಿಷ್ಟಿಯರು ಅಲ್ಲಿ ಬಿಟ್ಟು ಹೋಗಿದ್ದ ಗ್ರಹಗಳನ್ನು ದಾವೀದನೂ ಅವನ ಜನರೂ ತೆಗೆದುಕೊಂಡು ಬಂದರು.**

**22–ಫಿಲಿಷ್ಟಿಯರು ಇನ್ನೊಮ್ಮೆ ಹೊರಟು ಬಂದು ರೆಫಾಯಿಮ್ ತಗ್ಗಿನಲ್ಲಿ ಇಳುಕೊಂಡರು.**

**23–ದಾವೀದನು ಯೆಹೋವನ ಸನ್ನಿಧಿಯಲ್ಲಿ ವಿಚಾರಿಸಿದಾಗ ಆತನು ಅವನಿಗೆ – ನೀನು ನೆಟ್ಟಗೆ ಹೋಗಿ ಅವರ ಮೇಲೆ ಬೀಳಬೇಡ; ಅವರ ಹಿಂದಳವನ್ನು ಸುತ್ತಿಕೊಂಡು ಹೋಗಿ ಬಾಕಾ ಮರಗಳಿರುವ ಕಡೆಯಿಂದ ಅವರ ಮೇಲೆ ಬೀಳು.**

**24–ಆ ಮರಗಳ ತುದಿಯಲ್ಲಿ ಹೆಜ್ಜೆಗಳ ಸಪ್ಪಳ ಕೇಳಿಸುವಾಗ ಯೆಹೋವನು ಫಿಲಿಷ್ಟಿಯರ ಸೈನ್ಯವನ್ನು ಸೋಲಿಸುವದಕ್ಕೋಸ್ಕರ ನಿನ್ನ ಮುಂದಾಗಿ ಹೊರಟನೆಂದು ತಿಳಿದುಕೊಂಡು ಅವರ ಮೇಲೆ ಬೀಳು ಅಂದನು.**

**25–ದಾವೀದನು ಯೆಹೋವನ ಆಜ್ಞಾನುಸಾರವಾಗಿ ಮಾಡಿ ಫಿಲಿಷ್ಟಿಯರನ್ನು ಗೆಬದಿಂದ ಗೆಜೆರಿನವರೆಗೂ ಸಂಹರಿಸಿದನು.**

ಇಸ್ರಾಯೇಲ್ಯರ ಮೇಲೆ ಅರಸನಾಗಿ ನೇಮಕಗೊಂಡ ನಂತರ, ದಾವೀದನು ಚಿಯೋನಿನ ಕೋಟೆಯನ್ನು ವಶಪಡಿಸಿಕೊಂಡು ಅದರ ಸುತ್ತಲೂ ದಾವೀದ ನಗರವನ್ನು ಕಟ್ಟಿದನು, ಇದು ಪ್ರಾಚೀನ ಯೆರೂಸಲೇಮಿನ ಎರಡು ಪರ್ವತಗಳ ಎಲ್ಲಕ್ಕಿಂತ ಪೂರ್ವದಿಕ್ಕಿನಲ್ಲಿತ್ತು. ಹಳೆಯ ಶತೃವಾಗಿದ್ದ ಫಿಲಿಷ್ಟಿಯರು ಪಶ್ಚಿಮ ಮತ್ತು ನೈರುತ್ಯದಲ್ಲಿದ್ದ ರೆಫಾಯಿಮ್ ತಗ್ಗಿನಲ್ಲಿ ಹರಡಿಕೊಂಡಿದ್ದರು. ವೈರಿಯ ವಿರೋಧವಾಗಿ ತಾನು ಹೋಗಬಹುದೋ ಎಂದು ದಾವೀದನು ಕರ್ತನನ್ನು ವಿಚಾರಿಸಿದಾಗ, ಹೋಗುವದಕ್ಕೆ ಹೇಳಿದ ಕರ್ತನು ಜಯವನ್ನು ವಾಗ್ದಾನ ಮಾಡಿದನು. ದಾವೀದನು ಮತ್ತು ಅವನ ಜನರು ಜಯವನ್ನು ಅನುಭವಿಸಿ, ವೈರಿಯನ್ನು ಚೂರು ಚೂರಾಗಿ ಮಾಡಿ

ಅಡಗಿಸಿದ್ದು ದೇವರೇ ಎನ್ನುವದನ್ನು ದೃಢಪಡಿಸಿಕೊಂಡರು. ಸ್ವಲ್ಪ ಸಮಯದ ನಂತರ, ಅದೇ ಶತ್ರುವು ಅದೇ ಸ್ಥಳವಾದ ರೆಫಾಯಿಗೆ ಹಿಂತಿರುಗಿ ಬಂದರು. ಈಗ ದಾವೀದನು ಸಂಗತಿಗಳನ್ನು ವಾಡಿಕೆಯ ವ್ಯವಹಾರದಂತೆ ತೆಗೆದುಕೊಳ್ಳಲಿಲ್ಲ. ಅವನು ತನ್ನ ಹಿಂದಿನ ಜಯದ ಆಧಾರದ ಮೇಲೆ ಮಿತಿಮೀರಿದ ಭರವಸೆಯುಳ್ಳವನಂತೆ ವರ್ತಿಸಲಿಲ್ಲ. ಅವನು ಮತ್ತೊಂದು ಸಾರಿ ಕರ್ತನನ್ನು ವಿಚಾರಿಸಲು ಈ ಸಾರಿ ದೇವರು ಅವನಿಗೆ ಒಂದು ವ್ಯತ್ಯಾಸವಾದ ಯುದ್ಧ ಕೌಶಲ್ಯವನ್ನು ತಿಳಿಸಿದನು. ಶತ್ರುವನ್ನು ಎದುರಿಸುವದಕ್ಕೆ ದೇವರು ದೂತರ ಸೈನ್ಯವನ್ನು ಕಾರಣ ಮಾಡವ ಉದ್ದೇಶವುಳ್ಳವನಾಗಿದ್ದನು. ದಾವೀದನು ಮತ್ತು ಅವನ ಜನರು ವೈರಿಯನ್ನು ಸೋಲಿಸಿ, ಈ ಪರಲೋಕದ ಸೈನ್ಯದೊಂದಿಗೆ ಹಿಂದಿರುಗಿದರು.

ನಮ್ಮ ಶತ್ರುವಾಗಿರುವ ಸೈತಾನ ಮತ್ತು ಅವನ ದುರಾತ್ಮಗಳ ಮೇಲೆ ನಾವು ಜಯವನ್ನೂ ಮತ್ತು ಅಧಿಕಾರವನ್ನೂ ತೆಗೆದುಕೊಳ್ಳುವದರಲ್ಲಿ ನಡೆಯುವದೇ ಇಲ್ಲಿ ನಮಗಿರುವ ಮುಖ್ಯವಾದ ಪಾಠಗಳಾಗಿವೆ. ವೈರಿಯ ಮೇಲಿನ ಸಾಮ್ರಾಜ್ಯದಲ್ಲಿ ಇವುಗಳ ಮೂಲಕ ಸಂದೇಹವಿಲ್ಲದೆ ನಾವು ನಡೆಯುವದಕ್ಕೆ ಉಪಯೋಗಿಸುವಂತಹ ಬಲಯುತವಾದ ಆಯುಧಗಳನ್ನು ದೇವರು ನಮಗೆ ಕೊಟ್ಟಿದ್ದಾನೆ. ಸೈತಾನನೂ ಮತ್ತು ಅವನ ದುರಾತ್ಮಗಳೂ ಒಂದೇ ಒಂದು ಸ್ಥಳವನ್ನು ಹೊಂದಿದ್ದಾರೆ, ಅದು ನಮ್ಮ ಕಾಲ ಕೆಳಗೆ (ಲೂಕ-10:19; ರೋಮಾ-16:20; ಎಫೆಸ-2:6). ಆದಾಗ್ಯೂ, ಈ ವೈರಿಯು ನಮ್ಮ ರುದ್ಧವಾಗಿ ಬಂದು ತನ್ನ ಸಂಚುಗಳನ್ನು, ತಂತ್ರಗಳನ್ನೂ ಮತ್ತು ಮೋಸವನ್ನು ಹರಡುವಾಗ, ನಾವು ದೇವರ ಮಾತಿಗೆ ಕಿವಿಗೊಟ್ಟು ದೇವರು ನಮಗೆ ಕೊಟ್ಟಿರುವ ಆಯುಧಗಳನ್ನು ಉಪಯೋಗಿಸಿ, ವೈರಿಯ ಪ್ರಯತ್ನಗಳನ್ನು ಎದುರಿಸಿ ತೊಡೆದುಹಾಕುವದು ಹೇಗೆ ಎನ್ನುವದರ ಮೇಲೆ ಆತನ ಯುದ್ಧಕೌಶಲ್ಯಗಳನ್ನು ಪಡೆದುಕೊಳ್ಳಬೇಕು. ಪ್ರತಿಯೊಂದು ಯುದ್ಧದಲ್ಲೂ, ಸೋತುಹೋದ ವೈರಿಯ ಸಾಮ್ರಾಜ್ಯದಲ್ಲಿ ದೃಢವಾಗಿ ನಿಂತು ನಡೆಯುವದು ಹೇಗೆಂಬುದನ್ನು ದೇವರು ನಮ್ಮೊಂದಿಗೆ ಮಾತಾಡುತ್ತಿರುತ್ತಾನೆ.

## ತೋರಿಕೆಯ ಕಾರಣಕ್ಕಾಗಿ ಅಲ್ಲದೆ ಸಂಗತಿಗಳು ತಪ್ಪಾಗಿ ಹೋದಾಗ

2ಸಮು-21:1

**ದಾವೀದನ ಕಾಲದಲ್ಲಿ ಮೂರು ವರುಷಗಳವರೆಗೂ ಬಿಡದೆ ಬರವಿತ್ತು. ದಾವೀದನು ಯೆಹೋವನನ್ನು ವಿಚಾರಿಸಲು ಆತನು - ಸೌಲನು ಗಿಬ್ಯೋನರನ್ನು ಕೊಲ್ಲಿಸಿದ್ದರಿಂದ ಅವನ ಮೇಲೆಯೂ ಅವನ ಮನೆಯವರ ಮೇಲೆಯೂ ರಕ್ತಾಪರಾಧವಿರುತ್ತದೆ ಎಂದು ಉತ್ತರ ಕೊಟ್ಟನು.**

ಇಸ್ರಾಯೇಲ್ಯರ ಅರಸನಾಗಿದ್ದಂತೆಯೇ ದಾವೀದನು ಅನೇಕ ಸವಾಲುಗಳನ್ನು ಎದುರಿಸಿದನು. ಅವನ ಆಳ್ವಿಕೆಯ ಸಮಯದ ಒಂದು ಹಂತದಲ್ಲಿ, ಮೂರು ವರುಷಗಳವರೆಗೂ ಸತತವಾದ ಬರವು ಪ್ರಬಲವಾಗಿತ್ತು. ದಾವೀದನು ಇದರ ಕುರಿತು ತುಂಬಾ ಚಿಂತಿತನಾಗ ಬೇಕಾಯಿತು. ಆದ್ದರಿಂದ ಅವನು ಇದರ ಕುರಿತು ಕರ್ತನನ್ನು ವಿಚಾರಿಸಿದನು. ಇದರ ಮೂಲಕಾರಣವನ್ನು ದೇವರು ಪ್ರಕಟಿಸಿದನು. ಇಸ್ರಾಯೇಲ್ಯರು ಕಾಪಾಡುತ್ತೇವೆಂದು ವಾಗ್ದಾನ ಮಾಡಿದ್ದ ಗಿಬ್ಯೋನ್ಯರ ಮೇಲೆ ಆಕ್ರಮಣ ಮಾಡಿದ ದಾವೀದನ ಪೂರ್ವಾಧಿಕಾರಿಯಾದ ಅರಸನಾದ ಸೌಲನು ಮಾಡಿದ ಅತಿಕ್ರಮದಿಂದ ಇದಾಗಿತ್ತು (2ಸಮು-21:2). ಆದ್ದರಿಂದ ದಾವೀದನು ಪಶ್ಚಾತ್ತಾಪಪಡುವದಕ್ಕೆ ಮತ್ತು ಗಿಬ್ಯೋನ್ಯರೊಂದಿಗೆ ಸಂಗತಿಗಳನ್ನು ಪುನ:ಸ್ಥಾಪಿಸುವದಕ್ಕೆ ಮುಂದುವರಿದನು. ಬರವು ನಿಂತುಹೋಯಿತು.

ನಾವು ಎದುರಿಸುವಂತಹ ಇಂತಹುದೇ ಪರಿಸ್ಥಿತಿಗಳಲ್ಲಿ ದೇವರ ಮಾರ್ಗದರ್ಶನವನ್ನು ಹೊಂದಿಕೊಂಡು ಆತನ ಮಾತನ್ನು ಕೇಳಿಸಿಕೊಳ್ಳುವದು ಎಷ್ಟೊಂದು ಪ್ರಾಮುಖ್ಯವಾದುದಲ್ಲವೇ. ಯಾವುದೇ ಸ್ಪಷ್ಟವಾದ ಕಾರಣಲ್ಲದೆ, ಸಂಗತಿಗಳು ತಪ್ಪಾಗಿ ಹೋಗುತ್ತಿವೆ ಎಂಬುದು ಕಂಡುಬಂದಾಗ, ಇದರ ಕಾರಣಕ್ಕಾಗಿ ದೇವರನ್ನು ಕೇಳುವದು ನಮಗೆ ಅಗತ್ಯ. ಯಾಕೆ? ಅಂತಹ ಸಂಗತಿಗಳು ಸಂಭವಿಸುವದಕ್ಕೆ ಯಾವುದು ಕಾರಣವಾಗುತ್ತದೆ? ಹಾಗಾದರೆ ನಾವು ಕೇಳಿಸಿಕೊಳ್ಳೋಣ. ದೇವರು ನಮಗೆ ತನ್ನ ಸಮಾಲೋಚನೆಯನ್ನು ಮಾತಾಡುತ್ತಾನೆ, ಅದರಿಂದ ನಾವು ಕಾರ್ಯಪ್ರವೃತ್ತರಾಗಿ ಬದಲಾವಣೆಯನ್ನು ಕಾಣಬಹುದು.

## ಕರ್ತನನ್ನು ವಿಚಾರಿಸುವ ವಿವಿಧ ರೀತಿಗಳು

ದಾವೀದನು ತನ್ನ ಜೀವಿತದ ವೇಳೆಯಲ್ಲಿ, ದೇವರ ಮಾತನ್ನು ಕೇಳಿ ಆತನಿಂದ ಆದೇಶಿಸಲ್ಪಟ್ಟು ನಡೆದುಕೊಂಡ ಕೇವಲ ಕೆಲವು ಉದಾಹರಣೆಗಳನ್ನು ಮಾತ್ರ ನಾವು ಆಲೋಚಿಸಿದ್ದೇವೆ. ಬರೆಯಲ್ಪಡದಿರುವ ಇನ್ನೂ ಅನೇಕ ಹೆಚ್ಚು ಉದಾಹರಣೆಗಳು ಖಂಡಿತವಾಗಿಯೂ ಇವೆ. ಹೇಗಾದರೂ, ದಾವೀದನು ಯಾಕೆ ದೇವರಿಗೆ ಒಪ್ಪುವಂತಹ ಮನುಷ್ಯನಾಗಿದ್ದನು ಮತ್ತು ತನ್ನ ಜೀವಿತಕಾಲದಲ್ಲಿ ದೇವರ ಇಷ್ಟವನ್ನೆಲ್ಲಾ ಅವನು ಯಾಕೆ ನೆರವೇರಿಸಿದನೆಂದರೆ, ಅವನು ತನ್ನ ಜೀವನದ ಎಲ್ಲಾ ಕಾಲಗಳ ಮೂಲಕವಾಗಿ ದೇವರನ್ನು ಹುಡುಕಿ ಆತನ ಮಾರ್ಗದರ್ಶನವನ್ನು ಹೊಂದಿಕೊಂಡಿದ್ದನು ಎಂಬುದು ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ.

ದಾವೀದನು ಪ್ರತಿ ಸಲವೂ ದೇವರಿಂದ ಹೇಗೆ ಕೇಳಿಸಿಕೊಳ್ಳುತ್ತಿದ್ದನೆಂಬುದರ ಎಲ್ಲಾ ವರಗಳನ್ನು ನಾವು ಹೊಂದಿಲ್ಲ. ಬಹುಶ: ದೇವರು ದಾವೀದನಿಗೆ ತನ್ನ ಆತ್ಮನ ಪ್ರಕಟನೆಯಿಂದ, ಕನಸುಗಳ ಮೂಲಕ, ಊರೀಮ್ ಮತ್ತು ತುಮ್ಮೀಮ್ ಗಳ ಮೂಲಕ, ಆವನ ಸುತ್ತಲಿದ್ದ ಪ್ರವಾದಿಗಳ ಮೂಲಕ ಮಾತಾಡಿರಬಹುದು. ದಾವೀದನು ಮಾರ್ಗದರ್ಶನಕ್ಕಾಗಿ ದೇವರನ್ನು ಕೇಳುವದು, ಆತನ ಮಾರ್ಗ ದರ್ಶನವನ್ನು ಹೊಂದಿಕೊಳ್ಳುವದು ಮತ್ತು ದೇವರ ನಿರ್ದೇಶನ ಅನುಸರಿಸುವದನ್ನು ಕಲಿತುಕೊಂಡಿದ್ದನು ಎನ್ನುವದು ಪ್ರಾಮುಖ್ಯವಾದ ಸಂಗತಿಯಾಗಿದೆ. ದಾವೀದನು ಏನಾಗಿದ್ದನೋ ಅದರಲ್ಲಿ ಇದು ಒಂದು ದೊಡ್ಡದಾದ ಭಾಗವಾಗಿದೆ. ದಾವೀದನು ದೇವರನ್ನು ಸ್ಥಿರವಾಗಿ ಕೇಳುವ ಮತ್ತು ದೇವರಿಂದ ಮಾರ್ಗದರ್ಶಿಸಲ್ಪಟ್ಟು ಜೀವನ ನಡೆಸಿದ ಒಬ್ಬ ಮನುಷ್ಯನಾಗಿದ್ದನು.

ಹೊಸ ಒಡಂಬಡಿಕೆಯ ಕೆಳಗೆ ನಾವು ಹೇಗೆ ದೇವರ ಮಕ್ಕಳಾಗಿದ್ದೇವೆ ಎನ್ನುವದನ್ನು ಕಂಡುಹಿಡಿಯುವದಕ್ಕೆ, ದೇವರ ಮಾತನ್ನು ಕೇಳಿ ಆತನ ಮಾರ್ಗದರ್ಶನವನ್ನು ಹೊಂದಿಕೊಂಡು ಜೀವನದ ಮೂಲಕ ನಾವು ಪ್ರಯಾಣಿಸಿದ ಹಾಗೆ ಈ ಪುಸ್ತಕದಲ್ಲಿರುವ ನಮ್ಮ ವಾಸ್ತವವಾದವಾಗಿದೆ. ನಾವು ಆತನಿಗೆ ಒಪ್ಪುವ ಜನರಾಗಿದ್ದು ನಮ್ಮ ಜನಾಂಗದಲ್ಲಿ ಆತನ ಚಿತ್ತವನ್ನು ನೆರವೇರಿಸುವವರಾಗಿರಬೇಕೆಂದು ಇದು ನಮಗೆ ತಿಳಿಸುತ್ತದೆ.

## ಪರ್ಯಾಲೋಚನೆ

ನಾವು ಈ ಅಧ್ಯಾಯದಲ್ಲಿ ಆಲೋಚಿಸಿರುವಂತಹ ದಾವೀದನು ಯಾವುದನ್ನು ಎದುರಿಸಿದ್ದನೋ ಅದೇ ರೀತಿಯ ಸನ್ನಿವೇಶಗಳ ಮೂಲಕ ನೀವು ಹಾದು ಹೋಗಿದ್ದೀರೋ? ಆ ಅನುಭವಗಳ ಮೇಲೆ ಪರ್ಯಾಲೋಚಿಸಿರಿ. ನೀವು ದೇವರನ್ನು ವಿಚಾರಿಸಿದಿರೋ? ಅದರ ಫಲವೇನು? ನೀವು ಮುಂದಿನ ಸಲ ಎಲ್ಲಾ ಕಡೆಗೂ ವ್ಯತ್ಯಾಸವುಳ್ಳವರಾಗಿ ಸಂಗತಿಗಳನ್ನು ಮಾಡುವದಕ್ಕಾಯಿತೋ?

1) ನಿಮ್ಮ ಸ್ವಂತ ತಂಡದವರು ಹಿಂಜರಿದಾಗ

2) ನೀವು ಒಂದು ತೀವ್ರವಾದ ತಡೆಯನ್ನು ಎದುರಿಸಿದಾಗ

3) ನೀವು ಜೀವನದಲ್ಲಿ ಬದಲಾವಣೆ ಹೊಂದಿದಾಗ

4) ಅದೇ ವೈರಿ, ಅದೇ ಯುದ್ಧಭೂಮಿ, ವ್ಯತ್ಯಾಸವುಳ್ಳ ಯುದ್ಧಕೌಶಲ್ಯಗಳು

5) ತೋರಿಕೆಯ ಕಾರಣಕ್ಕಾಗಿ ಅಲ್ಲದೆ ಸಂಗತಿಗಳು ತಪ್ಪಾಗಿ ಹೋದಾಗ

# 3

# ವಾಕ್ಯ

ದೇವರು ಮೂಲವಾಗಿ ನಮ್ಮನ್ನು ತನ್ನ ವಾಕ್ಯದಿಂದ ಮತ್ತು ಪವಿತ್ರಾತ್ಮನಿಂದ ಮಾರ್ಗದರ್ಶನ ಮಾಡಿ ಮುನ್ನಡೆಸುತ್ತಾನೆ. ದೇವರ ದೃಷ್ಟಿಯಲ್ಲಿ ಯಾವುದು ಸರಿಯಾದುದು, ಆತನ ಚಿತ್ತವೇನು, ನಾವು ಏನು ಮಾಡಬೇಕೆಂದು ಆತನು ಅಂದುಕೊಂಡಿದ್ದಾನೆ ಎನ್ನುವದನ್ನು ನಾವು ನಿಶ್ಚಯಿಸಿಕೊಳ್ಳುವದಕ್ಕೆ, ಬರೆಯಲ್ಪಟ್ಟಿರುವ ವಾಕ್ಯಗಳು ನಮಗೆ ಅತೀ ಮುಖ್ಯವಾದ ಮಾರ್ಗಗಳಾಗಿವೆ. ದೈವಿಕ ಮಾರ್ಗದರ್ಶನದ ಪ್ರತಿಯೊಂದು ಇತರ ವಿಧವು ಬರೆಯಲ್ಪಟ್ಟ ವಾಕ್ಯಗಳಿಗೆ ಅನುರೂಪತೆಯಲ್ಲಿ ಅಧೀನಗೊಳಿಸಲ್ಪಟ್ಟು ಪರೀಕ್ಷಿಸಿಲ್ಪಟ್ಟಿರುತ್ತದೆ.

ಬರೆಯಲ್ಪಟ್ಟ ದೇವರ ವಾಕ್ಯಗಳ ಮೂಲಕವಾಗಿ ಮಾರ್ಗದರ್ಶನವನ್ನು ಹೊಂದಿಕೊಳ್ಳುವದರ ಮೇಲಿನ ಸರಳವಾದ ಒಳನೋಟಗಳನ್ನು ಈ ಅಧ್ಯಾಯದಲ್ಲಿ ನಾವು ಹಂಚಿಕೊಂಡಿದ್ದೇವೆ.

ಕೆಲವು ವಾಕ್ಯಗಳೊಂದಿಗೆ ಪ್ರಾರಂಭಿಸುವದರೊಂದಿಗೆ ಇದನ್ನು ಆಲೋಚಿಸೋಣ.

ಕೀರ್ತನೆ–110:105

**ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ.**

ಕತ್ತಲೆಯಲ್ಲಿ ನಡೆಯುವದನ್ನು ಊಹಿಸಿಕೊಳ್ಳಿರಿ. ಅದು ಅಪಾಯಕಾರಿಯಾದುದು. ನಾವು ಎಲ್ಲಿಗೆ ಹೋಗುತ್ತಿದ್ದೇವೆ, ಎಲ್ಲಿ ಹೆಜ್ಜೆ ಇಡಬೇಕು, ಅಪಾಯಗಳನ್ನು ಹೇಗೆ ತಡೆಯುವದು ಇತ್ಯಾದಿಯಾದ ಯಾವ ಕಲ್ಪನೆಗಳು ನಮಗಿರುವದಿಲ್ಲ. ಸಹಜವಾಗಿ ನಮ್ಮ ಮುಂದಿರುವ ದಾರಿಯನ್ನು ನೋಡುವದಕ್ಕಾಗಿ ಟಾರ್ಚ್‌ಲೈಟನ್ನು ನಾವು ಉಪಯೋಗಿಸುತ್ತೇವೆ. ಒಂದು ಸಲ ಈ ಬೆಳಕು ನಮಗೆ ಸಿಕ್ಕಿದರೆ ನಾವು ಸಂದೇಹಲ್ಲದೆ ನಡೆಯುತ್ತೇವೆ. ಮುಂದಿನ ನಮ್ಮ ಹೆಜ್ಜೆಯ ಖಚಿತತೆ ನಮಗಿರುತ್ತದೆ. ನಾವು ಈ ಬೆಳಕನ್ನು ಇನ್ನೂ ದೂರಕ್ಕೆ ಹಾಕಿ ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ

ಎನ್ನುವದನ್ನು ಮೊದಲೇ ತಿಳಿದುಕೊಳ್ಳುತ್ತೇವೆ. ದೇವರ ವಾಕ್ಯವೂ ಸಹ ನಮ್ಮ ಜೀವನದ ಪ್ರಯಾಣದಲ್ಲಿ ನಮ್ಮ ಟಾರ್ಚ್‌ಲೈಟ್ ಆಗಿದೆ. ದೇವರ ವಾಕ್ಯವು ಒಂದು ದೀಪದ ಹಾಗಿದ್ದು ನಮ್ಮ ಹೆಜ್ಜೆಗಳ ಮಾರ್ಗದರ್ಶನಮಾಡುತ್ತದೆ ಮತ್ತು ನಾವು ನಡೆಯಬೇಕಾದ ದಾರಿಯನ್ನು ನಮಗೆ ತೋರಿಸುವಂತ ಬೆಳಕು ಇದಾಗಿದೆ.

ಕೀರ್ತನೆ-119:130

**ನಿನ್ನ ವಾಕ್ಯ ವಿವರಣೆಯಿಂದ ಯುಕ್ತಿಹೀನರಿಗೆ ಜ್ಞಾನೋದಯವಾಗುವದು.**

ದೇವರ ವಾಕ್ಯವು ನಮಗೆ ಜ್ಞಾನೋದಯವನ್ನುಂಟುಮಾಡಿ ನಮಗೆ ಬೆಳಕನ್ನು, ತಿಳುವಳಿಕೆಯನ್ನೂ ಮತ್ತು ಜ್ಞಾನವನ್ನು ಕೊಡುತ್ತದೆ. ಪೂರ್ತಿ ಕತ್ತಲಾಗಿರುವ ಒಂದು ಕೋಣೆಯೊಳಗೆ ಹೋಗುವದಕ್ಕೆ ನೀವು ಸ್ಥಳ ತೋರಿಸುವವರಾಗಿರುತ್ತೀರಿ ಎಂದು ಕಲ್ಪಿಸಿಕೊಳ್ಳಿರಿ. ಆ ಕೋಣೆಯಲ್ಲಿ ಬೇರೆ ಜನರು ಇರುತ್ತಾರೆ. ಕೋಣೆಯು ತುಂಬಾ ಚೆನ್ನಾಗಿ ಸಿಂಗರಿಸಲ್ಪಟ್ಟಿದೆ. ತಿನ್ನುವದಕ್ಕೆ ಎಲ್ಲಾ ರೀತಿಯ ವಸ್ತುಗಳಿರುವ ಒಂದು ಮೇಜು ಸಹ ಅಲ್ಲಿದೆ. ಆದರೆ ಇದ್ಯಾವುದೂ ಹೆಚ್ಚು ಅರ್ಥವುಳ್ಳದ್ದೂ ಮತ್ತು ಉಪಯೋಗವುಳ್ಳದ್ದೂ ಆಗಿಲ್ಲ. ಕತ್ತಲೆಯಲ್ಲಿ ವಸ್ತುಗಳನ್ನು ಕಂಡುಕೊಳ್ಳುವದು ಕಷ್ಟಕರವಾದುದು. ಒಂದು ಸಲ ಬೆಳಕು ಬಂದಾಗ, ಒಂದು ದೊಡ್ಡದಾದ ನಿಟ್ಟುಸಿರು ಅಲ್ಲಿ ಉಂಟಾಗುತ್ತದೆ ಯಾಕೆಂದರೆ ಈಗ ಪ್ರತಿಯೊಂದನ್ನೂ ನೋಡಬಹುದು. ಇದರಂತೆಯೇ, ಸಂಗತಿಗಳು ಎಲ್ಲಿ ಕೇವಲ ತಿಳುವಳಿಕೆಯನ್ನು ಉಂಟುಮಾಡುವದಿಲ್ಲವೋ ಅಂತಹ ಪರಿಸ್ಥಿತಿಗಳನ್ನು ಜೀವನದಲ್ಲಿ ನಾವು ಹಾದು ಬಂದಿರುತ್ತೇವೆ. ಏನು ಮಾಡಬೇಕೆಂಬುದು ನಮಗೆ ಗೊತ್ತಿರುವದಿಲ್ಲ. ಆದರೆ ಅಂತಹ ಕ್ಷಣಗಳಲ್ಲಿ, ದೇವರ ವಾಕ್ಯವು ನಮಗೆ ಜ್ಞಾನೋದಯವನ್ನುಂಟು ಮಾಡುತ್ತದೆ. ಆ ಪರಿಸ್ಥಿತಿಯಲ್ಲಿ ದೇವರ ಉದ್ದೇಶ, ಅಭಿಪ್ರಾಯ ಮತ್ತು ಸೂಚನೆಗಳನ್ನು ನೋಡುವದಕ್ಕೆ ಮತ್ತು ಗ್ರಹಿಸಿಕೊಳ್ಳುವದಕ್ಕೆ ನಾವು ಶಕ್ತರಾಗುತ್ತೇವೆ. ಜೀವನದ ಆ ಪರಿಸ್ಥಿತಿಯ ಮೂಲಕ ಮುಂದೆ ಹೋಗುವದು ಹೇಗೆ ಮತ್ತು ಏನು ಮಾಡಬೇಕು ಎನ್ನುವದರ ಮೇಲೆ ನಾವು ಜ್ಞಾನವನ್ನೂ ಮತ್ತು ತಿಳುವಳಿಕೆಯನ್ನೂ ಹೊಂದಿಕೊಳ್ಳುತ್ತೇವೆ. ದೇವರು ತನ್ನ ವಾಕ್ಯದ ಮೂಲಕ ನಮಗೆ ಮಾರ್ಗದರ್ಶನ ಮಾಡುತ್ತಾನೆ.

ಕೀರ್ತನೆ-37:31

**ದೇವರ ಧರ್ಮೋಪದೇಶವು ಅವನ ಹೃದಯದಲ್ಲಿರುವದು; ಅವನು ಜಾರುವದೇ ಇಲ್ಲ.**

ದೇವರ ವಾಕ್ಯವು ನಮ್ಮಲ್ಲಿ ನಮ್ಮ ಹೆಜ್ಜೆಗಳನ್ನು ಸ್ಥಾಪಿಸುತ್ತದೆ, ಅವುಗಳು ದೃಢವಾಗಿಯೂ ಮತ್ತು ಭದ್ರವಾಗಿಯೂ ಇರುವಂತೆ ಮಾಡುತ್ತದೆ, ಆದ್ದರಿಂದ ನಾವು ಮುಗ್ಗರಿಸುವದೂ

ಇಲ್ಲ ಮತ್ತು ಬೀಳುವದೂ ಇಲ್ಲ. ನಾವು ದೇವರ ವಾಕ್ಯದಿಂದ ಮಾರ್ಗದರ್ಶಿಸಲ್ಪಟ್ಟು ನಡೆದಾಗ, ನಾವು ಇಡುವ ಪ್ರತಿಯೊಂದು ಹೆಜ್ಜೆಯೂ ಬಲವಾದುದು ಮತ್ತು ಗಟ್ಟಿಯಾದುದು ಆಗಿರುತ್ತದೆ. ಗಾಳಿಗಳು, ಅಲೆಗಳು ಮತ್ತು ಬಿರುಗಾಳಿಗಳು ನಮ್ಮ ವಿರುದ್ಧವಾಗಿ ಅಪ್ಪಳಿಸುತ್ತವೆ ಆದರೆ ನಾವು ನಿಲ್ಲುವದಕ್ಕೆ ಶಕ್ತರಾಗಿರುತ್ತೇವೆ, ಯಾಕೆಂದರೆ ನಮ್ಮ ಹೆಜ್ಜೆಗಳು ದೇವರ ವಾಕ್ಯದ ಮೂಲಕವಾಗಿ ಆಜ್ಞಾಪಿಸಲ್ಪಟ್ಟಿರುತ್ತವೆ. ಆತನ ವಾಕ್ಯವು ಒಂದು ಗಟ್ಟಿಯಾದ, ಅಲ್ಲಾಡಿಸಲ್ಪಡದ ಮತ್ತು ದೃಢವಾದ ಬುನಾದಿಯಾಗಿದೆ.

ದೇವರು ತನ್ನ ಬರೆಯಲ್ಪಟ್ಟ ವಾಕ್ಯದ ಮೂಲಕ ನಮ್ಮೊಂದಿಗೆ ಮಾತಾಡುವಂತ, ಮುನ್ನಡೆಸುವಂತ ಮತ್ತು ಮಾರ್ಗದರ್ಶನ ಮಾಡುವಂತ ಕೆಲವು ಸಾಮಾನ್ಯವಾದ ರೀತಿಗಳು ಇಲ್ಲಿವೆ.

## ದೇವರ ವಾಕ್ಯದಲ್ಲಿನ ಶಿಕ್ಷಣಗಳು.

2ತಿಮೊಥೆ–3:16–17

**16–ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿವೆ.**

**17–ಅದರಿಂದ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು.**

ಪ್ರತಿಯೊಂದು ಶಾಸ್ತ್ರವೂ ದೈವ ಪ್ರೇರಿತವಾಗಿದ್ದು ಸರಿಯಾಗಿ ಜೀವಿಸುವದಕ್ಕೆ ನಮಗೆ ಕಲಿಸುವದಕ್ಕೂ (ಸಿದ್ಧಾಂತ ಅರ್ಥಗಳ ಕಲಿಕೆ), ನಮಗೆ ಮನವರಿಕೆ ಮಾಡಿಕೊಡಲು (ಗದರಿಕೆಯ ಅರ್ಥಗಳ ಮನವರಿಕೆ), ನಮ್ಮನ್ನು ತಿದ್ದಲು(ನಮ್ಮನ್ನು ನೆಟ್ಟಗೆ ಮಾಡುವದಕ್ಕೆ, ನಮ್ಮನ್ನು ಮುನ್ನಡೆಸಿ, ಮಾರ್ಗದರ್ಶಿಸಿ, ನಿರ್ದೇಶಿಸುವದಕ್ಕೆ), ಮತ್ತು ನಮಗೆ ಶಿಕ್ಷಣ ಕೊಡುವದಕ್ಕೆ(ನಮಗೆ ಶಿಕ್ಷಣ, ತರಬೇತಿ, ಶಿಸ್ತು, ಖಾಸಗಿ ಶಿಕ್ಷಣ, ಸಜ್ಜುಗೊಳಿಸುವದು, ಕೌಶಲ್ಯ) ಕೊಡಲ್ಪಟ್ಟಿದೆ.

ಪ್ರತಿಯೊಂದು ಶಾಸ್ತ್ರವು ಎಂದು ಹೇಳಿರುವ ವಚನವನ್ನು ಗಮನಿಸಿರಿ. ಆದ್ದರಿಂದ ನಾವು ಕೇವಲ ಇದರ ಒಂದು ಭಾಗದೊಂದಿಗೆ ಮಾತ್ರವಲ್ಲ, ಎಲ್ಲಾ ಶಾಸ್ತ್ರಗಳೊಂದಿಗೆ, ದೇವರ ಪೂರ್ತಿ ಸಮಾಲೋಚನೆಯೊಂದಿಗೆ ಪ್ರಗತಿಶೀಲರಾಗಿ ಪರಿಚಿತರಾಗಿರುವದು ನಮಗೆ ಅಗತ್ಯವಾಗಿದೆ. ಶ್ವಾಸಿಗಳ ಹಾಗೆ ನಾವು ಎಲ್ಲಾ ಗ್ರಂಥಗಳನ್ನು ಓದಿ ಕಂಡುಡಿಯುವದು ನಮಗೆ ಅಗತ್ಯ.

ನಮ್ಮ ಜೀವಿತಗಳ ಅನೇಕ ಭಾಗಗಳಿಗೆ ಸಂಬಂಧಿಸಿದಂತೆ ದೇವರು ಈಗಾಗಲೆ ತನ್ನ ಬರೆಯಲ್ಪಟ್ಟ ವಾಕ್ಯದಲ್ಲಿ ಏನು ಹೇಳಿದ್ದಾನೋ ಅದರೊಂದಿಗೆ ನಾವು ಬಳಕೆಯಲ್ಲಿರಬೇಕು.

ನಾವು ವಿಧೇಯರಾಗಿರಲೇಬೇಕಾದ ಶಿಕ್ಷಣಗಳು ಇವಾಗಿವೆ. ಉದಾಹರಣೆಗಾಗಿ, ಒಬ್ಬ ಗಂಡನು ತನ್ನ ಹೆಂಡತಿಗೆ ಮತ್ತು ಒಬ್ಬ ಹೆಂಡತಿ ತನ್ನ ಗಂಡನಿಗೆ ಹೇಗೆ ಸಂಬಂಧಪಟ್ಟಿರಬೇಕೆಂಬುದನ್ನು ದೇವರು ತನ್ನ ವಾಕ್ಯದಲ್ಲಿ ಈಗಾಗಲೇ ತಿಳಿಸಿದ್ದಾನೆ. ತಂದೆ ತಾಯಿಗಳು ತಮ್ಮ ಮಕ್ಕಳಿಗೆ, ಮಕ್ಕಳು ತಮ್ಮ ತಂದೆ ತಾಯಿಗಳಿಗೆ ಹೇಗೆ ಸಂಬಂಧಪಡುತ್ತಾರೆ ಎನ್ನುವದನ್ನೂ ತಿಳಿಸಿದ್ದಾನೆ. ನಾವು ಹಣವನ್ನು ಹೇಗೆ ನಿರ್ವಹಿಸಬೇಕೆಂಬುದನ್ನೂ ಮತ್ತು ಇತ್ಯಾದಿಗಳ ಮೇಲೆ ದೇವರು ನಮಗೆ ಶಿಕ್ಷಣ ಕೊಟ್ಟಿದ್ದಾನೆ.

ಎಲ್ಲಿ ವಾಕ್ಯಗಳು ಈಗಾಗಲೇ ಹೃದಯ ಮನಸ್ಸು ಮತ್ತು ದೇವರ ಚಿತ್ತವನ್ನು ಪ್ರಕಟಪಡಿಸಿವೆಯೋ ಆ ವಿಷಯಗಳನ್ನು ನಾವು ಅನುಸರಿಸಬೇಕೋ ಅಥವಾ ಬೇಡವೋ ಎಂದು ದೇವರನ್ನು ಕೇಳುವ ಅಗತ್ಯ ನಮಗಿರುವದಿಲ್ಲ. ದೇವರು ಈಗಾಗಲೇ ವಾಕ್ಯದಲ್ಲಿ ನಮಗೆ ಕೊಟ್ಟಿರುವ ಆಜ್ಞೆಗೆ ನೀವು ವಿಧೇಯರಾಗುವದಕ್ಕೆ ಆತನು ಬಯಸಿರುವದಾದರೆ, ಪ್ರಾರ್ಥಿಸುವ ಮತ್ತು ದೇವರನ್ನು ಕೇಳಿಕೊಳ್ಳುವ ಅಗತ್ಯವಿರುವದಿಲ್ಲ. ಆತನ ಶಿಕ್ಷಣವನ್ನು ನಾವು ಅನುಸರಿಸಬೇಕೆಂದು ಅತನು ಇಷ್ಟಪಡುತ್ತಾನೆ ಎನ್ನುವದನ್ನು ಇದು ಸ್ಪಷ್ಟಪಡಿಸುತ್ತದೆ. ಆದ್ದರಿಂದ, ನಾವು ತೀರ್ಮಾನಗಳನ್ನು ಮಾಡುವಂತೆ, ಬರೆಯಲ್ಪಟ್ಟಿರುವ ವಾಕ್ಯಗಳು, ಅಂದರೆ ದೇವರ ವಾಕ್ಯವು ನಮ್ಮ ಆರಂಭದ ಅಂಶವಾಗುತ್ತದೆ. ನಾವು ನಮ್ಮ ಆಯ್ಕೆಗಳನ್ನು ಮಾಡುವಂತೆ ದೇವರ ವಾಕ್ಯದಲ್ಲಿರುವ ಬೋಧನೆಗಳನ್ನು ನಾವು ನೇರವಾಗಿ ಆಧಾರ ಮಾಡಿಕೊಳ್ಳಲೇಬೇಕು.

ಪರಿಸ್ಥಿತಿಗಳ ಕುರಿತಾಗಿ ದೇವರು ಈಗಾಗಲೇ ಏನು ಮಾತಾಡಿದ್ದಾನೆಂಬುದನ್ನು ತಿಳಿದುಕೊಳ್ಳುವದಕ್ಕೆ ನಿಶ್ಚಿತವಾದ ಸಂಗತಿಗಳ ಮೇಲೆ ದೇವರ ವಾಕ್ಯ ಏನು ತಿಳಿಸಿದೆ ಎನ್ನುವದನ್ನು ಅಭ್ಯಸಿಸುವದಕ್ಕೆ ನಿಮಗೆ ಅಗತ್ಯವಿರುವ ಸಮಯಗಳು ಇವೆ. ನೀವು ದೇವರ ಬಳಿಗೆ ಹೋಗಿ ಆತನ ವಾಕ್ಯದ ಮೂಲಕವಾಗಿ ನಿಮ್ಮೊಂದಿಗೆ ಮಾತಾಡುವಂತೆ ಕೇಳಿಕೊಳ್ಳಿರಿ. ನಂತರ ನೀವು ವಾಕ್ಯಗಳನ್ನು ಹುಡುಕುವದಕ್ಕೆ ಪ್ರಾರಂಭಿಸಿರಿ. ನೀವು ಪ್ರತಿಯೊಂದನ್ನೂ ಒಟ್ಟಿಗೆ ಇಡಿರಿ. ನೀವು ಎದುರಿಸುತ್ತಿರುವ ಪರಿಸ್ಥಿತಿಯ ಕುರಿತಾಗಿ ಏನು ಮಾಡಬೇಕನ್ನುವದರ ಮೇಲೆ ದೇವರ ವಾಕ್ಯದಿಂದ ಶಿಕ್ಷಣವನ್ನೂ ಮತ್ತು ಮಾರ್ಗದರ್ಶನವನ್ನೂ ಪಡೆದುಕೊಳ್ಳುತ್ತೀರಿ. ನಾನು ನನ್ನ ತಾಂತ್ರಿಕ ವ್ಯವಹಾರವನ್ನು ನಡೆಸುವಾಗ(2001–2014) ಅನೇಕ ಕಷ್ಟಕರವಾದ ತೀರ್ಮಾನಗಳನ್ನು ಈ ವ್ಯವಹಾರದಲ್ಲಿ ತೆಗೆದುಕೊಳ್ಳುವ ಅನೇಕ ಸಮಯಗಳಿದ್ದವು, ಗ್ರಾಹಕರುಗಳನ್ನು, ಕಾರ್ಮಿಕರುಗಳನ್ನು, ಕಷ್ಟಕರವಾದ ಪರಿಸ್ಥಿತಿಗಳನ್ನು ನಿರ್ವಸಬೇಕಾದಾಗ ನಾನು ವಾಕ್ಯಗಳನ್ನು ಹುಡುಕಿ ಅಂತಹ ಪರಿಸ್ಥಿತಿಗಳಿಗೆ ಸಂಬಂಧಪಟ್ಟಂತೆ ದೇವರ ವಾಕ್ಯವು ನಿರ್ಧಿಷ್ಟವಾಗಿ ಏನು ಹೇಳುತ್ತದೆ

ಎನ್ನುವದನ್ನು ಕಂಡುಕೊಳ್ಳುವದಕ್ಕೆ ವಾಕ್ಯಗಳನ್ನು ನಾನು ಅಧ್ಯಯನ ಮಾಡುತ್ತಿದ್ದೆ. ದೇವರ ವಾಕ್ಯದ ಆಧಾರದ ಮೇಲೆ ನಾನು ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದೆ. ಇದು ಆತನ ವಾಕ್ಯದ ಮೂಲಕವಾಗಿ ದೇವರ ಮಾರ್ಗದರ್ಶನವನ್ನು ತೆಗೆದುಕೊಳ್ಳುವದರ ಒಂದು ಉದಾಹರಣೆಯಾಗಿದೆ. ನಾನು ಜೀವನದ ಅನೇಕ ಪರಿಸ್ಥಿತಿಗಳಲ್ಲಿ ಈ ರೀತಿ ಮಾಡುವದನ್ನು ಮುಂದುವರಿಸಿದೆ. ಜೀವನದಲ್ಲಿ ತೀರ್ಮಾನಗಳನ್ನು ಮಾಡುವದರಲ್ಲಿ ಯಾವಾಗಲೂ ಬರೆಯಲ್ಪಟ್ಟಿರುವ ದೇವರ ವಾಕ್ಯದೊಂದಿಗೆ ಮಾಡುತ್ತಿದ್ದೆ.

## ಚುರುಕುಗೊಳಿಸುವ ವಾಕ್ಯ

ನಂತರದಲ್ಲಿ ನಮ್ಮ ಪ್ರತ್ಯೇಕವಾದ ಪರಿಸ್ಥಿತಿಗಳಿಗೆ ಚುರುಕುಗೊಳಿಸುವ ದೇವರ ವಾಕ್ಯದ ಮೂಲಕ ದೇವರು ಮಾತಾಡುವಂತೆ ದೇವರ ಮಾರ್ಗದರ್ಶನವನ್ನು ಹುಡುಕುವಂತಹ ಇತರ ಸಮಯಗಳು ಇವೆ. ವಾಕ್ಯದ ಚುರುಕುಗೊಳಿಸುಕೆಯು ಅನೇಕ ವಿಧವಾದ ರೀತಿಗಳಲ್ಲಿ ಬರುತ್ತದೆ. ಕೆಲವೊಂದನ್ನು ನಾವು ಇಲ್ಲಿ ತಿಳಿಸುತ್ತೇವೆ.

ನೀವು ಒಂದು ನಿಶ್ಚಿತವಾದ ತೀರ್ಮಾನದ ಕುರಿತಾಗಿ ಪ್ರಾರ್ಥಿಸಬೇಕು, ನಂತರ ನಿಮ್ಮ ವಿಷಯವನ್ನು ನೇರವಾಗಿ ತಿಳಿಸುವ ಒಳನೋಟಗಳನ್ನು ಮತ್ತು ವಾಕ್ಯದ ಒಂದು ಭಾಗವನ್ನು ನೋಡಬೇಕು. ಆಗ ಕರ್ತನ ಮನಸ್ಸು ನಿಮಗೆ ಸ್ಪಷ್ಟವಾಗುತ್ತದೆ. ನೀವು ಏನು ಮಾಡಬೇಕೆಂದು ಮತ್ತು ನಿಮ್ಮ ಪರಿಸ್ಥಿತಿಯಲ್ಲಿ ನೀವು ಯಾವ ತೀರ್ಮಾನವನ್ನು ಮಾಡಬೇಕೆಂದು ದೇವರು ಅಂದುಕೊಂಡಿದ್ದಾನೆ ಎನ್ನುವದನ್ನು ನೀವು ಗುರುತಿಸುತ್ತೀರಿ.

ಬಹುಮಟ್ಟಿಗೆ ಇದು ನಿಮ್ಮ ದಿನನಿತ್ಯದ ಸತ್ಯವೇದದ ಓದುವಿಕೆಯ ಸಮಯದಲ್ಲಿ ಸಂಭವಿಸುತ್ತದೆ. ಸತ್ಯವೇದದ ಭಾಗಗಳಿಂದ ನೀವು ಕುಣಿದಾಡುತ್ತ ಸ್ವೀಕರಿಸುವಂತೆ ಒಂದು ವಚನ ಅಥವಾ ಒಂದು ಭಾಗವು ಮಾಡುತ್ತದೆ. ಒಂದು ಗ್ರಹಿಸುಕೆ, ಒಂದು ಉಲ್ಲಾಸಕರವಾದ ಒಳನೋಟ ಇವು ಒಂದು ಪರಿಚಿತವಾದ ಭಾಗದಿಂದ ಇದ್ದಕ್ಕಿದ್ದಂತೆಯೇ ತೆರೆದುಕೊಳ್ಳುವಂತೆ ಕಂಡುಬರುತ್ತದೆ. ನನ್ನ ಕಣ್ಣು ತೆರೆ, ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು(ಕೀರ್ತನೆ-119:18) ಎಂದು ಕೀರ್ತನೆಗಾರನು ಪ್ರಾರ್ಥಿಸಿದಂತೆ ಇದು ಕಂಡುಬರುತ್ತದೆ. ಆತನ ವಾಕ್ಯವನ್ನು ಓದುವ ಸಮಯದಲ್ಲಿ ಒಂದು ವಚನ ಅಥವಾ ಒಂದು ಭಾಗದ ಮೂಲಕವಾಗಿ ದೇವರ ಬೆರಳು ನಿಶ್ಚಿತವಾದ ಒಂದು ಆದೇಶವನ್ನು ನಿಮಗೆ ತೋರಿಸುವಂತೆ ಕಂಡುಬರುತ್ತದೆ.

ಬೇರೆ ಸಮಯಗಳಲ್ಲಿ, ಅಂದರೆ ನೀವು ನಿಮ್ಮ ದಿನನಿತ್ಯದ ಕೆಲಸಗಳಿಗೆ ಹೋಗುವ ವೇಳೆಯಲ್ಲಿ ತಕ್ಷಣವೇ ವಾಕ್ಯದ ಒಂದು ವಚನವು ನಿಮ್ಮ ಮನಸ್ಸಿಗೆ ಬರುತ್ತದೆ. ಪವಿತ್ರಾತ್ಮನು ನಮ್ಮ ಜ್ಞಾಪಕಕ್ಕೆ ತರುವನು ಎಂದು ಯೇಸು ಹೇಳಿದ್ದಾನೆ (ಯೋಹಾನ-14:26). ಕರ್ತನು ನಮಗೆ ಏನು ಕಲಿಸಿದ್ದಾನೆ. ವಾಕ್ಯದ ಆ ವಚನವು ನಿಮ್ಮ ಮನಸ್ಸಿಗೆ ಬಂದು ನಿಮ್ಮ ಜೀವಿತಕ್ಕೆ ದೇವರ ಮಾರ್ಗದರ್ಶನವನ್ನು ಮತ್ತು ನಿರ್ದೇಶನವನ್ನು ತರುವದಕ್ಕೆ ಇತರ ಸಂಗತಿಗಳೊಳಗೆ ಕೆಲಸ ಮಾಡುತ್ತದೆ. ದೇವರ ಮಾರ್ಗದರ್ಶನವನ್ನು ತರುವದಕ್ಕೆ ನಮ್ಮನ್ನು ಚುರುಕುಗೊಳಿಸುವ ವಾಕ್ಯದ ಇನ್ನೊಂದು ರೀತಿ ಇದಾಗಿದೆ.

ದೇವರ ಮಾರ್ಗದರ್ಶನವನ್ನು ವ್ಯಯಕ್ತಿಕವಾಗಿ ನಾನು ಹೊಂದಿಕೊಳ್ಳುವಲ್ಲಿ ಹೆಚ್ಚು ಸಾಮಾನ್ಯವಾದ ರೀತಿಗಳಲ್ಲಿ ವಾಕ್ಯದ ಜಾಗೃತಗೊಳಿಸುಕೆಯು ಒಂದಾಗಿದೆ. ಅನೇಕ ಸಂದರ್ಭಗಳಲ್ಲಿ, ಪ್ರಾಮುಖ್ಯವಾದ ತೀರ್ಮಾನಗಳನ್ನು ನಾನು ತೆಗೆದುಕೊಳ್ಳುವ ಅಗತ್ಯವಿದ್ದಾಗ, ನಾನು ಒಬ್ಬನೇ ನನ್ನ ಕೋಣೆಯೊಳಗೆ ಪ್ರಾರ್ಥಿಸುವದಕ್ಕೆ ಹೋಗುತ್ತಿದ್ದೆ, ವಿಷಯದ ಮೇಲೆ ದೇವರ ಮಾರ್ಗದರ್ಶನಕ್ಕಾಗಿ ದೇವರ ಮುಂದೆ ನನ್ನ ಬೇಡಿಕೆಯನ್ನು ಇಡುತ್ತಿದ್ದೆ ನಂತರ ಅನ್ಯಭಾಷೆಯಲ್ಲಿ ಪ್ರಾರ್ಥಿಸುವ ಸಮಯದೊಳಕ್ಕೆ ಹೋಗುತ್ತಿದ್ದೆ. ಅನ್ಯಭಾಷೆಯಲ್ಲಿ ನಾನು ಪ್ರಾರ್ಥಿಸುವ ಸಮಯದಲ್ಲಿ, ನನ್ನ ಆತ್ಮದಲ್ಲಿ ವಾಕ್ಯದ ಒಂದು ವಚನ ಅಥವಾ ಒಂದು ಭಾಗವು ಬರುತ್ತಿತ್ತು. ಇದು ನಾನು ಪ್ರಾರ್ಥಿಸುತ್ತಿದ್ದ ವಿಷಯದಲ್ಲಿ ನನಗೆ ಮಾರ್ಗದರ್ಶನ ಮಾಡುವದಕ್ಕೆ ದೇವರು ತನ್ನ ವಾಕ್ಯವನ್ನು ಜಾಗೃತಗೊಳಿಸುವಂತದ್ದಾಗಿದೆ. ದೇವರು ಮಾತಾಡಿದ್ದಾನೆ ಎಂಬುದು ನನಗೆ ಗೊತ್ತಾಗುತ್ತಿತ್ತು, ನಾನು ಯಾವುದಕ್ಕಾಗಿ ಕೇಳುಕೊಳ್ಳುತ್ತಿದ್ದೆನೋ ಅದಕ್ಕೆ ದೇವರ ಮಾರ್ಗದರ್ಶನವನ್ನು ನಾನು ಹೊಂದಿಕೊಳ್ಳುತ್ತಿದ್ದೆ. ಈಗ ಆ ಪರಿಸ್ಥಿತಿಯಲ್ಲಿ ನಾನು ಆತನ ವಾಕ್ಯಕ್ಕೆ ವಿಧೇಯನಾಗಬೇಕಾಗಿತ್ತು.

## *ಮಾರ್ಚ್ 1990: ಆತ್ಮೀಕ ಕೌಶಲ್ಯಗಳ ಕೋರ್ಸ್, ಮಣಿಪಾಲ್*

ನಾನು 1986-1990 ಅವಧಿಯಲ್ಲಿ ಕರ್ನಾಟಕದ ಮಣಿಪಾಲದಲ್ಲಿ ತಾಂತ್ರಿಕತೆಯಲ್ಲಿ ನನ್ನ ವಿಶ್ವದ್ಯಾನಿಲಯದ ಪದಯನ್ನು ಮುಗಿಸಿದೆ. ಮೂರನೆಯ ವರ್ಷದಲ್ಲಿ, ಜನವರಿ 1989ರಲ್ಲಿ ನಾನು ಪ್ರತಿವಾರ ಶನಿವಾರದಂದು ಕೂಟಗಳನ್ನು ಪ್ರಾರಂಭಿಸಿದೆ, ಅದನ್ನು ನಾವು ವಿಶ್ವಾಸಿಗಳ ಅನ್ಯೋನ್ಯತೆಯ ಕೂಟಗಳು ಎಂದು ಕರೆಯುತ್ತಿದ್ದೆವು. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಡೇಸ್ ಜಾನ್‌ರಾಜ್ ಸಹ ಈ ಅನ್ಯೋನ್ಯತೆಯ ಒಂದು ಭಾಗವಾಗಿದ್ದ ಮತ್ತು ನಾನು ಪದವೀಧರನಾಗಿ ಹೊರಬಂದ ಮೇಲೆ ಈ

ಕೂಟಗಳ ನಾಯಕತ್ವವನ್ನು ಡೇಸ್‌ಗೆ ಒಪ್ಪಿಸಬೇಕೆಂದು ಅಂದುಕೊಂಡೆ. ಕೆಲವು ಸಮಯದ ನಂತರ ಮಾರ್ಚ್ 1990ರ ಸುಮಾರಿಗೆ ಡಾ. ಮಾರ್ಕ್ ಮತ್ತು ಡಾ. ಬೆಟ್ಸಿಯವರಿಂದ ವ್ಯವಸ್ಥೆಗೊಳಿಸಲ್ಪಟ್ಟಿದ್ದ ಒಂದು ಆತ್ಮೀಕ ಕೌಶಲ್ಯಗಳ ಕೋರ್ಸ್‌ನಲ್ಲಿ ಭಾಗವಸುವದಕ್ಕೆ ದೇಸ್ ವೆಲ್ಲೂರ್‌ಗೆ ಹೋಗಿದ್ದನು. ಈ ಇಬ್ಬರು ವೈದ್ಯರುಗಳು ಅಮೆರಿಕನ್ ಬೋರ್ಡ್ ಸರ್ಟಿಫೈಡ್ ಫಿಸಿಶಿಯನ್‌ಗಳಾಗಿದ್ದು, ಅವರಿಬ್ಬರೂ ಎರಡರಷ್ಟು ವಿಶೇಷತೆಯುಳ್ಳವರಾಗಿದ್ದರು. ಡಾ. ಮಾರ್ಕ್ ಮತ್ತು ಬೆಟ್ಸಿ ಇಬ್ಬರೂ ಮಣಿಪಾಲ್‌ಗೆ ಬಂದು ವಿದ್ಯಾರ್ಥಿಗಳಿಗಾಗಿ ಆತ್ಮೀಕ ಕೌಶಲ್ಯಗಳ ಕೋರ್ಸ್ ನಡೆಸುವಂತೆ ಕೇಳಿಕೊಂಡನು. ಇದು ಎರಡು ದಿನದ ಚಿಕ್ಕದಾದ ಅವಧಿಯಾಗಿದೆ. ನಾನು ಇದರ ಕುರಿತು ಒಂದು ತೀರ್ಮಾನ ಮಾಡಬೇಕಾಗಿತ್ತು. ವಿದ್ಯಾರ್ಥಿ ಅನ್ಯೋನ್ಯತೆಯ ನಾಯಕನಾಗಿದ್ದಂತೆಯೇ ನನ್ನ ಮನಸ್ಸಿನಲ್ಲಿ ಎರಡು ಸಂಗತಿಗಳಿದ್ದವು, ಅದು ಈ ಕೋರ್ಸ್‌ಗೆ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸುವ ವಿಷಯವಾಗಿತ್ತು. ತಾಂತ್ರಿಕ ಕಾಲೇಜಿನ ಸೆಮಿಸ್ಟರ್ ಪರೀಕ್ಷೆಗಳು ಕೇವಲ ಕೆಲವು ವಾರಗಳ ದೂರದಲ್ಲಿತ್ತು. ಅಂತಹ ಒಂದು ಸಂದರ್ಭದ ಆತಿಥ್ಯ ಮಾಡಿ ಭಾಗವಹಿಸುವಂತದ್ದು ಕೇವಲ ನಮ್ಮ ಸೆಮಿಸ್ಟರ್ ಪರೀಕ್ಷೆಗಳ ಮುಂಚೆ ನಮ್ಮಲ್ಲಿ ಅನೇಕರು ಮೂರು ಅಥವಾ ನಾಲ್ಕು ದಿವಸಗಳನ್ನು ಕಳೆದುಕೊಳ್ಳಬೇಕಾಗಿದ್ದಿತ್ತು. ಇದು ನಮ್ಮ ಪರೀಕ್ಷೆಗಳನ್ನು ನಿಭಾಯಿಸುವದರ ಮೇಲೆ ಪರಿಣಾಮ ಬೀರಬಹುದಿತ್ತೇನೋ? ಈ ಕಾರ್ಯಕ್ರಮವನ್ನು ಆತಿಥ್ಯಮಾಡುವದಕ್ಕೆ ಹೋಟೆಲ್‌ನ ಸೆಮಿನಾರ್ ಹಾಲ್ ಅನ್ನು ಇನ್ನೂ ಎರಡು ದಿವಸಗಳು ಬಾಡಿಗೆಗೆ ತೆಗೆದುಕೊಳ್ಳಬೇಕಾಗಿದ್ದದ್ದು ಎರಡನೆಯ ಚಿಂತನೆಯಾಗಿತ್ತು. ನನ್ನ ಮನಸ್ಸಿನಲ್ಲಿ ನಡೆಯುತ್ತಿದ್ದ ಈ ಎಲ್ಲಾ ಆಲೋಚನೆಗಳೊಂದಿಗೆ ನಾನು ಇದನ್ನು ಬಿಟ್ಟುಕೊಡುತ್ತೇನೆ ಎಂದು ಡೇಸ್‌ಗೆ ತಿಳಿಸಿದೆ. ನಾನು ನೆನಪಿಸಿಕೊಳ್ಳುವಂತೆ, ಆತ್ಮೀಕ ಕೌಶಲ್ಯದ ಕೋರ್ಸ್ ಆತಿಥ್ಯ ಮಾಡುವದಕ್ಕೆ ಮುಂದೆ ಹೋಗಬಾರದೆನ್ನುವದರ ಕಡೆಗೆ ನಾನು ವಾಲಿದವನಾಗಿದ್ದೆ. ಆದರೆ ಇಲ್ಲಿ ಏನಾಯಿತೆಂದರೆ, ಮರುದಿನ ಬೆಳಿಗ್ಗೆ, ನಾನು ಆಗತಾನೇ ಎದ್ದು ನಡೆದಾಡುತ್ತಿರುವಾಗ, ನಾನು ನನ್ನ ಹೃದಯದ ಒಂದು ಚಿಕ್ಕದಾದ ದರ್ಶನವನ್ನು ಮತ್ತು ಕಾರಿನ ವೈಪರ್ ಬ್ಲೇಡ್‌ಗಳ ಹಾಗಿರುವ ಏನೋ ಒಂದು ಇದನ್ನು ದಾಟಿಹೋಗುತ್ತಿರುವದನ್ನು ಕಂಡೆ, ಮತ್ತು ಜ್ಞಾನೋಕ್ತಿ–3:5–6ನೆಯ ವಚನಗಳನ್ನು ಕೇಳಿಸಿಕೊಂಡೆ. ಇದು ಒಂದು ಕ್ಷಣದಲ್ಲಿ ನಡೆದು ಹೋಯಿತು. ದೇವರು ತುಂಬ ಸ್ಪಷ್ಟವಾಗಿ ಜಾಗೃತಗೊಳಿಸುವ ವಾಕ್ಯದ ಮೂಲಕ ಮಾತಾಡಿದ್ದಾನೆಂಬುದನ್ನು ಮಿಂಚಿನಂತೆ ತಕ್ಷಣವೇ ನಾನು ತಿಳಿದುಕೊಂಡೆ. ನನ್ನಲ್ಲಿ ಇನ್ನೂ ಪ್ರಶ್ನೆಗಳಿದ್ದಾಗ್ಯೂ ಮತ್ತು ಮನಸ್ಸಿನಲ್ಲಿ ಚಿಂತನೆಗಳಿದ್ದಾಗ್ಯೂ ಸಹ ದೇವರು ಮಾತಾಡಿದ್ದನು. ನಾನು ಡೇಸ್‌ಗೆ, ನಾವು ಮುಂದೆ ಹೋಗೋಣ,

ಡಾ.ಮಾರ್ಕ್ ಮತ್ತು ಡಾ.ಬೆಟ್ಸಿಯವರೊಂದಿಗೆ ಮಣಿಪಾಲದಲ್ಲಿ ಆತ್ಮೀಕ ಕೌಶಲ್ಯಗಳ ಕೋರ್ಸ್ ಅನ್ನು ನಡೆಸಿಕೊಡೋಣ ಎಂದು ತಿಳಿಸಿದೆ. ಮಣಿಪಾಲದಲ್ಲಿ ವಿದ್ಯಾರ್ಥಿ ಅನ್ಯೋನ್ಯತೆಯ ಜೀವನದಲ್ಲಿ ಇದು ಏನೋ ಒಂದು ಅದ್ಭುತವಾದ ಆರಂಭವಾಗಿತ್ತು. ನಂತರದ ವರ್ಷಗಳಲ್ಲಿ, ಈ ಇಬ್ಬರು ವೈದ್ಯರುಗಳು ಮಣಿಪಾಲಕ್ಕೆ ಹಿಂತಿರುಗಿ ಹೋಗಿ ಅನೇಕ ವಿದ್ಯಾರ್ಥಿಗಳ ಜೀವಿತಗಳ ಮೇಲೆ ಪರಿಣಾಮವನ್ನುಂಟು ಮಾಡಿದ ದೇವರ ಆತ್ಮನ ಬಲಯುತವಾದ ಚಲನೆಯನ್ನು ಕಂಡರು. ಅವರ ಭೇಟಿಗಳ ವೇಳೆಯಲ್ಲಿ ದೇವರಿಂದ ಮುಟ್ಟಲ್ಪಟ್ಟಂತಹ ವಿದ್ಯಾಥಿಗಳಿಂದ ಸೇವೆಯ ಆ ಸಮಯದ ಫಲವು ಇನ್ನೂ ಮಾತಾಡಲ್ಪಡುತ್ತಿದೆ.

ಇದೇ ರೀತಿಯಲ್ಲಿ, ಜಾಗೃತಗೊಳಿಸುವ ವಾಕ್ಯದ ಮೂಲಕವಾಗಿ ದೇವರು ಮಾತಾಡಿ ತೀರ್ಮಾನಗಳನ್ನು ತೆಗೆದುಕೊಂಡಂತಹ ಅನೇಕ ಸಂದರ್ಭಗಳು ಇವೆ.

### *ಜನವರಿ 2013: ಎಪಿಸಿ ಮಂಗಳೂರು ಮುಂದುವರೆದದ್ದು.*

ಮಂಗಳೂರಿನಲ್ಲಿ ನಮ್ಮ ಸಭಾ ಸ್ಥಾಪನೆಯು ಉತ್ತಮವಾಗಿಲ್ಲದಿದ್ದ ಸಮಯವು ಒಂದಿತ್ತು. ಭಾಗವಸುತ್ತಿದ್ದ ಜನರ ಸಂಖ್ಯೆ ಕಡಿಮೆಯಾಗಿತ್ತು ಮತ್ತು ಸ್ಥಳೀಯ ಸಭೆಯನ್ನು ನಡೆಸುವಂತಹ ಯಾರೊಬ್ಬರೂ ಇರಲಿಲ್ಲ. ಇದರಿಂದ ಮತ್ತು ಎಲ್ಲಾ ಪ್ರಾಯೋಗಿಕ ದೃಷ್ಟಿಕೋನದಿಂದ ಸ್ಥಳೀಯ ಸಭೆಯು ಮುಚ್ಚುವದಕ್ಕೆ ಕೇವಲ ತರ್ಕಶಾಸ್ತ್ರದ ಹೆಜ್ಜೆ ಮಾತ್ರವಾಗಿತ್ತು ಎನ್ನುವದರಿಂದ ನಾನು ಬಹಳವಾಗಿ ನಿರುತ್ಸಾಹಗೊಂಡಿದ್ದೆ ಮತ್ತು ಬೇರೆ ಸ್ಥಳೀಯ ಸಭೆಯಲ್ಲಿ ಒಂದು ಸ್ಥಳವನ್ನು ಕಂಡುಕೊಳ್ಳುವದಕ್ಕೆ ಗಮನಕೊಡುತ್ತಿದ್ದ ಕೆಲವರನ್ನು ನಾನು ಕೇಳಿಕೊಂಡೆ. ಇತರ ಯಾವುದೇ ಆಯ್ಕೆ ಇರುವದು ಕಂಡುಬರಲಿಲ್ಲ. ಇದರ ಕುರಿತಾಗಿ ಏನು ಮಾಡಬೇಕೆಂಬುದನ್ನು ಕರ್ತನಿಗೆ ಪ್ರಾರ್ಥಿಸುತ್ತಾ ಕೇಳಿಕೊಂಡೆ. ನಾವು ಇದನ್ನು ಮುಚ್ಚಬೇಕೋ ಅಥವಾ ಸಂಗತಿಗಳನ್ನು ಮುಂದುವರಿಸಬೇಕೋ? ಒಂದು ವೇಳೆ ನಾವು ಸಂಗತಿಗಳನ್ನು ಮುಂದುವರಿಸಿದರೆ ಕೆಲಸವನ್ನು ಮುನ್ನಡೆಸುವವರು ಯಾರು? ಮಂಗಳೂರಿನಲ್ಲಿರುವ ಸಭೆಯ ಕೆಲಸದ ಪೂರ್ತಿ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತವರು ಆ ಸಮಯದಲ್ಲಿ ನಮಗ್ಯಾರೂ ಇರಲಿಲ್ಲ. ಜನವರಿ 13, 2013ರ ಭಾನುವಾರದಂದು, ಈ ವಿಷಯದ ಕುರಿತಾಗಿ ಆತನನ್ನು ಹುಡುಕುತ್ತಿರುವ ನನಗೆ ಪ್ರತಿಕ್ರಿಯೆಗಾಗಿ ಯೆಶಾಯ–40:1–11ನ್ನು ದೇವರು ನನ್ನ ಹೃದಯಕ್ಕೆ ಜಾಗೃತಗೊಳಿಸಿದನು. ನಾನು ಇದನ್ನು ನನ್ನ ಸತ್ಯವೇದದಲ್ಲಿ ಗುರುತು ಮಾಡಿಕೊಂಡೆ. ಇದು ದೇವರ ಉತ್ತರವಾಗಿತ್ತು. ಆದ್ದರಿಂದ ನಾನು ಎಪಿಸಿ ಮಂಗಳೂರನ್ನು ಮುಂದುವರಿಸುವದಕ್ಕೆ ತೀರ್ಮಾನಿಸಿದೆ. ಎಪಿಸಿ ಮಂಗಳೂರನ್ನು

ಮುನ್ನಡೆಸುವದಕ್ಕೆ ಆ ಸಂದರ್ಭದಲ್ಲಿ ನಾನು ಇದನ್ನು ನನ್ನ ಮೇಲೆ ತೆಗೆದುಕೊಂಡೆ. ಬೆಂಗಳೂರಿನಲ್ಲಿ ಸ್ಥಳೀಯ ಸಭೆಗಳನ್ನು ನಡೆಸಿ ಪ್ರತಿ ಭಾನುವಾರದಂದು ಮಂಗಳೂರಿಗೆ ಸಹ ಹೋಗುವದು ಮತ್ತು ಇರುವಂತಹ ಸ್ಥಿತಿಯಿಂದ ಸಂಗತಿಗಳನ್ನು ಮೇಲೆತ್ತಿ ಕಟ್ಟುವದು ಸುಲಭವಾದುದಾಗಿರಲಿಲ್ಲ. ಆ ಸಂದರ್ಭದಲ್ಲಿ ಅನೇಕ ಸಲ, ನಾನು ಏನು ಮಾಡುತ್ತಿದ್ದೆನೋ ಅದರ ಕಾರ್ಯಶೀಲತೆಯನ್ನು ನನ್ನ ಮನಸ್ಸಿನಲ್ಲಿ ಪ್ರಶ್ನಿಸಿಕೊಳ್ಳುತ್ತಿದ್ದೆ. ಪ್ರತಿ ಸಲ ಸಂದೇಹಗಳು ಮತ್ತು ಪ್ರಶ್ನೆಗಳು ನನ್ನ ಮನಸ್ಸಿಗೆ ಬರುತ್ತಿತ್ತು, ಆಗ ನಾನು ಯೆಶಾಯ–40:1–11ಕ್ಕೆ ಹಿಂದಿರುಗುತ್ತಿದ್ದೆ ಮತ್ತು ಎಪಿಸಿ ಮಂಗಳೂರಿನ ಕೆಲಸವನ್ನು ಪ್ರಕಟಿಸುತ್ತಿದ್ದೆ. ಎಪಿಸಿ ಮಂಗಳೂರಿಗಾಗಿ ದೇವರು ನನಗೆ ಕೊಟ್ಟಿದ್ದ ಜಾಗೃತಗೊಳಿಸಿದ ವಾಕ್ಯ ಹಿಡಿದುಕೊಳ್ಳುವದನ್ನು ನಾನು ಆರಿಸಿಕೊಂಡೆ. ಇದು ಒಂದು ಸವಾಲಿನ ಸಮಯವಾಗಿದ್ದಾಗ್ಯೂ, ಸಂಗತಿಗಳು ಕೊನೆಗೆ ಬೆಲೆ ತೆರಬೇಕಾಯಿತು. ನಾನು ಈದಿನ ಬರೆದಿರುವಂತೆ (ಜೂನ್ 2019), ಕೆಲಸವನ್ನು ನಡೆಸುವದಕ್ಕೆ ಎಪಿಸಿ ಮಂಗಳೂರು ಒಬ್ಬ ಅದ್ಭುತವಾದ ಬೋಧಕ ದಂಪತಿಗಳನ್ನು ಹೊಂದಿದ್ದು ಸ್ಥಳೀಯ ಸಭೆಯು ವೇಗವಾಗಿ ಬೆಳೆಯುತ್ತಿರುವ ಸಭೆಯಾಗಿದೆ.

## ಬೋಧಿಸಲ್ಪಟ್ಟ ವಾಕ್ಯ

ಬೋಧಿಸಲ್ಪಟ್ಟ ವಾಕ್ಯವನ್ನು ನಾವು ಕೇಳಿಸಿಕೊಂಡಾಗ ಬರೆಯಲ್ಪಟ್ಟಿರುವ ವಾಕ್ಯವನ್ನು ಉಪಯೋಗಿಸಿ ದೇವರು ನಮ್ಮ ಜೀವಿತಗಳಿಗೆ ತನ್ನ ಮಾರ್ಗದರ್ಶನವನ್ನು ತರುವಂತಾದ್ದು ಇನ್ನೊಂದು ಸಾಮಾನ್ಯವಾಗಿ ಅನುಭವಪಡುವಂತಹ ರೀತಿಯಾಗಿದೆ. ಒಂದು ವಿಷಯದ ಕುರಿತು ಪ್ರಾರ್ಥಿಸುವದಕ್ಕೆ ನೀವು ಬಹುಶ: ಸಭೆಯ ಒಂದು ಆರಾಧನೆಗೆ ಬರುತ್ತೀರಿ. ನಂತರ ಬೋಧಿಸಲ್ಪಟ್ಟ ವಾಕ್ಯದ ಮೂಲಕ, ನಿಮ್ಮ ಹೃದಯದ ಮೇಲಿರುವ ಸಂಗತಿಗಳನ್ನು ದೇವರು ನಿಶ್ಚಿತವಾಗಿ ತಿಳಿಸಿರುವಂತೆ ಇದು ಕಂಡುಬರುತ್ತದೆ. ಆಸಕ್ತಿಕರವಾದುದೇನೆಂದರೆ, ಒಂದೇ ರೀತಿಯ ಸಂದೇಶವನ್ನು ಅನೇಕರು ಕೇಳುತ್ತಿದ್ದು, ಪ್ರತಿಯೊಬ್ಬರ ಹೃದಯದ ವಿಷಯವು ಬೇರೆ ಬೇರೆಯಾಗಿದ್ದಾಗ್ಯೂ ಸಹ, ದೇವರು ಅವರೊಂದಿಗೆ ನೇರವಾಗಿ ಮಾತಾಡಿದ್ದಾನೆಂಬುದಾಗಿ ಎಲ್ಲರೂ ಅನುಭವಪಡುತ್ತಾರೆ. ಕೇವಲ ದೇವರು ಮಾತ್ರ ಈ ರೀತಿ ಏನೋ ಒಂದನ್ನು ಮಾಡುತ್ತಾನೆ. ವಿವಿಧ ಸಂಗತಿಗಳ ಮೇಲೆ ಏಕಕಾಲದಲ್ಲಿ ಆತನ ಅನೇಕ ಜನರಿಗೆ, ಬರೆಯಲ್ಪಟ್ಟ ವಾಕ್ಯವು ಪ್ರಸಂಗವಾದಾಗ ಅದು ಆತನ ಸಮಾಲೋಚನೆಯಾಗುತ್ತದೆ. ಕೆಲವೊಂದು ಸಲ ನೀವು ವಿವಿಧ ಜನರಿಂದ ಅನೇಕ ಪ್ರಸಂಗಗಳನ್ನು ಕೇಳುತ್ತೀರಿ ಮತ್ತು ಅವರೆಲ್ಲರಿಂದ ದೇವರು ಒಂದೇ ವಿಷಯವನ್ನು ನಿಮಗೆ ತಿಳಿಸಿದಂತೆ ಕಂಡುಬರುತ್ತದೆ. ಕೆಲವು

ಸಲ ಇದು ಕ್ರೈಸ್ತ ಟಿ ವಿಯಲ್ಲಿ ಬರುವ ಒಂದು ಪ್ರಸಂಗದ ಮೂಲಕ ಅಥವಾ ನೀವು ಕೇಳಿಸಿಕೊಳ್ಳುವ ಬಾನುಲಿ ಪ್ರಸಾರದ ಮೂಲಕ ಇಲ್ಲವೆ ನೀವು ಓದುವ ಒಂದು ಪುಸ್ತಕದ ಮೂಲಕ ಸಂಭವಿಸುತ್ತದೆ. ದೇವರ ವಾಕ್ಯವು ವಿವಿಧ ಸಾಧನಗಳ ಮೂಲಕವಾಗಿ ಹೇಳಲ್ಪಡುತ್ತದೆ. ಪ್ರಸಂಗಿಸಲ್ಪಟ್ಟ ವಾಕ್ಯವು ನಿಮ್ಮ ಹೃದಯದ ಮೇಲೆ ಬಿದ್ದಾಗ, ದೇವರು ಮಾತಾಡುತ್ತಿದ್ದಾನೆ ಮತ್ತು ನೀವು ಹುಡುಕುತ್ತಿರುವ ಮಾರ್ಗದರ್ಶನವನ್ನು ಮತ್ತು ನಿರ್ದೇಶನವನ್ನು ಕೊಡುತ್ತಿದ್ದಾನೆ ಎಂದು ನೀವು ತಿಳಿದುಕೊಳ್ಳುತ್ತೀರಿ. ಈಗ ಕರ್ತನಿಗೆ ವಿಧೇಯರಾಗುವ ಸರದಿ ನಿಮ್ಮದು.

## ಅಂತರಂಗದ ಧ್ವನಿ – ನಮ್ಮ ಮನಸ್ಸಾಕ್ಷಿಯ ಧ್ವನಿ.

ನಮಗೆ ಸಮಾಲೋಚನೆ, ಮಾರ್ಗದರ್ಶನ ಮತ್ತು ನಿರ್ದೇಶನವನ್ನು ಕೊಡುವದಕ್ಕೆ ದೇವರು ತನ್ನ ಬರೆಯಲ್ಪಟ್ಟ ವಾಕ್ಯವನ್ನು ಉಪಯೋಗಿಸುವ ನಾಲ್ಕನೆಯ ಒಂದು ರೀತಿ ಅದು ಅಂತರಂಗದ ಧ್ವನಿಯ ಮೂಲಕ, ನಮ್ಮ ಸ್ವಂತ ಮನಸ್ಸಾಕ್ಷಿಯ ಧ್ವನಿಯ ಮೂಲಕ –ವಾದುದಾಗಿದೆ. ನಮ್ಮ ಸ್ವಂತ ಆತ್ಮವು ನಮಗೆ ಮಾತಾಡುವದೇ ನಮ್ಮ ಮನಸ್ಸಾಕ್ಷಿಯಾಗಿದೆ. ನಮ್ಮ ಮಾನವ ಆತ್ಮದ ಧ್ವನಿಯು ಮನಸ್ಸಾಕ್ಷಿ ಎಂಬುದಾಗಿ ಕರೆಯಲ್ಪಡುತ್ತದೆ.

ಯೋಬ–32:8

**ಆದರೆ ಮನುಷ್ಯರಲ್ಲಿ ಆತ್ಮವೊಂದುಂಟು, ಸರ್ವಶಕ್ತನ ವಿಶ್ವಾಸದಿಂದ ಅವರಿಗೆ ವಿವೇಕ ದೊರೆಯುತ್ತದೆ.**

ಕೀರ್ತನೆ–51:6

**ಯಥಾರ್ಥಚಿತ್ತವೇ ನಿನಗೆ ಸಂತೋಷ; ಸುಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು.**

ಜ್ಞಾನೋಕ್ತಿ–20:27

**ಮನುಷ್ಯನ ಆತ್ಮವು ಯೆಹೋವನ ದೀಪವಾಗಿದೆ; ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ.**

ದೇವರು ನಮ್ಮ ಮಾನವ ಆತ್ಮದೊಳಕ್ಕೆ ಉಸಿರುತ್ತಾನೆ (ಪ್ರೇರಿಸುತ್ತಾನೆ, ಪ್ರಕಟನೆಯನ್ನು ಬಿಡುಗಡೆ ಮಾಡುತ್ತಾನೆ). ನಮ್ಮ ಆತ್ಮದಲ್ಲಿ ಜ್ಞಾನವನ್ನು ತಿಳಿದುಕೊಳ್ಳುವದಕ್ಕೆ ನಮಗೆ ಆತನು ಕಾರಣನಾಗುತ್ತಾನೆ. ನಮ್ಮ ಮಾನವ ಆತ್ಮವು ನಮ್ಮನ್ನು ಶೋಧಿಸಿಕೊಳ್ಳುವದಕ್ಕೆ ಮತ್ತು ಅದೇ ರೀತಿಯಾಗಿ ನಮಗೆ ಮಾರ್ಗದರ್ಶನ ಮಾಡುವದಕ್ಕೆ ದೇವರು ಉಪಯೋಗಿಸುವಂತಹ ದೀಪದ ರೀತಿಯಲ್ಲಿದೆ.

ನಮ್ಮ ಮನಸ್ಸಾಕ್ಷಿಯು ನಮ್ಮ ಹೃದಯದಲ್ಲಿ ಏನು ಬರೆದದೆಯೋ ಅದಕ್ಕೆ ನೇರವಾಗಿ

ಮಾತಾಡುತ್ತದೆ ಅಥವಾ ಸಾಕ್ಷಿ ಕೊಡುತ್ತದೆ (ರೋಮಾ-2:15). ಯಾವಾಗ ನಮ್ಮ ಮಾನವ ಆತ್ಮವು ದೇವರ ವಾಕ್ಯದೊಂದಿಗೆ ತರಬೇತಿಗೊಂಡಿರುತ್ತದೋ ಮತ್ತು ಪವಿತ್ರಾತ್ಮನಿಗೆ ಅಧೀನವಾಗಿರುತ್ತದೋ, ಆಗ ನಮ್ಮ ಸ್ವಂತ ಆತ್ಮದ ಧ್ವನಿಯು – ನಮ್ಮ ಸ್ವಂತ ಮನಸ್ಸಾಕ್ಷಿಯು – ಒಂದು ನಂಬಲಾರ್ಹವಾದ ಮಾರ್ಗ ದರ್ಶಿಯಾಗುತ್ತದೆ. ನಮ್ಮನ್ನು ದೇವರ ವಾಕ್ಯಕ್ಕೆ ಸಾಲಿನಲ್ಲಿ ನಿಲ್ಲಿಸುವದಕ್ಕೆ ಮತ್ತು ದೇವರ ಪ್ರೇರಣೆಗನುಸಾರವಾಗಿ ಇಡುವದಕ್ಕೆ ಮಾತಾಡುವಂತಹ ನಮ್ಮ ಮನಸ್ಸಾಕ್ಷಿಯನ್ನು ನಾವು ಕೇವಲ ಅನುಸರಿಸಬೇಕು. ಅಪೊಸ್ತಲನಾದ ಪೌಲನು ನಾನು ಈ ದಿನದವರೆಗೂ ಒಳ್ಳೇ ಮನಸ್ಸಾಕ್ಷಿಯಿಂದ ದೇವರ ಮುಂದೆ ನಡೆದುಕೊಂಡಿದ್ದೇನೆ (ಅಪೊ.ಕೃತ್ಯ-23:1) ಎಂದು ಹೇಳಿದ್ದಾನೆ. ಆತನು ಯಾವಾಗಲೂ ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ತಾನು ನಿರ್ದೋಷಿ ಎಂದು ಹೇಳುವ ಮನಸ್ಸು ಇರುವಂತೆ ಪ್ರಯತ್ನಿಸುತ್ತಿದ್ದನು (ಅಪೊ.ಕೃತ್ಯ-24:16).

ಇದು ಹೊಸ ಒಡಂಬಡಿಕೆಯ ಜೀವಿತದ ಭಾಗವಾಗಿದೆ. ದೇವರು ತನ್ನ ವಾಕ್ಯವನ್ನು ನಮ್ಮ ಮನಸ್ಸುಗಳ ಮೇಲೆಯೂ ಮತ್ತು ನಮ್ಮ ಹೃದಯಗಳ ಮೇಲೆಯೂ ಬರೆಯುತ್ತಾನೆ ಮತ್ತು ಪ್ರತಿಯೊಬ್ಬರೂ ಕರ್ತನನ್ನು ತಿಳಿದುಕೊಳ್ಳುವರು (ಇಬ್ರಿಯ-8:10-11). ಬರೆಯಲ್ಪಟ್ಟ ಆತನ ವಾಕ್ಯವು ನಮ್ಮ ಮನಸ್ಸುಗಳ ಮತ್ತು ಹೃದಯಗಳ ಮೇಲೆ ಬರೆಯಲ್ಪಟ್ಟಾಗ ನಾವು ವಿಶ್ವಾಸಿಗಳ ಹಾಗೆ ನಮ್ಮ ಮನಸ್ಸಾಕ್ಷಿಯ ಧ್ವನಿಯ ಮೂಲಕವಾಗಿ ದೇವರ ಮಾರ್ಗದರ್ಶನವನ್ನು ಪಡೆದುಕೊಳ್ಳುತ್ತೇವೆ. ನಿಮ್ಮ ಮನಸ್ಸಾಕ್ಷಿಗೆ ಕಿವಿಗೊಡುವದನ್ನು ಕಲಿತುಕೊಳ್ಳಿರಿ. ನಿಮ್ಮ ಮನಸ್ಸಾಕ್ಷಿಯು ನಿರ್ಮಲವಾಗಿಯೂ ಮತ್ತು ಶುದ್ಧವಾಗಿಯೂ ಇದೆಯೋ? ಅಥವಾ ನಿಮ್ಮ ಮನಸ್ಸಾಕ್ಷಿಯು ಯಾವುದಾದರೂ ರೀತಿಯಲ್ಲಿ ತಪ್ಪಾದುದು, ಅತಿಕ್ರಮಿಸಲ್ಪಟ್ಟದ್ದು, ಉಲ್ಲಂಘಿಸಲ್ಪಟ್ಟದ್ದು ಅಥವಾ ನೋವನ್ನುಂಟುಮಾಡಿದ ಅನುಭವಪಟ್ಟಿದ್ದೀರೋ? ನಿಮ್ಮ ಮನಸ್ಸಾಕ್ಷಿಯು ನಿಮಗೆ ತಪ್ಪು ಮಾಡಿದ್ದರೆ, ನೀವು ದೇವರ ವಾಕ್ಯಕ್ಕೆ ವಿರುದ್ಧವಾಗಿ ಏನೋ ಮಾಡಿದ್ದೀರಿ ಎಂದು ಇದರ ಅರ್ಥ. ನೀವು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದಿರುವಾಗ, ನಿಮ್ಮೊಳಗೆ ಏನೋ ಒಂದು ತಪ್ಪಾಗಿರುವದನ್ನು, ಅಕ್ರಮವಾಗಿರುವದನ್ನು ನೀವು ಕಂಡುಕೊಳ್ಳುತ್ತೀರಿ. ನನ್ನ ಮನಸ್ಸಾಕ್ಷಿಯು ಇದನ್ನು ಮಾಡುವದಕ್ಕೆ ನನ್ನನ್ನು ಬಿಡುತ್ತಿಲ್ಲ ಎಂದು ನಾವು ಆಗಾಗ್ಗೆ ಹೇಳುತ್ತಿರುತ್ತೇವೆ. ನಿಮ್ಮ ಸ್ವಂತ ಮನಸ್ಸಾಕ್ಷಿಯಿಂದ ಹೊರಬರುವಂತ ಒಂದು ನಿಗ್ರಹಿಸುವಿಕೆ ನಿಮ್ಮೊಳಗೆ ಇದೆ – ಅದು ನಿಮ್ಮ ಆತ್ಮದ ಧ್ವನಿಯಾಗಿದ್ದು ಅದರಲ್ಲಿ ದೇವರ ಬರೆಯಲ್ಪಟ್ಟ ವಾಕ್ಯರುತ್ತದೆ.

ನೀವು ನಿಮ್ಮ ಮನಸ್ಸಾಕ್ಷಿಯನ್ನು ಅನುಸರಿಸಲೇಬೇಕು. ನೀವು ಇದನ್ನು ಮಾಡಿದಾಗ ನೀವು ದೇವರ ವಾಕ್ಯವನ್ನು ಅನುಸರಿಸುವವರು ಮತ್ತು ನಿಮ್ಮ ಜೀವಿತಕ್ಕೆ ಆತನ ಮಾರ್ಗದರ್ಶನದಲ್ಲಿ ನಡೆಯುವವರು ಆಗುತ್ತೀರಿ.

## ಯುಕ್ತವಾಗಿ ವಾಕ್ಯವನ್ನು ಭಾಗಿಸುವದು

2ತಿಮೊಥೆ-2:15

**ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು.**

ದೇವರ ವಾಕ್ಯವನ್ನು ಹೇಗೆ ನಿರ್ವಹಿಸಬೇಕೆನ್ನುವದರಲ್ಲಿ ನಾವು ಜಾಗ್ರತೆಯುಳ್ಳವರಾಗಿರಬೇಕು. ನಾವು ಸತ್ಯದ ವಾಕ್ಯವನ್ನು ''ಯುಕ್ತವಾಗಿ ವಿಭಾಗಿಸಬೇಕು'' (ಒಂದು ನೇರವಾದ ಬೇರ್ಪಡಿಸುವಿಕೆ ಮಾಡಬೇಕು, ಸರಿಯಾಗಿ ವಿಭಜಿಸಬೇಕು ಅಥವಾ ವ್ಯಾಖ್ಯಾನಿಸಬೇಕು). ಆತನ ವಾಕ್ಯದ ನಮ್ಮ ತಪ್ಪಾದ ಅನ್ವಯಿಸುವಿಕೆ ಮತ್ತು ತಪ್ಪಾದ ಭಾಷಾಂತರಕ್ಕಾಗಿ ದೇವರು ಜವಾಬ್ದಾರನಾಗುವದಿಲ್ಲ. ದೇವರ ವಾಕ್ಯದ ತಪ್ಪಾದ ಒಂದು ತಿಳುವಳಿಕೆಯು ವಾಕ್ಯದ ಒಂದು ತಪ್ಪು ಅನ್ವಹಿಸುವಿಕೆಗೆ ನಡೆಸುತ್ತದೆ ಅದು ಎಲ್ಲಾ ರೀತಿಯ ಸಮಸ್ಯೆಗಳಿಗೆ ಕಾರಣವಾಗುತ್ತದೆ. ದೇವರ ವಾಕ್ಯದ ತಪ್ಪು ತಿಳುವಳಿಕೆಯು ಚಿತ್ರವಾದ ಸಿದ್ಧಾಂತಗಳಿಗೆ ನಡೆಸುತ್ತದೆ, ಅಂದರೆ ದೋಷಪೂರಿತ ಆಹಾರದ ಸೇವನೆಯಿಂದ ವಿಶೇಷ ಪ್ರಯೋಜನವೇನೂ ಆಗುವದಿಲ್ಲ, ಬದಲಿಗೆ ಅದು ಆತ್ಮೀಕವಾಗಿ ನಮ್ಮನ್ನು ರೋಗಗ್ರಸ್ಥರನ್ನಾಗಿ ಮಾಡುತ್ತದೆ(ಇಬ್ರಿಯ-13: 9) ಆದಾಗ್ಯೂ, ಇದು ದೇವರ ಆಲೋಚನೆಗಳನ್ನೂ ಮತ್ತು ಮಾರ್ಗಗಳನ್ನೂ ಗ್ರಹಿಸಿಕೊಳ್ಳುವದಕ್ಕೆ ದೇವರ ಪೂರ್ತಿಸಮಾಲೋಚನೆಯನ್ನು ಅಧ್ಯಯನ ಮಾಡುವದಕ್ಕೆ ಪ್ರಾಮುಖ್ಯವಾದುದಾಗಿದೆ.

## ಸತ್ಯವೇದವನ್ನು ದುರುಪಯೋಗಪಡಿಸಿಕೊಳ್ಳಬೇಡಿರಿ.

ಬರೆಯಲ್ಪಟ್ಟಿರುವ ತನ್ನ ವಾಕ್ಯದ ಮೂಲಕವಾಗಿ ದೇವರು ನಮಗೆ ಮಾರ್ಗದರ್ಶನ ಮಾಡಿ ಮುನ್ನಡೆಸುತ್ತಾನೆ ಎಂದು ಹೇಳಿರುವಾಗ, ಕೆಲವು ಸಲ ಜನರು ಸತ್ಯವೇದದೊಂದಿಗೆ ಭಯಂಕರವಾದ ಸಂಗತಿಗಳನ್ನು ಮಾಡುವದಕ್ಕೆ ಪ್ರಾರಂಭಿಸುತ್ತಾರೆ. ಕೆಲವುಸಲ ಯಾರಾದರೂ ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಇಷ್ಟಪಟ್ಟಾಗ ಅವರು ಸತ್ಯವೇದವನ್ನು ಮುಚ್ಚಿ ನಂತರ ಮನಬಂದಂತೆ ಅದರ ಯಾವುದಾದರು ಒಂದು ಪುಟವನ್ನು ತೆರೆಯುತ್ತಾರೆ, ತಮ್ಮ ಬೆರಳನ್ನು ಎಲ್ಲೋ ಒಂದು ಕಡೆ

ಇಡುತ್ತಾರೆ, ನಂತರ ಅಲ್ಲಿ ವಾಕ್ಯ ಏನು ಬರೆದದೆ ಎಂದು ನೋಡುತ್ತಾರೆ. ಅವರು ಇದನ್ನು ತಮ್ಮ ಜೀವಿತಗಳಿಗೆ ದೇವರ ಮಾರ್ಗದರ್ಶನ ಎಂದು ತೆಗೆದುಕೊಳ್ಳುತ್ತಾರೆ. ಆರಿಸಿಕೊಳ್ಳುವದಕ್ಕೆ ದೇವರು ಇದನ್ನು ಉಪಯೋಗಿಸುವ ವೇಳೆಯಲ್ಲಿ, ಸತ್ಯವೇದವನ್ನು ಈ ರೀತಿಯಾಗಿ ಉಪಯೋಗಿಸುವದಕ್ಕೆ ದೇವರು ನಮ್ಮನ್ನು ಕರೆದಿರುವ ರೀತಿಯು ಇದಲ್ಲ ಎನ್ನುವದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿರಿ. ನಾವು ಆತನ ವಾಕ್ಯವನ್ನು ಓದಬೇಕು, ಧ್ಯಾನ ಮಾಡಬೇಕು ಮತ್ತು ಅಧ್ಯಯನ ಮಾಡಬೇಕು, ಆಗ ನಾವು ಆತನ ವಾಕ್ಯದಿಂದ ಜೀವಿಸುತ್ತೇವೆ, ಚಿಕ್ಕ ಮಕ್ಕಳು ಮಾಡುವ ಹಾಗೆ ಆತನ ವಾಕ್ಯದೊಂದಿಗೆ ಆಟವಾಡಬಾರದು.

ನಾವು ಧರ್ಮಶಾಸ್ತ್ರಗಳನ್ನು ದುರುಪಯೋಗಪಡಿಸಬಾರದು. ಸನ್ನಿವೇಶದ ಹೊರಗೆ ಅವುಗಳನ್ನು ತೆಗೆದುಕೊಳ್ಳುವದು, ಅವುಗಳನ್ನು ತಿರುಚಿ, ತಿರುಗಿಸಿ ನಮ್ಮ ಸ್ವಾರ್ಥ ಆಸಕ್ತಿಗಳಲ್ಲಿ ನಾವು ಯಾವುದನ್ನು ಇಷ್ಟಪಡುತ್ತೇವೋ ಅದಕ್ಕೆ ಅಧಾರವನ್ನಾಗಿ ಅವುಗಳನ್ನು ಮಾಡಿಕೊಳ್ಳುವದು ಸಾಧ್ಯ. ಆದರೆ ಇದನ್ನು ಮಾಡಬೇಡಿರಿ. ಉದಾಹರಣೆಗಾಗಿ, ಒಂದುವೇಳೆ ಒಬ್ಬ ಯೌವನಸ್ಥನು ಒಬ್ಬ ಹುಡುಗಿಯೊಂದಿಗೆ ಪ್ರೀತಿಯಲ್ಲಿ ಬಿದ್ದರೆ, ಬಹುಮಟ್ಟಿಗೆ ಅವನು ಓದುವ ಪ್ರತಿಯೊಂದು ವಾಕ್ಯಭಾಗದಲ್ಲಿಯೂ ಅವಳನ್ನು ನೋಡುವದಕ್ಕೆ ಅವನು ಹವಣಿಸುತ್ತಾನೆ. ಇವಳೇ ತನಗಾಗಿ ಇರುವವಳು ಎನ್ನುವದನ್ನು ದೃಢಪಡಿಸಿಕೊಳ್ಳುವದಕ್ಕೆ ಬಹುಮಟ್ಟಿಗೆ ಸತ್ಯವೇದದ ಪ್ರತಿಯೊಂದು ಪುಟದಲ್ಲಿಯೂ ಒಂದು ವಾಕ್ಯವನ್ನು ಪಡೆದವನಂತೆ ಅವನು ಕಂಡುಬರುತ್ತಾನೆ. ಹಾಗಾಗಿ ಅವಳು ಅವನನ್ನು ಯಾಕೆ ಮದುವೆಯಾಗಬೇಕು ಎನ್ನುವದಕ್ಕೆ ಈ ಮಿತಿಯಿಲ್ಲದ ವಾಕ್ಯದ ಪುಷ್ಟೀಕರಣಗಳನ್ನು ಅವಳಿಗೆ ಕಳುಹಿಸುತ್ತಿರುತ್ತಾನೆ. ಇನ್ನೊಂದು ಕಡೆಯಲ್ಲಿ ಪ್ರೀತಿಯ ಯೌವನಸ್ಥ ಹುಡುಗಿಯು ವಾಕ್ಯದಿಂದ ಯಾವುದೇ ಒಂದು ಪುಷ್ಟೀಕರಣವನ್ನು ಪಡೆದುಕೊಂಡ ಹಾಗೆ ಕಂಡುಬರುವದಿಲ್ಲ. ಅವಳು ಅದೇ ವಾಕ್ಯಗಳನ್ನು ಓದುತ್ತಾಳೆ ಅಲ್ಲಿ ಅವಳಿಗೆ ಮದುವೆಯ ವಿಷಯದಲ್ಲಿ ಏನು ಮಾಡಬೇಕೆಂಬುದಾಗಲೀ ಮತ್ತು ಅವರಿಬ್ಬರ ಕುರಿತು ಹೇಳಿರುವ ಯಾವುದೇ ವಿಷಯವಾಗಲೀ ಅಲ್ಲಿಲ್ಲದಿರುವದು ಅವಳು ಸ್ಪಷ್ಟವಾಗಿ ಕಾಣುತ್ತಾಳೆ. ಬಹುಮಟ್ಟಿಗೆ ಪ್ರತಿಯೊಂದು ವಾಕ್ಯ ಭಾಗದಲ್ಲಿ ಅವಳ ಕುರಿತಾದ ಪ್ರಕಟನೆಗಳನ್ನು ಮತ್ತು ಎಲ್ಲಾ ಸಮಯದಲ್ಲಿ ಅವಳ ದರ್ಶನಗಳನ್ನು ಹೊಂದಿದ್ದ ಈ ಹೆಚ್ಚು ಆತ್ಮೀಕ ಯೌವನಸ್ಥ ಮನುಷ್ಯನಿಂದ ಭಯಂಕರವಾದ ಒತ್ತಡದ ಅಡಿಯಲ್ಲಿ ಅವಳು ಪೂರ್ತಿ ಗಲಿಬಿಲಿಗೊಳಗಾಗಿರುತ್ತಾಳೆ. ಇದು ಒಂದು ಮೋಜಾಗಿ ಕಂಡುಬಂದರೂ, ಇದು ತುಂಬಾ ಅಸಾಧಾರಣವಾದುದಲ್ಲ. ಇದು ವಾಕ್ಯದ ಒಂದು ದುರುಪಯೋಗ. ಇದಕ್ಕಾಗಿಯೇ ಯೌವನಸ್ಥರಿಗೆ ದೇವರ ವಾಕ್ಯವನ್ನು

ಬೋಧಿಸಬೇಕಾದ ಮತ್ತು ದೇವರ ಮಾರ್ಗದರ್ಶನವನ್ನು ಸರಿಯಾದ ರೀತಿಯಲ್ಲಿ ಹೇಗೆ ಪಡೆದುಕೊಳ್ಳಬೇಕೆಂಬುದನ್ನು ಅವರಿಗೆ ಕಲಿಸಬೇಕಾದ ಅಗತ್ಯವಿದೆ. ದೇವರ ವಾಕ್ಯವನ್ನು ಕೇಳುವದಕ್ಕೆ ಮತ್ತು ತಮ್ಮ ಜೀವಿತಗಳಿಗಾಗಿ ಆತನ ಮಾರ್ಗದರ್ಶನವನ್ನು ಪಡೆದುಕೊಳ್ಳುವದಕ್ಕೆ ಹಂಬಲಿಸುವ ಎಲ್ಲಾ ಯೌವನಸ್ಥ ಜನರಿಗೆ ಅನೇಕ ರೀತಿಯಲ್ಲಿ ಈ ಪುಸ್ತಕವು ಪ್ರೀತಿಯಿಂದಲೂ ಮತ್ತು ಸಂತೋಷದಿಂದಲೂ ಸಮರ್ಪಿಸಲ್ಪಡುತ್ತದೆ.

## ಪರ್ಯಾಲೋಚನೆ

1) ನಿಮ್ಮ ಜೀವಿತದ ಈ ಹಂತದಲ್ಲಿ ಯಾವ ಕೆಲವೊಂದು ಪ್ರಮುಖ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಗತ್ಯ ನಿಮಗಿರುತ್ತದೆ? (ಉದಾ: ತಂದೆತಾಯಿ, ಮದುವೆ, ಜೀವನ, ಸಭೆ, ಸೇವೆ, ಮೇಲಾಧಿಕಾರಿ ಇವುಗಳಿಗೆ ಸಂಬಂಧಪಟ್ಟಂತೆ) ಪ್ರತಿಯೊಂದು ಪ್ರಮುಖ ತೀರ್ಮಾನಕ್ಕಾಗಿ ನೀವು ಏನು ತಿಳಿದುಕೊಂಡಿದ್ದೀರೋ ಅದನ್ನು ಬರೆಯುವದಕ್ಕೆ ಪ್ರಯತ್ನಿಸಿರಿ, ಅವು ದೇವರ ವಾಕ್ಯದಲ್ಲಿ ಸಾಮಾನ್ಯವಾದ ಶಿಕ್ಷಣಗಳಾಗಿದ್ದು ನೀವು ಅವುಗಳಿಗೆ ಬದ್ಧವಾಗಿರುವದು ಅಗತ್ಯವೋ?

2) ನೀವು ಮಾಡಬೇಕಾಗಿರುವ ತೀರ್ಮಾನಗಳ ಕುರಿತಾಗಿ ಬರೆಯಲ್ಪಟ್ಟಿರುವ ಆತನ ವಾಕ್ಯಗಳ ಮೂಲಕವಾಗಿ ನಿಮಗೆ ಮಾತಾಡುವಂತೆ ದೇವರನ್ನು ಕೇಳಿಕೊಳ್ಳಿರಿ. ಆತನೊಂದಿಗಿನ ನಿಮ್ಮ ದಿನನಿತ್ಯದ ಸಮಯದಲ್ಲಿ ನೀವು ಓದುವ ಆತನ ವಾಕ್ಯದ ಮೂಲಕವಾಗಲೀ ಅಥವಾ ನಿಮ್ಮ ದಿನದ ಇತರ ಕ್ಷಣಗಳಲ್ಲಿ ವಾಕ್ಯದ ಜಾಗೃತಗೊಳಿಸುಕೆಯ ಮೂಲಕವಾಗಲೀ ಇಲ್ಲವೇ ಪ್ರಸಂಗಿಸಲ್ಪಟ್ಟ ವಾಕ್ಯವನ್ನು ನೀವು ಕೇಳಿಸಿಕೊಳ್ಳುವಾಗಲಾದರೂ ಸಹ ಆತನ ಮಾತನ್ನು ಕೇಳಿಸಿಕೊಳ್ಳುವದಕ್ಕೆ ತೆರೆದವರಾಗಿರ್ರಿ. ಕರ್ತನಿಂದ ನೀವು ಏನು ಕೇಳಿಸಿಕೊಂಡಿದ್ದೀರೋ ಅದನ್ನು

# 4

# ಆತ್ಮದ ಅಂತರಂಗದ ಸಾಕ್ಷಿ

ಎಲ್ಲವೂ ಯೇಸುವೆ ಆಗಿರುವ, ಪವಿತ್ರಾತ್ಮನೆಂಬ ಇನ್ನೊಬ್ಬ ಸಹಾಯಕನನ್ನು ನಮಗೆ ಕಳುಸಿಕೊಡುತ್ತೇನೆಂದು ಕರ್ತನಾದ ಯೇಸು ವಾಗ್ದಾನ ಮಾಡಿದ್ದನು. ನಮ್ಮ ಕುರುಬನಾಗಿರುವ ಕರ್ತನಾದ ಯೇಸು ನಮ್ಮ ಮಾರ್ಗದರ್ಶಕನು. ಪವಿತ್ರಾತ್ಮನೂ ನಮ್ಮ ಮಾರ್ಗದರ್ಶಕನು. ನಮ್ಮ ಕುರುಬನಾಗಿರುವ ಯೇಸು ನಮಗೆ ಏನು ಮಾತಾಡುತ್ತಾನೋ ಅದನ್ನೇ ಪವಿತ್ರಾತ್ಮನು ನಮಗೆ ಮಾತಾಡುತ್ತಾನೆ.

ಯೋಹಾನ–16:13–14

**13–ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು.**

**14–ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೆ ಮಹಿಮೆಪಡಿಸುವನು.**

13ನೆಯ ವಚನದಲ್ಲಿರುವ 'ಮಾರ್ಗದರ್ಶಿ' ಎಂಬ ಶಬ್ದದ ಅರ್ಥವು 'ದಾರಿಯನ್ನು ತೋರಿಸು' ಎಂಬುದಾಗಿದೆ. ಪವಿತ್ರಾತ್ಮನು ನಮ್ಮನ್ನು ಎಲ್ಲಾ ಸತ್ಯಕ್ಕೆ ನಡಿಸುತ್ತಾನೆ. ಪವಿತ್ರಾತ್ಮನು ಎಲ್ಲಾ ಸತ್ಯದೊಳಕ್ಕೆ ನಡಿಸುವ ಕಾರಣದಿಂದ, ನಾವು ಅಗತ್ಯವಾಗಿ ಮಾಡಬೇಕಾದ ಎಲ್ಲಾ ತೀರ್ಮಾನಗಳಲ್ಲಿ ದೇವರಿಗೆ ಸ್ವೀಕಾರಾರ್ಹವಾಗುವಂತ ಮತ್ತು ಮೆಚ್ಚಿಕೆಯುಳ್ಳಂತ ಎಲ್ಲದರೊಳಗೆ ವ್ಯಯಕ್ತಿಕವಾಗಿ ಆತನು ನಮ್ಮನ್ನು ನಡಿಸಲು ಶಕ್ತನಾಗಿರುತ್ತಾನೆ ಮತ್ತು ನಡಿಸುತ್ತಾನೆ ಸಹ. ಆತನು ಕಾಲಕ್ಕಿಂತ ಮೊದಲೇ ನಮಗೆ ಸಂಗತಿಗಳನ್ನು ಸಹ ಪ್ರಕಟಿಸುತ್ತಾನೆ. ಯೇಸು ನಮಗೆ ಏನು ಹೇಳುತ್ತಾನೋ ಅದನ್ನು ತೆಗೆದುಕೊಂಡು ಆತನು ನಮಗೆ ತಿಳಿಸುತ್ತಾನೆ.

1ಕೊರಿಂಥ 2ರಲ್ಲಿರುವ ಈ ವಾಕ್ಯಭಾಗದ ಕಡೆಗೆ ಒಂದು ಹತ್ತಿರದ ಗಮನವನ್ನು ಕೊಡಿರಿ:

1ಕೊರಿಂಥ-2:9-16

**9-ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂತದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ.**

**10-ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ.**

**11-ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ.**

**12-ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು.**

**13-ಇವುಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ.**

**14-ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ; ಅವು ಆತ್ಮಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು.**

**15-ದೇವರಾತ್ಮನಿಂದ ನಡಿಸಿಕೊಳ್ಳುವವನೋ ಎಲ್ಲವನ್ನೂ ವಿಚಾರಿಸಿ ತಿಳುಕೊಳ್ಳುತ್ತಾನೆ; ಆದರೆ ಇವನನ್ನು ಯಾವನಾದರೂ ವಿಚಾರಿಸಿ ತಿಳುಕೊಳ್ಳುವದಿಲ್ಲ.**

**16-ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು.**

ವಚನ 9-10: ದೇವರು ನಮಗಾಗಿ ಸಿದ್ಧಮಾಡಿರುವಂಥ ಸಂಗತಿಗಳನ್ನು ಆತನು ಪವಿತ್ರಾತ್ಮನಿಂದ ನಮಗೆ ಪ್ರಕಟಿಸುತ್ತಾನೆ. 'ಪ್ರಕಟಗೊಂಡದ್ದು' ('apokalupto') ಎಂಬ ಗ್ರೀಕ್ ಶಬ್ದದ ಅರ್ಥ ಮುಚ್ಚಿರುವದನ್ನು ತೆಗೆದು ಹಾಕುವದು, ಮುಸುಕು ತೆಗೆಯುವದು, ಸ್ಪಷ್ಟವಾಗಿ ತೋರಿಸುವದು, ಮೊದಲು ತಿಳಿಯದಿರುವದನ್ನು ಬರಂಗಪಡಿಸುವದು ಎಂಬುದಾಗಿದೆ. ದೇವರು ತನ್ನ ಆತ್ಮನಿಂದ ಸಂಗತಿಗಳನ್ನು ಬಹಿರಂಗಪಡಿಸುತ್ತಾನೆ.

ವಚನ 11-12: ದೇವರ ವಿಷಯಗಳನ್ನು ದೇವರಾತ್ಮನು ಮಾತ್ರ ತಿಳಿದಿರುತ್ತಾನೆ. ನಾವು ದೇವರಾತ್ಮನನ್ನು ಹೊಂದಿಕೊಳ್ಳುವದರಿಂದ ದೇವರು ನಮಗೆ ಉಚಿತವಾಗಿ ಕೊಟ್ಟಿರುವ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ(ನೋಡುತ್ತೇವೆ, ಗ್ರಸಿಕೊಳ್ಳುತ್ತೇವೆ). ಇದು ನಿಶ್ಚಿತವಾಗಿ ನಾವು ವ್ಯಕ್ತಿಗಳಂತೆ ನಡೆಯುವದಕ್ಕೆ ದೇವರು ನಮಗಾಗಿ ಸಿದ್ಧಪಡಿಸಿರುವ ಎಲ್ಲವನ್ನೂ ಒಳಗೊಂಡಿರುತ್ತದೆ(ಎಫೆಸ-2:10). ಇದೆಲ್ಲವನ್ನೂ ಪವಿತ್ರಾತ್ಮನು ನಮಗೆ ತಿಳಿಯಪಡಿಸುತ್ತಾನೆ.

ವಚನ 13-15: ಪವಿತ್ರಾತ್ಮನು ನಮಗೆ ಪ್ರಕಟಪಡಿಸುವ ಸಂಗತಿಗಳು ಆತ್ಮೀಕವಾಗಿ ಗ್ರಹಿಸಲ್ಪಟ್ಟಿರಬೇಕು. ಕೇವಲ ಪ್ರಾಕ್ರತ ಮನಸ್ಸಿನಿಂದ ಜೀವಿಸುವಂತವರು ಪವಿತ್ರಾತ್ಮನು ಪ್ರಕಟಪಡಿಸುವ ಸಂಗತಿಗಳನ್ನು ಗ್ರಹಿಸಿಕೊಳ್ಳುವದಕ್ಕೆ ಮತ್ತು ತಿಳುಕೊಳ್ಳುವದಕ್ಕೆ ಸಮರ್ಥರಾಗಿರುವದಿಲ್ಲ. ನಾವು ಅವುಗಳನ್ನು ಒಪ್ಪಿಕೊಳ್ಳುವದಕ್ಕಿಂತ ಮೊದಲು ಆತ್ಮೀಕ ಜನರ ಹಾಗೆ, ಪ್ರತಿಯೊಂದನ್ನೂ ಪ್ರಮಾಣಿಸಬೇಕು (ಪರೀಕ್ಷಿಸಬೇಕು, ಸಂಶೋಧಿಸಬೇಕು)

ವಚನ 16: ಪತ್ರಾತ್ಮನು ನಮಗೆ ಸಂಗತಿಗಳನ್ನು ಪ್ರಕಟಪಡಿಸಿದ್ದರಿಂದ ನಾವು ಕ್ರಿಸ್ತನ ಮನಸ್ಸನ್ನು ಹೊಂದಿಕೊಂಡಿದ್ದೇವೆ. ಕೊಡಲ್ಪಟ್ಟ ಒಂದು ಸಂಗತಿಯ ಕುರಿತು ನಮ್ಮ ಕರ್ತನಾದ ಯೇಸು ಏನು ಆಲೋಚಿಸುತ್ತಾನೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ.

ಪವಿತ್ರಾತ್ಮನ ಪ್ರಕಟಪಡಿಸುವ ಕಾರ್ಯದ ಕಾರಣದಿಂದ ನಾವು ಹೊಸ ಒಡಂಬಡಿಕೆಯ ವಿಶ್ವಾಸಿಗಳ ಹಾಗೆ ಕ್ರಿಸ್ತನ ಮನಸ್ಸನ್ನು ಹೊಂದಿಕೊಂಡಿದ್ದೇವೆ. ಕ್ರಿಸ್ತನ ಮನಸ್ಸು ನಮಗೆ ದೊರೆಯುವಂತೆ ಪತ್ರಾತ್ಮನು ಮಾಡುತ್ತಾನೆ. ಆತನು ಯೇಸುವಿನ ಆಲೋಚನೆಗಳು, ಅಭಿಪ್ರಾಯಗಳು, ಭಾವನೆಗಳು, ಯೋಜನೆಗಳು, ಉದ್ದೇಶಗಳು, ತೀರ್ಮಾನಗಳು, ಆಶೆಗಳು ಮತ್ತು ನಿರ್ದೇಶಕಗಳನ್ನು ನಮಗೆ ಮುಟ್ಟಿಸುತ್ತಾನೆ.

ದೇವರ ಸಂಗತಿಗಳನ್ನು ಮತ್ತು ಯೇಸುನ ಮನಸ್ಸನ್ನು ಪವಿತ್ರಾತ್ಮನು ನಮಗೆ ಪ್ರಕಟಪಡಿಸುವಂತಹ ಅನೇಕ ವಿಧವಾದ ರೀತಿಗಳಿವೆ. ನಾವು ಮುಂದೆ ತಿಳಿಸುವ ಹಾಗೆ ಪ್ರತ್ಯೇಕ ಅಧ್ಯಾಯಗಳಲ್ಲಿ ಇವುಗಳನ್ನು ವರಿಸುತ್ತೇವೆ: ಪವಿತ್ರಾತ್ಮನ ಅಂತರಂಗದ ಸಾಕ್ಷಿ, ಪವಿತ್ರಾತ್ಮನ ಧ್ವನಿ, ಪವಿತ್ರಾತ್ಮನ ವರಗಳು, ಕನಸುಗಳು, ದರ್ಶನಗಳು ಮತ್ತು ಪ್ರವಾದನೆಗಳು.

ಮೊದಲನೆಯದಾಗಿ ಪವಿತ್ರಾತ್ಮನ ಅಂತರಂಗದ ಸಾಕ್ಷಿಯ ಕುರಿತಾಗಿ ತಿಳಿದುಕೊಳ್ಳೋಣ.

## ಪವಿತ್ರಾತ್ಮನ ಅಂತರಂಗದ ಸಾಕ್ಷಿ

ರೋಮಾ-8:14-16

**14-ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು.**

**15-ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ.**

**16-ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**

ದೇವರ ಮಕ್ಕಳು – ಆತನ ಗಂಡು ಮತ್ತು ಹೆಣ್ಣು ಮಕ್ಕಳಂತೆ ದೇವರ ಕುಟುಂಬಕ್ಕೆ ಸಂಬಂಧಪಟ್ಟ ಜನರು – ಅವರು ದೇವರ ಆತ್ಮನಿಂದ ನಡೆಸಲ್ಪಡುವವರು ಎಂಬ ಸತ್ಯದಿಂದ ಗುಣಲಕ್ಷಣವರಿಸಲ್ಪಟ್ಟವರಾಗಿರುತ್ತಾರೆ. ಆದುದರಿಂದ ನಾವು ದೇವರ ಆತ್ಮನಿಂದ ಮಾರ್ಗದರ್ಶನ ಹೊಂದಿ ನಡೆಸಲ್ಪಡುವ ವಿಶೇಷ ಪ್ರಯೋಜನವನ್ನು ಹೊಂದಿದ್ದೇವೆ. ನಿಜವೇನೆಂದರೆ, ಪವಿತ್ರಾತ್ಮನು ತಾನೇ, ನಮ್ಮನ್ನು ದೇವರ ಮಕ್ಕಳನ್ನಾಗಿ ಮಾಡಿದ್ದಾನೆ. ಆತನು ದತ್ತು ಸ್ವೀಕಾರದ ಆತ್ಮನಾಗಿದ್ದಾನೆ. ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಆತನು ನಮ್ಮ ಆತ್ಮದೊಂದಿಗೆ ಸಾಕ್ಷಿ ಕೊಡುತ್ತಾನೆ (ಜೊತೆಯಾಗಿ ಸಾಕ್ಷಿ ಕೊಡುವದು ಎಂಬುದರ ವಾಸ್ತಕ ಅರ್ಥವೇನೆಂದರೆ, ಜೊತೆ ಸಾಕ್ಷಿಯಿಂದ ಪರೀಕ್ಷಿಸಲ್ಪಡುವದಕ್ಕೆ, ಒಮ್ಮನಸ್ಸಿನ ಸಾಕ್ಷಿಯಿಂದ ದೃಢಪಡಿಸುವದಕ್ಕೆ). ನಾವು ದೇವರ ಮಕ್ಕಳಾಗಿದ್ದೇವೆಂದು ನಾವು ತಿಳಿದು ಕೊಳ್ಳುವ ರೀತಿ – ಅಂತರಂಗದ ಮನವರಿಕೆ, ಅಂತರಂಗದ ತಿಳಿಯುಕೆ, ಅಂತರಂಗದ ಭರವಸೆ – ಇವೆಲ್ಲವೂ ಪತ್ರಾತ್ಮನ ಅಂತರಂಗದ ಸಾಕ್ಷಿಯ ಮೂಲಕ ಬರುತ್ತವೆ. ಅದಕಾರಣ ನಾವು ಮುಕ್ತಾಯಗೊಳಿಸುವದೇನೆಂದರೆ, ನಮ್ಮನ್ನು ತನ್ನ ಮಕ್ಕಳನ್ನಾಗಿ ದತ್ತು ತೆಗೆದು ಕೊಳ್ಳುವದನ್ನು ದೃಢಪಡಿಸುವದಕ್ಕೆ ಮಾತ್ರವಲ್ಲ ಆದರೆ ನಮಗೆ ಮಾರ್ಗದರ್ಶನ ಮಾಡಿ ನಮ್ಮನ್ನು ಮುನ್ನಡಿಸುವದಕ್ಕೆ ಸಹ ಪವಿತ್ರಾತ್ಮನು ಅಂತರಂಗದ ಸಾಕ್ಷಿಯನ್ನು ತನ್ನ ಪ್ರಾಥಮಿಕ ರೀತಿಗಳಲ್ಲಿ ಒಂದನ್ನಾಗಿ ಉಪಯೋಗಿಸುತ್ತಾನೆ, ಆದರಿಂದಲೇ ಈಗ ನಾವು ಆತನ ಮಕ್ಕಳಾಗಿದ್ದೇವೆ.

ಪವಿತ್ರಾತ್ಮನು ನಮ್ಮ ಆತ್ಮದಲ್ಲಿ ಕೊಟ್ಟಿರುವಂತಹ ಮನವರಿಕೆ, ಭರವಸೆಯನ್ನು ತಿಳಿಯುವದು, ಅಭಿಪ್ರಾಯಗಳು, ಭಾವನೆಗಳು ಮತ್ತು ಸಂವೇದನೆಗಳ ಮೂಲಕವಾಗಿ ಅಂತರಂಗದ ಸಾಕ್ಷಿಗಳು ನಮಗೆ ಬರುತ್ತವೆ. ನೀವು ಪವಿತ್ರಾತ್ಮನಿಂದ ಒಂದು ಮೃದುವಾದ ಸ್ಪರ್ಶ, ಒಂದು ಮೃದುವಾದ ಪೆಟ್ಟು, ಒಂದು ಮೃದುವಾದ ತಿವಿತ ಅಥವಾ ಒಂದು ಮೃದುವಾದ ತಲೆದೂಗುಕೆ ಇವುಗಳನ್ನು ಕಲ್ಪಿಸಿಕೊಳ್ಳಬಹುದು.

ನಮ್ಮ ಸ್ವಂತ ಭಾವೋದ್ರೇಕಗಳಲ್ಲಿ ನಾವು ಅನುಭವಪಡುವಂತದ್ದರ ಹಾಗೆಯೇ ಇವುಗಳಲ್ಲ ಎಂಬುದನ್ನು ನಾವು ತಿಳಿದುಕೊಳ್ಳುವದು ಪ್ರಾಮುಖ್ಯವಾದುದಾಗಿದೆ. ನಾವು ನಮ್ಮ ಆತ್ಮದಲ್ಲಿ ಹೊಂದಿರುವ ನಮ್ಮ ಸ್ವಂತ ಭಾವನೆಗಳು, ಆಶೆಗಳು ಮತ್ತು ಆಲೋಚನೆಗಳೊಂದಿಗೆ ಪವಿತ್ರಾತ್ಮನ ಅಂತರಂಗದ ಸಾಕ್ಷಿಯನ್ನು ಗೊಂದಲಗೊಳಿಸಿಕೊಳ್ಳದೇ ಜಾಗರೂಕರಾಗಿರಬೇಕು.

1ಕೊರಿಂಥ–6:17

**ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ.**

ನಾವು ಹೊಸದಾಗಿ ಹುಟ್ಟಿದ ನಂತರ ಆತ್ಮೀಕವಾಗಿ ನಮಗೆ ಒಂದು ಸಂಗತಿ ಸಂಭವಿಸುತ್ತದೆ, ಅದೇನೆಂದರೆ ನಾವು ಕರ್ತನೊಂದಿಗೆ ಒಂದೇ ಆತ್ಮವಾಗಿರುತ್ತೇವೆ, ಅಥವಾ ಆತ್ಮೀಕವಾಗಿ ಆತನೊಂದಿಗೆ ಒಬ್ಬರಾಗಿರುತ್ತೇವೆ. ಆತ್ಮನಾಗಿರುವ ಆತನೊಂದಿಗೆ ನಮ್ಮ ಆತ್ಮವು ಜೊತೆಯಾಗಿ ಸೇರಿ ಒಂದೇ ಆತ್ಮವಾಗುತ್ತದೆ. ಆದಕಾರಣ ಇದು ಆತನು ನಮ್ಮೊಂದಿಗೆ ಮತ್ತು ನಾವು ಆತನೊಂದಿಗೆ ಆಪ್ತ ಸಂಭಾಷಣೆ ಮಾಡುವಂತದ್ದಾಗಿದೆ. ಇದು ಆತನು ನಮ್ಮೊಂದಿಗೆ ಮಾತಾಡುವಂತದ್ದಾಗಿದೆ. ಆತನು ಮಾತಾಡುವಂತ ರೀತಿಗಳಲ್ಲಿ ಒಂದು, ಆತ್ಮನ ಅಂತರಂಗದ ಸಾಕ್ಷಿಯಿಂದ ಮಾತಾಡುವಂತದ್ದಾಗಿದೆ.

ಪವಿತ್ರಾತ್ಮನ ಅಂತರಂಗದ ಸಾಕ್ಷಿಯು ನಮ್ಮ ಆತ್ಮಕ್ಕೆ ಸಂಪರ್ಕಿಸುವಂತಹ ಅನೇಕ ವಿವಿಧ ರೀತಿಗಳ ಪಟ್ಟಿಯನ್ನು ನಾವು ಮಾಡಿದ್ದೇವೆ. ಈ ಪಟ್ಟಿಯು ದಣಿವನ್ನುಂಟುಮಾಡುವಂತದ್ದಲ್ಲ, ಆದರೆ ಆತ್ಮನ ಅಂತರಂಗದ ಸಾಕ್ಷಿಯನ್ನು ನಾವು ಹೊಂದಿಕೊಳ್ಳುವಂತಹ ಕೆಲವು ಸಾಮಾನ್ಯವಾದ ರೀತಿಗಳನ್ನು ಒಳಗೊಂಡಿದೆ.

1. ವಾಕ್ಯದ ಜಾಗೃತಗೊಳಿಸುವಿಕೆ
2. ಒಳಗಿನ ಭರವಸೆ
3. ಒಳಗಿನ ಅಪೇಕ್ಷೆ
4. ಒಳಗಿನ ತಿಳಿಯುವಿಕೆ
5. ಒಳಗಿನ ತೀವ್ರತೆ
6. ಒಳಗಿನ ಪ್ರೇರಿಸುವಿಕೆ
7. ಒಳಗಿನ ಮುಂಚಿತವಾದ ತಿಳುವಳಿಕೆ
8. ಒಳಗಿನ ಎಚ್ಚರಿಕೆ

ಪವಿತ್ರಾತ್ಮನ ಅಂಗರಂಗದ ಸಾಕ್ಷಿಯನ್ನು ಗುರುತಿಸುವದಕ್ಕೆ ಮತ್ತು ತಿಳಿದುಕೊಳ್ಳುವದಕ್ಕೆ ನಮಗೆ ಸಹಾಯವಾಗುವಂತೆ ನಾವು ಕೆಲಸ ಮಾಡದಿರುವ ವಿಷಯಗಳನ್ನು ಹೊಂದಿದ್ದೇವೆ. ಆಗಾಗ್ಗೆ ನಾವು ಮಕ್ಕಳ ಹಾಗೆ ನಮ್ಮ ಸ್ವಾಸ್ಥ್ಯದಲ್ಲಿ ನಡೆಯುವದಕ್ಕೆ ಸಮರ್ಥರಾಗಿರುವದಿಲ್ಲ ಯಾಕೆಂದರೆ ಈ ಸಂಗತಿಗಳ ಪ್ರಕಟನೆಯನ್ನು ಯಾರೊಬ್ಬರೂ ನಮ್ಮೊಂದಿಗೆ ಹಂಚಿಕೊಂಡಿಲ್ಲ. ಯಾವುದು ನಮ್ಮದಾಗಿದೆಯೋ ಅದಕ್ಕಿಂತ ತುಂಬಾ ಕೆಳಗೆ ನಾವು ಜೀವಿಸುತ್ತೇವೆ, ಮತ್ತು ನಾವು ನಿಜವಾಗಿಯೂ ಅವುಗಳಿಂದ ಬಹಳವಾಗಿ ತಪ್ಪಿಹೋಗಿದ್ದೇವೆ ಎಂಬುದನ್ನು ಸಹ ನಾವು ತಿಳಿದಿರುವದಿಲ್ಲ. ಸಾಮಾನ್ಯವಾದ

ಕ್ರೈಸ್ತ ಜೀವಿತದ ನಮ್ಮ ತಿಳುವಳಿಕೆಯು ತುಂಬಾ ಮಿತಿಯುಳ್ಳದ್ದಾಗಿದೆ, ಯಾಕೆಂದರೆ ನಮ್ಮದಾಗಿರುವಂತದ್ದರ ಪ್ರಕಟನೆಯನ್ನು ನಾವು ಹೊಂದಿಕೊಂಡಿಲ್ಲ. ಆದಕಾರಣ, ಪ್ರಾಯೋಗಿಕವಾದ ಮತ್ತು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಕೆಲಸ ಮಾಡದ ವಿಷಯಗಳು, ದೇವರ ಆತ್ಮನಿಂದ ನಡಿಸಲ್ಪಡುವದಕ್ಕೆ ಅನೇಕ ದೇವರ ಮಕ್ಕಳಿಗೆ ಸುಲಭವಾಗುವಂತೆ ಮಾಡುವದಕ್ಕೆ ಮಾತ್ರ ಇದು ಕೆಲಸ ಮಾಡುತ್ತದೆ ಎಂಬುದನ್ನು ನಾವು ನಂಬಬೇಕು.

ಆದಾಗ್ಯೂ ಪವಿತ್ರಾತ್ಮನ ಅಂತರಂಗದ ಸಾಕ್ಷಿಯು ನಮಗೆ ಬರುವಂತಹ ಎಂಟು ರೀತಿಗಳನ್ನು ನಾವು ಪಟ್ಟಿ ಮಾಡಿದ್ದೇವೆ, ಆಗಾಗ್ಗೆ ಇವು ಒಟ್ಟಿಗೆ ಕೆಲಸಮಾಡುತ್ತವೆ. ಆದ್ದರಿಂದ ಪವಿತ್ರಾತ್ಮನು ಈ ಎಂಟು ರೀತಿಗಳಲ್ಲಿ ಒಂದಕ್ಕಿಂತಲೂ ಹೆಚ್ಚಾಗಿ ಏಕಕಾಲದಲ್ಲಿ ನಮ್ಮ ಆತ್ಮಕ್ಕೆ ಸಾಕ್ಷಿಕೊಡುವವನಾಗಿದ್ದಾನೆ. ಅದೂ ಅಲ್ಲದೆ, ಪವಿತ್ರಾತ್ಮನ ಅಂತರಂಗದ ಸಾಕ್ಷಿಯು, ನಾವು ಮುಂದಿನ ಅಧ್ಯಾಯದಲ್ಲಿ ಚರ್ಚಿಸುವಂತಹ ಆತ್ಮನ ಧ್ವನಿಯೊಂದಿಗೆ ಜೊತೆಗೂಡಿ ಬರುತ್ತದೆ ಎನ್ನುವದನ್ನೂ ಸಹ ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆದ್ದರಿಂದ, ದೇವರು ನಮಗೆ ವೈವಿಧ್ಯವಾದ ರೀತಿಗಳಲ್ಲಿ ಮಾತಾಡುತ್ತಾನೆ ಮತ್ತು ನಾವು ಇವುಗಳನ್ನು ಗುರುತಿಸಬೇಕು ಹಾಗೂ ನಾವು ನಮ್ಮ ಜೀವಿತಗಳಿಗೆ ಆತನ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಗ್ರಹಿಸಿ ಹೊಂದಿಕೊಳ್ಳುವಂತೆ ಅವೆಲ್ಲವುಗಳನ್ನೂ ಒಟ್ಟಿಗೆ ಇಡಬೇಕು.

ವಾಕ್ಯದ ಜಾಗೃತಗೊಳಿಸುವಿಕೆ ಹೊರತಾಗಿ, ಉಳಿದ ಅಂತರಂಗದ ಸಾಕ್ಷಿಗಳಿಗಾಗಿ ನಾವು ನಮ್ಮ ಆತ್ಮಗಳಲ್ಲಿ ಏನು ಅರ್ಥ ಮಾಡಿಕೊಂಡಿದ್ದೇವೆ ಎನ್ನುವದನ್ನು ಊರ್ಜಿತಗೊಳಿಸುವದಕ್ಕೆ ಸಮಂಜಸವಾದ ತಪಾಸಣೆಗಳನ್ನು ಮಾಡಬೇಕು. ನಾವು ಇದನ್ನು ಈ ಅಧ್ಯಾಯದ ಕೊನೆಯಲ್ಲಿ ಚರ್ಚಿಸೋಣ.

## 1) ವಾಕ್ಯದ ಜಾಗೃತಗೊಳಿಸುವಿಕೆ

ನಾವು ಇದನ್ನು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದ್ದೇವೆ. ಒಂದು ತೀರ್ಮಾನ ಮಾಡಬೇಕಾಗಿರುವದಕ್ಕೆ ನೀವು ಪ್ರಯತ್ನಿಸುತ್ತಿರುವಂತಹ ವಿಷಯಕ್ಕೆ ಸಂಬಂಧಿಸಿದಂತೆ ಪವಿತ್ರಾತ್ಮನು ಒಂದು ನಿರ್ಧಿಷ್ಟವಾದ ವಾಕ್ಯವನ್ನು ನಿಮಗೆ ಮೃದುವಾಗಿ ನೆನಪಿಸುತ್ತಾನೆ. ವಾಕ್ಯವು ನಿಮ್ಮ ಆತ್ಮದಲ್ಲಿ ಬರುವದಕ್ಕೆ ದೇವರಾತ್ಮನು ಕಾರಣನಾಗಿರುತ್ತಾನೆ. ಈ ಜಾಗೃತಗೊಳಿಸುಕೆಯು ಸಾಮಾನ್ಯವಾಗಿ ತುಂಬಾ ಮೃದುವಾಗಿ ಸಂಭಸುತ್ತಿರುತ್ತದೆ, ಒಂದು ವೇಳೆ ನಾವು ನಮ್ಮ ಆತ್ಮದಲ್ಲಿ ಸೂಕ್ಷ್ಮ ಗ್ರಹಿಕೆಯಿಲ್ಲದವರಾಗಿದ್ದರೆ, ಇದನ್ನು ಕಳೆದುಕೊಳ್ಳುವದಕ್ಕೆ ನಾವು ಉದ್ದೇಶಿಸಿದವರಾಗುತ್ತೇವೆ.

## 2) ಒಳಗಿನ ಭರವಸೆ

ಫಿಲಿಪ್ಪಿ–4:6–7

**6–ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. 7–ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುನಲ್ಲಿ ಕಾಯುವದು.**

ಕೊಲೊಸ್ಸೆ–3:15

**ಕ್ರಿಸ್ತನಿಂದಾದ ಸಮಾಧಾನವು ನಿಮ್ಮ ಹೃದಯಗಳಲ್ಲಿ ಯಜಮಾನನಂತಿದ್ದು ತೀರ್ಪುಹೇಳಲಿ; ನೀವು ಒಂದೇ ದೇಹಕ್ಕೆ ಸೇರಿದವರಾದದರಿಂದ ಸಮಾಧಾನದಿಂದಿರುವದಕ್ಕಾಗಿ ಕರೆಯಲ್ಪಟ್ಟಿರಿ. ಇದಲ್ಲದೆ ಕೃತಜ್ಞತೆಯುಳ್ಳವರಾಗಿರ್ರಿ.**

ವಿಶ್ವಾಸಿಗಳು ತಮ್ಮ ಹೃದಯಗಳಲ್ಲಿ ಮತ್ತು ಮನಸ್ಸುಗಳಲ್ಲಿ ದೇವರ ಸಮಾಧಾನದೊಂದಿಗೆ ನಡೆಯುವವರಾಗಿರಬೇಕು ಎಂದು ಈ ಎರಡು ವಾಕ್ಯಗಳು ನಮಗೆ ಕಲಿಸುತ್ತವೆ. ಫಿಲಿಪ್ಪಿ–4:6ರಲ್ಲಿರುವಂತೆ ನಾವು ನಮ್ಮ ಚಿಂತೆಗಳನ್ನು ಬಿಟ್ಟುಬಿಟ್ಟಾಗ, ನಾವು ದೇವರ ಸಮಾಧಾನವನ್ನು ಅನುಭವಪಡುತ್ತೇವೆ, ಹಾಗಾಗಿ ಅದು ನಮ್ಮನ್ನು ತುಂಬಿಕೊಳ್ಳುತ್ತದೆ ಮತ್ತು ಇದು ನಿಜವಾಗಿಯೂ 'ಜಾಗರೂಕ ಸ್ಥಿತಿ' ಎನ್ನುವದಕ್ಕೆ ಆಧಾರವಾಗಿದೆ, ಗ್ರೀಕ್‌ನಲ್ಲಿ ಇದರ ಅರ್ಥ, ಮುನ್ನಡೆಯಲ್ಲಿರುವ ಒಬ್ಬ ಕಾವಲುಗಾರ ಎಂಬುದಾಗಿದೆ, ಅಂದರೆ, ಒಬ್ಬ ಕಾವಲುಗಾರನಂತೆ ಕಾವಲು ಕಾಯುವದಕ್ಕೆ ಹತ್ತಿ ಹೋಗುವದು, ಅಂಚುಕಟ್ಟುವದರಲ್ಲಿ ಮತ್ತು ನಮ್ಮ ಮನಸ್ಸು ಮತ್ತು ಹೃದಯಗಳನ್ನು ರಕ್ಷಿಸುವದಕ್ಕೆ ಕಾಯುವದು. ದೇವರ ಸಮಾಧಾನವು ನಮ್ಮ ಎಲ್ಲಾ ಗೊಂದಲಗಳನ್ನು ಹೊರಗೆ ಹಾಕುತ್ತಾ, ನಮ್ಮ ಮನಸ್ಸು ಮತ್ತು ಹೃದಯಗಳನ್ನು ಕಾಯುವದಕ್ಕೆ ಆಧಾರವಾಗಿದೆ!

ದೇವರಿಂದ ಬರುವ ಈ ಸಮಾಧಾನವು ನಮ್ಮ ಹೃದಯಗಳಲ್ಲಿ ಇನ್ನೊಂದು ಪ್ರಾಮುಖ್ಯವಾದ ಪಾತ್ರವನ್ನು ಸಹ ನಡಿಸುತ್ತದೆ. ಕೊಲೊಸ್ಸೆ–3:15ರ ಪ್ರಕಾರ, ಇದು ನಮ್ಮ ಹೃದಯಗಳಲ್ಲಿ 'ಆಳ್ವಿಕೆ' ನಡಿಸುತ್ತದೆ. ಗ್ರೀಕ್‌ನಲ್ಲಿ 'ಆಳ್ವಿಕೆ' ಎಂಬ ಶಬ್ದದ ಅರ್ಥವೇನೆಂದರೆ, ಒಬ್ಬ ನಿರ್ಣಾಯಕನಾಗುವದಕ್ಕೆ, ತೀರ್ಮಾನಿಸುವದಕ್ಕೆ, ಇತ್ಯರ್ಥಪಡಿಸುವದಕ್ಕೆ, ನಿರ್ದೇಶಿಸುವದಕ್ಕೆ, ನಿಯಂತ್ರಿಸುವದಕ್ಕೆ, ವಾದ ಬಗೆಹರಿಸುವದಕ್ಕೆ, ಮತ್ತು ಆಳುವದಕ್ಕೆ ಎಂಬುದಾಗಿದೆ. ಆದ್ದರಿಂದ ದೇವರ ಸಮಾಧಾನವು ನಮ್ಮ ಹೃದಯಗಳಲ್ಲಿ ಒಂದು ನಿರ್ಣಾಯಕವಾಗಿ, ನಿರ್ದೇಶಿಸುವದಾಗಿ, ಇತ್ಯರ್ಥಪಡಿಸುವದಾಗಿ ಮತ್ತು ಸಂಗತಿಯನ್ನು ತೀರ್ಮಾನಿಸುವದಾಗಿ ಕೆಲಸ ಮಾಡುತ್ತದೆ.

ಹಾಗಾಗಿ ನೀವು ಒಂದು ನಿಶ್ಚಿತ ತೀರ್ಮಾನವನ್ನು ಆಲೋಚಿಸುವಾಗ, ಕ್ರಿಯೆಯ ಒಂದು ಅವಧಿಯ ಮೇಲೆ ತೀರ್ಮಾನಿಸುವಾಗ, ಅಥವಾ ಒಂದು ಪರಿಸ್ಥಿತಿಯ ಮಧ್ಯದಲ್ಲಿ ಒಬ್ಬ ನಿರ್ಣಾಯಕರಂತೆ ಕೆಲಸ ಮಾಡುವಾಗ, ಸಂಗತಿಯನ್ನು ನಿರ್ದೇಶಿಸುವಾಗ, ನಿಶ್ಚಯಿಸುವಾಗ ಮತ್ತು ತೀರ್ಮಾನಿಸುವಾಗ ನಿಮ್ಮ ಹೃದಯಗಳಲ್ಲಿ ಪವಿತ್ರಾತ್ಮನಿಂದ ಸಮಾಧಾನದ ಪ್ರಸನ್ನತೆ ಅಥವಾ ಅನುಪಸ್ಥಿತಿ (ಸ್ತಬ್ದತೆ, ನಿಶ್ಯಬ್ದತೆ) ಇರುತ್ತದೆ. ನಾವು ಇದನ್ನು ಪವಿತ್ರಾತ್ಮನ ಅಂತರಂಗದ ಸಾಕ್ಷಿಯಿಂದ ನಮಗೆ ತರಲ್ಪಟ್ಟ ಒಳಗಿನ ಭರವಸೆಯ ಹಾಗೆ ಎಂದು ಹೇಳಬೇಕು.

ನಾವು ಆತ್ಮನಲ್ಲಿ ಜೀವಿಸುವವರಾದರೆ, ಆತ್ಮನಲ್ಲಿ ನಡೆಯುತ್ತೇವೆ ಮತ್ತು ನಡೆಸಲ್ಪಡುತ್ತೇವೆ (ಗಲಾತ್ಯ-5:16,18,25). ನಾವು ಆತ್ಮನಲ್ಲಿ ನಡೆಯುವವರಾದರೆ, ಅದರ ಶಿಫಾರಸ್ಸು ಮತ್ತು ನಿರ್ದೇಶನದ ಅಡಿಯಲ್ಲಿ ಅದಕ್ಕೆ ಅಧೀನರಾಗುತ್ತೇವೆ ಮತ್ತು ಆತ್ಮನಿಂದ ನಡಿಸಲ್ಪಟ್ಟು ಸಂತೋಷ ಮತ್ತು ಸಮಾಧಾನವನ್ನು ಒಳಗೊಂಡಿರುವ ಆತ್ಮನ ಫಲವನ್ನು ನಾವು ಹೊಂದಿಕೊಳ್ಳುತ್ತೇವೆ (ಗಲಾತ್ಯ-5:22-23).

ಆದ್ದರಿಂದ ನೀವು ನಿಮ್ಮ ತೀರ್ಮಾನವನ್ನು ತೆಗೆದುಕೊಳ್ಳುವದಕ್ಕೆ ಹೋಗುವ ಸಂದರ್ಭದಲ್ಲಿ ಪವಿತ್ರಾತ್ಮನಿಂದ ಬಂದಂತ ಸಂತೋಷ ಮತ್ತು ಸಮಾಧಾನದ ಮೂಲಕ ಅಂತರಂಗದ ಸಾಕ್ಷಿಯು ಕೊಟ್ಟಿರುವ ಭರವಸೆಯನ್ನು ನೀವು ಹೊಂದಿದ್ದೀರೋ ಎಂಬುದನ್ನು ಗಮನಿಸಿರಿ. ನೀವು ಆತನ ಸಮಾಧಾನ ಮತ್ತು ಸಂತೋಷವನ್ನು ಹೊಂದಿದ್ದರೆ, ನೀವು ಏನು ಮಾಡಬೇಕೆಂದು ನಿಶ್ಚಿಸಿಕೊಂಡಿದ್ದೀರೋ ಅದನ್ನು ಮಾಡುವದಕ್ಕೆ ಮುಂದುವರಿಯಿರಿ. ಒಂದು ವೇಳೆ ನೀವು ಸಮಾಧಾನವನ್ನೂ ಮತ್ತು ಸಂತೋಷವನ್ನು ಹೊಂದಿ ಕೊಳ್ಳುವದರಲ್ಲಿ ಸೋತುಹೋಗಿದ್ದರೆ, ತೊಂದರೆಗೊಳಗಾದ, ಗಲಿಬಿಲಿಗೊಳಗಾದ ಇತ್ಯಾದಿ ಬೇರೆ ರೀತಿಯಾಗಿ ಅನುಭವಪಡುತ್ತೀರಿ, ಈ ಕಾರಣದಿಂದ ಮುಂದುವರಿಯಬೇಡಿರಿ. ಕಾಯಿರಿ. ತೀರ್ಮಾನ ಮಾಡುವರದಲ್ಲಿ ನೀವು ಮುಂದೆ ಹೋಗಬಾರದು ಅಥವಾ ಒಳ್ಳೆಯ ಸಮಯಕ್ಕಾಗಿ ನೀವು ಕಾಯುವವರಾಗಬೇಕು.

## 3) ಒಳಗಿನ ಆಶೆ

ಕೀರ್ತನೆ- 37:4

**ಆಗ ಯೆಹೋವನಲ್ಲಿ ಸಂತೋಷಿಸು; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು.**

'ಕೊಡುವದು' ಎಂಬ ಶಬ್ದವು ಒಂದು ತುಂಬಾ ವಿಶಾಲವಾದ ಅರ್ಥವನ್ನು ಹೊಂದಿದ್ದು ಇಡುವದು, ಮಾಡುವದು, ಕಾರಣ, ಸಂಗ್ರಹ ಎನ್ನುವದನ್ನೂ ಸಹ

ಇದು ಒಳಗೊಂಡಿದೆ. ಆದ್ದರಿಂದ ನಾವೇ ದೇವರಲ್ಲಿ ಸಂತೋಷಿಸುವ ಹಾಗೆ ನಮ್ಮನ್ನು ಮಾಡಿಕೊಂಡಾಗ ಆತನು ನಮ್ಮ ಹೃದಯಗಳ ಆಶೆಗಳನ್ನು ಮಂಡಿಸುತ್ತಾನೆ, ಕಾರ್ಯರೂಪಕ್ಕೆ ತರುತ್ತಾನೆ. ನಂತರ ನಿಶ್ಚಿತವಾಗಿ, ಅವು ಮುಂದೆ ಸಾಗುವದಕ್ಕೆ ಆತನು ಕಾರಣನಾಗುತ್ತಾನೆ ಮತ್ತು ಅದೇ ರೀತಿಯಾಗಿ ನಮ್ಮ ಜೀವಿತಗಳ ಈ ಆಶೆಗಳ ನೆರವೇರಿಕೆಯನ್ನು ದಯಪಾಲಿಸುತ್ತಾನೆ.

ಜ್ಞಾನೋಕ್ತಿ–10:24

**ದುಷ್ಟನಿಗೆ ಶಂಕಿಸಿದ್ದೇ ಸಂಭಸುವದು; ಶಿಷ್ಟನಿಗೆ ಇಷ್ಟವು ಲಭಿಸುವದು.**

ಯೋಹಾನ–15:7

**ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು.**

ನಾವು ಏನು ಆಶೆಪಡುತ್ತೇವೋ ಅದನ್ನು ಹೊಂದಿಕೊಂಡಾಗ ಈ ವಾಕ್ಯಗಳು ಒಂದು ಖಾಲಿ ಚೆಕ್ ನ ಹಾಗೆ ಕಾಣಿಸುತ್ತವೆ ಎಂದು ಇದು ತಿಳಿಸುತ್ತದೆ. ಹೇಗಿದ್ದರೂ, ನಾವು ನೀತಿವಂತರು ಎಂಬ ಅರ್ಹತೆಯುಳ್ಳವರನ್ನು ಅಥವಾ ನಾವು ಆತನಲ್ಲಿ ಮತ್ತು ಆತನ ವಾಕ್ಯಗಳು ನಮ್ಮಲ್ಲಿ ನೆಲೆಗೊಂಡಿರುವದನ್ನು ಗಮನಿಸಬೇಕು. ಈ ರೀತಿಯಲ್ಲಿ ನಾವು ನಡೆಯುವಾಗ, ಪವಿತ್ರಾತ್ಮನು ಅಂತರಂಗದ ಸಾಕ್ಷಿಯ ಲಕ್ಷಣಗಳ ಮೂಲಕ ನಮ್ಮ ಹೃದಯಗಳಲ್ಲಿ ಸರಿಯಾದ ಆಶೆಗಳನ್ನು ಇಡುತ್ತಾನೆ ಮತ್ತು ಸೃಷ್ಟಿಸುತ್ತಾನೆ. ಆತನ ಆತ್ಮನಿಂದ ನಮ್ಮಲ್ಲಿ ಹುಟ್ಟಿದ ಈ ದೈವಿಕ ಆಶೆಗಳನ್ನು ನಾವು ಗುರುತಿಸಬೇಕು ಮತ್ತು ನಂತರ ಇವುಗಳು ಸಂಭವಿಸುವದನ್ನು ನೋಡುವದಕ್ಕೆ ದೇವರನ್ನು ಅನುಸರಿಸಬೇಕು.

## ಅಕ್ಟೋಬರ್ 1981 : ಮೊದಲಿನ ಆಶೆಗಳು

ಅಕ್ಟೋಬರ್ 1981 ರಲ್ಲಿ ನನ್ನ ಹದಿಮೂರನೆಯ ಹುಟ್ಟುಹಬ್ಬಕ್ಕಿಂತ ಕೇವಲ ಒಂದು ತಿಂಗಳು ಮೊದಲು ಕರ್ತನು ನನ್ನ ಜೀವಿತವನ್ನು ತುಂಬಾ ಸರಳವಾದ ರೀತಿಯಲ್ಲಿ ಮುಟ್ಟಿದನು. ಮೊದಲಿನ ಆಶೆಗಳಲ್ಲಿ ಒಂದಾದ ಸುವಾರ್ತೆಯನ್ನು ಹಂಚುವ ಆಶೆಯು ನನ್ನೊಳಗೆ ಜೀವಂತವಾಗಿ ಬಂದಿತು. ಸುವಾರ್ತೆಯನ್ನು ಸಾರುವದಕ್ಕೆ ಹೋಗು ಎಂದು ಯಾರೊಬ್ಬರು ನನಗೆ ಹೇಳಲಿಲ್ಲ, ಇದು ಕೇವಲ ನನ್ನೊಳಗಿಂದಲೇ ಬಂದಿತು. ನಾನು ಈ ಆಶೆಯನ್ನು ಹಿಂಬಾಲಿಸಿದೆ ಮತ್ತು ಸುವಾರ್ತೆ ಸಾರುವದಕ್ಕೆ ಪ್ರಾರಂಭಿಸಿ ನನ್ನ ಅನೇಕ ಯೌವನಸ್ಥ ಸ್ನೇಹಿತರನ್ನು ಕರ್ತನ ಕಡೆಗೆ ನಡಿಸಿದೆ. ಆತನ ವಾಕ್ಯವನ್ನು ಬೋಧಿಸುವ ಒಂದು ಆಸೆಯು ತಕ್ಷಣವೇ ಬಂತು ನಾನು ಆ ಆಶೆಯನ್ನೂ ಹಿಂಬಾಲಿಸಿ ಅದನ್ನೂ

ಮಾಡುವದಕ್ಕೆ ಪ್ರಾರಂಭಿಸಿದೆ. ನನ್ನ ಹದಿಮೂರನೆಯ ವಯಸ್ಸಿನಿಂದಲೇ ನಾನು ಪ್ರಸಂಗಿಸುವದನ್ನೂ ಮತ್ತು ಬೋಧಿಸುವದನ್ನೂ ಪ್ರಾರಂಭಿಸಿದೆ. ಆ ಸಮಯದಲ್ಲಿ, ನನ್ನ ಜೀವನದಲ್ಲಿ ನಾನು ಒಬ್ಬ ಸಭಾಪಾಲಕ, ಅಥವಾ ಒಬ್ಬ ಬೋಧಕ ಇಲ್ಲವೇ ಒಬ್ಬ ಪ್ರಸಂಗಿಯಾಗುವ, ದೇವರ ಕರೆಯ ಯಾವುದೇ ತಿಳುವಳಿಕೆಯನ್ನು ಹೊಂದಿರಲಿಲ್ಲ. ನಾನು ಕೇವಲ ನನ್ನ ಹೃದಯದಲ್ಲಿ ಹುಟ್ಟಿನ ಆಶೆಗಳನ್ನು ಅನುಸರಿಸಿದೆ ಕೊನೆಗೆ ಅವು ನನ್ನ ಜೀವಿತಕ್ಕಾಗಿ ದೇವರ ನಿರ್ದೇಶನ ಮತ್ತು ಉದ್ದೇಶವನ್ನು ಕಂಡುಕೊಳ್ಳುವದಕ್ಕೆ ನನಗೆ ಸಹಾಯಕವಾದವು.

ಅಂದಿನಿಂದ, ಆತ್ಮನ ಅಂತರಂಗದ ಸಾಕ್ಷಿಯಿಂದ ಜನನವಾದ ಒಂದು ಆಶೆಯಿಂದ ಆಗಾಗ್ಗೆ ಉತ್ಪತ್ತಿಯಾಗುತ್ತಿದ್ದ ಅನೇಕ ಸಂಗತಿಗಳನ್ನು ನಾನು ಮಾಡಿದೆ, ಇದರಿಂದ ನಾನು ಆತನಲ್ಲಿ ಸಂತೋಷಿಸುತ್ತಿದ್ದೆ.

## 1985-86 : ಒಬ್ಬ ಉದ್ಯೋಗಸ್ಥನಾಗಬೇಕು ಮತ್ತು ದೇವರ ಸೇವೆಯನ್ನು ಮಾಡಬೇಕು ಎನ್ನುವ ಆಶೆ

ನಾನು ಬೆಂಗಳೂರಿನ ಬಿಷಪ್ ಕಾಟನ್ ಬಾಯ್ಸ್ ಹೈಸ್ಕೂಲ್‌ನಲ್ಲಿ ನನ್ನ ಹತ್ತನೆಯ ತರಗತಿಯನ್ನು (1984) ಮುಗಿಸುತ್ತಿದ್ದಂತೆಯೇ, ಕರ್ತನಿಗಾಗಿ ಉತ್ಸಾಹ ಮತ್ತು ಭಾವೋದ್ರೇಕದೊಂದಿಗೆ ನಾನು ದಹಿಸುತ್ತಿದ್ದೆ. ಸುವಾರ್ತೆ ಸಾರುವದು ಮತ್ತು ಕರ್ತನ ಸೇವೆ ಮಾಡುವದರ ಹೊರತಾಗಿ ಬೇರೆ ಯಾವುದನ್ನೂ ಮಾಡುವದಕ್ಕೂ ನನಗೆ ಇಷ್ಟರಲಿಲ್ಲ. ಓದುವದರಲ್ಲಿ (ಶಿಕ್ಷಣದಲ್ಲಿ) ಯಾವ ದೊಡ್ಡ ಉದ್ದೇಶವೂ ಇಲ್ಲ ಎನ್ನುವದನ್ನು ನಾನು ನೋಡಿದ್ದೆ ಮತ್ತು ಕರ್ತನಾದ ಯೇಸು ಬಹಳ ಬೇಗನೇ ಬರಲಿಕ್ಕಿದ್ದಾನೆ ಆದ್ದರಿಂದ ಶಿಕ್ಷಣದಲ್ಲಿ ನನ್ನ ಸಮಯವನ್ನು ಯಾಕೆ ವ್ಯರ್ಥಗೊಳಿಸಬೇಕೆಂದು ನಾನು ಭಾವಿಸಿದ್ದೆ. ನಾನು ಹೊರಗೆ ಹೋಗಿ ಸುವಾರ್ತೆ ಸಾರಿ ಶಿಷ್ಯರನ್ನು ಮಾಡಬೇಕಾಗಿತ್ತು. ಆದ್ದರಿಂದ ನಾನು ನನ್ನ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುವದಕ್ಕೆ ಪೂರ್ತಿ ಸಂಕಲ್ಪಿಸಿದ್ದೆ. ಆದರೆ ದೇವರು ತನ್ನ ಕೃಪೆ ಮತ್ತು ಕರುಣೆಯಲ್ಲಿ ನನಗೆ ಬೇರೊಂದು ರೀತಿಯಲ್ಲಿ ಮಾರ್ಗದರ್ಶನ ಮಾಡಿದ.(ಇದರ ಹೆಚ್ಚಾದ ವಿಷಯವು ದೈಹಿಕ ಸಮಾಲೋಚನೆ ಎಂಬ ಅಧ್ಯಾಯದಲ್ಲಿದೆ). ಆದ್ದರಿಂದ ನಾನು ನನ್ನ 11 ಮತ್ತು 12ನೆಯ ತರಗತಿಯ ವಿದ್ಯಾಭ್ಯಾಸವನ್ನು ಮುಂದುವರಿಸುವದಕ್ಕಾಗಿ ಮತ್ತೆ ಶಾಲೆಗೆ ಹಿಂತಿರುಗಿ ಹೋದೆ, 12ನೆಯ ತರಗತಿಯ ನಂತರ ಸತ್ಯವೇದದ ಸೆಮಿನರಿಗೆ ಹೋಗುವ ಯೋಜನೆ ನನ್ನದಾಗಿತ್ತು. 1985-86 ಈ ಎರಡು ವರ್ಷಗಳ ಅವಧಿಯಲ್ಲಿ, ನನ್ನ ಹೃದಯದಲ್ಲಿ ಸಂಗತಿಗಳು ನಿಧಾನವಾಗಿ ಬದಲಾಗುವದಕ್ಕೆ ಪ್ರಾರಂಭಿಸಿದವು. ಒಬ್ಬ ಉದ್ಯೋಗಸ್ಥನಾಗಿದ್ದು ದೇವರ ಸೇವೆಯನ್ನು ಮಾಡುವ ಒಂದು ಆಶೆಯು

ನನ್ನೊಳಗೆ ಬೆಳೆಯುವದಕ್ಕೆ ಆರಂಭವಾಯಿತು. ಒಬ್ಬನು ಉದ್ಯೋಗಸ್ಥನಾಗಿ, ವಿದ್ಯಾವಂತನಾಗಿ, ಲೋಕದಲ್ಲಿ ಒಬ್ಬ ಯಶಸ್ವಿಯಾದವನು ಇರಬಹುದು, ಆದಾಗ್ಯೂ ಯಾವನಾದರೂ ದೇವರಿಗಾಗಿ ಭಾವೋದ್ರೇಕವುಳ್ಳವನಾಗಿದ್ದು ದೇವರ ರಾಜ್ಯದ ಕೆಲಸದಲ್ಲಿ ಪೂರ್ತಿಯಾಗಿ ತೊಡಗಿಸಿಕೊಂಡು ಆತನ ಸೇವೆಯನ್ನು ಮಾಡಬಹುದು ಎನ್ನುವಂತೆ ನನ್ನ ಜೀವಿತವು ಜನರಿಗೆ ಒಂದು ಮಾದರಿಯಾಗಿಯೂ ಸಾಕ್ಷಿಯಾಗಿಯೂ ಇರುವದು ಅಗತ್ಯವೆಂದು ನನಗನ್ನಿಸಿತು. ಒಬ್ಬ ಯಾಜಕ ಮತ್ತು ಅರಸ ಎರಡೂ ಆಗಬೇಕೆಂಬ ಆಶೆಯು ಮಾತಾಡುವದಕ್ಕೆ ನನ್ನ ಹೃದಯವನ್ನು ತುಂಬಿಕೊಳ್ಳುವದಕ್ಕೆ ಪ್ರಾರಂಭವಾಯಿತು. ಈ ಬದಲಾವಣೆಯನ್ನು ತಂದಂತಹ ಮತ್ತು ಈ ಆಶೆಯನ್ನು ನನ್ನಲ್ಲಿ ಹುಟ್ಟಿಸಿದ ದೇವರನ್ನು ನಾನು ನಂಬಿದೆ. ಆದದರಿಂದ, ಈ ಆಶೆಯನ್ನು ಅನುಸರಿಸುವದಕ್ಕೆ ನಾನು ಪ್ರಾರಂಭಿಸಿದೆ. ತಾಂತ್ರಿಕ ಕಾಲೇಜಿನಲ್ಲಿ (1986-90), ಇದು ಮುಂದುವರಿದು ಸ್ಪಷ್ಟವಾಗುತ್ತಾ ಬಂತು, ಮತ್ತು ಸತ್ಯವೇದದ ತತ್ವಗಳ ಮೇಲೆ ಆಧಾರವಾಗಿರುವಂತಹ ಒಂದು ತಾಂತ್ರಿಕ ಕಂಪನಿಯನ್ನು ಸ್ಥಾಪಿಸುವ ಒಂದು ಆಶೆಯು ನನ್ನೊಳಗೆ ಏಳುವದಕ್ಕೆ ಆರಂಭವಾಯಿತು. ಇದು ಹೇಗಿರುತ್ತದೆ ಮತ್ತು ಯಾವ ರೀತಿ ಕಾಣುತ್ತದೆ ಎಂಬ ಯಾವ ತಿಳುವಳಿಕೆ ಇಲ್ಲದಿದ್ದಾಗ್ಯೂ ಸಹ, ನಾನು ಒಳಗಿರುವ ಆಶೆಯೊಂದಿಗೆ ಸಾಲಾಗಿ ಕನಸು ಕಾಣುವದಕ್ಕೆ ಶುರು ಮಾಡಿದೆ. ನಾನು ಇದನ್ನು ಸನ್ನಿವೇಶಗಳು ಮತ್ತು ದೈವಿಕ ಸಂಘಟಿಸುಕೆಗಳು. ಎಂಬ ಮುಂದಿನ ಅಧ್ಯಾಯದಲ್ಲಿ, ದೇವರು ಹೇಗೆ ನಿಜವಾಗಿಯೂ ಈ ಆಶೆಯನ್ನು ನೆರವೇರಿಸುತ್ತಾನೆ ಮತ್ತು ತನ್ನ ರಾಜ್ಯದ ಉದ್ದೇಶಗಳಿಗಾಗಿ ಇದನ್ನು ಹೇಗೆ ಉಪಯೋಗಿಸುತ್ತಾನೆ ಎನ್ನುವದನ್ನು ನಾನು ಹಂಚಿಕೊಳ್ಳುತ್ತೇನೆ.

ಮೇಲಿನವುಗಳು ಪವಿತ್ರಾತ್ಮನಿಂದ ಹುಟ್ಟಿದ ಆಶೆಗಳ ಎರಡು ಉದಾಹರಣೆಗಳಾಗಿರುವ ವೇಳೆಯಲ್ಲಿ, ಅದು ಭವಿಷ್ಯದಲ್ಲಿ ಉತ್ತಮವಾಗಿ ಒಂದು ಉದ್ದೇಶಕ್ಕೆ ಉಪಯೋಗವಾಗುತ್ತದೆ, ತನ್ನ ಅಂತರಂಗದ ಸಾಕ್ಷಿಯಿಂದ ಪವಿತ್ರಾತ್ಮನು ಸರಿಯಾದ ಸಮಯದಲ್ಲಿ ಕೊಡಲ್ಪಟ್ಟ ವಿಷಯಕ್ಕೆ ಒಂದು ತಕ್ಷಣದ ಉದ್ದೇಶವನ್ನು ಸೇವೆ ಮಾಡುವದಕ್ಕೆ ಒಂದು ಆಶೆಯನ್ನು ಹುಟ್ಟಿಸುವ ಸಮಯಗಳು ಇರುತ್ತವೆ. ಅಂತಹ ಒಂದು ಉದಾಹರಣೆ ಇಲ್ಲಿದೆ:

## ಡಿಸೆಂಬರ್ 1992 : ಪೂರ್ವ ಯುರೋಪಿಗೆ ಸುವಾರ್ತಾ ಸೇವೆಗಳು

1992 ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿನಾನು ಅಮೆರಿಕಾದಲ್ಲಿ ವಿದ್ಯಾರ್ಥಿಯಾಗಿದ್ದ ವೇಳೆಯಲ್ಲಿ, ಸುವಾರ್ತಾ ಸೇವಾ ಕಾರ್ಯಗಳ ಮೇಲೆ ಪೂರ್ವ ಯೂರೋಪಿಗೆ

ಹೋಗಬೇಕೆಂಬ ಒಂದು ಬಲವಾದ ಆಶೆಯ ಅನುಭವವನ್ನು ನಾನು ಹೊಂದಿದೆ. ಇದನ್ನು ಮೀರಿ ನನಗೆ ನನ್ನ ಆಶೆಯು ಹೇಗೆ ಸಂಭಸುತ್ತದೆ ಎಂಬ ಯಾವ ಸೂಚನೆಯಾಗಲೀ, ಸಂಪರ್ಕಗಳಾಗಲೀ ಮತ್ತು ಯಾವುದೇ ಕಲ್ಪನೆಗಳಾಗಲೀ ಇರಲಿಲ್ಲ. ಆದ್ದರಿಂದ ಆ ಸಮಯದಲ್ಲಿ ನಾನು ಭಾಗವಸುತ್ತಿದ್ದ ಸ್ಥಳೀಯ ಸಭೆಯ ಒಬ್ಬ ನಾಯಕರುಗಳಲ್ಲಿ ಒಬ್ಬರೊಂದಿಗೆ ನಾನು ಈ ನನ್ನ ಆಶೆಯನ್ನು ಹಂಚಿಕೊಂಡೆ. ಇತ್ತೀಚೆಗೆ ಆಲ್ಬೇನಿಯಾಕ್ಕೆ ಹೋಗಿದ್ದ ಒಬ್ಬ ಮಿಷನರಿ ದಂಪತಿಗಳೊಂದಿಗೆ ಅವರು ಸಂಪಕದಲ್ಲಿದ್ದರು. ಈ ಸಂಪರ್ಕದೊಂದಿಗೆ ನಾನು 1992ರ ಡಿಸೆಂಬರ್‌ನಲ್ಲಿ ಆಲ್ಬೇನಿಯಾದಲ್ಲಿದ್ದು ಅಲ್ಲಿನ ಕೆಲವು ದೂರದ ಸ್ಥಳಗಳಲ್ಲಿ ಸುವಾರ್ತೆಯನ್ನು ಸಾರುತ್ತಿದ್ದೆ. ಕುತೂಹಲವೇನೆಂದರೆ ಆಲ್ಬೇನಿಯಾವು ಸುಮಾರು ಐವತ್ತು ವರ್ಷಗಳವರೆಗೆ ಹೊರಗಿನ ಪ್ರಪಂಚಕ್ಕೆ ಅಗತ್ಯವಾಗಿ ಮುಚ್ಚಲ್ಪಟ್ಟ ದೇಶವಾಗಿತ್ತು. ಇದು ಕೇವಲ 1990ರಲ್ಲಿ ತೆರೆದುಕೊಳ್ಳುವದಕ್ಕೆ ಪ್ರಾರಂಭವಾಯಿತು. ಯೇಸುವಿನ ಹೆಸರನ್ನು ಎಂದಿಗೂ ಕೇಳಿರದಿದ್ದ ಅನೇಕ ಜನರಿಗೆ ಸುವಾರ್ತೆಯನ್ನು ಸಾರುವದಕ್ಕು ಮತ್ತು ಆತನ ವಾಕ್ಯವನ್ನು ಬೋಧಿಸುವದಕ್ಕೂ ಆ ಸಮಯದಲ್ಲಿ ಆ ದೇಶದಲ್ಲಿದ್ದದ್ದು ಒಂದು ಗೌರವವುಳ್ಳದ್ದಾಗಿತ್ತು.

ನಾವು ಚರ್ಚಿಸಬೇಕಾಗಿರುವ ಅಂತರಂಗದ ಸಾಕ್ಷಿಯ ಮುಂದಿನ ಮೂರು ರೀತಿಗಳು ಒಳಗಿನ ತಿಳಿಯುಕೆ; ಒಳಗಿನ ಚುರುಕುತನ; ಒಳಗಿನ ಕಲಕುವಿಕೆ ಇವು ತುಂಬಾ ಸಮಾನರೂಪದವುಗಳಾಗಿವೆ. ಅವುಗಳ ತರಾತುರಿಯಲ್ಲಿ ಮತ್ತು ತೀವ್ರತೆಯಲ್ಲಿ ಅವು ಬದಲಾಗುತ್ತವೆ.

## 4) ಒಳಗಿನ ತಿಳಿಯುವಿಕೆ

ಅಪೊ.ಕೃತ್ಯ -7:23-25

**23-ಅವನಿಗೆ ನಾಲ್ವತ್ತು ವರುಷ ವಯಸ್ಸು ತುಂಬುತ್ತಾ ಇರಲು ಇಸ್ರಾಯೇಲ್ ವಂಶಸ್ಥರಾದ ತನ್ನ ಸಹೋದರರನ್ನು ಹೋಗಿ ನೋಡಬೇಕೆಂಬ ಆಶೆಯು ಅವನಲ್ಲಿ ಹುಟ್ಟಿತು.**

**24-ಅವರಲ್ಲಿ ಒಬ್ಬನಿಗೆ ಅನ್ಯಾಯವಾಗುವದನ್ನು ಅವನು ನೋಡಿ ಅವನಿಗೆ ಆಶ್ರಯಕೊಟ್ಟು ಪೀಡಿಸುವ ಐಗುಪ್ತ ನನ್ನು ಹೊಡೆದುಹಾಕಿ ಮುಯ್ಯಿಗೆ ಮ್ಯುಯ್ಯಿ ತೀರಿಸಿದನು.**

**25-ದೇವರು ತನ್ನ ಕೈಯಿಂದ ಬಿಡುಗಡೆಯನ್ನು ಉಂಟುಮಾಡುತ್ತಾನೆಂಬದು ತನ್ನ ಸಹೋದರರಿಗೆ ತಿಳಿದು ಬರುವದೆಂದು ಭಾವಿಸಿದನು; ಆದರೆ ಅವರು ಹಾಗೆ ತಿಳುಕೊಳ್ಳಲಿಲ್ಲ.**

ಮೋಶೆಯು ಸುಮಾರು ನಲವತ್ತು ವರ್ಷ ವಯಸ್ಸಿನವನಾಗಿದ್ದಾಗ, ಅವನ ಹೃದಯದಲ್ಲಿ ಏನೋ ಒಂದು ಮೇಲೆದ್ದಿತು, ಅದು ತನ್ನ ಮೂಲಕವಾಗಿ ದೇವರು

ಇಸ್ರಾಯೇಲ್ಯರನ್ನು ಬಿಡಿಸುತ್ತಾನೆಂದು ಅವನಿಗೆ ಒಂದು ತಿಳುವಳಿಕೆಯನ್ನು ಕೊಟ್ಟಿತು. ಇದು ಹೇಗಾಗುತ್ತದೆಂಬ ಯಾವ ತಿಳುವಳಿಕೆಯೂ ಸಹ ಅವನಿಗಿರಲಿಲ್ಲ. ಆದರೆ ಇದು ದೇವರಿಂದ ತನಗೆ ಬಂದ ಹಂಚಿಕೆ ಎನ್ನುವದನ್ನು ಮಾತ್ರ ಅವನು ತಿಳಿದಿದ್ದನು. ಇದು ಅವನ ಒಳಗಿನದನ್ನು ತಿಳಿಯುವಂತದ್ದಾಗಿತ್ತು.

ಹಾಗೆಯೇ, ಪವಿತ್ರಾತ್ಮನು ಅಂತರಂಗದ ಸಾಕ್ಷಿಯ ಮೂಲಕವಾಗಿ ನಿಮ್ಮೊಳಗೆ ಎದ್ದೇಳುವದಕ್ಕೆ ಒಂದು ತಿಳಿಯುಕೆಯನ್ನು ಸೃಷ್ಟಿಸುತ್ತಾನೆ. ಸರಿಯಾದ ಯಾವ ಕೆಲಸವನ್ನು ಮಾಡಬೇಕೆಂಬುದನ್ನು ಮಾತ್ರ ನೀವು ತಿಳಿಯಬೇಕು ಯಾಕೆಂದರೆ ಆ ತಿಳಿಯುವಿಕೆಯು ಆತ್ಮನ ಅಂತರಂಗದ ಸಾಕ್ಷಿಯಿಂದ ನಿಮ್ಮ ಆತ್ಮದೊಳಕ್ಕೆ ಬಂದಿರುತ್ತದೆ.

## 1983 : ನನ್ನ ಜೀವನದ ಹಂಚಿಕೆಯನ್ನು ತಿಳಿದುಕೊಂಡದ್ದು

ನಾನು ಹದಿನೈದು ವರ್ಷ ವಯಸ್ಸನ್ನು ದಾಟುವದಕ್ಕಿಂತ ಮೊದಲೇ, ಒಂದು ತಿಳಿಯುವಿಕೆಯು ನನ್ನ ಹೃದಯವನ್ನು ಗಟ್ಟಿಯಾಗಿ ಹಿಡಿದುಕೊಂಡಿತ್ತು. ಬೆಂಗಳೂರಿನಲ್ಲಿ ನಾನು ಒಂದು ಸಭೆಯನ್ನು ಸ್ಥಾಪಿಸಬೇಕು ಮತ್ತು ಭಾರತ ದೇಶವು ಯೇಸುನ ಸುವಾರ್ತೆಯೊಂದಿಗೆ ತಲುಪುವದನ್ನು ನೋಡಬೇಕು ಎಂದು ನನಗೆ ಗೊತ್ತಿತ್ತು. ಅಲ್ಲಿ ಯಾವ ಪ್ರವಾದನೆಗಳಿಲ್ಲ, ದರ್ಶನಗಳಿಲ್ಲ, ದೂತರ ಸಂದರ್ಶನಗಳಿಲ್ಲ ಮತ್ತು ತುಂಬಾ ಪ್ರಭಾವವುಳ್ಳದ್ದೂ ಯಾವುದೂ ಇರಲಿಲ್ಲ. ಇದು 'ನನ್ನನ್ನು ತುಂಬುವವರೆಗೂ' ಕೇವಲ ಒಂದು ತಿಳಿಯುವಿಕೆಯ ಹಾಗೆ ಇದು ಬಂದಿತು. ಇದು ಕೇವಲ ಒಂದು ಹಾರೈಕೆಗಿಂತಲೂ ಹೆಚ್ಚಿನದಾಗಿತ್ತು. ಏನೋ ಒಂದು ನನ್ನನ್ನು 'ತಿಂದುಬಿಡುವ' ಹಾಗೆ ಇದು ಕಾಣಿಸುತ್ತಿತ್ತು. ಇದು ನನ್ನ ಕಲ್ಪನೆಯನ್ನು ತುಂಬಿಕೊಂಡಿತ್ತು. ನಾನು ಇದರ ಕುರಿತು ಕನಸು ಕಾಣುವವನಾಗಿದ್ದೆ. ನಾನು ಪ್ರಪಂಚದ ಉದ್ದಗಲಕ್ಕೂ ಹೋಗಿ ಯೇಸುನ ಕುರಿತು ಪ್ರಸಂಗಿಸಿ, ಸಭೆಗಳನ್ನು ಎಬ್ಬಿಸಿ ರಾಷ್ಟ್ರಗಳಲ್ಲಿ ಪರಿಣಾಮವನ್ನು ಮಾಡುತ್ತೇನೆಂದು ಸ್ವತ: ನಾನೇ ನನ್ನನ್ನು ನೋಡಿಕೊಳ್ಳುತ್ತಿದ್ದೆ. ಸಮಯದೊಂದಿಗೆ, ಇದು ಮಾತ್ರವೇ ನನ್ನೊಳಗೆ ಬಲವಾಗಿ ಇಡಲ್ಪಟ್ಟದ್ದಾಗಿತ್ತು. ಇದು ನನ್ನ ಜೀವನದ ಹಂಚಿಕೆಯಾಗಿತ್ತು ಮತ್ತು ನನ್ನೊಳಗಿರುವ ತಿಳಿಯುವಿಕೆಯನ್ನು ಆತನು ಸೃಷ್ಟಿಸಿರುವಂತೆ, ಪತ್ರಾತ್ಮನ ಅಂತರಂಗದ ಸಾಕ್ಷಿಯ ಮೂಲಕವಾಗಿ ಇದು ನನಗೆ ಬಂದಿತು.

## ಆಗಸ್ಟ್ 1999 : ಭಾರತಕ್ಕೆ ಹಿಂದಿರುಗಿ ಬರುವ ಸಮಯ

1990ರಲ್ಲಿ ತಾಂತ್ರಿಕತೆಯಲ್ಲಿ ನನ್ನ ಉನ್ನತ ಪದವಿಯನ್ನು ಪಡೆದುಕೊಳ್ಳುವದಕ್ಕಾಗಿ ನಾನು ಅಮೆರಿಕಾಕ್ಕೆ ಹೋಗಿದ್ದೆ. ನನ್ನ ಜೀವನದ ಹಂಚಿಕೆಯನ್ನು ನೆರವೇರಿಸುವದಕ್ಕಾಗಿ

ನಾನು ಭಾರತಕ್ಕೆ ಹಿಂದಿರುಗಿ ಬರಲೇಬೇಕು ಎಂಬುದು ನನಗೆ ಗೊತ್ತಿತ್ತು. ಯಾವಾಗಲಾದರೂ ಸರಿಯೇ, ನಾನು ನಿಶ್ಚಯಿಸಬೇಕಾದದ್ದು ಏನೋ ಒಂದು ಇದ್ದೇ ಇತ್ತು. ಅಮೆರಿಕಾದಲ್ಲಿ ನಾನಿದ್ದ ಸಮಯದಾದ್ಯಂತ, ಬೆಂಗಳೂರಿನಲ್ಲಿ ಒಂದು ಬಲವಾದ ಸಭೆಯನ್ನು ಎಬ್ಬಿಸಬೇಕು ಮತ್ತು ಸುವಾರ್ತೆಯೊಂದಿಗೆ ಭಾರತ ದೇಶದ ಮೇಲೆ ಪರಿಣಾಮವನ್ನುಂಟು ಮಾಡಬೇಕೆನ್ನುವ ದರ್ಶನವು ನನ್ನ ಹೃದಯದಲ್ಲಿ ದಹಿಸುತ್ತಿತ್ತು. ಈ ದರ್ಶನವನ್ನು ನೆರವೇರಿಸುವದಕ್ಕೆ ಯಾವಾಗ ಹೆಜ್ಜೆಯಿಡಬೇಕೆಂಬ ದೇವರ ಸಮಯ ಮತ್ತು ನಿರ್ದೇಶನಕ್ಕಾಗಿ ಕೇಳಿಕೊಳ್ಳುತ್ತಾ ಪ್ರಾರ್ಥಿಸುವದನ್ನು ಮುಂದುವರಿಸಿದೆ. ಕೆಲವು ಸಲ ಭಾರತಕ್ಕೆ ಪ್ರಯಾಣಿಸಿದ ನಂತರದ ವರ್ಷಗಳ ವೇಳೆಯಲ್ಲಿ ವಿವಿಧ ಸ್ಥಳಗಳಲ್ಲಿ ಸೇವೆ ಮಾಡಿ ಸುವಾರ್ತಾ ಕೂಟಗಳನ್ನೂ ಮತ್ತು ಸಭಾಪಾಲಕರುಗಳ ಸಮ್ಮೇಳನಗಳನ್ನೂ ನಡಿಸಿದೆ. 1995ರ ಮೇ ತಿಂಗಳಿನಲ್ಲಿ, ಏಮಿ ಮತ್ತು ನಾನು ವಿವಾಹವಾದೆವು, ನಾವು ಅಮೆರಿಕಾದಲ್ಲಿ ವಾಸಿಸುತ್ತಿದ್ದಾಗ್ಯೂ, ಸರಿಯಾದ ಸಮಯದಲ್ಲಿ ಭಾರತಕ್ಕೆ ನಾವು ಹೊಗುತ್ತೇವೆಂಬುದನ್ನು ನಾವು ತಿಳಿದಿದ್ದೆವು. 1999ರ ಆಗಸ್ಟ್‌ನಲ್ಲಿ ಭಾರತದ ಈ ಭೇಟಿಗಳ ಒಂದು ಸಮಯದಲ್ಲಿ, ಆಗ್ರಾದಲ್ಲಿ ನಾವು ಕೆಲವು ಕೂಟಗಳನ್ನು ಮಾಡುತ್ತಿದ್ದೆವು, ಹಿಂದಿರುಗಿ ಹೋಗುವದಕ್ಕೆ ಇದು ಒಂದು ಸಮಯ ಎನ್ನುವ ಒಂದು ತಿಳುವಳಿಕೆಯು ನನ್ನೊಳಗೆ ಎದ್ದೇಳುವದನ್ನು ನಾನು ಕಂಡುಕೊಂಡೆ. ಇದು ಮತ್ತೆ ಪವಿತ್ರಾತ್ಮನ ಸಾಕ್ಷಿಯ ಮೂಲಕವಾಗಿ ಒಂದು ತಿಳುವಳಿಕೆಯ ಹಾಗೆ ನನ್ನೊಳಗೆ ಬಂದಿತ್ತು. ಈ ಮುಖ್ಯ ತೀರ್ಮಾನಕ್ಕಾಗಿ ಅಲ್ಲಿ ಯಾವುದೇ ದರ್ಶನಗಳ ತುಂಬಾ ಪ್ರಭಾತ ಮಾರ್ಗದರ್ಶನಗಳಾಗಲೀ, ಕನಸುಗಳಾಗಲೀ, ಪ್ರವಾದನೆಗಳಾಗಲೀ, ದೂತರುಗಳಾಗಲೀ ಇರಲಿಲ್ಲ. ನಾನು ಇದನ್ನು ಆ್ಯಮಿಯೊಂದಿಗೆ ಹಂಚಿಕೊಂಡೆ ಮತ್ತು ನಾವು ಒಪ್ಪಂದದಲ್ಲಿದ್ದೆವು. ಭಾರತಕ್ಕೆ ಹಿಂದಿರುಗಿ ಹೋಗುವದಕ್ಕಾಗಿ ಸಿದ್ಧರಾಗುವದಕ್ಕೆ ಸುಮಾರು ಒಂದು ವರ್ಷಗಳ ಸಮಯವನ್ನು ತೆಗೆದುಕೊಳ್ಳುವದಕ್ಕೆ ನಾವೇ ತೀರ್ಮಾನಿಸಿದೆವು. ನಾವು ಪ್ರಾರ್ಥಿಸುತ್ತಾ ಸಿದ್ಧತೆಯನ್ನು ಮಾಡಿಕೊಳ್ಳುವದಕ್ಕೆ ಪ್ರಾರಂಭಿಸಿದೆವು ಮತ್ತು 2000ದ ಡಿಸೆಂಬರ್‌ನಲ್ಲಿ ಭಾರತಕ್ಕೆ ಹಿಂದಿರುಗಿ ಬಂದೆವು. ನಮ್ಮ ಮುಂದಿದ್ದ ಕೆಲಸಕ್ಕಾಗಿ 1990-2000, ಈ ಹತ್ತು ವರ್ಷಗಳು ಸಿದ್ಧತೆಯ ವರ್ಷಗಳಾಗಿದ್ದವು ಎಂದು ನಾನು ಅಭಿಪ್ರಾಯಪಡುತ್ತೇನೆ.

## 5) ಒಳಗಿನ ತೀವ್ರತೆ

ಪವಿತ್ರಾತ್ಮನ ಸಾಕ್ಷಿಯ ಮೂಲಕವಾಗಿ ಬರುವಂತಹ ಪವಿತ್ರಾತ್ಮನ ತೀವ್ರತೆಯು, ಏನಾದರೂ ಮಾಡುವದಕ್ಕೆ ಯಾರಾದರೊಬ್ಬರು ನಿಮಗೆ ಒಂದು ಚಿಕ್ಕದಾದ ಪ್ರೇರಿಸುಕೆ ಅಥವಾ ಪ್ರೋತ್ಸಾಹ ಕೊಡುವದನ್ನು ಹೊಂದಿಕೊಳ್ಳುವದಕ್ಕೆ ಸಮಾನವಾಗಿರುತ್ತದೆ.

ನೀವು ತೀವ್ರತೆಯನ್ನು ಅನುಭವಪಡುತ್ತೀರಿ – ಏನಾದರೊಂದನ್ನು ಮಾಡುವದಕ್ಕೆ ನಿಮ್ಮ ಆತ್ಮದಲ್ಲಿ ಒಂದು ಬಲವಾದ ಪ್ರೇರಿಸುಕೆಯನ್ನು ಅಥವಾ ತಿವಿತವನ್ನು ಅನುಭವಪಡುತ್ತೀರಿ. ತಿಳಿದುಕೊಳ್ಳುವದಕ್ಕಿಂತಲೂ ತೀವ್ರತೆಯು ಬಲವಾದುದಾಗಿದೆ, ಇದು ಸಹಜವಾಗಿ ನೀವು ತಕ್ಷಣವೇ ಕಾರ್ಯಪ್ರವೃತ್ತರಾಗುವಂತೆ ಮಾಡುತ್ತದೆ. ನಾವು ನಮ್ಮ ಆತ್ಮದಲ್ಲಿ ಶೀಘ್ರಗ್ರಹಿಕೆಯನ್ನು ಕಾಪಾಡಿಕೊಂಡರೆ, ಸಂಗತಿಗಳನ್ನು ಮಾಡುವದಕ್ಕೆ ಪವಿತ್ರಾತ್ಮನು ನಮ್ಮನ್ನು ಅನೇಕ ಸಲ ತೀವ್ರಗೊಳಿಸುತ್ತಾನೆ. ಕೆಲವು ಸಲ ಇದು ಯಾರನ್ನಾದರೂ ಫೋನ್‌ನಲ್ಲಿ ಕರೆಯುವದಕ್ಕೆ ತೀವ್ರಗೊಳಿಸುತ್ತದೆ. ಯಾರನ್ನಾದರೂ ಭೇಟಿಮಾಡುವದಕ್ಕೆ ಹೋಗುವಂತೆ ಅಥವಾ ಏನನ್ನಾದರೂ ಮಾಡುವದಕ್ಕೆ ಆತನು ನಮ್ಮನ್ನು ತೀವ್ರಗೊಳಿಸುತ್ತಾನೆ. ಈ ತಿವಿತಗಳು ನಮ್ಮ ತಕ್ಷಣದ ಗಮನವನ್ನು ಮತ್ತು ಕ್ರಿಯೆಯನ್ನು ಅಪೇಕ್ಷಿಸುತ್ತವೆ.

## ನವಂಬರ್ 2002 : ದಕ್ಷಿಣ ಬೆಂಗಳೂರಿನ (ಜಯನಗರ)ಎಪಿಸಿಯ ಪ್ರಾರಂಭ.

ಡಿಸೆಂಬರ್ 2000ದಲ್ಲಿ ಭಾರತಕ್ಕೆ ಂದಿರುಗಿದ ನಂತರ, ಜನವರಿಯಲ್ಲಿ ನಾವು ಒಂದು ಸಾಫ್ಟ್‌ವೇರ್ ಕಂಪನಿಯನ್ನು ಮತ್ತು 2001ರ ಫೆಬ್ರವರಿಯಲ್ಲಿ ಒಂದು ಸಭೆಯನ್ನು ಪ್ರಾರಂಭಿಸಿದೆವು. ಸಾಫ್ಟ್‌ವೇರ್ ಕಂಪನಿಯು ಬೆಂಗಳೂರಿನ ಆರ್.ಟಿ ನಗರದಲ್ಲಿ ತನ್ನ ಕಛೇರಿಯನ್ನು ಹೊಂದಿತ್ತು. ಆ ಸಮಯದಲ್ಲಿ, ಡೇವಿಡ್ ಎಂಬ ಹೆಸರಿನ ಒಬ್ಬ ಯೌವನಸ್ಥನು ಕಂಪನಿಯ ಮೂಲಕ ಉದ್ಯೋಗಿಯಾಗಿದ್ದನು, ಆದರೆ ಎಪಿಸಿಗಾಗಿ ಆಡಳಿತಾತ್ಮಕ ಕೆಲಸದಲ್ಲಿಯೂ ಸಹ ಸಹಾಯ ಮಾಡುತ್ತಿದ್ದನು. ಇದು 2002ರ ಸೆಪ್ಟೆಂಬರ್‌ನಲ್ಲಿ ಇರಬಹುದು, ಒಂದು ನಿರ್ಧಿಷ್ಟವಾದ ದಿನ ಕಛೇರಿಯಲ್ಲಿ ದಿನದ ಮೊದಲ ಭಾಗದ ವೇಳೆಯಲ್ಲಿ, ತಕ್ಷಣವೇ ನಾನು ಒಂದು ತೀವ್ರತೆಯನ್ನು ಅನುಭವಪಟ್ಟೆ ಅದು ದಕ್ಷಿಣ ಬೆಂಗಳೂರಿನಲ್ಲಿ ಒಂದು ಹೊಸದಾದ ಸಭೆಯ ಸ್ಥಳವನ್ನು ಪ್ರಾರಂಭಿಸಬೇಕಾದ ಸಮಯವಾಗಿತ್ತು. ಆ ಕ್ಷಣದ ಕುರಿತಾಗಿ ಯಾವುದೇ ಆತ್ಮೀಕತನವು ಇರಲಿಲ್ಲ. ಕಂಪನಿಯಲ್ಲಿನ ನನ್ನ ದಿನನಿತ್ಯದ ಕೆಲಸಕ್ಕಾಗಿ ನಾನು ಹೋಗುತ್ತಿದ್ದೆ, ಆದರೆ ತೀವ್ರತೆಯು ಬಲವಾದದು ಮತ್ತು ಸ್ಪಷ್ಟವಾದುದಾಗಿತ್ತು. ನಾನು ನನ್ನ ಸ್ಥಳವನ್ನು ಬಿಟ್ಟು ಡೇವಿಡ್‌ನ ಕಡೆಗೆ ನೇರವಾಗಿ ಹೋಗಿ, ಅವನಿಗೆ ದಕ್ಷಿಣ ಬೆಂಗಳೂರಿನ ಜಯನಗರದ ಭಾಗದಲ್ಲಿ ಒಂದು ಸ್ಥಳವನ್ನು ಹುಡುಕು ಎಂದು ಹೇಳಿದೆ, ನಾವು ಅಲ್ಲಿ ಸಭೆಗಾಗಿ ಒಂದು ಹೊಸ ಸ್ಥಳವನ್ನು ನೇಮಿಸಿಕೊಳ್ಳಬೇಕಾಗಿತ್ತು (ನಾವು ಇದನ್ನು ಎಪಿಸಿ–ದಕ್ಷಿಣ ಎಂದು ಕರೆಯುತ್ತೇವೆ). ಆ ದಿವಸಗಳಲ್ಲಿ ನಾವು ಟೆಲಿಫೋನ್ ಪುಸ್ತಕಗಳನ್ನು ಉಪಯೋಗಿಸುತ್ತಿದ್ದೆವು. ಹಾಗಾಗಿ ಡೇವಿಡ್ ಟೆಲಿಫೋನ್ ಪುಸ್ತಕದ ಹಳದಿ ಪುಟವನ್ನು ತೆರೆದು ಸುಮಾರು 70 ರಿಂದ 100 ಜನರು ಹಿಡಿಸುವ ಒಂದು

ವಾಣಿಜ್ಯ ಸ್ಥಳವನ್ನು ಹೊಂದಿದ್ದ ರಿಯಲ್ ಎಸ್ಟೇಟ್ ನಡಿಸುವ ವ್ಯಕ್ತಿಗೆ ಮೊದಲು ಕರೆ ಮಾಡಿದನು. ಇದು ಜಯನಗರದಲ್ಲಿ ಒಂದು ಒಳ್ಳೆಯ ಸ್ಥಳದಲ್ಲಿತ್ತು. ನಮ್ಮ ಸಭೆಯ ಆರಾಧನೆಗಳನ್ನು ನಡೆಸುವದಕ್ಕೆ ಇದನ್ನು ಬಾಡಿಗೆಗೆ ನಮಗೆ ಕೊಡುವದಕ್ಕೆ ಆ ಜಮೀನುದಾರನು ಸಿದ್ಧನಿದ್ದನು. ಇದೆಲ್ಲವೂ ತುಂಬಾ ಸುಲಭವಾಗಿ ಮತ್ತು ಬೇಗನೇ ನಡೆದು ಹೋಯಿತು. ನಾವು ಹೋಗಿ ಸ್ಥಳವನ್ನು ನೋಡಿದೆವು, ಅದು ಸರಿಯಾದುದಾಗಿತ್ತು. ಒಳಗಿನ ಕೆಲಸಗಳನ್ನು ನಡೆಸುವದಕ್ಕೆ ಸ್ವಲ್ಪ ಹಣವನ್ನು ನಿಯೋಗಿಸಿದೆವು. ನಾವು ಒಪ್ಪಂದದ ಪತ್ರಕ್ಕೆ ರುಜುಹಾಕಿ ಕೆಲವು ವಾರಗಳ ನಂತರ, 2002ರ ನವೆಂಬರ್‌ನಲ್ಲಿ ಎಪಿಸಿ-ದಕ್ಷಿಣ, ಇದನ್ನು ಆರಂಭಿಸಿದೆವು.

## 6) ಒಳಗಿನ ಪ್ರೇರಿಸುವಿಕೆ

ನಮ್ಮ ಆತ್ಮಗಳಲ್ಲಿ ಒಂದು ಕಲಕುವಿಕೆಯ ಮೂಲಕವಾಗಿ ನಮ್ಮೊಂದಿಗೆ ಸಂಪರ್ಕಿಸುವದು ಆತ್ಮನ ಅಂತರಂಗದ ಸಾಕ್ಷಿಯ ಇನ್ನೊಂದು ರೀತಿಯಾಗಿದೆ. ನಮ್ಮ ಒಳಗಿನ ಪ್ರೇರಿಸುವಿಕೆಯು ಒಂದು ಚುರುಕುತನಕ್ಕಿಂತಲೂ ಬಲವಾದುದಾಗಿದೆ. ಇದು ಕ್ರಿಯೆಗೆ ಒಂದು ಬಲವಾದ ಕರೆಯಾಗಿದೆ.

ಜನರು ತಮ್ಮ ಹೃದಯಗಳಲ್ಲಿ ಕಲಕಲ್ಪಟ್ಟವರಾಗಿ ಕ್ರಿಯೆಯೊಳಗೆ ಮುಂದುವರಿದಿರುವದು ವಾಕ್ಯಗಳಲ್ಲಿ ಅನೇಕ ಉದಾಹರಣೆಗಳನ್ನು ನಾವು ನೋಡುತ್ತೇವೆ.

ವಿಮೋಚನಾಕಾಂಡ-35:21,26

**21-ಯಾರಾರನ್ನು ಹೃದಯವು ಪ್ರೇರೇಪಿಸಿತೋ ಯಾರಾರ ಮನಸ್ಸು ಸಿದ್ಧವಾಗಿತ್ತೋ ಅವರೆಲ್ಲರೂ ಬಂದು ದೇವದರ್ಶನದ ಗುಡಾರದ ಕೆಲಸಕ್ಕೋಸ್ಕರವೂ ಅದರ ಸಮಸ್ತ ಸೇವೆಗೋಸ್ಕರವೂ ದೀಕ್ಷಾವಸ್ತ್ರಗಳಿಗೋಸ್ಕರವೂ ಯೆಹೋವನಿಗೆ ಕಾಣಿಕೆಗಳನ್ನು ತಂದರು.**

**26-ಬೇರೆ ಜಾಣೆಯರಾದ ಸ್ತ್ರೀಯರು ತಮ್ಮ ಕೈಗಳಿಂದ ನೀಲಿ ಧೂಮ್ರ ರಕ್ತವರ್ಣಗಳುಳ್ಳ ನೂಲನ್ನೂ ನಾರಿನ ನೂಲನ್ನೂ ನೂತು ಆ ನೂಲನ್ನು ತಂದುಕೊಟ್ಟರು.**

ವಿಮೋಚನಾಕಾಂಡ-36:2

**ಬೆಚಲೇಲನನ್ನೂ ಒಹೊಲೀಯಾಬನನ್ನೂ ಮತ್ತು ಯಾರಾರ ಹೃದಯದಲ್ಲಿ ಯೆಹೋವನು ಜ್ಞಾನವನ್ನು ಇಟ್ಟಿದ್ದನೋ ಯಾರಾರನ್ನು ಈ ಕೆಲಸ ಮಾಡುವದಕ್ಕೆ ಹೃದಯ ಪ್ರೇರಿಸಿತೋ ಆ ಜಾಣರೆಲ್ಲರನ್ನೂ ಮೋಶೆ ತನ್ನ ಹತ್ತಿರಕ್ಕೆ ಕರಿಸಿದನು.**

ದೇವದರ್ಶನದ ಗುಡಾರವನ್ನು ಕಟ್ಟುವದಕ್ಕಾಗಿ, ಜನರು ತಮ್ಮಲ್ಲಿ ಇದ್ದದ್ದನ್ನು ಉದಾರವಾಗಿ ಕೊಡುವದಕ್ಕೆ ಯಾರ ಮನಸ್ಸು ಸಿದ್ಧವಾಗಿತ್ತೋ ಅಂತಹ ಜನರ

ಹೃದಯಗಳು ಪ್ರೇರಿಸಲ್ಪಟ್ಟದ್ದನ್ನು ನಾವು ವಿಮೋಚನಕಾಂಡದಲ್ಲಿ ನೋಡುತ್ತೇವೆ. ದೇವದರ್ಶನ ಗುಡಾರದ ನಿರ್ಮಾಣ ಕೆಲಸವನ್ನು ಮಾಡುವದಕ್ಕೂ ಸಹ ಅವರ ಹೃದಯಗಳು ಪ್ರೇರಿಸಲ್ಪಟ್ಟವು. ಖಂಡಿತವಾಗಿಯೂ ದೇವರು ಈ ದಿನದಲ್ಲಿಯೂ ಸಹ ಅದೇ ರೀತಿಯಾಗಿ ಮಾಡುವವನಾಗಿದ್ದಾನೆ. ತನ್ನ ರಾಜ್ಯಕ್ಕಾಗಿ ಕೆಲಸ ಮಾಡುವದಕ್ಕೆ ಮತ್ತು ಕೊಡುವದಕ್ಕೆ ಜನರ ಹೃದಯಗಳನ್ನು ಆತನು ಪ್ರೇರಿಸುವವನಾಗಿದ್ದಾನೆ.

2ಪೂರ್ವ.ಕಾ.ವೃತ್ತಾಂತ–36:22

**ಪಾರಸಿಯ ಅರಸನಾದ ಕೋರೆಷನ ಮೊದಲನೆಯ ವರುಷದಲ್ಲಿ ಯೆಹೋವನು ತಾನು ಯೆರೆಮೀಯನ ಮುಖಾಂತರ ಹೇಳಿಸಿದ ವಾಕ್ಯವನ್ನು ನೆರವೇರಿಸುವದಕ್ಕಾಗಿ ಆ ಪಾರಸಿಯ ರಾಜನಾದ ಕೋರೆಷನ ಮನಸ್ಸನ್ನು ಪ್ರೇರಿಸಿದ್ದರಿಂದ ಅವನು ತನ್ನ ರಾಜ್ಯದಲ್ಲೆಲ್ಲಾ ಡಂಗುರದಿಂದಲೂ ಪತ್ರಗಳಿಂದಲೂ ಪ್ರಕಟಿಸಿದನು.**

ಎಜ್ರನು–1:1

**ಪಾರಸಿಯ ಅರಸನಾದ ಕೋರೆಷನ ಮೊದಲನೆಯ ವರುಷದಲ್ಲಿ ಯೆಹೋವನು ತಾನು ಯೆರೆಮೀಯನ ಮುಖಾಂತರ ಹೇಳಿಸಿದ ವಾಕ್ಯವನ್ನು ನೆರವೇರಿಸುವದಕ್ಕಾಗಿ ಆ ಪಾರಸಿಯ ರಾಜನಾದ ಕೋರೆಷನ ಮನಸ್ಸನ್ನು ಪ್ರೇರಿಸಿದ್ದರಿಂದ ಅವನು ತನ್ನ ರಾಜ್ಯದಲ್ಲೆಲ್ಲಾ ಡಂಗುರದಿಂದಲೂ ಪತ್ರಗಳಿಂದಲೂ ಪ್ರಕಟಿಸಿದನು.**

ಪೂರ್ವ.ಕಾ.ವೃ ಮತ್ತು ಎಜ್ರನು ಎರಡರಲ್ಲಿಯೂ, ಯೆಹೂದ್ಯರು ತಮ್ಮ ಸ್ವಂತ ಸ್ಥಳಕ್ಕೆ ಹಿಂತಿರುಗಿ ಹೋಗಿ ತಮ್ಮ ಪಟ್ಟಣವನ್ನೂ ಮತ್ತು ಆಲಯವನ್ನು ಕಟ್ಟಿಕೊಳ್ಳುವದಕ್ಕೆ ಅವರಿಗೆ ಅನುಮತಿ ಕೊಟ್ಟು ಕಳಿಸುವದಕ್ಕೆ, ದೇವರನ್ನು ವ್ಯಯಕ್ತಿಕವಾಗಿ ತಿಳಿಯದಿದ್ದ ಪಾರಸಿಯ ರಾಜನ ಆತ್ಮವು ಯೆಹೂದ್ಯ ಜನರ ಕಡೆಗೆ ಉಪಯುಕ್ತವಾಗುವದಕ್ಕೆ ಪ್ರೇರಿಸಲ್ಪಟ್ಟದ್ದನ್ನು ನಾವು ನೋಡುತ್ತೇವೆ. ದೇವರು ಈ ದಿನವೂ ಸಹ ಅದೇ ರೀತಿಯಾಗಿ ಮಾಡುವವನಾಗಿದ್ದಾನೆ. ಆತನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವದಕ್ಕೆ ಅಧಿಕಾರದಲ್ಲಿರುವ ನಾಯಕರುಗಳನ್ನು ಆತನು ಪ್ರೇರಿಸುವವನಾಗಿದ್ದಾನೆ.

ನೆಹೆಮೀಯ–1:1–4

**1–ಹಕಲ್ಯನ ಮಗನಾದ ನೆಹೆಮೀಯನ ಮಾತುಗಳು – ಇಪ್ಪತ್ತನೆಯ ವರುಷದ ಮಾರ್ಗಶೀರ್ಷ ಮಾಸದಲ್ಲಿ ನಾನು ಶೂಷನ್ ಪಟ್ಟಣದ ಅರಮನೆಯಲ್ಲಿದ್ದಾಗ**

**2–ನನ್ನ ಸಹೋದರರಲ್ಲಿ ಒಬ್ಬನಾದ ಹನಾನೀಯನೂ ಬೇರೆ ಕೆಲವು ಜನರೂ ಯೆಹೂದದಿಂದ ನನ್ನ ಬಳಿಗೆ ಬಂದರು. ಸೆರೆಯವರೊಳಗೆ ತಪ್ಪಿಸಿಕೊಂಡ ಯೆಹೂದ್ಯರ ಮತ್ತು ಯೆರೂಸಲೇಮಿನ ಸಮಾಚಾರವನ್ನು ನಾನು ಅವರ ಹತ್ತಿರ ವಿಚಾರಿಸುವಲ್ಲಿ**

**3–ಅವರು ನನಗೆ, ಸೆರೆಯವರೊಳಗೆ ತಪ್ಪಿಸಿಕೊಂಡು ಆ ಸಂಸ್ಥಾನದಲ್ಲಿ ವಾಸಿಸುತ್ತಿರುವವರು ಮಹಾ ಕಷ್ಟನಿಂದೆಗಳಿಗೆ ಒಳಗಾಗಿದ್ದಾರೆ; ಯೆರೂಸಲೇಮಿನ ಪೌಳಿಗೋಡೆಯು ಕೆಡವಲ್ಪಟ್ಟಿರುತ್ತವೆ; ಅದರ ಬಾಗಲುಗಳು ಬೆಂಕಿಯಿಂದ ಸುಡಲ್ಪಟ್ಟಿರುತ್ತವೆ ಎಂದು ಹೇಳಿದರು.**

**4-ನಾನು ಈ ವರ್ತಮಾನವನ್ನು ಕೇಳಿದಾಗ ನೆಲದ ಮೇಲೆ ಕೂತುಕೊಂಡು ಅತ್ತೆನು; ಕೆಲವು ದಿವಸಗಳವರೆಗೂ ಶೋಕಿಸುತ್ತಾ ಉಪವಾಸವಾಗಿದ್ದು ಪರಲೋಕ ದೇವರ ಮುಂದೆ ಜ್ಞಾಪನೆ ಮಾಡುತ್ತಾ ಇದ್ದೆನು.**

ನೆಹೆಮಿೂಯ-2:12

**ಅಲ್ಲಿ ಮೂರು ದಿನಗಳಿದ್ದ ಮೇಲೆ ಯೆರೂಸಲೇಮಿಗೋಸ್ಕರ ಮಾಡತಕ್ಕ ಕಾರ್ಯದ ವಿಷಯವಾಗಿ ನನ್ನ ದೇವರು ನನ್ನಲ್ಲಿ ಯಾವ ಆಲೋಚನೆಯನ್ನು ಹುಟ್ಟಿಸಿದ್ದಾನೆಂದು ಯಾರಿಗೂ ತಿಳಿಸದೆ ಆ ರಾತ್ರಿಯಲ್ಲೆದ್ದು ಕೆಲವು ಜನರನ್ನು ಮಾತ್ರ ಕರಕೊಂಡು ಹೊರಟೆನು. ನನ್ನ ವಾಹನ ಪಶುವಿನ ಹೊರತು ಬೇರೆ ಯಾವ ಪಶುವೂ ನನ್ನೊಂದಿಗಿರಲಿಲ್ಲ.**

ಯೆರೂಸಲೇಮ್ ಪಟ್ಟಣದ ಗೋಡೆಗಳ ಕುರಿತಾದ ಸಮಾಚಾರವನ್ನು ಕೇಳಿದ ನಂತರ ನೆಹೆಮೀಯನು ಬಹಳವಾಗಿ ಪ್ರೇರಿಸಲ್ಪಟ್ಟನು, ಅವನು ನೆಲದ ಮೇಲೆ ಕೂತುಕೊಂಡು, ಅಳುತ್ತಾ, ಅನೇಕ ದಿವಸಗಳವರೆಗೆ ಶೋಕಿಸುತ್ತ ಉಪವಾಸದ್ದು ಪ್ರಾರ್ಥಿಸುತ್ತಿದ್ದನು. ನಂತರದಲ್ಲಿ ಅವನು ತನ್ನಲ್ಲಾದ ಪ್ರೇರಿಸುಕೆಯು ನಿಜವಾಗಿಯೂ ದೇವರು ಏನೋ ಒಂದನ್ನು ತನ್ನ ಹೃದಯದಲ್ಲಿಟ್ಟಿದ್ದಾಗಿತ್ತು ಎನ್ನುವದನ್ನು ಅರ್ಥಮಾಡಿಕೊಂಡನು (ನೆಹೆ-2:12). ಆಗಾಗ್ಗೆ ನಮ್ಮ ಹೃದಯಲ್ಲಾಗುವ ಪ್ರೇರಿಸುಕೆಯು, ನಾವು ಕಾರ್ಯರೂಪಕ್ಕೆ ತರುವದಕ್ಕೆ ಆತನು ಬಯಸುವ ಕೆಲಸಗಳಿಗಾಗಿ ದೇವರು ನಮ್ಮನ್ನು ಕ್ರಿಯೆಯಲ್ಲಿ ಚಲಿಸುವಂತೆ ಮಾಡುವಂತದ್ದಾಗಿದೆ.

ಹಗ್ಗಾಯ-1:14

**ಕೂಡಲೆ ಶೆಯಲ್ತಿಯೇಲನ ಮಗನೂ ಯೆಹೂದ ದೇಶಾಧಿಪತಿಯೂ ಆದ ಜೆರುಬ್ಬಾಬೆಲ್, ಯೆಹೋಚಾದಕನಿಗೆ ಹುಟ್ಟಿದ ಮಹಾಯಾಜಕನಾದ ಯೆಹೋಶುವ, ಸಮಸ್ತಜನ ಶೇಷ ಇವರೆಲ್ಲರ ಮನಸ್ಸುಗಳನ್ನು ಯೆಹೋವನು ಪ್ರೇರಿಸಲು ಅವರು ಯೆಹೋವನ ಆಲಯದ ಕೆಲಸಕ್ಕೆ ಕೈ ಹಾಕಿದರು.**

ಯೆರೂಸಲೇಮಿನ ಆಲಯದ ಪುನ:ಕಟ್ಟುವಿಕೆಯ ಕೆಲಸವು ಹದಿನಾರು ವರುಷಗಳವರೆಗೆ ಬಿಡಲ್ಪಟ್ಟಿತ್ತು. ಆಲಯದ ಪುನ:ಕಟ್ಟುವಿಕೆಯ ಕೆಲಸಕ್ಕೆ ಹಿಂದಿರುಗುಂತೆ ದೇವರು ದೇಶಾಧಿಪತಿ ಮಹಾಯಾಜಕ ಮತ್ತು ಎಲ್ಲಾ ಜನರ ಹೃದಯಗಳನ್ನು ಪ್ರೇರಿಸಿದನೆಂಬುದಾಗಿ ಹಗ್ಗಾಯನು ಬರೆದಿದ್ದಾನೆ. ತಮ್ಮ ಕೆಲಸಗಳಲ್ಲಿ ಜನರನ್ನು ಬಲಗೊಳಿಸಿ ಪ್ರವಾದಿಸುವದಕ್ಕೆ ದೇವರು ಪ್ರವಾದಿಗಳಾದ ಹಗ್ಗಾಯ ಮತ್ತು ಜೆಕರ್ಯನನ್ನು ಉಪಯೋಗಿಸಿದನು(ಎಜ್ರ-5:1-2). ಆದ್ದರಿಂದ ನಾವು ಇಲ್ಲಿ ನೋಡುವದೇನೆಂದರೆ, ಮಾಡಬೇಕೆಂದು ದೇವರು ಇಷ್ಟಪಟ್ಟಿದ್ದ ಕೆಲಸವನ್ನು ಕಾರ್ಯರೂಪಕ್ಕೆ ತರುವದಕ್ಕೆ ಮತ್ತು ಒಟ್ಟಾಗಿ ಸೇರಿಬರುವದಕ್ಕೆ ಅನೇಕ ಜನರು ಪ್ರೇರಿಸಲ್ಪಟ್ಟರೆಂಬುದನ್ನು ನಾವು ನೋಡುತ್ತೇವೆ. ದೇವರು ಅದೇ ರೀತಿಯ ಕೆಲಸವನ್ನು

ಈದಿನವೂ ಮಾಡುತ್ತಾನೆ, ಜನರು ಒಟ್ಟಾಗಿ ಸೇರಿಬಂದು ಆತನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವಂತೆ ಆತನು ಅವರ ಹೃದಯಗಳನ್ನು ಪ್ರೇರಿಸುತ್ತಾನೆ.

ಅಪೊ.ಕೃತ್ಯ–17:16
**ಪೌಲನು ಅವರಿಗೋಸ್ಕರ ಅಥೇನೆಯಲ್ಲಿ ಕಾದುಕೊಂಡಿರುವಾಗ ಆ ಪಟ್ಟಣದಲ್ಲಿ ಎಲ್ಲೆಲ್ಲಿಯೂ ವಿಗ್ರಹಗಳೇ ಇರುವದನ್ನು ನೋಡಿ ಅವನ ಮನಸ್ಸು ಅವನೊಳಗೆ ಕುದಿಯಿತು.**

ನಮ್ಮೊಳಗೆ ಒಂದು ಪ್ರೇರಿಸುವಿಕೆಯಾಗಿ ನಮ್ಮನ್ನು ಕ್ರಿಯೆಗೆ ಮುನ್ನಡೆಸುವದಕ್ಕೆ ಕಾರಣವಾದುದನ್ನು ನಾವು ನೋಡಿ, ಗಮನಿಸಿ ಅನುಭವಪಡುವಂತ ಸಂಗತಿಗಳನ್ನು ದೇವರು ಉಪಯೋಗಿಸುವ ಸಮಯಗಳು ಬರುತ್ತವೆ. ಇದು ಪೌಲನಿಗೆ ಸಂಭಸಿತ್ತು, ಅವನು ಅಥೇನೆ ಪಟ್ಟಣದಲ್ಲಿ ವಿಗ್ರಹಾರಾಧನೆಯನ್ನು ನೋಡಿದಾಗ ಅಲ್ಲಿನ ಜನರಿಗೆ ಸುವಾರ್ತೆಯನ್ನು ಸಾರುವದಕ್ಕೆ ಪ್ರಾರಂಭಿಸಿದನು.

ಸಾಮಾನ್ಯವಾಗಿ ನಮ್ಮ ಆತ್ಮಗಳಲ್ಲಿನ ಒಂದು ಪ್ರೇರಿಸುವಿಕೆಯು ನಾವು ತಪ್ಪಿಸಿಕೊಳ್ಳಲಾರದಂತದ್ದಾಗಿರುತ್ತದೆ. ಹೇಗಿದ್ದರೂ, ಪವಿತ್ರಾತ್ಮನ ಅಂತರಂಗದ ಸಾಕ್ಷಿಯಿಂದ ಬಂದಂತಹ ಒಂದು ಪ್ರೇರಿಸುವಿಕೆಯೊಂದಿಗೆ ಒಂದು ಪರಿಸ್ಥಿತಿಗೆ ಭಾವೋದ್ವೇಗದ ಪ್ರತಿಕ್ರಿಯೆಯನ್ನು ಕೊಡುವದಕ್ಕೆ ಗಲಿಬಿಲಿಗೊಳ್ಳದೆ ನಾವು ಜಾಗೃತರಾಗಿರುವದು ಅಗತ್ಯ.

## ಆಗಸ್ಟ್ 1982 : ಬೆಂಗಳೂರಿನ ಆರ್‌ಟಿಎಂಸಿಯಲ್ಲಿ ಪ್ರಸಂಗಿಸಿದ್ದು.

1981ರ ಅಕ್ಟೋಬರ್‌ನಲ್ಲಿ, ನಾನು ಹದಿಮೂರು ವರುಷದವನಾಗುವದಕ್ಕಿಂತ ಸ್ವಲ್ಪ ಮೊದಲು, ಕರ್ತನಾದ ಯೇಸು ಕ್ರಿಸ್ತನು ಸರಳವಾದ ಆದಾಗ್ಯೂ ನಿಶ್ಚಿತವಾದ ರೀತಿಯಲ್ಲಿ ನನ್ನ ಜೀವಿತವನ್ನು ಮುಟ್ಟಿದ್ದನು. ಕರ್ತನಾದ ಯೇಸವಿಗಾಗಿ ಒಂದು ಹೊಸದಾಗಿ ಕಂಡು ಬಂದ ಅಭಿಲಾಷೆಯು ನನ್ನ ಹೃದಯವನ್ನು ಗಟ್ಟಿಯಾಗಿ ಹಿಡಿದುಕೊಂಡಿತು. ನಾನು ಭೇಟಿಮಾಡುವ ಜನರಿಗೆ ಯೇಸು ಕ್ರಿಸ್ತನ ಸುವಾರ್ತೆಯನ್ನು ಹಂಚುವುದರ ಕುರಿತು ಸಹ ನಾನು ಅಭಿಲಾಷೆಯುಳ್ಳವನಾಗಿದ್ದೆ. ಆ ದಿವಸಗಳಲ್ಲಿ, ಕುಟುಂಬವಾಗಿ ನಾವು ಬೆಂಗಳೂರಿನ ರಿಚ್‌ಮಂಡ್ ಟೌನ್ ಮೆಥೋಡಿಸ್ಟ್(ಆರ್ ಟಿಎಂಸಿ)ಸಭೆಗೆ ಹೋಗುತ್ತಿದ್ದೆವು. ನಾವು ಈ ಸಭೆಯಲ್ಲಿ ಭಾನುವಾರ ಸಾಯಂಕಾಲ ನಡೆಯುವ ಆರಾಧನೆಗೆ ಹೋಗುತ್ತಿದ್ದೆವು. ಯೇಸುನ ಅನುಭವವಾದ ನಂತರ ಒಂದು ವರ್ಷಕ್ಕಿಂತಲೂ ಕಡಿಮೆಯಾಗಿ, ಒಂದು ವೇಳೆ ನನ್ನ ಜ್ಞಾಪಕಗಳು ನನ್ನನ್ನು ಸರಿಯಾಗಿ ನಡೆಸಿದ್ದರೆ, ಇದು 1982ರ ಆಗಸ್ಟ್‌ನ ಒಂದು ಭಾನುವಾರದ ಸಾಯಂಕಾಲ

ಆರಾಧನೆಯಲ್ಲಿ ಕುಳಿತಿದ್ದ ವೇಳೆಯಲ್ಲಿ, ಏನೋ ಒಂದು ನನ್ನೊಳಗೆ ಪ್ರೇರಿಸುವದಕ್ಕೆ ಆರಂಭವಾಯಿತು. ಹೋಗಿ ಪ್ರಾರ್ಥಿಸು ಎನ್ನುವ ಒಂದು ಬಲವಾದ ಪ್ರೇರಿಸುಕೆಯ ಅನುಭವ ನನಗಾಯಿತು. ಕಳೆದುಹೋದದ್ದಕ್ಕಾಗಿ ಒಂದು ಪ್ರೇರಿಸುವಿಕೆ ಮತ್ತು ಒಂದು ಅಭಿಲಾಷೆಯು ನನ್ನ ಹೃದಯವನ್ನು ಗಟ್ಟಿಯಾಗಿ ಹಿಡಿದಿರುವ ಹಾಗೆ ಕಂಡುಬಂದಿತು. ಹಾಗಾಗಿ ನಾನು ಎದ್ದು, ದೇವಾಲಯದ ಹೊರಗೆ ಬಂದು ಹತ್ತಿರದಲ್ಲಿದ್ದ ಕೋಣೆಗೆ ಹೋದೆ. (ಈ ಕಟ್ಟಡವು ಕೆಡವಲ್ಪಡುವವರೆಗೂ ಇದನ್ನು ಸ್ಟೀಫನ್ಸ್ ಹಾಲ್ ಎಂದು ಕರೆಯುತ್ತಿದ್ದರು). ನಾನು ಪ್ರಾರ್ಥಿಸುವದಕ್ಕೆ ಆರಂಭಿಸಿದೆ ಮತ್ತು ಯೇಸುವನ್ನು ತಮ್ಮ ರಕ್ಷಕನನ್ನಾಗಿ ತಿಳಿಯದಿದ್ದ ಸಭೆಯ ಆರಾಧನೆಯಲ್ಲಿದ್ದವರೆಲ್ಲರಿಗಾಗಿ ಒಂದು ದೊಡ್ಡದಾದ ಭಾರವನ್ನು ನಾನು ಅನುಭವಪಟ್ಟೆ. ಈ ಪ್ರಾರ್ಥನೆಯ ಸಮಯದಲ್ಲಿ, ಬೆಳಗಿನ ಮತ್ತು ಸಾಯಂಕಾಲದ ಆರಾಧನೆಯಲ್ಲಿ 15 ನಿಮಿಷ ಪ್ರಸಂಗ ಮಾಡುವದಕ್ಕೆ ನಿನಗೆ ಸಮಯವನ್ನು ಕೊಡುವಂತೆ ಸಭಾಪಾಲಕರನ್ನು ಕೇಳಿಕೋ ಎಂದು ಹೇಳುವಂತ ಅಂತರಂಗದ ಧ್ವನಿ ಕೇಳಿದ ಅನುಭವವನ್ನು ನಾನು ಹೊಂದಿದೆ. ಈ ಶಬ್ದಗಳು ಪೂರ್ತಿಯಾಗಿ ಅಪರಿಚಿತವಾದದ್ದೆಂದು ನನಗೆ ತಿಳಿಯಿತು ಆದರೆ ಈ ಅನುಭವವು, ನಾನು ಅಲ್ಲಗಳೆಯದಿರುವಂತ ಏನೋ ಒಂದು ಆಗಿತ್ತು. ನಾನು ಇದನ್ನು ನನ್ನ ಹೃದಯದಲ್ಲಿಟ್ಟುಕೊಂಡೆ. ಸಭೆಯ ಆರಾಧನೆಯು ಮುಗಿಯುವ ಹೊತ್ತಿನಲ್ಲಿ, ಒಂದು ಸಲ ನಾನು ಪ್ರೇರಿಸುಕೆ ಮತ್ತು ಭಾರವು ಎತ್ತಲ್ಪಟ್ಟಿದ್ದನ್ನು ಅನುಭಸಿದೆ, ನಂತರ ನನ್ನ ತಂದೆತಾಯಿಯನ್ನು ಭೇಟಿಯಾಗುವದಕ್ಕೆ ನಾನು ಹಿಂದಿರುಗಿದೆ. ಒಂದು ವಾರದವರೆಗೆ ನಾನು ಇದನ್ನು ನನ್ನ ಹೃದಯದಲ್ಲಿಟ್ಟುಕೊಂಡೆ, ಆ ಶನಿವಾರದಂದು ನಾನು ರೆವೆ. ರವಿ ಜೋಸೆಫ್‌ರವರನ್ನು ಭೇಟಿಯಾದೆ ಮತ್ತು ನನ್ನ ಈ ಬೇಡಿಕೆಯನ್ನು ಅವರ ಮುಂದಿಟ್ಟೆ. ಒಂದೆರಡು ವಾರದಲ್ಲಿ ನನ್ನನ್ನು ಕರೆಸಿಕೊಳ್ಳುವದಾಗಿ ಅವರು ನನಗೆ ಹೇಳಿದರು. ಪಾಸ್ಟರ್. ರವಿ ಜೋಸೆಫ್‌ರವರು ಇದನ್ನು ಹೇಗೆ ಕಾರ್ಯಗತಗೊಳಿಸುತ್ತಾರೆಂದು ನನಗೆ ತಿಳಿಯಲಿಲ್ಲ. ಆದರೆ ಸಾಕಷ್ಟು ಖಂಡಿತವಾಗಿ, ಒಂದು ವಾರದ ನಂತರ ಅವರು ನನ್ನನ್ನು ಭೇಟಿಯಾಗಿ, ಬರುವ ಭಾನುವಾರ ಬೆಳಿಗ್ಗೆ ಮತ್ತು ಸಾಯಂಕಾಲದ ಆರಾಧನೆಗಳಲ್ಲಿ 15 ನಿಷದವರೆಗೆ ಮಾತಾಡುವದಕ್ಕೆ ನನಗೆ ಅನುಮತಿ ಕೊಟ್ಟಿರುವದಾಗಿ ತಿಳಿಸಿದರು. ನಾನು ಕೇವಲ ಹದಿಮೂರು ವರುಷದವನಾಗಿದ್ದೆ, ಸಭೆಯ ಆರಾಧನೆಯಲ್ಲಿ ಪ್ರಸಂಗಿಸುವ ಯಾವ ಅನುಭವ ನನಗಿರಲಿಲ್ಲ. ಇದು ನನ್ನ ಮೊದಲ ಅನುಭವವಾಗಿತ್ತು. ಮತ್ತಾಯ 7ನೆಯ ಅಧ್ಯಾಯದಿಂದ ನಾನು ನನ್ನ ವಾಕ್ಯಭಾಗವನ್ನು ತೆಗೆದುಕೊಂಡೆ, ನನಗೆ ಸಾಧ್ಯವಾದಷ್ಟು ಉತ್ತಮವಾಗಿ ಮತ್ತು ಹೃದಯಪೂರ್ವಕವಾಗಿ ಪ್ರಸಂಗಿಸಿದೆ. ಬೆಳಗಿನ ಆರಾಧನೆಯಲ್ಲಿ ಯಾವುದೂ ಸಂಭವಿಸದಿರುವದು ಕಂಡುಬಂತು. ಆದರೆ ಆ ಭಾನುವಾರದ ಸಾಯಂಕಾಲ ನಾನು ಪ್ರಸಂಗ ಮಾಡಿದ ನಂತರ, ಬಾಲ್ಡ್ವಿನ್ಸ್ ಬಾಯ್ಸ್

ಸ್ಕೂಲ್‌ನಿಂದ ಬಂದಿದ್ದ ಸುಮಾರು 30 ಜನ ಯೌವನಸ್ಥರು (ವಿದ್ಯಾರ್ಥಿಗಳು) ತಮ್ಮ ಜೀವಿತಗಳನ್ನು ಯೇಸು ಕ್ರಿಸ್ತನಿಗೆ ಕೊಡುವದಕ್ಕೆ ಅಲ್ಲೇ ಉಳಿದುಕೊಂಡರು. ನಾನು ಏನು ನಿರೀಕ್ಷಿಸಿದ್ದೆನೋ ಅದಕ್ಕಿಂತಲೂ ಇದು ಹೆಚ್ಚಿನದಾಗಿತ್ತು. ಆಗ ತಾನೇ ಕ್ರಿಸ್ತನಿಗೆ ತಮ್ಮ ಜೀವಿತಗಳನ್ನು ಕೊಟ್ಟಿದ್ದ ಈ ವಿದ್ಯಾರ್ಥಿಗಳನ್ನು ಫಾಲೋ ಅಪ್ ಮಾಡುವ ರೀತಿಯ ಹಾಗೆ, ನಾನು ಪ್ರತಿದಿನ ಅವರ ಶಾಲೆಗೆ ಹೋಗಿ ಊಟದ ಸಮಯದಲ್ಲಿ ಸುಮಾರು 20 ನಿಮಿಷಗಳವರೆಗೆ ಅವರನ್ನು ಸಂಧಿಸಬೇಕೆಂದು ತೀರ್ಮಾನಿಸಿದೆ. ನಾನು ನನ್ನ ಸ್ಕೂಲ್‌ನಿಂದ ಬಿಷಪ್ ಕಾಟನ್ ಬಾಯ್ಸ್ ಸ್ಕೂಲ್‌ಗೆ ಮತ್ತು ಬಾಲ್ಡ್ವಿನ್ಸ್ ಬಾಯ್ಸ್ ಸ್ಕೂಲ್‌ಗೆ ಓಡಾಡುತ್ತಿದ್ದೆ (ಕೆಲವು ದಿನ ಸೈಕಲ್ ಉಪಯೋಗಿಸಿದೆ), ಊಟದ ಸಮಯದಲ್ಲಿ ಕೇವಲ ಸುಮಾರು 20 ನಿಮಿಷಗಳವರೆಗೆ ಈ ವಿದ್ಯಾರ್ಥಿಗಳಿಗೆ ಪ್ರಸಂಗಿಸಿ ಮತ್ತೆ ಸಮಯಕ್ಕೆ ಸರಿಯಾಗಿ ನನ್ನ ಮಧ್ಯಾಹ್ನದ ತರಗತಿಗಳಿಗೆ ಓಡಿಬರುತ್ತಿದ್ದೆ. ಇದು ಪಕ್ಕದಲ್ಲಿದ್ದ ಕೆಥೆಡ್ರಲ್ ಹೈಸ್ಕೂಲ್‌ನ ವಿದ್ಯಾರ್ಥಿಗಳಿಗೂ ಸಹ ಸೇವೆ ಮಾಡುವ ಒಂದು ಸದವಕಾಶವನ್ನು ತೆರೆಯಿತು. ಹಾಗಾಗಿ ವಾರದಲ್ಲಿ ನಾಲ್ಕು ದಿವಸಗಳು ನಾನು ಬಾಲ್ಡ್‌ವಿನ್ಸ್‌ಗೂ ಮತ್ತು ವಾರದಲ್ಲಿ ಒಂದು ದಿನ ಬುಧವಾರದಂದು ಕೆಥೆಡ್ರಲ್ ಗೂ ಹೋಗುತ್ತಿದ್ದೆ. ಇದು ನನ್ನ 9ನೆಯ ತರಗತಿಯಿಂದ 12ನೆಯ ತರಗತಿಯ ಸುಮಾರು 4 ವರ್ಷಗಳವರೆಗೆ ಮುಂದುವರಿಯಿತು.(1982-1986). ಒಳಗಿನ ಒಂದು ಪ್ರೇರಿಸುವಿಕೆಯ ಮೇಲೆ ಕೆಲಸ ಮಾಡಿದ್ದು, 4 ವರ್ಷಗಳವರೆಗೆ ನನ್ನನ್ನು ಕಾರ್ಯನಿರತನನ್ನಾಗಿ ಮಾಡಿದ ಸೇವೆಯ ಒಂದು ಬಾಗಿಲನ್ನು ತೆರೆಯುವದಕ್ಕೆ ಮತ್ತು ವರ್ಷವಿದುದ್ದಕ್ಕೂ ಅನೇಕ ವಿದ್ಯಾರ್ಥಿಗಳ ಜೀವಿತಗಳನ್ನು ಮುಟ್ಟುವದಕ್ಕೆ ಕಾರಣವಾಯಿತು. ಆ ನಾಲ್ಕು ವರ್ಷಗಳಲ್ಲಿ ಜೀವಿತಗಳು ಮುಟ್ಟಿದ್ದಂತಹ ಯಾರಾದರೊಬ್ಬರನ್ನು ಪ್ರತಿ ಸಲ ಆಗಿಂದಾಗ್ಗೆ ನಾನು ಸಂಧಿಸುತ್ತಿದ್ದೇನೆ.

## 7. ಒಳಗಿನ ಮುಂತಿಳಿಯುವಿಕೆ

ದೇವರು ಒಳ್ಳೆಯವನು ತನ್ನ ಜನರೊಂದಿಗೆ ಮಾತಾಡುವವನೂ ಮತ್ತು ನಮ್ಮ ಲಾಭಕ್ಕಾಗಿ ಸಮಯಕ್ಕಿಂತ ಮೊದಲೇ ಸಂಗತಿಗಳನ್ನು ಪ್ರಕಟಿಸುವವನೂ ಆಗಿದ್ದಾನೆ. ಆತನು ಮೊದಲಿನಿಂದ ಕೊನೆಯವರೆಗೆ ಎಲ್ಲವನ್ನೂ ತಿಳಿದವನಾಗಿದ್ದಾನೆ. ಇನ್ನೂ ಸಂಭವಿಸಬೇಕಾಗಿರುವ ಸಂಗತಿಗಳನ್ನು ಆತನು ತಿಳಿದಿದ್ದಾನೆ. ಅಂತಹ ವಿಷಯಗಳನ್ನು ಆತನು ನಮಗೆ ಮಾತಾಡಿ ನಮ್ಮ ಜೀತಗಳಿಗೆ ಸಂಬಂಧಿಸಿದ ಸಂಗತಿಗಳ ಮುಂತಿಳಿಯುವಿಕೆಯನ್ನು ನಮಗೆ ಕೊಡುತ್ತಾನೆ, ಇದರಿಂದ ಮುಂದೆ ಏನು ಇಡಲ್ಪಟ್ಟಿದೆಯೋ ಅದಕ್ಕಾಗಿ ನಾವು ಸಿದ್ಧತೆಗಳನ್ನು ಮಾಡಿಕೊಳ್ಳುತ್ತೇವೆ.

ಯೆಶಾಯ-42:9

**ಇಗೋ, ಮೊದಲನೆಯ ಸಂಗತಿಗಳು ನೆರವೇರಿವೆ, ಹೊಸ ಸಂಗತಿಗಳನ್ನು ಪ್ರಕಟಿಸುತ್ತೇನೆ; ಅವು ತಲೆದೋರುವದಕ್ಕೆ ಮುಂಚೆ ಅವುಗಳನ್ನು ನಿಮಗೆ ತಿಳಿಸುತ್ತೇನೆ.**

ಯೆಶಾಯ-46:10

**ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ. ನನ್ನ ಸಂಕಲ್ಪವು ನಿಲ್ಲುವದು, ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನ ಕಾಲದಲ್ಲಿಯೇ ಅರುಹಿದ್ದೇನೆ;**

ಯೋಹಾನ-16;13ರಲ್ಲಿ ಕರ್ತನಾದ ಯೇಸು ನಮಗೆ ಕಲಿಸುವದೇನೆಂದರೆ, ಬರಲಿಕ್ಕಿರುವ ಸಂಗತಿಗಳನ್ನು ಪತ್ರಾತ್ಮನು ನಮಗೆ ತೋರಿಸಿಕೊಡುತ್ತಾನೆ. ಇದರ ಅರ್ಥವೇನೆಂದರೆ, ದೇವರಾತ್ಮನು ಸಮಯಕ್ಕಿಂತ ಮೊದಲೇ ನಮಗೆ ಸಂಗತಿಗಳನ್ನು ಪ್ರಕಟಿಸುತ್ತಾನೆ ಎಂಬದು. ವಿವಿಧ ರೀತಿಗಳ ಮೂಲಕವಾಗಿ ಪವಿತ್ರಾತ್ಮನಿಂದ ಈ ಮುಂತಿಳಿಯುವಿಕೆಯು ಬರುವ ವೇಳೆಯಲ್ಲಿ (ಉದಾ. ಪ್ರವಾದನೆಗಳು, ಕನಸುಗಳು ಇತ್ಯಾದಿ), ಒಂದು ಪ್ರಾಮುಖ್ಯವಾದ ರೀತಿಯೆಂದರೆ ಅದು ಅಂತರಂಗದ ಸಾಕ್ಷಿಯ ಮೂಲಕ. ಅಂತರಂಗದ ಸಾಕ್ಷಿಯ ಮೂಲಕವಾಗಿ ಬರಬೇಕಾಗಿರುವ ಸಂಗತಿಗಳ ಕುರಿತು ಪವಿತ್ರಾತ್ಮನು ಒಂದು ಮುಂತಿಳಿಯುಕೆಯನ್ನು, ಅಂದರೆ ಮೊದಲೇ ತಿಳಿದುಕೊಳ್ಳುವದನ್ನು ನಮಗೆ ಕೊಡುತ್ತಾನೆ. ದೇವರ ಉದ್ದೇಶಗಳ ಒಂದು ಅನಾವರಣವು ನಿಮ್ಮ ಆತ್ಮಗಳಲ್ಲಿರುತ್ತದೆ. ನೀವು ಒಂದು ಸಂಗತಿಯನ್ನು ಮೊದಲೇ ತಿಳಿದುಕೊಳ್ಳುವದರಿಂದ ನಿಮ್ಮನ್ನು ಸಿದ್ಧಪಡಿಸಿಕೊಳ್ಳುವದಕ್ಕೆ ನಿಮಗೆ ಸಾಧ್ಯವಾಗುತ್ತದೆ. ಈ ಮೊದಲು 'ಒಳಗೆ ತಿಳುಕೊಳ್ಳುವದು' ಎನ್ನುವದರಲ್ಲಿ ನಾವು ನೋಡಿರುವದಕ್ಕೆ ಇದು ತುಂಬಾ ಸರಿಹೋಲುತ್ತದೆ, ಆದರೆ ಇಲ್ಲಿರುವ ಸ್ಪಷ್ಟತೆ ಏನೆಂದರೆ, ಸಂಗತಿಗಳನ್ನು ಮೊದಲೇ ತಿಳಿದುಕೊಳ್ಳುವದರಿಂದ ನಿಮ್ಮನ್ನು ನೀವು ಸಿದ್ಧಪಡಿಸಿಕೊಳ್ಳಬಹುದು. ಅಂತರಂಗದ ಸಾಕ್ಷಿಯ ಮೂಲಕವಾಗಿ ಪವಿತ್ರಾತ್ಮನು ನಿಶ್ಚಿತ ಸಂಗತಿಗಳ ಮುಂತಿಳಿಯುಕೆಯನ್ನು ನಿಮ್ಮೊಳಗೆ ಕೊಡುತ್ತಾನೆ.

## ಸಿಮೆಯೋನ, ನೀನು ಆತನನ್ನು ಕಾಣುವದಕ್ಕಿಂತ ಮುಂಚೆ ಸಾಯುವದಿಲ್ಲ

ಲೂಕ-2:25-32

**25-ಆ ಕಾಲದಲ್ಲಿ ಯೆರೂಸಲೇಮಿನಲ್ಲಿ ಸಿಮೆಯೋನನೆಂಬ ಒಬ್ಬ ಮನುಷ್ಯನಿದ್ದನು. ಈ ಮನುಷ್ಯನು ನೀತಿವಂತನೂ ದೇವಭಕ್ತನೂ ಆಗಿದ್ದು ಇಸ್ರಾಯೇಲ್ ಜನರನ್ನು ಸಂತೈಸುವವನು ಯಾವಾಗ ಬಂದಾನೆಂದು ಹಾರೈಸುತ್ತಿದ್ದನು; ಮತ್ತು ಪತ್ರಾತ್ಮ ಪ್ರೇರಿತನಾಗಿದ್ದನು.**

**26-ಇದಲ್ಲದೆ ಕರ್ತನು ಕಳುಸಬೇಕಾದ ಕ್ರಿಸ್ತನನ್ನು ಕಾಣುವದಕ್ಕಿಂತ ಮುಂಚೆ ನೀನು ಸಾಯುವದಿಲ್ಲವೆಂದು**

**ಪವಿತ್ರಾತ್ಮನ ಮೂಲಕ ಅವನಿಗೆ ದೈವೋಕ್ತಿ ಉಂಟಾಗಿತ್ತು.**

**27–ಇವನು ಪತ್ರಾತ್ಮನ ಪ್ರೇರಣೆಯಿಂದ ದೇವಾಲಯಕ್ಕೆ ಬಂದನು; ಆಗ ತಂದೆತಾಯಿಗಳು ಯೇಸುವೆಂಬ ಮಗುವಿಗೆ ಧರ್ಮಶಾಸ್ತ್ರದಲ್ಲಿ ಹೇಳಿರುವ ಪದ್ಧತಿಯ ಪ್ರಕಾರ ನಡಿಸಬೇಕೆಂದು ಅದನ್ನು ಒಳಕ್ಕೆ ತರಲು**

**28–ಅವನು ಅದನ್ನು ತನ್ನ ಕೈಯಲ್ಲಿ ತಕ್ಕೊಂಡು ದೇವರನ್ನು ಕೊಂಡಾಡಿ,**

**29–ಒಡೆಯನೇ ನಿನ್ನ ಮಾತು ನೆರವೇರಿತು; ಈಗ ಸಮಾಧಾನದಿಂದ ಹೋಗುವದಕ್ಕೆ ನಿನ್ನ ದಾಸನಿಗೆ ಅಪ್ಪಣೆಯಾಯಿತು.**

**30–ನೀನು ನೇಮಿಸಿರುವ ರಕ್ಷಕನನ್ನು ನಾನು ಕಣ್ಣಾರೆ ಕಂಡೆನು.**

**31–ಎಲ್ಲಾ ಜನಗಳಿಗೆ ಪ್ರತ್ಯಕ್ಷನಾಗಲಿ ಎಂದು ಆತನನ್ನು ಒದಗಿಸಿಕೊಟ್ಟಿದ್ದೀ.**

**32–ಆತನು ಅನ್ಯದೇಶದವರಿಗೆ ಜ್ಞಾನೋದಯದ ಬೆಳಕು, ನಿನ್ನ ಪ್ರಜೆಯಾದ ಇಸ್ರಾಯೇಲ್ಯರಿಗೆ ಕೀರ್ತಿ ಅಂದನು.**

ಲೂಕ 2ನೆಯ ಅಧ್ಯಾಯದಲ್ಲಿ ನಾವು ಸಿಮೆಯೋನನ ಕುರಿತಾಗಿ ಓದುತ್ತೇವೆ. ಸಿಮೆಯೋನನು ಒಂದು ಹೃದಯಂಗಮವಾದ ಅನುಭವವನ್ನು ಹೊಂದಿದನು. ಅವನು ಮೆಸ್ಸೀಯನನ್ನು ನೋಡುವವರೆಗೂ ಮರಣಹೊಂದುವದಿಲ್ಲವೆಂದು ಪವಿತ್ರಾತ್ಮನಿಂದ ಅವನಿಗೆ ಪ್ರಕಟನೆಯಾಗಿತ್ತು ಎಂದು ವಾಕ್ಯವು ತಿಳಿಸುತ್ತದೆ. ಈ ಪ್ರಕಟನೆಯನ್ನು ಸಿಮೆಯೋನನು ಹೇಗೆ ಸ್ವೀಕರಿಸಿದ್ದನೆಂದು ನಮಗೆ ಗೊತ್ತಿಲ್ಲ. ಆದರೆ ತನ್ನ ಕುರಿತಾದ ಈ ಸಂಗತಿಯನ್ನು ಸಿಮೆಯೋನನು ತಿಳಿದಿದ್ದನು. ಅವನ ಭವಿಷ್ಯದ ವಿಷಯದಲ್ಲಿ ಏನೋ ಒಂದನ್ನು ಮಾಡುವದನ್ನು ಇದು ಹೊಂದಿತ್ತು. ಅವನಿಗಾಗಿ ದೇವರು ಯಾವುದನ್ನು ಸಂಕಲ್ಪಿಸಿದ್ದನೋ ಅದರ ಕುರಿತಾಗಿ ಅವನು ಮುಂತಿಳಿಕೆಯನ್ನು ಹೊಂದಿದ್ದನು. ಇನ್ನೊಂದು ತುಂಬಾ ಮನೋಹರವಾದ ಸಂಗತಿಯನ್ನು ಸಹ ನಾವು ನೋಡುತ್ತೇವೆ. ಒಂದು ನಿಶ್ಚಿತವಾದ ದಿನದಂದು, ಸಿಮೆಯೋನನು ಒಂದು ಪ್ರತ್ಯೇಕವಾದ ಸಮಯದಲ್ಲಿ ದೇವಾಲಯಕ್ಕೆ ಬರುವದಕ್ಕೆ ಪವಿತ್ರಾತ್ಮನಿಂದ ನಡೆಸಲ್ಪಟ್ಟನು; ಅವನು ಮೆಸ್ಸೀಯನನ್ನು ನೋಡುವದಕ್ಕೆ ಹೋಗುವಂತ ದಿನ ಇದಾಗಿತ್ತು ಎಂಬ ತಿಳುವಳಿಕೆಯೊಂದಿಗೆ ಹೋಗಿದ್ದನು. ಆ ದಿನದಂದು ದೇವಾಲಯದಲ್ಲಿದ್ದ ಜನರೆಲ್ಲರೂ, ಮತ್ತು ಸಿಮೆಯೋನನು, ಯೇಸುವೇ ಬರಬೇಕಾದ ಮೆಸ್ಸೀಯನೂ ಕರ್ತನ ರಕ್ಷಣೆಯೂ ಎನ್ನುವದನ್ನು ಗ್ರಹಿಸಿಕೊಂಡಿದ್ದರು. ಹಾಗಾಗಿ ಪವಿತ್ರಾತ್ಮನಿಂದ ಕೊಡಲ್ಪಡುವ ಎರಡು ಮಟ್ಟಗಳ ಮುಂತಿಳಿಯುವಿಕೆಯನ್ನು ನಾವು ನೋಡುತ್ತೇವೆ. ಒಂದು ಸಿಮೆಯೋನನ ಜೀವಿತದಲ್ಲಿ ಸಂಭವಿಸುವದಕ್ಕೆ ತೆಗೆದುಕೊಂಡ ದೀರ್ಘಕಾಲ. ಇನ್ನೊಂದು ಈ ದಿನ ಸಿಮೆಯೋನನು ಮೆಸ್ಸೀಯನನ್ನು ನೋಡಿದ ದಿನ ಮತ್ತು ಕ್ಷಣ.

ನಮ್ಮ ದಿನದಲ್ಲಿಯೂ ಪವಿತ್ರಾತ್ಮನು ಇದೇ ರೀತಿಯಲ್ಲಿ ಕೆಲಸ ಮಾಡಿ ನಮಗಾಗಿ ಮುಂದೆ ಆಗಬೇಕಾಗಿರುವ ಸಂಗತಿಗಳನ್ನು ಪ್ರಕಟಿಸುತ್ತಾನೆ.

## ಮೇ 1993 : ಮುಂದಿನ 10 ವರ್ಷಗಳಿಗಾಗಿ ಯೋಜನೆ

1993 ಮೇ ತಿಂಗಳಿನಲ್ಲಿ ಒಂದು ದಿನ, ನಾನು ಕೂತುಕೊಂಡು, ಮುಂದಿನ 10 ವರ್ಷಗಳ ಕುರಿತು ನನ್ನ ಆತ್ಮದಲ್ಲಿ (ನನ್ನೊಳಗೆ ಪ್ರಕಟಿಸುವ) ಕರ್ತನ ಸಾಕ್ಷಿಯನ್ನು ನಾನು ಏನು ಅನುಭವಪಟ್ಟೆನೋ ಅದನ್ನು ಬರೆದುಕೊಳ್ಳಲು ಪವಿತ್ರಾತ್ಮನ ಮಾತುಗಳನ್ನು ಕೇಳಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದೆ. ಮದುವೆಯಾಗುವದನ್ನು ಒಳಗೊಂಡು, ಭಾರತಕ್ಕೆ ಹಿಂತಿರುಗಿ ಬಂದದ್ದು, ಒಂದು ತಾಂತ್ರಿಕ ಕಂಪನಿಯನ್ನು ಪ್ರಾರಂಭಿಸಿದ್ದು, ಬೆಂಗಳೂರಿನಲ್ಲಿ ಸ್ಥಳೀಯ ಸಭೆಯನ್ನು ಆರಂಭಿಸಿದ್ದು ಮತ್ತು ದೇವರ ವಾಕ್ಯದ ಸೇವೆಗಾಗಿ ಪ್ರಯಾಣಿಸಿದ್ದು ಹೀಗೆ ಅನೇಕ ವಿಷಯಗಳನ್ನು ನಾನು ಬರೆದೆ. ಈ ಸಂಗತಿಗಳನ್ನು ಪವಿತ್ರಾತ್ಮನು ನನ್ನ ಆತ್ಮಕ್ಕೆ ಪ್ರಕಟಪಡಿಸಿದನೆಂದು ನಾನು ಅನುಭವ ಪಟ್ಟೆ ಮತ್ತು ಅದನ್ನೇ ನಾನು ಬರೆದುಕೊಂಡೆ. ಸಾಕಷ್ಟು ನಿಶ್ಚಿತವಾಗಿ, ನಾನು ಬರೆದಿದ್ದ ಎಲ್ಲಾ ವಿಷಯಗಳು ಮುಂದಿನ 10 ವರ್ಷಗಳಲ್ಲಿ ಸಂಭವಿಸಿದವು. ಇದು ತುಂಬಾ ಉತ್ತೇಜನಪಡಿಸುವಂತದ್ದೆಂದು ನಾನು ಕಂಡುಕೊಂಡೆ ಮತ್ತು ಮುಂದಿರುವ ಪ್ರಯಾಣಕ್ಕಾಗಿ ದೇವರು ನನ್ನ ಹೃದಯದಲ್ಲಿ ಇಡುವಂತಹ ಸಂಗತಿಗಳನ್ನು ಕಾಲಕಾಲಕ್ಕೆ ಬರೆದುಕೊಳ್ಳುವದನ್ನು ಮುಂದುವರಿಸಿದೆ. ಕೆಲವು ಸಲ ಇದು ಮುಂದಿನ ಹತ್ತು ವರ್ಷ ಅಥವಾ ಅದಕ್ಕಿಂತಲೂ ಹೆಚ್ಚಾದ ಸಮಯದ ಸಂಗತಿಗಳಿರುತ್ತಿದ್ದವು. ಒಂದು ವ್ಯಯಕ್ತಿಕ ಮಟ್ಟದಲ್ಲಿ ಇದು ಮುಂಬರುವ ಸಂಗತಿಗಳನ್ನು ನಮಗೆ ತೋರಿಸುವದಕ್ಕೆ ಇಲ್ಲಿರುವಂತ ಪವಿತ್ರಾತ್ಮನ ಅಂತರಂಗದ ಸಾಕ್ಷಿಯಿಂದ ಮುಂತಿಳಿಯುವಿಕೆಯನ್ನು ಪಡೆದುಕೊಳ್ಳುವಂತದ್ದಾಗಿತ್ತು.

## 7) ಒಳಗಿನ ಎಚ್ಚರಿಕೆ

ಒಳಗಿನ ಭರವಸೆ ಎಂಬುದರ ಕುರಿತು ನಾವು ಚರ್ಚೆ ಮಾಡಿರುವ ಹಾಗೆ, ನಾವು ಆಲೋಚಿಸುವಂತ ಪರಿಸ್ಥಿತಿಗಳು ಮತ್ತು ತೀರ್ಮಾನಗಳ ಕುರಿತು ಎಲ್ಲಿ ಪವಿತ್ರಾತ್ಮನು ತನ್ನ ಅಂತರಂಗದ ಸಾಕ್ಷಿಯ ಮೂಲಕವಾಗಿ ಸಮಾಧಾನವನ್ನೂ ಮತ್ತು ಸಂತೋಷವನ್ನೂ ಬಿಡುಗಡೆ ಮಾಡುತ್ತಾನೋ ಅಲ್ಲಿ ಅಂತರಂಗದ ಸಾಕ್ಷಿಯ ಮೂಲಕ ಒಂದು ಒಳಗಿನ ಎಚ್ಚರಿಕೆ ಸಹ ಇರುತ್ತದೆ. ಒಂದು ಬಿಗಿತನವನ್ನು, ಒಳಗೆ ಒಂದು ಅಸ್ವಸ್ಥ ಅನುಭವವನ್ನು, ಸಮಾಧಾನದ ಅಥವಾ ಸಂತೋಷದ ಕೊರತೆಯನ್ನು,

ಏನೋ ಸರಿಯಿಲ್ಲದ ಒಂದು ತಿಳುವಳಿಕೆಯನ್ನು, ಏನೋ ಕೆಟ್ಟದ್ದಾಗಿದೆ ಇತ್ಯಾದಿ, ಅಭಿಪ್ರಾಯಗಳ ಹಾಗೆ ಇದು ಬರುತ್ತದೆ. ಇವುಗಳಿಗೆ ಗಮನಕೊಡುವದು ನಮಗೆ ಅಗತ್ಯ ಮತ್ತು ಎಚ್ಚರಿಕೆಯ ಅಥವಾ ತಡೆಗಟ್ಟುವ ಕ್ರಿಯೆಯನ್ನು ತೆಗೆದುಕೊಳ್ಳಬೇಕು.

## ಪೌಲ, ಯೆರೂಸಲೇಮಿನಲ್ಲಿ ಎದುರು ನೋಡುತ್ತಿದ್ದ ತೊಂದರೆ

ಯೆರೂಸಲೇಮಿಗೆ ತನ್ನ ಯಶಸ್ವಿ ಪ್ರವಾಸದ ಕುರಿತಾಗಿ ಎಫೆಸದಿಂದ ನಾಯಕರುಗಳೊಂದಿಗೆ ಅಪೊಸ್ತಲನಾದ ಪೌಲನು ಯಾವುದನ್ನು ಹಂಚಿಕೊಂಡಿದ್ದಾನೋ ಅದನ್ನು ಉದಾಹರಣೆಗಾಗಿ ಆಲೋಚಿಸೋಣ.

ಅಪೊ.ಕೃತ್ಯ-20:22-23

**22-ಇಗೋ, ನಾನು ಈಗ ಆತ್ಮನಿರ್ಬಂಧವುಳ್ಳವನಾಗಿ ಯೆರೂಸಲೇಮಿಗೆ ಹೋಗುತ್ತೇನೆ. ಅಲ್ಲಿ ನನಗೆ ಏನು ಸಂಭಸುವದೋ ನಾನರಿಯೆ.**

**23-ನಿನಗೆ ಬೇಡಿಗಳೂ ಸಂಕಟಗಳೂ ಕಾದುಕೊಂಡಿವೆ ಎಂದು ಪತ್ರಾತ್ಮನು ಎಲ್ಲಾ ಪಟ್ಟಣಗಳಲ್ಲಿಯೂ ನನಗೆ ಖಂಡಿತವಾಗಿ ಹೇಳುತ್ತಾನೆ; ಇಷ್ಟು ಮಾತ್ರ ಬಲ್ಲೆನು.**

ಪೌಲನು ಸೆರೆವಾಸವನ್ನೂ(ಬೇಡಿಗಳು) ಮತ್ತು ತೊಂದರೆಗಳನ್ನೂ(ಸಂಕಟಗಳು) ಎದುರಿಸುವಕ್ಕಿದ್ದಾನೆ ಎಂದು ಪವಿತ್ರಾತ್ಮನು ಅವನಿಗೆ ಸಾಕ್ಷಿ ಹೇಳಿದ್ದಾನೆ ಎಂದು ಅಪೊಸ್ತಲನಾದ ಪೌಲನು ಹೇಳುತ್ತಿದ್ದಾನೆ. ಗ್ರೀಕ್‌ನಲ್ಲಿ 'ಸಾಕ್ಷಿಹೇಳುವದು' ಎಂಬ ಶಬ್ದದ ಅರ್ಥವೇನೆಂದರೆ, ಪ್ರಮಾಣಿಸುವದಕ್ಕೆ, ಮನ:ಪೂರ್ವಕವಾಗಿ ಆಕ್ಷೇಪಿಸುವದಕ್ಕೆ, ಆಪಾದಿಸುವದಕ್ಕೆ, ದೃಢಪಡಿಸುವದಕ್ಕೆ ಎಂಬದೇ. ಪೌಲನು ತನ್ನ ಆತ್ಮದಲ್ಲಿ ಬಿಗಿಯಲ್ಪಟ್ಟು ಅಥವಾ ಒತ್ತಾಯಿಸಲ್ಪಟ್ಟು, ಅವನು ಆತ್ಮದಲ್ಲಿ ಕಟ್ಟಲ್ಪಟ್ಟ ಅನುಭವಪಡುವಂತೆ ಮಾಡಿ ಪವಿತ್ರಾತ್ಮನು ಪೌಲನ ವಿಷಯದಲ್ಲಿ ಹೇಗೆ ಸಾಕ್ಷಿ ಕೊಟ್ಟಿದ್ದಾನೆಂಬುದನ್ನು ಜಾಗ್ರತೆಯಿಂದ ಗಮನಿಸಿ. ಪವಿತ್ರಾತ್ಮನ ಸಾಕ್ಷಿ ಕೊಡುಕೆಯು ಪೌಲನ ಆತ್ಮದಲ್ಲಿ ಒಂದು ಕ್ಲೇಶದ ಅನುಭವವನ್ನು ಉತ್ಪತ್ತಿ ಮಾಡಿತು. ಇದು ಅಂತರಂಗದ ಸಾಕ್ಷಿಯ ಮೂಲಕ ಪವಿತ್ರಾತ್ಮನಿಂದ ಪೌಲನಿಗೆ ಕೊಡಲ್ಪಟ್ಟ ಎಚ್ಚರಿಕೆಯಾಗಿತ್ತು. ಅಪಾಯವು ಸಮೀಪವಾಗುತ್ತಿರುವದನ್ನು ಪತ್ರಾತ್ಮನು ಎಚ್ಚರಿಸಿದಾಗ್ಯೂ, ಅಪೊಸ್ತಲನಾದ ಪೌಲನು ಯೆರೂಸಲೇಮಿಗೆ ಹೋಗುವದನ್ನು ಮುಂದಾಗಿಯೇ ಆರಿಸಿಕೊಂಡನು ಮತ್ತು ಅವನು ಏನು ಎದುರಿಸಬೇಕಾಗಿತ್ತೋ ಅದನ್ನು ಎದುರಿಸಿದನು.

ಇದೇ ರೀತಿಯಲ್ಲಿ, ನಾವು ಜನರೊಂದಿಗೆ ಪರಸ್ಪರ ಕಾರ್ಯ ಮಾಡುವಾಗ, ದೊಡ್ಡದು ಅಥವಾ ಚಿಕ್ಕದಾದ ದಿನನಿತ್ಯದ ತೀರ್ಮಾನಗಳನ್ನು ಮಾಡುವಾಗ, ಪವಿತ್ರಾತ್ಮನ

ಅಂತರಂಗದ ಸಾಕ್ಷಿಯ ಮೂಲಕ ನಮ್ಮ ಆತ್ಮದಲ್ಲಿ ನಮ್ಮೊಳಗೆ ನಾವು ಎಚ್ಚರಿಕೆಯನ್ನು ಪಡೆಯುತ್ತೇವೆ. ಬಹುಮಟ್ಟಿಗೆ ನೀವು ಒಂದು ಕರಾರಿಗೆ ರುಜು ಹಾಕಬೇಕಾದಾಗ ನೀವು ನಿಮ್ಮ ಆತ್ಮದಲ್ಲಿ ಒಂದು ಅಸ್ವಸ್ಥತೆಯನ್ನು ಅನುಭವಪಡುತ್ತೀರಿ. ನಂತರ ವಿರಾಮ. ಕಾಯಿರಿ. ಇದರ ಕುರಿತು ಕರ್ತನು ಯಾವ ಎಚ್ಚರಿಕೆಯನ್ನು ನಿಮಗೆ ಕೊಡುತ್ತಿದ್ದಾನೆಂಬುದನ್ನು ನಿಶ್ಚಯಿಸುವದಕ್ಕೆ ಸಮಯ ತೆಗೆದುಕೊಳ್ಳಿರಿ. ಬಹುಮಟ್ಟಿಗೆ ನೀವು ಸಹಿ ಮಾಡಬಾರದು ಅಥವಾ ಬಹುಮಟ್ಟಿಗೆ ನೀವು ಸಹಿ ಹಾಕುವದಕ್ಕಿಂತ ಮೊದಲು ಕರಾರಿನಲ್ಲಿರುವ ಸಂಗತಿಗಳನ್ನು ಪರಿಷ್ಕರಿಸುವದು ಅಗತ್ಯವಾಗಿರುತ್ತದೆ.

## ಪವಿತ್ರಾತ್ಮನಿಗೆ ಶೀಘ್ರ ಗ್ರಾಹಿಯಾಗಿರುವಂತೆ ನಿಮ್ಮ ಆತ್ಮವನ್ನು ತರಬೇತಿಗೊಳಿಸಿರಿ

ಪವಿತ್ರಾತ್ಮನು ತನ್ನ ಅಂತರಂಗದ ಸಾಕ್ಷಿಯ ಮೂಲಕ ನಮ್ಮನ್ನು ಮುನ್ನಡೆಸುವಂತಹ ರೀತಿಗಳಲ್ಲಿ ಒಂದನ್ನು ವರಿಸುವದಕ್ಕೆ ನಾವು ಈ ಅಧ್ಯಾಯದಲ್ಲಿ ಪ್ರಯತ್ನಿಸುತ್ತೇವೆ. ನಮ್ಮ ಆತ್ಮದಲ್ಲಿ (ಹೃದಯದಲ್ಲಿ) ಪವಿತ್ರಾತ್ಮನಿಗೆ ನಾವು ಶೀಘ್ರಗ್ರಹಿಗಳಾಗುವದಕ್ಕೆ ನಮಗೆ ಇಲ್ಲಿ ಕೀಲಿಕೈ ಇದೆ.

ಆತ್ಮದ ಶೀಘ್ರಗ್ರಾಹಿಯನ್ನು ವೃದ್ಧಿಗೊಳಿಸಿಕೊಳ್ಳುವದಕ್ಕೆ ಇಲ್ಲಿ ಮಾರ್ಗಗಳಿವೆ. ಇವು ಈಗಾಗಲೇ ನಾವು ತಿಳಿದುಕೊಂಡಿರುವ ಅಭ್ಯಾಸಗಳಾಗಿವೆ ಆದರೆ ಇದರಲ್ಲಿ ನಾವು ಸ್ಥಿರವಾಗಿ ಉಳಿದುಕೊಳ್ಳಬೇಕು.

- ಸ್ತುತಿ ಆರಾಧನೆ, ವಾಕ್ಯ ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ದಿನದ ಸಮಯವನ್ನು ಕಳೆಯುವದು.
- ನೀವು ದಿನದಲ್ಲಿ ತೊಂದರೆಗೊಳಗಾದಾಗ ದೇವರೊಂದಿಗೆ ಸ್ಥಿರವಾದ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳುವದು.
- ಅನ್ಯಭಾಷೆಯಲ್ಲಿ ಹೆಚ್ಚಾಗಿ ಮಾತಾಡುವದು.
- ಸ್ತಬ್ದವಾಗಿರುವದು. ಒಂದು ನಿಶ್ಯಬ್ದವಾದ ಮತ್ತು ಶಾಂತವಾದ ಆತ್ಮವನ್ನು ಕಾಪಾಡಿಕೊಳ್ಳುವದಕ್ಕೆ ಕಲಿಯಿರಿ. ವಿರಮಿಸುವದನ್ನು ಕಲಿಯಿರಿ.
- ಬಲವಾಗಿ ತಿಳಿಯಪಡಿಸುವದು – ಸ್ತುತಿ ಆರಾಧನೆ, ಪ್ರಾರ್ಥನೆ, ಉಪವಾಸ ಮತ್ತು ದೇವರ ವಾಕ್ಯದಲ್ಲಿ ಹೆಚ್ಚಿನ ಸಮಯ ಕಳೆಯುವದು.
- ದೇವರಿಗೆ ಶೀಘ್ರಗ್ರಾಹಿಗಳಾಗಿರುವ ಇತರರೊಂದಿಗೆ ಸಮಯವನ್ನು ಕಳೆಯುವದು.

## ಒಳಗಿನ ಸಾಕ್ಷಿಯ ಖಚಿತತೆ ಪರೀಕ್ಷಿಸುವದು ಮತ್ತು ದೃಢಪಡಿಸಿಕೊಳ್ಳುವದು

ಈ ಅಧ್ಯಾಯದ ಪ್ರಾರಂಭದಲ್ಲಿ ನಾವು ತಿಳಿಸಿರುವ ಹಾಗೆ, ಸರಿಯಾಗಿ ಭಾಗಿಸಲ್ಪಟ್ಟಿರುವಂತಹ, (ಸರಿಯಾಗಿ ಭಾಷಾಂತರಿಸಲ್ಪಟ್ಟು ಅನ್ವಯಿಸಲ್ಪಟ್ಟಿರುವ) ಬರೆಯಲ್ಪಟ್ಟಿರುವ ವಾಕ್ಯಗಳ ಹೊರತಾಗಿ, ಅಂತರಂಗದ ಸಾಕ್ಷಿಗಳ ಇತರ ಶಬ್ದ ಪ್ರಯೋಗಗಳು ಉಪಯೋಗಿಸಲ್ಪಡುವದಕ್ಕಿಂತ ಮೊದಲು ಅದರ ಖಚಿತತೆ ಪರೀಕ್ಷಿಸಲ್ಪಡಬೇಕು ಮತ್ತು ದೃಢಪಡಿಸಲ್ಪಡಬೇಕು.

ನಾವು ನಮ್ಮ ಸ್ವಂತ ಮನೋಭಾವಗಳು, ಆಲೋಚನೆಗಳು ಮತ್ತು ಕಲ್ಪನೆಗಳೊಂದಿಗೆ ಗಲಿಬಿಲಿಗೊಳಗಾಗಬಹುದು ಎನ್ನುವದೇ ಅಂತರಂಗದ ಸಾಕ್ಷಿಯನ್ನು ನಾವು ಪರೀಕ್ಷಿಸುವದಕ್ಕೆ ಅಗತ್ಯವಾದ ಕಾರಣವಾಗಿದೆ. ನಮ್ಮ ಮನಸ್ಸಿನೊಳಗೆ ದುರಾತ್ಮನ ಕಲ್ಪನೆಗಳು ಮತ್ತು ಸಲಹೆಗಳು ಬರುವಂತಹ ಸಮಯಗಳು ಸಹ ಇರುತ್ತವೆ. ಮತ್ತಾಯ 16ರಲ್ಲಿ ಪೇತ್ರನಿಗೆ ಏನಾಯಿತೆಂಬುದನ್ನು ಜ್ಞಾಪಿಸಿಕೊಳ್ಳಿರಿ. ಒಂದು ಸಲ ಅವನು ತಂದೆಯಿಂದ ಬಂದ ಪ್ರಕಟನೆಯನ್ನು ಮಾತಾಡಿದನು(ಮತ್ತಾಯ-16:16-17), ಮತ್ತು ಇದಾದ ತಕ್ಷಣವೇ, ಪೇತ್ರನ ಮೂಲಕ 'ಮಾತಾಡಿದ' ಸೈತಾನನನ್ನು ಯೇಸು ಗದರಿಸಿದನು(ಮತ್ತಾಯ-16:22-23).

ಅಂತರಂಗದ ಸಾಕ್ಷಿಯ ಮೂಲಕ ನೀವು ಏನು ಹೊಂದಿಕೊಂಡಿದ್ದೀರೋ ಅದರ ಖಚಿತತೆಯನ್ನು ಪರೀಕ್ಷಿಸುವದಕ್ಕೆ ಇಲ್ಲಿ ಸರಳವಾದ ಪರೀಕ್ಷೆಗಳಿವೆ:

1) ಇದು ಬರೆಯಲ್ಪಟ್ಟ ವಾಕ್ಯಗಳಿಗೆ ಸರಿಯಾದ ರೀತಿಯಲ್ಲಿದೆಯಾ ಎಂಬುದನ್ನು ನಿಶ್ಚಿತಪಡಿಸಿಕೊಳ್ಳಬೇಕು.

   ತನ್ನ ವಾಕ್ಯಕ್ಕೆ ರುದ್ಧವಾಗಿರುವ ಒಂದು ಅಂತರಂಗದ ಸಾಕ್ಷಿಯನ್ನು ಪತ್ರಾತ್ಮನು ಎಂದಿಗೂ ನಿಮಗೆ ಕೊಡುವದಿಲ್ಲ. ಆತ್ಮ ಮತ್ತು ವಾಕ್ಯ ಸಮ್ಮತಿಕೊಡುತ್ತವೆ (1ಯೋಹಾ-5:7).

2) ನಿಮ್ಮ ಸ್ವಾಭಾಕವಾದ ಉದ್ವೇಗಗಳು ಮತ್ತು ಒಲುಮೆಗಳು ಆತ್ಮಕ್ಕೆ ಅಧೀನವಾಗಿ ಇಡಲ್ಪಟ್ಟಿವೆ ಎನ್ನುವದನ್ನು ನಿಶ್ಚಿತಪಡಿಸಿಕೊಳ್ಳಬೇಕು. ಒಂದು ವೇಳೆ ನೀವು ವೈಯಕ್ತಿಕ ಉದ್ವೇಗಗಳು ಅಥವಾ ಒಲುಮೆಗಳನ್ನು ಒಳಗೊಂಡಿದ್ದರೆ, ಎರಡರಷ್ಟು ಎಚ್ಚರಿಕೆಯುಳ್ಳವರಾಗಿರಬೇಕು. ಉದಾಹರಣೆ: ಒಬ್ಬ ಯೌವನಸ್ಥ ಹುಡುಗ ಮತ್ತು ಹುಡುಗಿ ಉದ್ವೇಗದಿಂದ ಒಳಗಾಗಿರುವ ವಿಷಯದಲ್ಲಿ, ಅವರು ಮದುವೆಯಾಗುತ್ತಾರೆಂಬ ನಂಬಿಕೆಯಿರುತ್ತದೆ, ಅವರ ಸ್ವಂತ ಉದ್ವೇಗಗಳಿಂದ

ಪವಿತ್ರಾತ್ಮನ ಅಂತರಂಗದ ಸಾಕ್ಷಿಯ ಗುಣಲಕ್ಷಣ ವರಿಸುವದು ತೀರಾ ಕಷ್ಟಕರವಾದುದಾಗಿರುತ್ತದೆ. ಆದಾಗ್ಯೂ ಅಂತಹ ಪರಿಸ್ಥಿತಿಗಳಲ್ಲಿ ನೀವು ತುಂಬಾ ವಾಸ್ತಕವಾಗಿರುವದಕ್ಕೆ ಪ್ರಯತ್ನಿಸುವಂತೆ ನಾವು ಬಲವಾಗಿ ಪ್ರೋತ್ಸಾಹಿಸುತ್ತೇವೆ.

3) ಮುನ್ನಡೆಸುವಿಕೆಯು ಯೇಸು ಕ್ರಿಸ್ತನನ್ನು ಮಹಿಮೆಪಡಿಸುತ್ತದೆ ಆದರೆ ನಿಮ್ಮನ್ನು ಅಥವಾ ನಿಮ್ಮ ಜೀತದಲ್ಲಿರುವ ಇತರ ಯಾವುದೇ ಸಂಗತಿಗಳನ್ನಲ್ಲ ಎಂಬುದನ್ನು ನಿಶ್ಚಿತಪಡಿಸಿಕೊಳ್ಳಬೇಕು.

4) ಇದು ನಿಮ್ಮ ಜೀವಿತಕ್ಕಾಗಿ ದೇವರ ಎಲ್ಲಾ ಉದ್ದೇಶ ಮತ್ತು ಯೋಜನೆಗೆ ನೇರವಾಗಿ ಇಡಲ್ಪಟ್ಟಿದೆಯಾ ಎಂಬುದನ್ನು ನೋಡಬೇಕು.

5) ಅಂತರಂಗದ ಸಾಕ್ಷಿಗೆ ಇತರ ದೃಢಪಡಿಸುವಿಕೆಗಳು ಇವೆಯೋ?

6) ಒಳಗೊಂಡಿರುವ ತೊಂದರೆಯನ್ನು ಆಲೋಚಿಸಿರಿ.

ತೊಂದರೆಯು, ದೊಡ್ಡದಿದ್ದಾಗ, ನೀವು ಹೆಜ್ಜೆ ಹೊರಗಿಡುವದಕ್ಕಿಂತ ಮೊದಲು ಅದನ್ನು ಪರೀಕ್ಷಿಸಿ ಊರ್ಜಿತಗೊಳಿಸುವದು ಹೆಚ್ಚು ಅಗತ್ಯವಾದುದಾಗಿದೆ. ಉದಾಹರಣೆಗೆ, ಒಬ್ಬ ಸ್ನೇಹಿತನನ್ನು ಕರೆದು ಅವರೊಂದಿಗೆ ಪ್ರಾರ್ಥಿಸುವದಕ್ಕೆ ಪ್ರೋತ್ಸಾಹವಾದರೆ, ಅಲ್ಲಿ ಹೆಚ್ಚು ತೊಂದರೆಯು ಒಳಗೊಂಡಿರುವದಿಲ್ಲ. ನೀವು ತಪ್ಪುಮಾಡಿದ್ದರೂ ಸಹ, ನೀವು ಕರೆದದ್ದಕ್ಕೆ ನಿಮ್ಮ ಸ್ನೇಹಿತನು ಸಂತೋಷಪಡುತ್ತಾನೆ. ಹೇಗಿದ್ದರೂ, ಇದು ಒಂದು ಮುಖ್ಯವಾದ ಒಪ್ಪಂದಕ್ಕೆ ಸಹಿ ಹಾಕುವಂತಹ ವಿಷಯವಾಗಿದ್ದು, ನೀವು ಜಾಗ್ರತೆಯಿಂದಿದ್ದು ವಿಷಯದ ಕುರಿತಾಗಿ ದೇವರು ಮಾತಾಡುವ ಇತರ ರೀತಿಗಳೊಂದಿಗೆ ಎಲ್ಲಾ ಖಚಿತತೆಯ ಪರೀಕ್ಷೆಗಳನ್ನು ಮಾಡಿ ಊರ್ಜಿತಗೊಳಿಸುವದು ಅಗತ್ಯವಾಗಿರುತ್ತದೆ.

7) ಪ್ರತಿಕ್ರಿಯೆಗಳ ಪರೀಕ್ಷೆ

ಒಂದು ನಿಶ್ಚಿತ ರೀತಿಯಲ್ಲಿ ಆತ್ಮನು ನಿಮ್ಮನ್ನು ಮುನ್ನಡೆಸುವದು ನಿಮ್ಮ ಅರಿವಿಗೆ ಬಂದರೆ, ನೀವು ಕೇಳಿಸಿಕೊಂಡಿದ್ದರ ಖಚಿತತೆಯನ್ನು ಪರೀಕ್ಷಿಸಿ ಊರ್ಜಿತಗೊಳಿಸುವದಕ್ಕೆ ಸಾಧ್ಯವಾದಾಗಲೆಲ್ಲಾ ಚಿಕ್ಕದಾದ ಸಾಧ್ಯತೆಗಳನ್ನು ತೆಗೆದುಕೊಳ್ಳಬೇಕು. ನೀವು ಸಂಗತಿಗಳನ್ನು ಪರೀಕ್ಷಿಸಿದಂತೆ, ಮುನ್ನಡೆಸುವಿಕೆಯು ನಿಮ್ಮೊಳಗೆ ಮುಂದುವರಿದಿದ್ದರೆ ಮತ್ತು ಅಲ್ಲಿ ದೃಢತೆಗಳು ಇರುತ್ತವೆ, ನಂತರ ನೀವು ಮುಂದುವರಿಯಿರಿ. ಒಂದು ಉದಾಹರಣೆಯ ಹಾಗೆ, ನೀವು ಯಾವುದಾದರೂ ಒಂದು ವ್ಯವಹಾರವನ್ನು ಪ್ರಾರಂಭಿಸಬೇಕೆಂಬ ಒಂದು ತೀವ್ರತೆಯನ್ನು ಅನುಭವಪಡುತ್ತೀರಿ ಎಂದುಕೊಳ್ಳೋಣ, ಇದರಲ್ಲಿ

ಒಳಪಡಬೇಕಾದ ಕೆಲವು ಜನರನ್ನು ನೀವು ಪಟ್ಟಿಯಲ್ಲಿ ಸೇರಿಸಬೇಕಾಗುತ್ತದೆ, ಪ್ರತ್ಯೇಕವಾದ ಮೂರು ಜನರು ಈ ಸಾಹಸ ಕಾರ್ಯದಲ್ಲಿ ನಿಮ್ಮನ್ನು ಸೇರಿಕೊಳ್ಳುತ್ತಾರೆ ಎಂದುಕೊಳ್ಳೋಣ. ಹಾಗಾಗಿ ನೀವು ಕೆಲವು ಸಮಯ ಇದಕ್ಕಾಗಿ ಪ್ರಾರ್ಥಿಸುತ್ತೀರಿ, ಅಂತರಂಗದ ಸಾಕ್ಷಿಯು ಈಗಲೂ ಇರುತ್ತದೆ. ನೀವು ಇನ್ನೂ ತೀವ್ರತೆಯನ್ನು ಅನುಭವಪಡುತ್ತಿರುತ್ತೀರಿ. ''ಪ್ರತಿಕ್ರಿಯೆಯ ಪರೀಕ್ಷೆಗಳಲ್ಲಿ '' ನಿಮ್ಮ ಮುಂದಿನ ಹೆಜ್ಜೆ ಯಾವುದೆಂದರೆ ಈ ಮೂರು ಜನರೊಂದಿಗೆ ಮಾತಾಡುವದು. ಹಾಗಾಗಿ ನೀವು ನಿಮ್ಮ ಸಿದ್ಧತೆಯನ್ನು ಮಾಡಬೇಕು. ಮೊದಲ ವ್ಯಕ್ತಿಯನ್ನು ಸಂಧಿಸಿ ನಿಮ್ಮ ಯೋಜನೆಯನ್ನು ಹಂಚಿಕೊಳ್ಳಿರಿ. ಆ ವ್ಯಕ್ತಿಯು ಸ್ವಲ್ಪ ಸಮಯವನ್ನು ತೆಗೆದುಕೊಂಡು ನಂತರ ಹಿಂದಕ್ಕೆ ಬಂದು ನಿಮ್ಮನ್ನು ಸೇರಿಕೊಳ್ಳುವದಕ್ಕೆ ತಾನು ಸಿದ್ಧನಿದ್ದೇನೆ ಎಂದು ಹೇಳುತ್ತಾರೆ. ಅನಂತರ ಇದೇ ರೀತಿಯಾಗಿ ಉಳಿದ ಇಬ್ಬರೊಂದಿಗೂ ನಿಮ್ಮ ಯೋಜನೆಯನ್ನು ಹಂಚಿಕೊಳ್ಳಿರಿ. ಅವರೂ ಸಹ ಸಮಯವನ್ನು ತೆಗೆದುಕೊಂಡು ಹಿಂದಕ್ಕೆ ಬಂದು ನಿಮ್ಮೊಂದಿಗೆ ಸೇರಿಕೊಳ್ಳುವದಕ್ಕೆ ಸಿದ್ಧರಿದ್ದೇವೆ ಎಂದು ಹೇಳುತ್ತಾರೆ. ನೀವು ದೀರ್ಘವಾಗಿ ಪ್ರತಿಕ್ರಿಯೆಗಳನ್ನು ಪರೀಕ್ಷಿಸಿದ್ದೀರಿ ಹಾಗಾಗಿ ಸಂಗತಿಗಳು ಉತ್ತಮವಾಗಿ ನೆರವೇರಿವೆ. ನಿಮ್ಮ ಆತ್ಮದಲ್ಲಿರುವ ಅಂತರಂಗದ ಸಾಕ್ಷಿಯು ಬಲವಾದುದು ಮತ್ತು ಸ್ಪಷ್ಟವಾದುದು ಆಗಿದೆ. ಇಲ್ಲಿಯವರೆಗೂ ಇದರ ಕುರಿತು ನಿಮ್ಮ ಹೃದಯದಲ್ಲಿ ಸಮಾಧಾನವಿದೆ. ಮುಂದಿನ ಹೆಜ್ಜೆಗಳೊಂದಿಗೆ ನೀವು ಮುಂದುವರಿಯಬಹುದು. ಒಂದು ವೇಳೆ ಅವರಲ್ಲಿ ಒಬ್ಬರು ಅಥವಾ ಮೂವರು ಸಹ ಹಿಂದಕ್ಕೆ ಬಂದು ತಾವು ನಿಮ್ಮೊಂದಿಗೆ ಸೇರಿಕೊಳ್ಳುವದಕ್ಕೆ ಸಿದ್ಧರಿಲ್ಲ ಎಂದು ಹೇಳಿದ್ದರೆ ಆಗ ನೀವು ದೇವರ ಬಳಿಗೆ ಹೋಗಿ ನಿಮ್ಮ ಆತ್ಮದಲ್ಲಿ ನೀವು ಏನು ಅನುಭವಪಟ್ಟಿರೋ ಅದರ ಕುರಿತು ದೇವರನ್ನು ಕೇಳುವ ಅಗತ್ಯವಿರುತ್ತಿತ್ತು. ನೀವು ಮುಂದುವರಿಯುತ್ತೀರೋ ಅಥವಾ ನಿಲ್ಲಿಸುತ್ತೀರೋ ಇಲ್ಲವೇ ಕೇವಲ ತಡೆಹಿಡಿದು ನಂತರದಲ್ಲಿ ಮತ್ತೆ ಪ್ರಾರಂಭಿಸುತ್ತೀರೋ? ಯಾವ ಬದಲಾವಣೆಗಳನ್ನು ಮಾಡುವದು ನಿಮಗೆ ಅಗತ್ಯವಾಗಿದೆ?

## ಪರ್ಯಾಲೋಚನೆ

ಪವಿತ್ರಾತ್ಮನು ನಮ್ಮೊಳಗೆ ಬರುವಂತಹ ಎಂಟು ರೀತಿಗಳನ್ನು ನಾವು ಪೂರೈಸಿದ್ದೇವೆ. ಇವುಗಳನ್ನು ಪುನರಾವಲೋಕನ ಮಾಡಿಕೊಂಡು ಇವುಗಳಲ್ಲಿ ಒಂದು ಅಥವಾ ಹೆಚ್ಚು ಅನುಭವವನ್ನು ಈಗಾಗಲೇ ನೀವು ಹೊಂದಿದ್ದೀರೋ ಎಂಬುದನ್ನು ನೋಡಿಕೊಳ್ಳಿರಿ. ಪವಿತ್ರಾತ್ಮನ ಅಂತರಂಗದ ಸಾಕ್ಷಿಯನ್ನು ನೀವು ಹೊಂದಿಕೊಂಡಿರುವ ಒಂದು ಅಥವಾ ಎರಡು ಅನುಭವಗಳನ್ನು ಹಂಚಿಕೊಳ್ಳಿರಿ/ ಬರೆಯಿರಿ.

1) ವಾಕ್ಯದ ಜಾಗೃತಗೊಳಿಸುವಿಕೆ

2) ಒಳಗಿನ ಭರವಸೆ

3) ಒಳಗಿನ ಅಪೇಕ್ಷೆ

4) ಒಳಗಿನ ಎಚ್ಚರಿಕೆ

5) ಒಳಗಿನ ತೀವ್ರತೆ

6) ಒಳಗಿನ ಪ್ರೇರಿಸುವಿಕೆ

7) ಒಳಗಿನ ಮುಂಚಿನ ತಿಳುವಳಿಕೆ

8) ಒಳಗಿನ ಎಚ್ಚರಿಕೆ

# 5

# ಪವಿತ್ರಾತ್ಮನ ಧ್ವನಿ

ಸತ್ಯವೇದದ ದೇವರು ತನ್ನ ಜನರೊಂದಿಗೆ ಮಾತಾಡುವಂತ ದೇವರಾಗಿದ್ದಾನೆ. ಈ ದಿನವೂ ಸಹ ಪವಿತ್ರಾತ್ಮನು ನಮ್ಮೊಂದಿಗೆ ಮಾತಾಡುತ್ತಾನೆ. ದೇವರ ಸ್ವರವನ್ನು ಕೇಳಿಸಿಕೊಂಡಿರುವ ಪುರುಷ ಮತ್ತು ಮಳೆಯರನ್ನು ಸತ್ಯವೇದದುದ್ದಕ್ಕೂ ನಾವು ನೋಡುತ್ತೇವೆ. ಪವಿತ್ರಾತ್ಮನು ಒಬ್ಬ ವ್ಯಕ್ತಿಗೆ ಅಥವಾ ಒಂದು ಗುಂಪಿನ ಜನರಿಗೆ ಮಾತಾಡಿರುವದನ್ನು ನಾವು ಓದಿದ ಅನೇಕ ಉದಾಹರಣೆಗಳೂ ಇವೆ.

## ವಾಕ್ಯದಲ್ಲಿ ನಮಗಾಗಿ ಬರೆಯಲ್ಪಟ್ಟಿರುವ ಕೆಲವೊಂದು ಘಟನೆಗಳನ್ನು ಆಲೋಚಿಸೋಣ:

ಯೆಹೆಜ್ಕೇಲ–3:24

**ದೇವರಾತ್ಮವು ನನ್ನೊಳಗೆ ಹೊಕ್ಕು ನಾನು ಎದ್ದು ನಿಂತುಕೊಳ್ಳುವಂತೆ ಮಾಡಿದ ಮೇಲೆ ಆತನು ನನಗೆ ಹೀಗೆ ಹೇಳಿದನು – ನೀನು ಹೋಗಿ ನಿನ್ನ ಮನೆಯೊಳಗೆ ಅಡಗಿಕೋ.**

ಯೆಹೆಜ್ಕೇಲ–11:5

**ಆಗ ಯೆಹೋವನ ಆತ್ಮವು ನನ್ನಲ್ಲಿ ಆವೇಶಿಸಲು ಹೀಗೆ ಸಾರಬೇಕೆಂದು ಅಪ್ಪಣೆಯಾಯಿತು. ಯೆಹೋವನು ಇಂತೆನ್ನುತ್ತಾನೆ – ಇಸ್ರಾಯೇಲ್ ವಂಶದವರೇ, ನೀವು ಹೀಗೆ ಮಾತಾಡುತ್ತಿದ್ದೀರಿ, ಸರಿ; ನಿಮ್ಮ ಮನಸ್ಸಿನಲ್ಲಿ ಹುಟ್ಟಿರುವ ಆಲೋಚನೆಗಳು ನನಗೆ ಗೊತ್ತೇ ಇವೆ.**

ಅಪೊ.ಕೃತ್ಯ–8:29

**ದೇವರಾತ್ಮನು ಫಿಲಿಪ್ಪನಿಗೆ – ನೀನು ಆ ರಥದ ಹತ್ತಿರ ಹೋಗಿ ಅದರ ಸಂಗಡಲೇ ನಡೆ ಎಂದು ಹೇಳಿದನು.**

ಅಪೊ.ಕೃತ್ಯ–10:19

**ಪೇತ್ರನು ಆ ದರ್ಶನದ ವಿಷಯದಲ್ಲಿ ಆಲೋಚನೆ ಮಾಡುತ್ತಿರಲು ದೇವರಾತ್ಮನು ಅವನಿಗೆ – ಅಗೋ ಇಬ್ಬರು ಮನುಷ್ಯರು ನಿನ್ನನ್ನು ವಿಚಾರಿಸುತ್ತಾರೆ;**

ಅಪೊ.ಕೃತ್ಯ–13:2

**ಇವರು ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು – ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು.**

ಈ ಎಲ್ಲಾ ವಚನಗಳಲ್ಲಿ ಪವಿತ್ರಾತ್ಮನು ನಿರ್ಧಿಷ್ಟವಾಗಿ ಮಾತಾಡಿರುವದನ್ನು ನಾನು ನೋಡುತ್ತೇವೆ. ಹೇಗಿದ್ದರೂ ಆತ್ಮನು ಹೇಗೆ ಮಾತಾಡುತ್ತಾನೆಂಬುದು ತಿಳಿಸಲ್ಪಟ್ಟಿಲ್ಲ.

ಪವಿತ್ರಾತ್ಮನ ಸ್ವರವು, ಅಥವಾ ಆತ್ಮನು ಮಾತಾಡುವದು ಪವಿತ್ರಾತ್ಮನ ಅಂತರಂಗದ ಸಾಕ್ಷಿಯಂತೆ ಹೆಚ್ಚು ಬಲವಾದುದಾಗಿದೆ. ನಾವು ಪವಿತ್ರಾತ್ಮನ ಮುನ್ನಡೆಸುಕೆಯನ್ನು ಹೊಂದಿಕೊಳ್ಳುವದರಲ್ಲಿ ಅಂತರಂಗದ ಸಾಕ್ಷಿಯು ಒಂದು ಸಾಮಾನ್ಯವಾದ ರೀತಿಯಾಗಿದೆ. ನಾವು ಮುಂದಿನ ಅಧ್ಯಾಯಗಳಲ್ಲಿ ಹೇಳಿರುವ ಹಾಗೆ ಅಂತರಂಗದ ಸಾಕ್ಷಿಯು ಪವಿತ್ರಾತ್ಮನು ನಮ್ಮ ಆತ್ಮದಲ್ಲಿ ಕೊಟ್ಟಿರುವ ಮನವರಿಕೆ, ತಿಳಿದುಕೊಳ್ಳುವದು, ಭರವಸೆ, ಅಭಿಪ್ರಾಯಗಳು, ಮನೋಭಾವಗಳು ಮತ್ತು ಭಾವೋದ್ರೇಕಗಳ ಮೂಲಕ ನಮಗೆ ಬರುತ್ತದೆ. ಆತ್ಮನ ಸ್ವರವು ನಮ್ಮ ಆತ್ಮದೊಳಗೆ ಬಿಡುಗಡೆಯಾದ ಶಬ್ದವಾಗಿದ್ದು ಹೆಚ್ಚು ಬಲವಾದ, ಸ್ಪಷ್ಟವಾದ ಮತ್ತು ಕೆಲವೊಂದು ವಿಷಯಗಳಲ್ಲಿ ಗಟ್ಟಿಯಾದ ರೀತಿಯಲ್ಲಿ ಬರುವಂತದ್ದಾಗಿದೆ. ಆತ್ಮನ ಸ್ವರವು ಆಗಾಗ್ಗೆ (ಯಾವಾಗಲೂ ಅಲ್ಲ) ಹೆಚ್ಚು ಉಪದೇಶಪರವಾದದು ಮತ್ತು ನಿರ್ದೇಶಕವುಳ್ಳದ್ದೂ ಆಗಿರುತ್ತದೆ.

ಎರಡೂ ವಿಷಯಗಳಲ್ಲಿ, ಅಂದರೆ ಆತ್ಮನ ಅಂತರಂಗದ ಸಾಕ್ಷಿ ಮತ್ತು ಆತ್ಮನ ಸ್ವರ ಇವೆರಡರ ಮೂಲಕ, ಪವಿತ್ರಾತ್ಮನು ನಮಗೆ ಒಂದು ಸಂದೇಶವನ್ನು ತಿಳಿಸುತ್ತಿರುತ್ತಾನೆ ಮತ್ತು ಸಂಪರ್ಕಿಸುತ್ತಿರುತ್ತಾನೆ. ಅಂತರಂಗದ ಸಾಕ್ಷಿಯು ನಮ್ಮ ಆತ್ಮದಲ್ಲಿ ಅಭಿಪ್ರಾಯಗಳ ಹಾಗೆ ಬರುತ್ತದೆ. ಆತ್ಮನ ಸ್ವರವು ನಮ್ಮ ಆತ್ಮದಲ್ಲಿ ಮಾತುಗಳ ಹಾಗೆ ಬರುತ್ತದೆ.

ಆಗಾಗ್ಗೆ ಆತ್ಮನ ಸ್ವರವು ದರ್ಶನಗಳು, ಕನಸುಗಳು, ಅಥವಾ ಪ್ರವಾದನೆಗಳು ಇಲ್ಲವೆ ಆತ್ಮನ ಇತರ ವರಗಳ ಹಾಗೆ ಇತರ ಭಾವಗಳೊಂದಿಗೆ ಜೊತೆಯಾಗಿರುತ್ತದೆ. ಈ ಅಧ್ಯಾಯದಲ್ಲಿ ನಾವು ಆತ್ಮನ ಸ್ವರವನ್ನು ಮಾತ್ರ ಚರ್ಚಿಸಿದ್ದಾಗ್ಯೂ ನಾವು ಇದನ್ನು ಜ್ಞಾಪಕದಲ್ಲಿಟ್ಟುಕೊಂಡಿರಲೇಬೇಕು.

ನಾವು ಅರ್ಥಮಾಡಿಕೊಳ್ಳುವದಕ್ಕೆ ಸಹಾಯವಾಗುವಂತೆ, ಪವಿತ್ರಾತ್ಮನ ಸ್ವರವು ಈ ಕೆಳಗಿನ ರೀತಿಯಲ್ಲಿ ವಿಶಾಲವಾಗಿ ವಿಂಗಡಿಸಲ್ಪಟ್ಟಿದೆ.

1) ಅಂತರಂಗದ ಸ್ವರ
2) ಕಿವಿಗೆ ಕೇಳಿಸುವಂಥ ಸ್ವರ
3) ಪ್ರವಾದನೆಯಲ್ಲಿ ಆತ್ಮನ ಸ್ವರ

## 1) ಪವಿತ್ರಾತ್ಮನ ಅಂತರಂಗದ ಸ್ವರ

ಪವಿತ್ರಾತ್ಮನ ಅಂತರಂಗದ ಸ್ವರವು ದೇವರು ನಮ್ಮೊಂದಿಗೆ ಸ್ಪಷ್ಟವಾಗಿ ಮಾತಾಡುವಂತದ್ದಾಗಿದೆ. ನಾವು ಒಂದು ಶಬ್ದವನ್ನು ಕೇಳಿಸಿಕೊಳ್ಳುವದಿಲ್ಲ, ಆದರೆ ನಾವು ಸಂದೇಶವನ್ನು ಸ್ಪಷ್ಟವಾಗಿ ಪಡೆದುಕೊಳ್ಳುತ್ತೇವೆ. ಇದು ಶಬ್ದದ ಮಾಧ್ಯಮಲ್ಲದೆ ನಮ್ಮ ಆತ್ಮದೊಳಗೆ ಬರುವಂತ ಮಾತುಗಳ (ವರ್ತಮಾನ, ತಿಳುವಳಿಕೆ) ರೀತಿಯಲ್ಲಿರುತ್ತದೆ. ಅಂತರಂಗದ ಸ್ವರವು ಕರ್ತನಿಂದ ಒಂದು ಸಾಲು ಅಥವಾ ನಿರ್ದೇಶನದ ಅಥವಾ ಉಪದೇಶದ ವಾಕ್ಯದ ಹಾಗೆ ಆಗಾಗ್ಗೆ ಬರುತ್ತದೆ.

ನಾವು ಇದನ್ನು ಪೂರ್ಣ ಖಚಿತತೆಯೊಂದಿಗೆ ಹೇಳದಿರುವ ವೇಳೆಯಲ್ಲಿ, ಯೆಹೆಜ್ಕೇಲನ (ಯೆಹೆ-3:24; 11:5), ಫಿಲಿಪ್ಪನ (ಅಪೊ.ಕೃತ್ಯ-8:29) ಮತ್ತು ಪೇತ್ರನ (ಅಪೊ. ಕೃತ್ಯ-10:19) ಸಂಗತಿಗಳಲ್ಲಿ ಮೇಲೆ ನಾವು ಸೂಚಿಸಿರುವ ವಾಕ್ಯಗಳ ಹಾಗೆ ಆತ್ಮನು ಅವರಿಗೆ ಅಂತರಂಗದ ಸ್ವರದ ಮೂಲಕವಾಗಿ ಮಾತಾಡುವದು ಸಾಧ್ಯವಾಗುತ್ತದೆ. (ನಾವು ಇದರ ಕುರಿತು ಚರ್ಚಿಸುವದಿಲ್ಲ). ಕರ್ತನ ವಾಕ್ಯವು ನನಗೆ ಬಂದಿತು ಎಂದು ಪ್ರವಾದಿಗಳು ಹೇಳುವ ಹಾಗೆ ಸಹ ಇದು ಇರುತ್ತದೆ, ಕೆಲವು ಸಂಗತಿಗಳಲ್ಲಿ ಇದು ಪವಿತ್ರಾತ್ಮನ ಅಂತರಂಗದ ಸ್ವರದ ಮೂಲಕವಾಗಿ ಬರುವಂತಾದ್ದು ಆಗಿದೆ.

ಹಿಂದಿನ ಅಧ್ಯಾಯದಲ್ಲಿ, ಒಳಗಿನ ಪ್ರೇರಿಸುವಿಕೆ ಎನ್ನುವದರ ಅಡಿಯಲ್ಲಿ ನಾನು ಒಂದು ಉದಾಹರಣೆಯನ್ನು ಹಂಚಿಕೊಂಡಿದ್ದೆ, ಅದರಲ್ಲಿ ಒಂದು ಬಲವಾದ ಪ್ರೇರಿಸುವಿಕೆಯೊಂದಿಗೆ ಅಂತರಂಗದ ಸ್ವರವು, ಏನಾದರೊಂದನ್ನು ಮಾಡುವದಕ್ಕೆ ನನಗೆ ಸ್ಪಷ್ಟವಾಗಿ ನಿರ್ದೇಶಿಸಿದ್ದನ್ನು ತಿಳಿಸಿದ್ದೆ. ಇದು ಇಂದು ಸರಳವಾದ ಆದೇಶವಾಗಿತ್ತು ಆದರೆ ಮುಂದಿನ ನಾಲ್ಕು ವರ್ಷಗಳಿಗಾಗಿ ಸೇವೆಯ ಒಂದು ಬಾಗಿಲನ್ನು ತೆರೆದಿತ್ತು. ನಾನು ಇದನ್ನು ಆಗಸ್ಟ್ 1982: ಆರ್‌ಟಿಎಂಸಿ, ಬೆಂಗಳೂರು ಇದರ ಅಡಿಯಲ್ಲಿ ಹಂಚಿಕೊಂಡಿದ್ದೆ.

ಪವಿತ್ರಾತ್ಮನ ಅಂತರಂಗದ ಸ್ವರದ ಇನ್ನೂ ಕೆಲವು ಉದಾಹರಣೆಗಳನ್ನು ಇಲ್ಲಿ ಹಂಚಿಕೊಳ್ಳುವದಕ್ಕೆ ನಾನು ಸ್ವಾತಂತ್ರ್ಯವನ್ನು ತೆಗೆದುಕೊಳ್ಳುತ್ತಿದ್ದೇನೆ. ಪವಿತ್ರಾತ್ಮನು ಅಂತರಂಗದ ಸಾಕ್ಷಿಯ ಮೂಲಕ ಅಥವಾ ಅಂತರಂಗದ ಸ್ವರದ ಮೂಲಕವಾಗಿ ಹೇಗೆ ಮಾತಾಡಿದರೂ ಪವಿತ್ರಾತ್ಮನಿಂದ ಮುನ್ನಡೆಸಲ್ಪಡುವದು ಉತ್ತೇಜಿಸುವಂತದ್ದಾಗಿದೆ.

## ಜನವರಿ 1989: ಮಣಿಪಾಲದಲ್ಲಿ ವಿಶ್ವಾಸಿಗಳ ಅನ್ಯೋನ್ಯತೆಯ ಕೂಟಗಳನ್ನು ಪ್ರಾರಂಭಿಸಿದ್ದು.

ಜುಲೈ 1986 ರಲ್ಲಿ, ಮಣಿಪಾಲ್ ಇನ್ಸ್ಟಿಟ್ಯೂಟ್‌ನಲ್ಲಿ (ಎಮ್‌ಐಟಿ), ಎಂಜಿನಿಯರಿಂಗ್‌ನಲ್ಲಿ ನನ್ನ ಪದವಿಪೂರ್ವ ಅಧ್ಯಯನಗಳನ್ನು ಆರಂಭಿಸುವದಕ್ಕೆ ನಾನು ಮಣಿಪಾಲಕ್ಕೆ ಹೋದೆ. ನನ್ನ ಶಿಕ್ಷಣವನ್ನು ಮುಗಿಸಿ ನನ್ನ ಪ್ರಥಮ ಪದವಿಯನ್ನು ಪಡೆದುಕೊಳ್ಳುವದಕ್ಕಿಂತಲೂ ದೊಡ್ಡದಾಗಿದ್ದಂತ ಒಂದು ಉದ್ದೇಶಕ್ಕಾಗಿ ನಾನು ಅಲ್ಲಿಗೆ ಹೋಗಿದ್ದೇನೆಂಬುದನ್ನು ನಾನು ತಿಳಿದಿದ್ದೆ. ಆದದರಿಂದ, ನಾನು ಪ್ರಾರ್ಥನೆ ಮಾಡುತ್ತಲೇ ಇದ್ದು, ನಾನು ಅಲ್ಲಿದ್ದು ಏನು ಮಾಡಬೇಕೆಂದು ಮತ್ತು ಆತನ ರಾಜ್ಯಕ್ಕಾಗಿ ನನ್ನ ಸಹ-ವಿದ್ಯಾರ್ಥಿಗಳ ಮೇಲೆ ನಾನು ಹೇಗೆ ಪರಿಣಾಮವನ್ನುಂಟುಮಾಡಿ ಪ್ರಭಾವ ಬೀರಬೇಕೆಂದು ಆತನು ಬಯಸುತ್ತಾನೆಂದು ನಾನು ದೇವರಲ್ಲಿ ಕೇಳುತ್ತಿದ್ದೆ. ಮೊದಲನೇ ವರ್ಷದಲ್ಲಿ (1986-87) ನಾನು ಕೆಲವು ವಿಶ್ವಾಸಿಗಳನ್ನು ಭೇಟಿಮಾಡಿ ಅವರೊಂದಿಗೆ ಪವಿತ್ರಾತ್ಮನ ದೀಕ್ಷಾಸ್ನಾನದ ಕುರಿತಾಗಿ ಹಂಚಿಕೊಂಡ ಸಂತೋಷವನ್ನು ಹೊಂದಿದೆ. ಅವರಲ್ಲಿ ಕೆಲವರು ಆತ್ಮನಿಂದ ತುಂಬಲ್ಪಟ್ಟು ಅನ್ಯಭಾಷೆಯಲ್ಲಿ ಮಾತಾಡುವದಕ್ಕೆ ಆರಂಭಿಸಿದರು. ಎರಡನೆಯ ವರ್ಷ ಕಾಲೇಜಿನಲ್ಲಿ(1987-88) ವಿದ್ಯಾರ್ಥಿಗಳನ್ನು ತಲುಪುವ ಹಾಗೆ ವ್ಯಾಲಿ ವ್ಯೂ ಹೋಟೆಲ್‌ನಲ್ಲಿ ಮತ್ತು ಎಮ್‌ಐಟಿ ಸಭಾಂಗಣದಲ್ಲಿ ನಾನು ಜನವರಿ 1989ರಲ್ಲಿ ನನ್ನ ಮೂರನೆಯ ವರ್ಷದ (1988-89) ಅವಧಿಯಲ್ಲಿ ಕೆಲವು ಕೂಟಗಳನ್ನು ನಡೆಸಿದೆ. ನಾನು ಬೆಂಗಳೂರಿನಲ್ಲಿದ್ದೆ, ಕೆಲವು ದಿವಸಗಳಲ್ಲಿಯೇ ಮಣಿಪಾಲಕ್ಕೆ ಹಿಂದಿರುಗಬೇಕಾಗಿತ್ತು. ನಾನು ಮನ:ಪೂರ್ವಕವಾಗಿ ಆತ್ಮದಲ್ಲಿ ಪ್ರಾರ್ಥಿಸುತ್ತಿದ್ದೆ, ಅನ್ಯಭಾಷೆಯಲ್ಲಿ ಮಾತಾಡುತ್ತಾ, ಮಣಿಪಾಲದಲ್ಲಿ ನಾನು ಏನು ಮಾಡಬೇಕೆಂದು ಆತನು ಆಶಿಸುತ್ತಿದ್ದಾನೆಂಬುದನ್ನು ದೇವರಿಗೆ ಕೇಳುತ್ತಿದ್ದೆ. ನನಗೆ ಅಲ್ಲಿ ಓದುವದಕ್ಕೆ ಮೂರು ಸೆಮಿಸ್ಟರ್‌ಗಳು ಮಾತ್ರ ಇತ್ತು, ಮತ್ತು ಆ ಸ್ಥಳವನ್ನು ಬಿಡುವದಕ್ಕಿಂತ ಮೊದಲು ಅಲ್ಲಿ ಏನಾದರೂ ಒಂದು ವ್ಯತ್ಯಾಸವನ್ನು ಮಾಡಬೇಕೆಂದು ನಾನು ಬಯಸಿದ್ದೆ. ಪ್ರಾರ್ಥನೆಯ ಈ ಸಮಯದಲ್ಲಿ ನಾನು ಅಂತರಂಗದ ಆತ್ಮನ ಸ್ವರವನ್ನು, ಇದರ ಜೊತೆಯಲ್ಲಿ ನಾನು ಏನು ಮಾಡಬೇಕೆಂಬುದರ ಒಂದು ಆತ್ಮೀಕ ದರ್ಶನವನ್ನು ನಾನು ಹೊಂದಿಕೊಂಡೆ. ಆ ಉಪದೇಶವು ಸ್ಪಷ್ಟವಾಗಿತ್ತು. ನಾನು ಹೋಟೆಲ್‌ಗೆ ಹೋಗಿ (ವ್ಯಾಲಿ ವ್ಯೂ ಹೋಟೆಲ್) ಪ್ರತಿ ಶನಿವಾರದ ವಿಶ್ವಾಸಿಗಳ ಅನ್ಯೋನ್ಯತೆಯ ಕೂಟಗಳನ್ನು ನಡೆಸುವದಕ್ಕೆ ಅಲ್ಲಿನ ಸೆಮಿನಾರ್ ಹಾಲ್ ಅನ್ನು ಬಾಡಿಗೆಗೆ ಪಡೆದೆ. ಈ ಕೂಟಗಳು ಸ್ತುತಿ ಆರಾಧನೆ, ದೇವರ ವಾಕ್ಯದಿಂದ ಬಲವಾದ ಬೋಧನೆಯ ಸಮಯವನ್ನು ಹೊಂದಿದ್ದು, ಪ್ರಾರ್ಥನೆ ಮತ್ತು ಸೇವೆಯೊಂದಿಗೆ ಮುಗಿಯುತ್ತಿತ್ತು.

ಇದಕ್ಕೆ ವಿದ್ಯಾರ್ಥಿಗಳು ಬರಬೇಕೆಂದು ನಾನು ಕರೆಯುತ್ತಿದ್ದೆ. ನನ್ನಲ್ಲಿದ್ದ ಯಾವುದೇ ಮೂಲಗಳಾಗಲೀ (ಕ್ರೈಸ್ತ ಪುಸ್ತಕಗಳು, ಕ್ಯಾಸೆಟ್ ಟೇಪ್‌ಗಳು) ಅವರಿಗೆ ಸಿಗುವಂತೆ ನಾನು ಮಾಡುತ್ತಿದ್ದೆ, ಹಾಗಾಗಿ ಅವರು ಆತ್ಮೀಕವಾಗಿ ಬೆಳೆಯುವದಕ್ಕೆ ಇವುಗಳನ್ನು ಉಪಯೋಗಿಸಬಹುದಾಗಿತ್ತು. ಆ ಹಾಲ್‌ನ ಹಿಂದುಗಡೆಯಲ್ಲಿ ನಾನು ಒಂದು ಕಾಣಿಕೆಯ ಡಬ್ಬವನ್ನು ಇಟ್ಟಿದ್ದೆ ಮತ್ತು ಖರ್ಚು ವೆಚ್ಚಗಳಿಗಾಗಿ ಜನರು ತಮಗೆ ಇಷ್ಟ ಬಂದಷ್ಟು ದೇಣಿಗೆಯನ್ನು ಕೊಡುವದಕ್ಕೆ ಸಾಧ್ಯವಾಗಿತ್ತು. ಇದು ನಂಬಿಕೆಯ ಒಂದು ಹೆಜ್ಜೆಯಾಗಿತ್ತು. ಆದದರಿಂದ ಒಂದು ಸಲ ನಾನು ಮಣಿಪಾಲಕ್ಕೆ ಹಿಂದಿರುಗಿ ಬಂದಾಗ, 1989ರ ಜನವರಿ 26ರಂದು ಗುರುವಾರ ಅಂದು ಸಾರ್ವಜನಿಕ ರಜಾದಿನವಾದದರಿಂದ ನಾನು ವಿಶ್ವಾಸಿಗಳ ಅನ್ಯೋನ್ಯತೆಯ ಮೊದಲ ಕೂಟವನ್ನು ನಡೆಸಿದೆ. ಆ ದಿವಸದ ಕೂಟದಲ್ಲಿ ನಾನು, 1989 ಜನವರಿ 28 ಶನಿವಾರದಿಂದ ಮುಂದಿನ ಪ್ರತಿ ಶನಿವಾರಗಳಲ್ಲಿ ಇದೇ ಹೋಟೆಲ್‌ನಲ್ಲಿ ಕ್ರಮವಾಗಿ ಕೂಟಗಳನ್ನು ನಾವು ನಡೆಸುತ್ತೇವೆ ಎಂದು ನಾನು ಪ್ರಕಟಿಸಿದೆ. ಮುಂದೆ ಒಂದು ಶಕ್ತಿಯುತವಾದ ಆತ್ಮಭರಿತ, ವಾಕ್ಯಧಾರಿತ ವಿದ್ಯಾರ್ಥಿ ಅನ್ಯೋನ್ಯತೆಯ ಮಣಿಪಾಲ್ ವಿಶ್ವಾಸಿಗಳ ಅನ್ಯೋನ್ಯತೆಯ ಆರಂಭ ಇದಾಗಿತ್ತು. 1990ರ ಏಪ್ರಿಲ್ ಹೊತ್ತಿಗೆ ನಾನು ಪದವೀಧರನಾಗಿ ಮಣಿಪಾಲನ್ನು ಬಿಟ್ಟು ಹೊರಟೆ. ಅನಂತರದ ನಾಯಕರುಗಳಾದ ಡೇವಿಸ್ ಜಾನ್‌ರಾಜ್ ಮತ್ತು ಇತರ ವಿದ್ಯಾರ್ಥಿಗಳು ಈ ಅನ್ಯೋನ್ಯತೆಯನ್ನು ಮುಂದುವರೆಸಿದರು, ಆ ಸಮಯದಲ್ಲಿ 200 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಪ್ರತಿ ವಾರದ ಕೊನೆಯಲ್ಲಿ ಈ ಕೂಟಗಳಿಗಾಗಿ ಸೇರಿಬರುವಂತೆ ಇದು ಬೆಳೆಯಿತು. ಮುಂಬರುವ ವರ್ಷಗಳಲ್ಲಿ ಅನೇಕ ನೂರಾರು ವಿದ್ಯಾರ್ಥಿಗಳ ಜೀವಿತಗಳು ಸೇವೆಗಳನ್ನು ಹೊಂದಿಕೊಂಡವು. ಅಂತರಂಗದ ಸ್ವರದ ಮೂಲಕವಾಗಿ ಬಂದಂತ ಪವಿತ್ರಾತ್ಮನ ಮುನ್ನಡೆಸುವಿಕೆಯೊಂದಿಗೆ ಇದು ಪ್ರಾರಂಭವಾಯಿತು.

## ನವೆಂಬರ್ 22, 1993 : ಏಮಿಗೆ ಬರೆದ ಪತ್ರ

1993ರ ಮೇ ತಿಂಗಳಿನಲ್ಲಿ, ನನ್ನ ಜೊತೆಗಾತಿಯನ್ನು ಹುಡುಕಿಕೊಳ್ಳುವದಕ್ಕೆ ಪ್ರಾರ್ಥಿಸುವದರ ಕುರಿತು ನನ್ನ ಆತ್ಮದಲ್ಲಿ ನಾನು ಬಲವಾಗಿ ಅನುಭವಪಟ್ಟೆ. ನಿಜ ಹೇಳುವದಾದರೆ, ನನ್ನ ಹೆಂಡತಿಯಾಗಿ ಬರುವವಳಲ್ಲಿ ಇರಬೇಕೆಂದು ನಾನು ಇಷ್ಟಪಡುವ ಗುಣಲಕ್ಷಣಗಳನ್ನು ನನ್ನ ಪುಸ್ತಕದಲ್ಲಿ ಮೇ 4, 1993ರಂದು ನಾನು ಬರೆದುಕೊಂಡೆ (ಅದು ಇನ್ನೂ ನನ್ನ ಹತ್ತಿರ ಇದೆ). ನಾನು ಪುಟವನ್ನು ತಿರುಗಿಸಿ ನನ್ನ ಹೆಂಡತಿಗೆ ನಾನು ಏನು ತರುವದಕ್ಕೆ ಶಕ್ತನಾಗಿರಬೇಕೆಂಬುದನ್ನೂ ಬರೆದೆ. ಇದರ ಮೇಲೆ ಪ್ರಾರ್ಥಿಸುವದಕ್ಕೆ ಪ್ರಾರಂಭಿಸಿದೆ. ಆ ಸಮಯದಲ್ಲಿ, ನಾನು ಅಮೇರಿಕಾದ

ನ್ಯೂಜೆರ್ಸಿಯಲ್ಲಿದ್ದೆ, ಅಲ್ಲಿಂದಲೇ ಮಣಿಪಾಲದ ವಿದ್ಯಾರ್ಥಿ ಅನ್ಯೋನ್ಯತೆಯನ್ನು ಮುನ್ನಡೆಸುತ್ತಿದ್ದ ಕೆಲವು ನಾಯಕರುಗಳಿಗೆ ಪತ್ರಗಳನ್ನು ಬರೆಯುತ್ತಿದ್ದೆ. ಅವರನ್ನು ಉತ್ತೇಜಿಸಿ, ಅವರು ಮಾಡುತ್ತಿರುವ ಕೆಲಸದಲ್ಲಿ ಅವರನ್ನು ಸಂತೋಷವಾಗಿರಿಸುವದು ನನ್ನ ಗುರಿಯಾಗಿತ್ತು. ಇತರ ನಾಯಕರುಗಳಲ್ಲಿ, ನಾಲ್ಕು ಪತ್ರಗಳನ್ನು ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಏಮಿ ಸ್ಯೂಗೆ ನಾನು ಬರೆದಿದ್ದೆ. 1993 ನವಂಬರ್ 22ರಂದು ನಾನು ಕಾಲೇಜಿನಿಂದ ನನ್ನ ಕೋಣೆಗೆ ಅಂದರೆ ನಾನು ಉಳಿದುಕೊಂಡಿದ್ದ ರೂಮಿಗೆ ಬಂದೆ. ಆ ಮಧ್ಯಾಹ್ನ ನಾನು ಅನ್ಯಭಾಷೆಯಲ್ಲಿ ಪ್ರಾರ್ಥಿಸುತ್ತಾ ಸಮಯ ಕಳೆದೆ. ಆ ಸಮಯದಲ್ಲಿ, ''ನಿನ್ನನ್ನು ಮದುವೆ ಮಾಡಿಕೊಳ್ಳುವ ಸಾಧ್ಯತೆಯನ್ನು ಆಲೋಚಿಸುವದಕ್ಕೆ ಆಕೆಗೆ ಇಷ್ಟದೆಯಾ ಎಂದು ಏಮಿಗೆ ಪತ್ರ ಬರೆದು ಕೇಳು'' ಎಂಬ ಆತ್ಮದ ಅಂತರಂಗದ ಸ್ವರವು ಕೇಳಿಸಿತು. ಇದು ಪೂರ್ತಿ ಹಾಸ್ಯಾಸ್ಪದವಾದುದೆಂದು ನಾನು ಸ್ವಾಭಾಕವಾಗಿ ತಿಳಿದುಕೊಂಡೆ. ಆ ಸಮಯದವರೆಗೆ ನಾನು ಮತ್ತು ಏಮಿ ಇಬ್ಬರೂ ಎಂದಿಗೂ ಭೇಟಿಯಾಗಿರಲಿಲ್ಲ. ಕೆಲವು ಸಂಗತಿಗಳ ಹೊರತಾಗಿ, ನಾವು ಪರಸ್ಪರರ ಕುರಿತಾಗಿ ಕೆಲವೊಂದು ಇತರ ವಿಷಯಗಳೊಂದಿಗೆ ಆಲೋಚಿಸಿದ್ದಲ್ಲದೆ ಬೇರೇನೂ ಇರಲಿಲ್ಲ ಎನ್ನುವದು ಸಹ ನನ್ನ ಮನಸ್ಸಿಗೆ ಬಂದಿತು. ಒಂದು ವೇಳೆ ಇದು ತಪ್ಪಾದದ್ದಾಗಿದ್ದರೆ, ನಾಯಕರುಗಳೊಂದಿಗೆ ಮತ್ತು ಎಮ್‌ಬಿಎಫ್‌ನ ಅನ್ಯೋನ್ಯತೆಯೊಂದಿಗೆ ನಾನು ದೊಡ್ಡ ತೊಂದರೆಯಲ್ಲಿ ಸಿಕ್ಕಿಕೊಳ್ಳುತ್ತೇನೆ ಎನ್ನುವ ವಿಷಯದಲ್ಲಿ ನಾನು ತುಂಬಾ ಎಚ್ಚರಿಕೆಯುಳ್ಳವನಾಗಿದ್ದೆ. ಅದೂ ಅಲ್ಲದೆ, ಏಮಿ ಮಲೇಸಿಯಾದ ಚೀನಿಯಾಗಿದ್ದಳು. ನಾನು ಭಾರತೀಯನಾಗಿದ್ದೆ. ನಮ್ಮ ಕುಟುಂಬಗಳು ಹೇಗೆ ಪ್ರತಿಕ್ರಿಯಿಸುತ್ತವೆ? ಆದಾಗ್ಯೂ, ಆತ್ಮದ ಅಂತರಂಗದ ಸ್ವರದ ಜೊತೆಯೊಂದಿಗೆ, ಪತ್ರವನ್ನು ಬರೆಯುವದಕ್ಕೆ ಧೈರ್ಯವಿತ್ತು. ಕರ್ತನೇ ಈ ಪತ್ರವನ್ನು ಸ್ವೀಕರಿಸುವದಕ್ಕೆ ಏಮಿಯನ್ನು ಸಿದ್ಧಗೊಳಿಸು ಎಂದು ಒಂದು ಸರಳವಾದ ಪ್ರಾರ್ಥನೆಯನ್ನು ಮಾಡಿದೆ. ಕರ್ತನು ಹೀಗನ್ನುತ್ತಾನೆ ಎಂದು ಹೇಳದೆ, ಮತ್ತು ಯಾವುದೇ ಒತ್ತಾಯ, ನಿರ್ಬಂಧ ಅಥವಾ ಕರಾರಿಲ್ಲದೆ ನಾನು ಪತ್ರವನ್ನು ಬರೆದೆ. ಏಮಿ ತನ್ನ ತೀರ್ಮಾನವನ್ನು ತೆಗೆದುಕೊಳ್ಳುವದರಲ್ಲಿ ಸ್ವತಂತ್ರಳಾಗಿರಬೇಕೆಂದು ಮಾತ್ರ ನಾನು ಬಯಸಿದೆ. ಅದೇ ದಿನದಂದು, 1993 ನವಂಬರ್ 22ರಂದು ಮಣಿಪಾಲದಲ್ಲಿ, ಏಮಿ ತನ್ನ ಸ್ನೇಹಿತೆಯೊಂದಿಗೆ ಕಾಫಿ ಉಪಹಾರ ಸೇವಿಸುತ್ತಿರುವಾಗ, ಆ ಸ್ನೇಹಿತೆ ಏಮಿಗೆ, ಏಮಿ ಈ ಪೂರ್ವಕಲ್ಪಿತ ಪರಿಸ್ಥಿತಿಯನ್ನು ಆಲೋಚಿಸಿದ್ದೀಯಾ. ತನ್ನನ್ನು ಮದುವೆಯಾಗುವಂತೆ ಆಶೀಷ್ ನಿನ್ನನ್ನು ಕೇಳಿದರೆ ನೀನು ಏನು ಹೇಳುತ್ತೀ? ಎಂದು ಕೇಳಿದಳು. ದೇವರು ಈಗಾಗಲೇ ಏಮಿಯನ್ನು ಸಿದ್ಧಪಡಿಸಿ ಅವಳ ಆಲೋಚನೆಯನ್ನು ಪಡೆದಿದ್ದನು. ಹತ್ತು ದಿವಸಗಳ ನಂತರ, ಏಮಿ ನನ್ನ ಪತ್ರವನ್ನು ಪಡೆದುಕೊಂಡಳು. ಅಲ್ಲಿಂದ ನಾವು

ನಿಧಾನವಾಗಿ ಆದರೆ ಎಚ್ಚರಿಕೆಯಿಂದ ಮುಂದುವರಿದೆವು. ಏಮಿ 'ಆಗಲಿ' ಎಂದು ಹೇಳುವದಕ್ಕಿಂತ ಮೊದಲು ನನಗೆ ಪತ್ರವನ್ನು ಬರೆದಳು. ನಾವು ಒಬ್ಬರನ್ನೊಬ್ಬರು ತಿಳಿದುಕೊಳ್ಳುವ ವೇಳೆಯಲ್ಲಿ ಅವಳೂ ಕರ್ತನನ್ನು ಹುಡುಕಿ ಅವಳೊಂದಿಗೆ ಕರ್ತನು ಮಾತಾಡುವದನ್ನು ಅವಳೂ ಸಹ ಹೊಂದಿಕೊಳ್ಳುವದು ಮುಖ್ಯವಾದುದಾಗಿತ್ತು. ನಮ್ಮ ತಂದೆ ತಾಯಿಯರ ಒಪ್ಪಿಗೆ ಮತ್ತು ಬೆಂಬಲ ಸಿಕ್ಕುವದು ನಮಗಿಬ್ಬರಿಗೂ ಸಹ ಮುಖ್ಯವಾದುದಾಗಿತ್ತು. ಸರಿಯಾದ ಸಮಯದಲ್ಲಿ, ನಾವು ನಮ್ಮ ತಂದೆ ತಾಯಿಯರೊಂದಿಗೆ ಇದನ್ನು ಹಂಚಿಕೊಂಡಾಗ ಅವರು ನಮ್ಮನ್ನು ಬೆಂಬಲಿಸಿದರು. 1994 ರ ಆಗಸ್ಟ್‌ನಲ್ಲಿ ನಾನು ಮತ್ತು ಏಮಿ ಮೊದಲ ಸಲ ಭೇಟಿಯಾದೆವು, ನಂತರ 1995ರ ಮೇ ತಿಂಗಳಿನಲ್ಲಿ ನಾವಿಬ್ಬರೂ ವಿವಾಹವಾದೆವು. ನಾವು ಆಗ ಬರೆದುಕೊಂಡಿದ್ದ ಪತ್ರಗಳನ್ನು ಇನ್ನೂ ಇಟ್ಟುಕೊಂಡಿದ್ದೇವೆ. ಕರ್ತನು ತನ್ನ ಆತ್ಮನ ಅಂತರಂಗದ ಸ್ವರದ ಮೂಲಕವಾಗಿ ನಮ್ಮನ್ನು ಮುನ್ನಡೆಸಿದನು, ಮತ್ತು ನಾವು ಆತನ ಕೃಪೆ ಮತ್ತು ಜ್ಞಾನದೊಂದಿಗೆ ಮುಂದೆ ಸಾಗುತ್ತಿದ್ದೇವೆ. ಈ ಪ್ರತ್ಯೇಕವಾದ ಘಟನೆಯನ್ನು ಕೆಲವು ಎಚ್ಚರಿಕೆಯೊಂದಿಗೆ ನಾನು ಹಂಚಿಕೊಂಡಿದ್ದೇನೆ. ಕರ್ತನು ಮಾತಾಡುವದನ್ನು ನೀವು ತಿಳಿಯದ ಹೊರತು ದಯವಿಟ್ಟು ಇದನ್ನು ನಕಲು ಮಾಡಬೇಡಿರಿ.

## ಫೆಬ್ರವರಿ 2001 : ಬೆಂಗಳೂರಿನ ಎಪಿಸಿ ಆರಂಭಿಸಿದ್ದು

ಡಿಸೆಂಬರ್ 2000ದಲ್ಲಿ ನಾವು ಕುಟುಂಬವಾಗಿ ಚಿಕಾಗೋದಿಂದ ಬೆಂಗಳೂರಿಗೆ ಬಂದೆವು. ಬೆಂಗಳೂರು ಪಟ್ಟಣದಲ್ಲಿ ಒಂದು ಸಭೆಯನ್ನು ಸ್ಥಾಪಿಸಿ ಅಲ್ಲಿಂದ ದೇಶದುದ್ದಕ್ಕೂ ಸೇವೆ ಮಾಡಬೇಕೆಂಬ ಉದ್ದೇಶದೊಂದಿಗೆ ನಾವು ಬಂದೆವು. ನಾವು ಬೆಂಗಳೂರಿಗೆ ಬರುವದಕ್ಕಾಗಿ ಸುಮಾರು ಒಂದು ವರ್ಷದವರೆಗೆ ಸಿದ್ಧತೆಗಳನ್ನು ಮಾಡಿಕೊಂಡಿದ್ದೆವು. ನೂರಾರು ಜನರು ರಕ್ಷಿಸಲ್ಪಡುವದನ್ನು ನೋಡಬಹುದಾದಂತಹ ಒಂದು ದೊಡ್ಡ ಕೂಟವನ್ನು ಮಾಡಿ ನಂತರ ಈ ಹೊಸ ವಿಶ್ವಾಸಿಗಳೊಂದಿಗೆ ಒಂದು ಸಭೆಯನ್ನು ಆರಂಭಿಸಬೇಕೆಂಬುದು ಪ್ರಾರಂಭದಲ್ಲಿ ನಮಗಿದ್ದ ಯೋಜನೆಯಾಗಿತ್ತು. ಹೇಗಿದ್ದರೂ, ನಾವು ಅಂದುಕೊಂಡಂತೆ ವಿಷಯಗಳು ನಡೆಯಲಿಲ್ಲ. ಆ ಸಮಯದಲ್ಲಿ ಆ ಮಟ್ಟದಲ್ಲಿ ಏನನ್ನಾದರೂ ಮಾಡುವದಕ್ಕೆ ಸಂಪನ್ಮೂಲಗಳಾಗಲೀ ಅಥವಾ ಜನರಾಗಲೀ ನಮಗಿರಲಿಲ್ಲ. ಆದಾಗ್ಯೂ, ಮುಂದೆ ಹೋಗುವದಕ್ಕೆ ನಾವು ನಿಶ್ಚಯಿಸಿಕೊಂಡಿದ್ದೆವು. 2001ರ ಜನವರಿ ತಿಂಗಳಿನ ವೇಳೆಯಲ್ಲಿ, ನಾನು ಹಾಲ್‌ಗಳನ್ನು ಮತ್ತು ಸ್ಥಳಗಳನ್ನು ನೋಡುವದಕ್ಕೆ ಸುತ್ತಾಡಿದೆ, ಯಾವುದನ್ನು ಅಂತಿಮಗೊಳಿಸಬೇಕೆಂಬುದು ಕಷ್ಟಕರವಾದುದೆಂದು ಕಂಡುಕೊಂಡೆ. ನಾನು ಸ್ವಲ್ಪ ನಿರಾಶೆಗೊಂಡವನಂತೆ

ಕಂಡುಬಂದೆ. ಹಾಗಾಗಿ ಒಂದು ದಿನ, ಇದರ ಕುರಿತಾಗಿ ದೇವರೊಂದಿಗೆ ನಾನು ಮಾತಾಡುತ್ತಿರುವಾಗ, ಪವಿತ್ರಾತ್ಮನ ಅಂತರಂಗದ ಸ್ವರವು ಹೀಗೆ ಹೇಳುವದನ್ನು ಕೇಳಿಸಿಕೊಂಡೆ: ನಿನ್ನಲ್ಲಿರುವದರೊಂದಿಗೆ ಪ್ರಾರಂಭಿಸು. ಇದು ಒಂದು ತುಂಬಾ ಸಾಮಾನ್ಯವಾದ ಹೇಳಿಕೆ ಎಂದು ಕಾಣಬಹುದು, ಆದರೆ ಇದು ನನಗೆ ನಿಜವಾಗಿಯೂ ಅಗತ್ಯವಾದ ಮಾರ್ಗದರ್ಶನವಾಗಿತ್ತು. ನನ್ನಲ್ಲಿ ಏನಿದೆ ಎಂಬುದರ ಕುರಿತು ನಾನು ಆಲೋಚಿಸುವದಕ್ಕೆ ಪ್ರಾರಂಭಿಸಿದೆ. ಆ ಸಮಯದಲ್ಲಿ, ನಾವು ಬೆಂಗಳೂರಿನ ಆರ್ ಟಿ ನಗರದಲ್ಲಿರುವ ನಮ್ಮ ತಂದೆಯ ಮನೆಯಲ್ಲಿ ವಾಸವಾಗಿದ್ದೆವು. ಆದ್ದರಿಂದ ನಾನು ನನ್ನ ತಂದೆಯನ್ನು, ಅವರ ಮನೆಯ ಮುಂದಿನ ಕೋಣೆಯಲ್ಲಿ ಸಭೆಯನ್ನು ಪ್ರಾರಂಭಿಸಿದರೆ ಸರಿಯಾಗಿರುತ್ತದೋ ಎಂದು ಕೇಳಿದೆ. ಅವರು ತಕ್ಷಣವೇ ಒಪ್ಪಿಕೊಂಡರು. ಹಾಗಾಗಿ ನಾವು 2001 ಫೆಬ್ರವರಿ 18ರ ಭಾನುವಾರದಂದು ಮೊದಲ ಆರಾಧನೆಯನ್ನು ನಡೆಸಿದೆವು ಮತ್ತು ಎಪಿಸಿ ಪ್ರಾರಂಭಗೊಂಡಿತು. ಅಲ್ಲಿಂದ ಮುಂದೆ ಇದು ಒಂದು ಅದ್ಭುತಕರವಾದ ಪ್ರಯಾಣವಾಯಿತು ಮತ್ತು ಮುಂದೆ ಇಡಲ್ಪಟ್ಟಿರುವದನ್ನೆಲ್ಲಾ ನಾವು ಮುಂದಾಗಿಯೇ ನೋಡಿದೆವು. ಆತನ ಅಂತರಂಗದ ಸ್ವರದ ಮೂಲಕವಾಗಿ ಬಂದ ಒಂದು ಸರಳವಾದ ಉಪದೇಶ, ಈ ಪರಿಸ್ಥಿತಿಯಲ್ಲಿ ನಮಗೆ ಮಾರ್ಗದರ್ಶಿಯಾಗಿ ಸಹಾಯಕವಾಯಿತು.

## ಸೆಪ್ಟೆಂಬರ್ 2012 : ಬೆಂಗಳೂರು ಪೂರ್ವದ ಎಪಿಸಿ ಯ ಪ್ರಾರಂಭ (ವೈಟ್ ಫೀಲ್ಡ್)

2012ರ ಜೂನ್/ಜುಲೈನಲ್ಲಿ ನಮ್ಮ ಯೌವನಸ್ಥನೊಬ್ಬನು ಮೋಟಾರ್ ಸೈಕಲ್ ಅಪಘಾತಕ್ಕೆ ಒಳಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದನು. ಅವನನ್ನು ನೋಡುವದಕ್ಕೆ ನಾನು ಆಸ್ಪತ್ರೆಗೆ ಹೋದೆ. ಆಸ್ಪತ್ರೆಯಲ್ಲಿ ಕೆಲವು ಯೌವನಸ್ಥರಿದ್ದರು. ಆಸ್ಪತ್ರೆಯಲ್ಲಿ ಸರಿಯಾಗಿ ಮಧ್ಯಾಹ್ನದಲ್ಲಿ, ಎಪಿಸಿಯಲ್ಲಿ ಈ ಯೌವನಸ್ಥರನ್ನು ಇಟ್ಟುಕೊಂಡು ಏನು ಮಾಡುತ್ತೀ. ಅವರಿಗಾಗಿ ವೈಟ್‌ಫೀಲ್ಡ್ ನಲ್ಲಿ ಎಪಿಸಿ ಈಸ್ಟ್ ಪ್ರಾರಂಭಿಸಿ ಸೇವೆ ಮಾಡುವದಕ್ಕೆ ಅವರನ್ನು ತರಬೇತುಗೊಳಿಸು ಎಂದು ಹೇಳುವ ಪವಿತ್ರಾತ್ಮನ ಅಂತರಂಗದ ಸ್ವರವನ್ನು ಕೇಳಿಸಿಕೊಂಡೆ. ಅಂತಹ ಒಂದು ಉಪದೇಶಕ್ಕೆ ಇದು ತೀರ ಒಂದು ಅಸಾಮಾನ್ಯವಾದ ಕ್ಷಣವಾಗಿತ್ತು. ಒಂದು ಆಸ್ಪತ್ರೆಯಲ್ಲಿ, ಅನಾರೋಗ್ಯದಲ್ಲಿರುವ ಒಬ್ಬರನ್ನು ನೋಡುವದಕ್ಕೆ ಬಂದಿರುವಾಗ, ಒಂದು ಹೊಸ ಸಭೆಯನ್ನು ಸ್ಥಾಪಿಸುವದಕ್ಕೆ ಹೆಜ್ಜೆ ಇಡುವಂತೆ ಒಂದು ಉಪದೇಶವನ್ನು ಹೊಂದಿಕೊಳ್ಳುವದು ಒಂದು ಅಸಾಮಾನ್ಯವಾದ ಕ್ಷಣವಾದುದಾಗಿತ್ತು. ಹೇಗೂ,

ಗಾಯಗೊಂಡಿದ್ದ ಆ ಯೌವನಸ್ಥನೊಂದಿಗೆ ಸ್ವಲ್ಪ ಸಮಯವನ್ನು ಕಳೆದು, ನಂತರ ಸುತ್ತಲಿದ್ದ ಯೌವನಸ್ಥರೊಂದಿಗೆ ನಾವು ಮಾಡಬೇಕೆಂದಿರುವ ಕಾರ್ಯದ ವಿಷಯವಾಗಿ ಮಾತಾಡಿದೆ. ಈಗ ನಾನು ಅವರಿಗೆ ಇದನ್ನು ನೀವೆಲ್ಲರೂ ಮಾಡಬೇಕೆಂದು ದೇವರು ನನಗೆ ಹೇಳಿದ್ದಾನೆ ಎಂದು ಹೇಳಲಿಲ್ಲ. ದೇವರು ನನ್ನೊಂದಿಗೆ ಮಾತಾಡಿದ್ದರೆ, ಅವರೂ ಇದರ ಭಾಗವಾಗುವದಕ್ಕೆ ಆತನು ಇಷ್ಟಪಡುತ್ತಾನೆ ಮತ್ತು ದೇವರು ಇದನ್ನು ಅವರ ಹೃದಯದಲ್ಲಿಯೂ ಸಹ ಇಡುತ್ತಾನೆ ಆಗ ನಾವು ಒಟ್ಟಾಗಿ ಮುಂದೆ ಹೋಗುವದಕ್ಕೆ ಶಕ್ತರಾಗುತ್ತೇವೆ ಎಂದು ನಾನು ನಂಬಿದ್ದೆ. ಆದ್ದರಿಂದ ನಾನು ಅವರಿಗೆ ಸರಳವಾಗಿ, ಹೇ ಹುಡುಗರೇ, ನಾವು ವೈಟ್‌ಫೀಲ್ಡ್‌ನಲ್ಲಿ ಎಪಿಸಿ ಈಸ್ಟ್ ಪ್ರಾರಂಭಿಸುವದಕ್ಕೆ ಹೋಗುತ್ತಿದ್ದೇವೆ, ಸಭೆಯನ್ನು ಪ್ರಾರಂಭಿಸುವದಕ್ಕೆ ನೀವೆಲ್ಲರೂ ಒಂದು ತಂಡವಾಗಿರುತ್ತೀರಿ ಎಂದು ಹೇಳಿದೆ. ಇದೊಂದು ಅದ್ಭುತಕರವಾದ ಕ್ಷಣವಾಗಿತ್ತು. ಯಾವುದೇ ಸಂದೇಹಲ್ಲದೆ ಅವರೆಲ್ಲರೂ 'ಆಗಲೀ' ಎಂದು ಹೇಳಿದರು. ಅವರು ಇದನ್ನು ಮಾಡುವದಕ್ಕೆ ಸಿದ್ಧರಿದ್ದರು. ಆದ್ದರಿಂದ ನಮ್ಮನ್ನು ನಾವು ಸಂಘಟಿಸಿಕೊಂಡೆವು, ಒಂದು ಹಾಲ್ ಹುಡುಕಿದೆವು, 2012ರ ಸೆಪ್ಟೆಂಬರ್ ನಲ್ಲಿ ಎಪಿಸಿ ಬೆಂಗಳೂರು ಈಸ್ಟ್ (ವೈಟ್ ಫೀಲ್ಡ್) ಪ್ರಾರಂಭಿಸಿದೆವು. ಅನೇಕ ಈ ಯೌವನಸ್ಥರು ಆತ್ಮೀಕವಾಗಿ ಕಟ್ಟಲ್ಪಟ್ಟರು, ಪ್ರಪಂಚದ ಬೇರೆ ಭಾಗಗಳಿಗೆ ಹೋದರು, ಅವರು ಎಲ್ಲಿಗೆ ಹೋಗಬೇಕೆಂದು ದೇವರು ಯೋಜನೆ ಮಾಡಿಕೊಂಡಿದ್ದನೋ ಅಲ್ಲಿ ದೇವರ ಸೇವೆಯನ್ನು ಮಾಡಿದರು. ಸ್ಥಳೀಯ ಸಭೆಯು ವೇಗವಾಗಿ ಬೆಳೆಯುವಂತೆ ಎಪಿಸಿ ಈಸ್ಟ್ ಮುಂದುವರಿಯಿತು.

ಸ್ಥಳೀಯ ಸಭಾ ಸೇವೆಯೊಂದಿಗೆ ಆದಂತ ಕೆಲವು ಉದಾಹರಣೆಗಳನ್ನು ಹಂಚಿಕೊಳ್ಳುವ ವೇಳೆಯಲ್ಲಿ, ಜೀವನದ ಎಲ್ಲಾ ಭಾಗಗಳ ಕುರಿತಾಗಿ ಪವಿತ್ರಾತ್ಮನು ನಮಗೆ ಮಾತಾಡಿದನು. ತಾಂತ್ರಿಕತೆಯ ವ್ಯವಹಾರವನ್ನು ನಾನು ನಡೆಸುತ್ತಿದ್ದ ಸಮಯದಲ್ಲಿ, ಕಂಪನಿಗಾಗಿ ಯಾವ ಮಾರುಕಟ್ಟೆಗಳಿಗೆ ಕೇಂದ್ರಿಕರಿಸಬೇಕು, ಸುತ್ತಲಿರುವ ತೊಂದರೆಗಳನ್ನು ಹೇಗೆ ನಿಭಾಯಿಸಬೇಕು ಇತ್ಯಾದಿಗಳ ಮೇಲೆ ಪವಿತ್ರಾತ್ಮನು ತನ್ನ ಅಂತರಂಗದ ಸ್ವರದ ಮೂಲಕವಾಗಿ ನನಗೆ ಮಾರ್ಗದರ್ಶನ ಮಾಡಿದನು. ನಾವು ಆತನ ಬಳಿಗೆ ಹೋಗಿ ಆತನ ಮಾರ್ಗದರ್ಶನವನ್ನು ಕೇಳಿಕೊಳ್ಳುವ ಹಾಗೆ ಜೀವನದ ಎಲ್ಲಾ ವಿಷಯಗಳಲ್ಲಿ ದೇವರು ಅಂತರಂಗದ ಸ್ವರದ ಮೂಲಕವಾಗಿ ನಮಗೆ ಮಾರ್ಗದರ್ಶನ ಮಾಡುತ್ತಾನೆ.

## 2. ಕಿವಿಗೆ ಕೇಳಿಸುವಂತ ಪವಿತ್ರಾತ್ಮನ ಸ್ವರ

ಕಿವಿಗೆ ಕೇಳಿಸುವಂತ ಪವಿತ್ರಾತ್ಮನ ಸ್ವರ ಇದೆ ಎಂಬುದಾಗಿ ನಾವು ವಾಕ್ಯಗಳಲ್ಲಿ ನೋಡುತ್ತೇವೆ. ಆತನು ಮಾತಾಡುತ್ತಿದ್ದಾನೆ ಎಂಬಂತೆ ಆತ್ಮನ ಸ್ವರವು ವ್ಯಕ್ತಿಗೆ ಕೇಳಿಸುತ್ತದೆ. ಇದು ಒಂದು ಸ್ವಾಭಾವಿಕವಾದ ಸ್ವರವಾಗಿದ್ದಾಗ್ಯೂ ಆತನ ಸ್ವರವನ್ನು ಅವರು ಕೇಳಿಸಿಕೊಳ್ಳುತ್ತಾರೆ, ಆದರೆ ಅವರ ಸುತ್ತಲಿರುವವರಿಗೆ ಈ ಸ್ವರವು ಕೇಳಿಸುವದಿಲ್ಲ. ಇದರ ಕುರಿತಾದ ಅನೇಕ ಉದಾಹರಣೆಗಳನ್ನು ನಾವು ಸತ್ಯವೇದದಲ್ಲಿ ನೋಡುತ್ತೇವೆ. ಹುಡುಗನಾದ ಸಮುವೇಲನು ಕರ್ತನ ಸ್ವರವನ್ನು ಕೇಳಿದಾಗ ಏಲಿಯು ತನ್ನನ್ನು ಕರೆಯುತ್ತಿದ್ದಾನೆ ಎಂದು ನೆನಸಿದನು. ಮೂರು ಸಲವು ಸಮುವೇಲನು ಕಿವಿಗೆ ಕೇಳಿಸುವಂತ ಸ್ವರವನ್ನು ಕೇಳಿಸಿಕೊಂಡನು, ಆದರೆ ಏಲಿಗೆ ಇದು ಕೇಳಿಸಿರಲಿಲ್ಲ(1ಸಮು–3). ಕಿವಿಗೆ ಕೇಳಿಸುವಂತ ದೇವರ ಸ್ವರದೊಂದಿಗೆ ಪ್ರವಾದಿಗಳ ಅನೇಕ ಅನುಭವಗಳು ಸಂಭವಿಸಿದ್ದವು. ಯೆಹೆಜ್ಕೇಲನು ಆಗಾಗ್ಗೆ ಹೇಳಿರುವಂತೆ: . . . . .ಒಬ್ಬನು ಮಾತಾಡುವ ಸ್ವರವನ್ನು ನಾನು ಕೇಳಿದೆನು. (ಯೆಹೆ–1:28). . . . . .ನನ್ನೊಡನೆ ಮಾತಾಡಿದವನ ಮಾತನ್ನು ನಾನು ಕೇಳಿದೆನು.(ಯೆಹೆ–2:2).

ದೇವರು ಈ ರೀತಿಯಲ್ಲಿ ನಮ್ಮೊಂದಿಗೆ ಮಾತಾಡುತ್ತಾನೆ, ಆದಾಗ್ಯೂ ಇದು ಅಂತರಂಗದ ಸ್ವರ ಅಥವಾ ಅಂತರಂಗದ ಸಾಕ್ಷಿಯಂತೆ ಸಾಮಾನ್ಯವಾದುದಾಗಿ ಕಾಣಿಸಿಕೊಳ್ಳುವದಿಲ್ಲ. ದೇವರು ತಾನು ಮೆಚ್ಚಿಕೊಳ್ಳುವದನ್ನೇ ಮಾಡುತ್ತಾನೆ ಮತ್ತು ಆಗಾಗ್ಗೆ ಆತನು ಆರಿಸಿಕೊಂಡಂತೆ ಕೇಳಿಸುವಂತ ಪವಿತ್ರಾತ್ಮನ ಸ್ವರದೊಂದಿಗೆ ಮಾತಾಡುತ್ತಾನೆ. ಕೇಳಿಸುವಂತ ಪವಿತ್ರಾತ್ಮನ ಸ್ವರವನ್ನು ಕೇಳಿಸಿಕೊಳ್ಳುವದಕ್ಕೆ ನಾವು ಸಿದ್ಧರಾಗಿಯೇ ಇರಬೇಕು.

## ಪ್ರವಾದನೆಯಲ್ಲಿ ಪವಿತ್ರಾತ್ಮನ ಸ್ವರ

ಇದು ಪವಿತ್ರಾತ್ಮನು ಮಾತಾಡುವ ಒಂದು ಪ್ರಾಮುಖ್ಯವಾದ ರೀತಿಯಾಗಿದ್ದು ದೊಡ್ಡ ವಿವರಣೆಯಲ್ಲಿ ಹೇಳಲ್ಪಡುವದು ಅಗತ್ಯವುಳ್ಳದ್ದಾಗಿದೆ. ಆದ್ದರಿಂದ ನಾವು ಇದನ್ನು ಪ್ರತ್ಯೇಕವಾಗಿ ಇನ್ನೊಂದು ಅಧ್ಯಾಯದಲ್ಲಿ ಅಧ್ಯಯನ ಮಾಡೋಣ.

## ಪವಿತ್ರಾತ್ಮನ ಮುನ್ನಡೆಸುವಿಕೆಗೆ ಸಾಮುದಾಯಿಕ ಸಾಕ್ಷಿ

ಒಂದು ಗುಂಪಿನ ಜನರಿಗೆ ಪವಿತ್ರಾತ್ಮನು ಮಾತಾಡುವಂತ ಉದಾಹರಣೆಗಳು ಸಹ ನಮಗಿವೆ. ಆತನ ಸ್ವರವು ಪ್ರವಾದನೆಯ ಸ್ವರದ ಮೂಲಕ ಅಥವಾ ಅಂತರಂಗದ

ಸ್ವರ ಇಲ್ಲವೆ ಅಂತರಂಗದ ಸಾಕ್ಷಿಯ ಮೂಲಕವೂ ಸಹ ಬರುವಂತಹ ವೇಳೆಯಲ್ಲಿ, ಬಹುಸಂಖ್ಯೆಯ ಜನರು ಪವಿತ್ರಾತ್ಮನು ಹೇಳುವ ಒಂದೇ ರೀತಿಯ ಸಂಗತಿಯನ್ನು ಕೇಳಿಸಿಕೊಳ್ಳುವದಕ್ಕೆ ಪ್ರಮಾಣಿಸುವದು ಮುಖ್ಯವಾದ ಸಂಗತಿಯಾಗಿದೆ. ಪವಿತ್ರಾತ್ಮನು ಹೇಳಿದ್ದಕ್ಕೆ ಇದು ಒಂದು ಸಾಮುದಾಯಿಕ ಸಾಕ್ಷಿಯನ್ನು ತರುತ್ತದೆ ಮತ್ತು ಈ ಕಾರಣದಿಂದ ಅವರು ಕರ್ತನನ್ನು ಭರವಸೆಯುಳ್ಳವರಾಗಿ ಹಿಂಬಾಲಿಸುತ್ತಾರೆ.

ಇದು ನಾಯಕತ್ವದ ತಂಡಗಳಲ್ಲಿ ಪ್ರಾಮುಖ್ಯವಾದುದಾಗಿದ್ದು ಜನರು ತಂಡಗಳಾಗಿ ಕೆಲಸ ಮಾಡುವಂತ ಇತರ ಪರಿಸ್ಥಿತಿಗಳಲ್ಲಿ ಪವಿತ್ರಾತ್ಮನು ಹೇಳಿದ್ದಕ್ಕೆ ಒಂದು ಸಾಂಘಿಕ ಸಾಕ್ಷಿಯು ಇರುತ್ತದೆ. ಪವಿತ್ರಾತ್ಮನು ಒಬ್ಬ ವ್ಯಕ್ತಿಗೆ ಮಾತಾಡಬಹುದು ಮತ್ತು ಒಂದು ವೇಳೆ ತಂಡದಲ್ಲಿರುವ ಇತರರೊಂದಿಗೆ ಸಹ ಆತ್ಮನು ಇದೇ ರೀತಿಯಾಗಿ ಸಾಕ್ಷಿ ಕೊಟ್ಟಿರುವದನ್ನು ನೋಡುವದಕ್ಕೆ ಈ ವ್ಯಕ್ತಿಯು ಇದನ್ನು ತಂಡದಲ್ಲಿರುವವರಿಗೆ ತಿಳಿಸುತ್ತಾನೆ. ಅಥವಾ ಪವಿತ್ರಾತ್ಮನು ಏಕಕಾಲದಲ್ಲಿ ತಂಡದಲ್ಲಿರುವ ಅನೇಕ ಸದಸ್ಯರಿಗೆ ಒಂದೇ ವಿಷಯವನ್ನು ಪ್ರತಿಯೊಬ್ಬರಿಗೂ ಹೇಳಬಹುದು. ತಾವು ಆತ್ಮನಿಂದ ಏನು ಕೇಳಿಸಿಕೊಂಡಿರುತ್ತಾರೋ ಅದಕ್ಕೆ ಅವರೆಲ್ಲರೂ ಪ್ರಮಾಣಬದ್ಧರಾಗಿರುತ್ತಾರೆ ಮತ್ತು ತಂಡವು ಒಪ್ಪಂದದಲ್ಲಿ ಮುಂದೆ ಹೋಗುತ್ತದೆ. ಯಾರು ಒಂದೇ ಸಾಮರಸ್ಯದಲ್ಲಿರುತ್ತಾರೋ ಅಂತಹ ಸೇವಾ ತಂಡಗಳು, ನಾಯಕತ್ವದ ತಂಡಗಳು ಮತ್ತು ಸ್ಥಳೀಯ ಸಭೆಗಳು ಹೊಂದಿಕೊಳ್ಳುವದಕ್ಕೆ ಇದು ಕೀಲಿಕೈ ಆಗಿದೆ ಎಂದು ನಾನು ನಂಬುತ್ತೇನೆ. ಎಲ್ಲರೂ ಪವಿತ್ರಾತ್ಮನಿಗೆ ಯೋಗ್ಯವಾಗಿ ಹೊಂದಿಕೆಯಾಗಿದ್ದಾಗ ಒಬ್ಬರಿಗೊಬ್ಬರು ಅಧೀನತೆಯಲ್ಲಿ ನಡೆಯುತ್ತಾರೆ, ಆಗ ಒಂದೇ ಸಾಮರಸ್ಯದಲ್ಲಿ ಆತ್ಮನ ಏಕತೆಯಲ್ಲಿ ನಿಜವಾಗಿಯೂ ನಡೆಯುವಂತಹ ಜನರನ್ನು ನಾವು ಹೊಂದಿಕೊಳ್ಳುತ್ತೇವೆ.

## ಅಪೊ.ಕೃತ್ಯ ಪುಸ್ತಕದಲ್ಲಿರುವ ಮುಂದಿನ ಉದಾಹರಣೆಗಳನ್ನು ಆಲೋಚಿಸೋಣ:

### ಅಂತಿಯೋಕ್ಯದಲ್ಲಿನ ನಾಯಕರುಗಳಲ್ಲಿದ್ದ ಸಾಂಘಿಕ ಸಾಕ್ಷಿ

ಅಪೊ.ಕೃತ್ಯ–13:1–3

**1–ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ ಬೋಧಕರೂ ಇದ್ದರು; ಯಾರಾರಂದರೆ – ಬಾರ್ನಬ, ನೀಗರನೆಂಬ ಸಿಮೆಯೋನ, ಕುರೇನ್ಯದ ಲೂಕ್ಯ, ಉಪರಾಜನಾದ ಹೆರೋದನ ಸಾಕು ತಮ್ಮನಾದ ಮೆನಹೇನ, ಸೌಲ ಇವರೇ.**

**2–ಇವರು ಕರ್ತನನ್ನು ಸೇಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪತ್ರಾತ್ಮನು – ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು.**

**3–ಆಗ ಅವರು ಉಪವಾಸದ್ದು ಪ್ರಾರ್ಥನೆ ಮಾಡಿ ಇಬ್ಬರ ಮೇಲೆ ಹಸ್ತಾರ್ಪಣ ಮಾಡಿ ಅವರನ್ನು ಕಳುಸಿಕೊಟ್ಟರು.**

ಅಲ್ಲಿ ಐದು ನಾಯಕರುಗಳು ಪ್ರಾರ್ಥನೆಯಲ್ಲಿ ಉಪವಾಸದಲ್ಲಿ ಕರ್ತನ ಸೇವೆಮಾಡುತ್ತಾ ಒಟ್ಟಾಗಿ ಇದ್ದಾಗ ಪತ್ರಾತ್ಮನು ಮಾತಾಡಿದನು. ಅವರು ಏನು ಮಾಡಬೇಕೆಂದು ಆತನು ಅವರಿಗೆ ಸ್ಪಷ್ಟವಾಗಿ ಉಪದೇಶಿಸಿದನು, ಮತ್ತು ಅವರು ಸಂದೇಹವಿಲ್ಲದೆ ಆ ಕಾರ್ಯವನ್ನು ಮಾಡಿದರು.

## ಯೆರೂಸಲೇಮಿನಲ್ಲಿನ ಮೊದಲ ಆಲೋಚನಾ ಸಭೆಯಲ್ಲಿನ ಸಾಂಘಿಕ ಸಾಕ್ಷಿ

ಅಪೊ.ಕೃತ್ಯ–15:28

**ಇದಕ್ಕೆ ಹೆಚ್ಚಿನ ಭಾರವನ್ನು ನಿಮ್ಮ ಮೇಲೆ ಹಾಕಬಾರದೆಂದು ಪವಿತ್ರಾತ್ಮನಿಗೂ ನಮಗೂ ಹಿತವಾಗಿ ತೋರಿತು. ನೀವು ಎಚ್ಚರವಾಗಿದ್ದು ಇವುಗಳ ಗೊಡವೆಗೆ ಹೋಗದಿದ್ದರೆ ನಿಮಗೆ ಒಳ್ಳೇದಾಗುವದು.**

ಅನ್ಯ ವಿಶ್ವಾಸಿಗಳು ಯೆಹೂದ್ಯ ಸಂಪ್ರದಾಯಗಳನ್ನು ಮತ್ತು ನಂಬಿಕೆಗಳನ್ನು ಇಟ್ಟುಕೊಳ್ಳಬೇಕೋ ಬೇಡವೋ ಎನ್ನುವದರ ಕುರಿತು ಚರ್ಚಿಸುವದಕ್ಕೆ ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಮತ್ತು ಹಿರಿಯರು, ಪೌಲ ಮತ್ತು ಬಾರ್ನಬರ ಜೊತೆಗೂಡಿ ಒಟ್ಟಾಗಿ ಯೆರೂಸಲೇಮಿನಲ್ಲಿ ನಡೆಸಿದ ಮೊದಲ ಆಲೋಚನಾ ಸಭೆಯ ವರವು ಅಪೊ.ಕೃತ್ಯ 15ನೆಯ ಅಧ್ಯಾಯದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಯಾವುದೇ ಪ್ರವಾದನೆಯ ಹೇಳಿಕೆ ಅಥವಾ ಇತರ ಅಲೌಕಿಕ ಹೇಳಿಕೆಯನ್ನು ನಾವು ನೋಡದಿದ್ದಾಗ್ಯೂ, ಚರ್ಚೆಗಳ ಕೊನೆಯಲ್ಲಿ ನಾಯಕರುಗಳು, ಪವಿತ್ರಾತ್ಮನಿಗೂ ಮತ್ತು ತಮಗೂ ಇದು ಒಳ್ಳೆಯದೆಂದು ತೋರಿದೆ ಎಂಬ ತಮ್ಮ ಹೇಳಿಕೆಯನ್ನು ತಿಳಿಸಿದರು. ಅವರು ಸಮ್ಮತಿಯಲ್ಲಿದ್ದರು ಮತ್ತು ಪವಿತ್ರಾತ್ಮನು ಸಭೆಗೆ ಏನು ಹೇಳಿದ್ದಾನೋ ಅದನ್ನು ಅವರೂ ಸಹ ಒಪ್ಪಿಕೊಂಡಿದ್ದರು. ಮಾಡಲ್ಪಟ್ಟ ತೀರ್ಮಾನಕ್ಕೆ ಅಲ್ಲಿ ಸಾಮುದಾಯಕವಾದ ಅಥವಾ ಸಾಂಘಿಕವಾದ ಸಾಕ್ಷಿಯಿತ್ತು.

## ಪೌಲನ ಸುವಾರ್ತಾ ಸೇವೆಯ ತಂಡದೊಳಗೆ ಸಾಂಘಿಕ ಸಾಕ್ಷಿ

ಅಪೊ.ಕೃತ್ಯ–16:6–10

**6–ಆಸ್ಯಸೀಮೆಯಲ್ಲಿ ವಾಕ್ಯವನ್ನು ಹೇಳಬಾರದೆಂದು ಪತ್ರಾತ್ಮನು ತಡೆದದ್ದರಿಂದ ಅವರು ಫ್ರುಗ್ಯ ಗಲಾತ್ಯ ಸೀಮೆಯನ್ನು ಹಾದು ಹೋಗಿ 7–ಮೂಸ್ಯಕ್ಕೆ ಎದುರಾಗಿ ಬಂದಾಗ ಬಿಥೂನ್ಯಕ್ಕೆ ಹೋಗುವ ಪ್ರಯತ್ನ ಮಾಡಿದರು. ಅಲ್ಲಿಯೂ ಯೇಸುವಿನ ಆತ್ಮನು ಅವರನ್ನು ಹೋಗಗೊಡಿಸಲಿಲ್ಲ.**

**8–ಆಗ ಅವರು ಮೂಸ್ಯವನ್ನು ಸುಮ್ಮನೆ ದಾಟಿ ತ್ರೋವಕ್ಕೆ ಬಂದರು.**

**9–ಅಲ್ಲಿ ರಾತ್ರಿ ಕಾಲದಲ್ಲಿ ಪೌಲನಿಗೆ ದರ್ಶನವಾಯಿತು. ಏನಂದರೆ – ಮಕೆದೋನ್ಯ ದೇಶದವನಾದ ಒಬ್ಬ ಮನುಷ್ಯನು ನಿಂತುಕೊಂಡು – ನೀನು ಸಮುದ್ರವನ್ನು ದಾಟಿ ಮಕೆದೋನ್ಯಕ್ಕೆ ಬಂದು ನಮಗೆ ನೆರವಾಗಬೇಕೆಂದು ಅವನನ್ನು ಬೇಡಿಕೊಳ್ಳುತ್ತಿದ್ದನು.**

**10–ಅವನಿಗೆ ಆ ದರ್ಶನವಾದ ಮೇಲೆ ಆ ಸೀಮೆಯವರಿಗೆ ಸುವಾರ್ತೆಯನ್ನು ಸಾರುವದಕ್ಕೆ ದೇವರು ನಮ್ಮನ್ನು ಕರೆದಿದ್ದನೆಂದು ನಾವು ನಿಶ್ಚಯಿಸಿಕೊಂಡು ಕೂಡಲೆ ಮಕೆದೋನ್ಯಕ್ಕೆ ಹೊರಟು ಹೋಗುವ ಪ್ರಯತ್ನ ಮಾಡಿದೆವು.**

ಅಪೊಸ್ತಲನಾದ ಪೌಲ ಮತ್ತು ಅವನ ತಂಡದವರಿಗೆ ಪವಿತ್ರಾತ್ಮನು ಹೇಗೆ ನಿರ್ದೇಶಿಸಿದನೆಂಬುದನ್ನು ನಾವು ನೋಡುತ್ತೇವೆ. ಪವಿತ್ರಾತ್ಮನು ಅವರಿಗೆ ಒಂದು ಸ್ಥಳಕ್ಕೆ ಹೋಗುವದಕ್ಕೆ ಅಪ್ಪಣೆ ಕೊಡದೆ ಬದಲಿಗೆ ಇನ್ನೊಂದು ದಿಕ್ಕಿನಲ್ಲಿ ಹೋಗುವದಕ್ಕೆ ನಿರ್ದೇಶನ ಕೊಟ್ಟದ್ದನ್ನು ಅವರು ಹೇಗೆ ನಿಖರವಾಗಿ ದೃಢಪಡಿಸಿಕೊಂಡರೆಂಬುದು ನಮಗೆ ಗೊತ್ತಿಲ್ಲ. ಆದರೆ ತಂಡವು ಆತ್ಮನ ಮುನ್ನಡೆಸುಕೆಗೆ ಒಂದು ಸಾಂಘಿಕವಾದ ಸಾಕ್ಷಿಯನ್ನು ಹೊಂದಿತ್ತು. ನಂತರದಲ್ಲಿ ಅವರು ಮಕೆದೋನ್ಯಕ್ಕೆ ಹೋಗಬೇಕೆಂಬ ದರ್ಶನವನ್ನು ಪೌಲನು ಕಂಡಾಗ, ಇಡೀ ತಂಡದವರು ಸಮ್ಮತಿಯಲ್ಲಿ ಒಟ್ಟಾಗಿ ಮುನ್ನಡೆದರು. ಇದು ಮತ್ತೊಮ್ಮೆ ಅವರೆಲ್ಲರೂ ಆತ್ಮನ ಮುನ್ನಡೆಸುವಿಕೆಗೆ ಸಾಕ್ಷಿಗಳಾಗಿದ್ದು ಒಟ್ಟಾಗಿ ಮುನ್ನಡೆದರೆಂಬುದನ್ನು ಸೂಚಿಸುತ್ತದೆ.

## ಎಲ್ಲಾ ಸಂಗತಿಗಳ ಪರೀಕ್ಷೆ

ಪವಿತ್ರಾತ್ಮನ ಸ್ವರವನ್ನು ಕೇಳಿಸಿಕೊಳ್ಳುವ ವೇಳೆಯು ಉತ್ತೇಜನವಾದುದಾಗಿದೆ, ನಾವು ಈ ಭಾಗದಲ್ಲಿ ಇನ್ನೂ ಹೆಚ್ಚಾಗಿ ಎಚ್ಚರಿಕೆಯುಳ್ಳವರಾಗಿರಬೇಕು. ಸೈತಾನನು ಮತ್ತು ಅವನ ದುರಾತ್ಮಗಳು, ಮೋಸಗಾರರು ಮತ್ತು ಅನುಕರಣ ಮಾಡುವವರೂ ಆಗಿದ್ದಾರೆ. ಇದು ದೇವರದಾಗಿರುವ ಹಾಗೆ ಮಾತಾಡುವದಕ್ಕೆ ಅವರು ಸೋಗು ಹಾಕಿ ವಿಶ್ವಾಸಿಗಳನ್ನು ಹಾದಿತಪ್ಪಿಸುತ್ತಾರೆ. ಆದಾಗ್ಯೂ, ನಾವು ಏನು

ಕೇಳಿಸಿಕೊಂಡಿದ್ದೇವೋ ಮತ್ತು ನೋಡಿದ್ದೇವೋ ಅದು ದೇವರದೋ ಅಥವಾ ದುರಾತ್ಮನದೋ ಎನ್ನುವದನ್ನು ನಾವು ಪರೀಕ್ಷಿಸಲೇ ಬೇಕು(1ಯೋಹಾ–4:1–4). ಅಂತರಂಗದ ಸಾಕ್ಷಿಯನ್ನು ಪರೀಕ್ಷಿಸುವದಕ್ಕಾಗಿ ಮುಂಚಿನ ಅಧ್ಯಾಯಗಳಲ್ಲಿ ನಾವು ಪರೀಕ್ಷೆಗಳ ಮೇರೆ ಗೊತ್ತು ಮಾಡಿದ್ದು, ಪವಿತ್ರಾತ್ಮನ ಸ್ವರವನ್ನು ನಾವು ಪರೀಕ್ಷಿಸುವದು ಅಗತ್ಯವಾಗಿರುವ ಕ್ರಮದಲ್ಲಿ ಇಲ್ಲಿ ಅದು ಉತ್ತಮವಾದುದನ್ನು ಹಿಡಿದುಕೊಂಡಿದೆ. ದೇವರ ಆತ್ಮನು ಮಾತಾಡುತ್ತಾನೆ ನಾವು ಅದನ್ನು ಕೇಳಿಸಿಕೊಳ್ಳಬೇಕು. ಆದರೆ

ದೇವರ ಜನರನ್ನು ದಾರಿತಪ್ಪಿಸುವದಕ್ಕೆ ನಡೆಸುವಂತ ಕ್ರಮದಲ್ಲಿ ಆತ್ಮನನ್ನು ಅನುಕರಣ ಮಾಡುವದಕ್ಕೆ ಪ್ರಯತ್ನಿಸುವ ಒಬ್ಬ ವೈರಿ ಇದ್ದಾನೆಂಬುದರ ಎಚ್ಚರಿಕೆ ಇರಬೇಕು.

## ಪರ್ಯಾಲೋಚನೆ

1) ಆತ್ಮನ ಸ್ವರ ಮತ್ತು ಆತ್ಮನ ಅಂತರಂಗದ ಸಾಕ್ಷಿಯ ನಡುವೆ ಇರುವ ಮುಖ್ಯ ವ್ಯತ್ಯಾಸವನ್ನು ನೀವು ಹೇಗೆ ಅರ್ಥಮಾಡಿಕೊಂಡಿದ್ದೀರೋ ಅದನ್ನು ವಿವರಿಸಿರಿ.

2) ಆತ್ಮನ ಅಂತರಂಗದ ಸ್ವರ ಮತ್ತು ಕಿವಿಗೆ ಕೇಳಿಸುವ ಪವಿತ್ರಾತ್ಮನ ಸ್ವರದ ನಡುವಿನ ವ್ಯತ್ಯಾಸವನ್ನು ವಿವರಿಸಿರಿ.

3) ಪವಿತ್ರಾತ್ಮನ ಮುನ್ನಡೆಸುವಿಕೆಗೆ ಸಾಂಘಿಕ ಸಾಕ್ಷಿಯು ಅಭ್ಯಾಸದಲ್ಲಿರುವದು ತುಂಬಾ ಉಪಯೋಗಕರವಾಗಿರುವ ದಿನನಿತ್ಯದ ಅದೇ ರೀತಿಯಲ್ಲಿ ಸಭಾ ಜೀತದಲ್ಲಿರುವ ಕೆಲವು ಪ್ರಾಯೋಗಿಕ ಚಿತ್ರಣಗಳನ್ನು ಆಲೋಚಿಸಿರಿ.

# 6

# ಪವಿತ್ರಾತ್ಮನ ವರಗಳು

ಇತರರಿಗೆ ಸೇವೆ ಮಾಡುವದಕ್ಕೆ ನಮ್ಮ ಮೂಲಕವಾಗಿ ಪವಿತ್ರಾತ್ಮನು ಕೆಲಸ ಮಾಡುವಂತಹ ರೀತಿಗಳು ಆತ್ಮನ ಫಲಗಳಾಗಿರುವ ವೇಳೆಯಲ್ಲಿ, ದೇವರು ನಮ್ಮೊಂದಿಗೆ ವ್ಯಯಕ್ತಿಕವಾಗಿ ಮಾತಾಡುವದಕ್ಕೆ ಮತ್ತು ಆತನ ಯೋಜನೆಗಳು ಮತ್ತು ಉದ್ದೇಶಗಳೊಳಗೆ ನಮಗೆ ಮಾರ್ಗದರ್ಶನ ಮಾಡುವದಕ್ಕೆ ಈ ಫಲಗಳನ್ನು ಉಪಯೋಗಿಸುತ್ತಾನೆ.

ಆತ್ಮನ ವರಗಳು ನಮಗೆ ಮಾರ್ಗದರ್ಶನ ಮಾಡುವದಕ್ಕೆ ಹೇಗೆ ಸೇವೆ ಮಾಡುತ್ತವೆ ಎಂದು ಕೆಲವು ವರಗಳ ಮೇಲೆ ನಾವು ಸಂಕ್ಷಿಪ್ತವಾದ ವ್ಯಾಖ್ಯಾನಗಳನ್ನು ಪರಿಚಯಿಸುತ್ತೇವೆ. ಇದು ಒಂದು ಬಳಲಿಕೆಯನ್ನುಂಟುಮಾಡುವ ವಿವರಣೆಯಲ್ಲ ಎಂಬುದನ್ನು ದಯವಿಟ್ಟು ನೀವು ಜ್ಞಾಪಕದಲ್ಲಿಟ್ಟುಕೊಳ್ಳಿರಿ. ದೇವರು ಅನಂತನೂ ಮತ್ತು ಆತ್ಮನ ವರಗಳ ಮೂಲಕವೂ ಸಹ ಹೊಸದಾದ ಹಾಗೂ ಕ್ರಿಯಾತ್ಮಕ ರೀತಿಗಳಲ್ಲಿ ಕೆಲಸ ಮಾಡುವವನೂ ಆಗಿದ್ದಾನೆ. ಆತ್ಮನ ವರಗಳ ಕ್ರಿಯೆಗಳ ಮೇಲೆ ಹೆಚ್ಚಿನ ವಿವರಣೆಗಳು ಬೇಕಾದಲ್ಲಿ, ಉಚಿತವಾದ ಎಪಿಸಿ ಪ್ರಕಟಣೆಯಾಗಿರುವ ಆತ್ಮನ ವರಗಳು ಎಂಬುದನ್ನು ದಯಟ್ಟು ನೋಡಿರಿ.

## ಅನ್ಯಭಾಷೆಗಳ ಮತ್ತು ಭಾಷಾಂತರಗಳ ವ್ಯಯಕ್ತಿಕ ಉಪಯೋಗ

1ಕೊರಿಂಥ-14:2

**ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಮಾತಾಡುವದಿಲ್ಲ. ಅವನು ಆತ್ಮಪ್ರೇರಿತನಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವದಿಲ್ಲ.**

ನಾವು ಅನ್ಯಭಾಷೆಯಲ್ಲಿ ಮಾತಾಡುವಾಗ ನಾವು ರಹಸ್ಯಗಳನ್ನು ಮಾತಾಡುತ್ತಿರುತ್ತೇವೆ, ಅಂದರೆ ನಮ್ಮ ಸ್ವಂತ ಮನಸ್ಸೇ ಅದರ ಕುರಿತು ತಿಳಿಯದಿರುವ ಸಂಗತಿಗಳನ್ನು ಮಾತಾಡುತ್ತಿರುತ್ತೇವೆ. ಪವಿತ್ರಾತ್ಮನಿಂದ ನಮಗೆ ಕೊಡಲ್ಪಟ್ಟ ಸುದ್ಧಿಗಳೊಂದಿಗೆ

ನಾವು ಪ್ರಾರ್ಥಿಸುತ್ತಿರುತ್ತೇವೆ. ಆತನು ಎಲ್ಲಾ ಸಂಗತಿಗಳನ್ನು ಬಲ್ಲವನಾಗಿದ್ದಾನೆ. ಅನ್ಯಭಾಷೆಯಲ್ಲಿ ನಾವು ಮಾತಾಡುವ/ಪ್ರಾರ್ಥಿಸುವ ರಹಸ್ಯಗಳು ನಮಗೆ ಮಾತ್ರ ರಹಸ್ಯಗಳಾಗಿರುತ್ತವೆ, ಆದರೆ ದೇವರಿಗೆ ಅವು ರಹಸ್ಯಗಳಾಗಿರುವದಿಲ್ಲ. ಆದ್ದರಿಂದ ಆತನಿಗೆ ಮರೆಯಾದದ್ದೂ ಯಾವುದೂ ಇಲ್ಲದಿರುವ ಕಾರಣದಿಂದ ನಾವು ಈ ರಹಸ್ಯಗಳನ್ನು ದೇವರೊಂದಿಗೆ ಮಾತಾಡುವದು ಆತನ ಲಾಭಕ್ಕಾಗಿಯಲ್ಲ. ಅನ್ಯಭಾಷೆಯಲ್ಲಿ ನಾವು ಮಾತಾಡುವ/ಪ್ರಾರ್ಥಿಸುವ ರಹಸ್ಯಗಳು ನಮ್ಮ ಲಾಭಕ್ಕಾಗಿ ಇವೆ.

ಅನ್ಯಭಾಷೆಯಲ್ಲಿ ಮಾತಾಡಿರುವದನ್ನು ನಾವು ಭಾಷಾಂತರ ಮಾಡಿದಾಗ, ಮಾತಾಡಲ್ಪಟ್ಟ/ಪ್ರಾರ್ಥಿಸಲ್ಪಟ್ಟ ರಹಸ್ಯಗಳ ಒಂದು ಗ್ರಹಿಕೆಯನ್ನು ನಾವು ಪಡೆದುಕೊಳ್ಳುತ್ತೇವೆ. ಒಂದು ಸಾರ್ವಜನಿಕ ಸಭೆಯಾಗಿ ಕೂಡುವಿಕೆಯಲ್ಲಿ, ಅನ್ಯಭಾಷೆಯ ಭಾಷಾಂತರವು ಎಲ್ಲರಿಗೂ ಕೇಳಿಸುವ ರೀತಿಯಲ್ಲಿಯೇ ಮಾಡಲ್ಪಡಬೇಕು, ಆದರಿಂದ ಅಲ್ಲಿರುವ ಪ್ರತಿಯೊಬ್ಬರಿಗೂ ಪ್ರಯೋಜನವಾಗುತ್ತದೆ. ಹೇಗಿದ್ದರೂ, ವ್ಯಯಕ್ತಿಕ ಉಪಯೋಗದಲ್ಲಿ, ಭಾಷಾಂತರವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವ ಒಬ್ಬನಿಗೆ ಮಾತ್ರ ಪ್ರಯೋಜನವಾಗಿರುತ್ತದೆ. ಆದಾಗ್ಯೂ ಇದು ಯಾವಾಗಲೂ ಗಟ್ಟಿಯಾಗಿ ಮಾಡಲ್ಪಡುವಂತದ್ದಲ್ಲ. ಅನ್ಯಭಾಷೆಯಲ್ಲಿ ನೀವು ಪ್ರಾರ್ಥಿಸುವ ವೇಳೆಯಲ್ಲಿ ಭಾಷಾಂತರವು ಬರಬೇಕು. ಆಗ ನೀವು ಏನು ಪ್ರಾರ್ಥಿಸುತ್ತಿದ್ದೀರೋ ಅದರ ತಿಳುವಳಿಕೆಯನ್ನು ನೀವು ಪಡೆದುಕೊಳ್ಳುತ್ತೀರಿ. ನೀವು ಪ್ರಾರ್ಥಿಸುತ್ತಿರುವ ರಹಸ್ಯಗಳು ನಿಮ್ಮ ತಿಳುವಳಿಕೆಗೆ ಬರುತ್ತವೆ.

ಆಗಾಗ್ಗೆ ನಾನು ಒಂದು ನಿಶ್ಚಿತ ವಿಷಯಕ್ಕಾಗಿ ಪ್ರಾರ್ಥಿಸುವಾಗ, ಅವುಗಳ ಮೇಲೆ ತೀರ್ಮಾನಗಳನ್ನು ಮಾಡಬೇಕಾದ ಅಗತ್ಯರುತ್ತದೆ ಅಥವಾ ಸಮಸ್ಯೆಗಳನ್ನು ಪರಿಹರಿಸಬೇಕಾದ ಅಗತ್ಯರುತ್ತದೆ. ಅನ್ಯಭಾಷೆಯಲ್ಲಿ ಪ್ರಾರ್ಥಿಸುವದಕ್ಕೆ ನಾನು ಸಮಯವನ್ನು ತೆಗೆದುಕೊಳ್ಳುತ್ತೇನೆ, ಆ ಸಮಯದಲ್ಲಿ ದೇವರಿಂದ ಕೇಳಿಸಿಕೊಳ್ಳುವದಕ್ಕೆ ನಾನು ನನ್ನ ಆತ್ಮವನ್ನು ಶಾಂತವಾಗಿ ಮತ್ತು ಗಮನಕೊಡುವಂತೆ ಇಟ್ಟುಕೊಂಡಿರುತ್ತೇನೆ. ದೇವರ ಮನಸ್ಸನ್ನು ತಿಳಿಯುವದಕ್ಕೆ ಅಥವಾ ದೇವರ ಮಾತುಗಳನ್ನು ಕೇಳಿಸಿಕೊಳ್ಳುವ ಕ್ರಮದಲ್ಲಿ ಒಬ್ಬನು ಎಷ್ಟು ಹೆಚ್ಚಾಗಿ ಅಥವಾ ಎಷ್ಟು ಹೊತ್ತು ಪ್ರಾರ್ಥಿಸುತ್ತಾನೆ ಎನ್ನುವದರ ಮೇಲೆ ಕಾಲಾವಧಿಯು ಇಡಲ್ಪಟ್ಟಿರುವದಿಲ್ಲ. ನೀವು ಪ್ರಾರ್ಥಿಸುವ ಸಂಗತಿಯ ಮೇಲೆ ದೇವರ ಮಾತನ್ನು ಕೇಳಿಸಿಕೊಂಡಿದ್ದೀರಿ ಎಂಬುದನ್ನು ತಿಳಿಯುವವರೆಗೆ ನೀವು ಕೇವಲ ಪ್ರಾರ್ಥಿಸುತ್ತಲೇ ಇರಬೇಕು. ಕೆಲವು

ಪರಿಸ್ಥಿತಿಗಳು ಸಮಯದ ವಿಸ್ತಾರವಾದ ಅವಧಿಗಳ ಮೇಲೆ ಹೋಗುತ್ತವೆ, ಹಾಗಾಗಿ ಇದರ ಕಾಲಾವಧಿಯ ಮೇಲೆ ದೇವರಿಂದ ಒಳನೋಟಗಳನ್ನು ಪಡೆದುಕೊಳ್ಳುವದಕ್ಕೆ ಮತ್ತು ಮಾರ್ಗದ ಪ್ರತಿಯೊಂದು ಹೆಜ್ಜೆಗಾಗಿ ದೇವರ ಮನಸ್ಸನ್ನು ತಿಳಿಯುವದಕ್ಕೆ ನೀವು ಆತ್ಮದಲ್ಲಿ ಪ್ರಾರ್ಥಿಸುವದನ್ನು ಮುಂದುವರಿಸಬೇಕು. ನಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳು, ಮಾಡಬೇಕಾದ ಅಗತ್ಯವಿರುವ ತೀರ್ಮಾನಗಳು ಇತ್ಯಾದಿ., ಆ ಕ್ಷಣದಲ್ಲಿ ಒಂದು ರಹಸ್ಯವಾಗಿರುತ್ತವೆ. ಆದರೆ ನಾವು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ಈ ರಹಸ್ಯಗಳಿಗೆ ಪ್ರಾರ್ಥಿಸುವದಕ್ಕೆ ಪವಿತ್ರಾತ್ಮನು ನಮ್ಮನ್ನು ಶಕ್ತರನ್ನಾಗಿಸುತ್ತಾನೆ. ನಾವು ನಿಜವಾಗಿಯೂ ಆ ಪರಿಸ್ಥಿತಿಗಳಿಗೆ ದೇವರ ಉತ್ತರಕ್ಕಾಗಿ ಪ್ರಾರ್ಥಿಸುತ್ತಿರುತ್ತೇವೆ. ಆದಾಗ್ಯೂ ನಮ್ಮ ಆತ್ಮವು ಆ ರಹಸ್ಯಗಳನ್ನು ಗ್ರಹಿಸಿಕೊಳ್ಳುವದಕ್ಕೆ ಆರಂಭಿಸುತ್ತದೆ. ನಾವು ಏನು ಮಾಡಬೇಕು, ನಮಗೆ ಅಗತ್ಯರುವ ಪರಿಹಾರಗಳು ಮತ್ತು ಮಾಡಬೇಕಾದ ತೀರ್ಮಾನಗಳ ವಿವೇಕವನ್ನು ಅನಂತರದಲ್ಲಿ ನಾವು ಪಡೆದು ಕೊಳ್ಳುತ್ತೇವೆ. ಆದದರಿಂದ ಅನ್ಯಭಾಷೆಯಲ್ಲಿ ಪ್ರಾರ್ಥಿಸುವದು ಮತ್ತು ನೀವು ಏನು ಪ್ರಾರ್ಥಿಸಿದ್ದೀರೋ ಅದರ ಒಂದು ವಿವೇಕವನ್ನು ಹೊಂದಿಕೊಳ್ಳುವದು, ಆತ್ಮದಲ್ಲಿ ನೀವು ವಿವಿಧ ಸಂಗತಿಗಳ ಕುರಿತು ಮಾಡುವ ಪ್ರಾರ್ಥನೆಯಿಂದ ನೀವು ದೇವರ ಮನಸ್ಸನ್ನು, ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವಂತಹ ಇನ್ನೊಂದು ರೀತಿಯಾಗುತ್ತದೆ.

ನೀವು ಅನ್ಯಭಾಷೆಯಲ್ಲಿ ಮಾತಾಡುವಾಗ ದೇವರೂ ಸಹ ತನ್ನ ಮಾರ್ಗದರ್ಶನವನ್ನು ಸಂಪರ್ಕಿಸುವದಕ್ಕೆ ಇತರ ಮಾರ್ಗಗಳನ್ನು ಉಪಯೋಗಿಸುತ್ತಾನೆ, ಉದಾ: ವಾಕ್ಯ ತೀವ್ರಗೊಳಿಸುವದು, ಅಂತರಂಗದ ಸ್ವರ, ದರ್ಶನಗಳು ಇತ್ಯಾದಿ. ಆದ್ದರಿಂದ ನಾವೂ ಸಹ ಅದೇ ರೀತಿಯಾಗಿ ಇವುಗಳಿಗೆ ಜಾಗ್ರತೆಯುಳ್ಳವರಾಗಿರಬೇಕು.

## ತಿಳುವಳಿಕೆಯ ವಾಕ್ಯಗಳು

ಜ್ಞಾನ ವಾಕ್ಯದ ವರವು ವರ್ತಮಾನದಲ್ಲಿರುವ ಅಥವಾ ಹಿಂದಿನಿಂದ ಬಂದ ಯಾವುದಾದರೊಂದನ್ನು ಪ್ರಕಟಪಡಿಸುತ್ತದೆ. ತೀರ್ಮಾನ ಮಾಡುವ ಪ್ರಕ್ರಿಯೆಯಲ್ಲಿ ಮತ್ತು ನಾವು ಹೋಗಬೇಕೆಂದು ದೇವರು ಇಷ್ಟಪಡುವ ದಾರಿಯಲ್ಲಿ ನಮ್ಮನ್ನು ತೆಗೆದುಕೊಂಡು ಹೋಗುವದರಲ್ಲಿ ಸಹಾಯವಾಗುವಂತೆ ಪವಿತ್ರಾತ್ಮನು ಜ್ಞಾನದ ವಾಕ್ಯಗಳನ್ನು ನಮಗೆ ಕೊಡುತ್ತಾನೆ. ಜ್ಞಾನದ ವಾಕ್ಯಗಳನ್ನು ಉಪಯೋಗಿಸುವದರ ಮೂಲಕ ದೇವರು ತನ್ನ ಮಾರ್ಗದರ್ಶನವನ್ನು ಬಿಡುಗಡೆ ಮಾಡುತ್ತಾನೆ. ಹಿಂದೆ ಇದು ಹೀಗೆ ಸಂಭವಿಸಿತ್ತು, ಆದಕಾರಣ ಈಗ ಈ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬಂತೆ

ಕೆಲವು ಸಲ ಇದು ಒಂದು 'ಜ್ಞಾಪಕಕ್ಕೆ ತರುವಂತದ್ದರ' ಹಾಗೆ ಬರುತ್ತದೆ. ಕೆಲವು ಸಲ ಇದು ಯಾರಾದರೂ ಮುಚ್ಚಿಡುವದಕ್ಕೆ ಪ್ರಯತ್ನಿಸಿದ್ದನ್ನು ತೆರೆದಿಡುವ ಹಾಗೆ ಬರುತ್ತದೆ, ಅವರು ವಿಷಯಗಳನ್ನು ಮುಚ್ಚಿಟ್ಟಾಗ್ಯೂ ಸಹ ನೀವು ಯಾವ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ತಿಳಿಯುದಕ್ಕೆ ಇದು ಕಾರಣವಾಗುತ್ತದೆ. ಕೆಲವು ಸಲ ಇದು ದೇವರು ಸಂಘಟಿಸಿದ ಸಂಗತಿಗಳ ಹಾಗೆ ಬರುತ್ತದೆ, ನೀವು ಕೇವಲ ಅದರೊಳಗೆ ನಡೆಯಬೇಕು.

## ಈ ಪರಿಸ್ಥಿತಿಯನ್ನು ಇಲ್ಲಿ ಆಲೋಚಿಸಿರಿ:

ಮಾರ್ಕ-11:1-9

**1-ಅವರು ಯೆರೂಸಲೇಮಿಗೆ ಸಮೀಪಿಸಿ ಎಣ್ಣೇಮರಗಳ ಗುಡ್ಡದ ಬಳಿಯಲ್ಲಿರುವ ಬೇತ್ಪಗೆಗೂ ಬೇಥಾನ್ಯಕ್ಕೂ ಬಂದಾಗ**

**2-ಆತನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕರೆದು - ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ; ಅದರೊಳಕ್ಕೆ ಸೇರುತ್ತಿರುವಾಗಲೆ ಅಲ್ಲಿ ಕಟ್ಟಿರುವ ಒಂದು ಕತ್ತೇ ಮರಿಯನ್ನು ಕಾಣುರಿ; ಇದುವರೆಗೆ ಅದರ ಮೇಲೆ ಯಾರೂ ಹತ್ತಿಲ್ಲ; ಅದನ್ನು ಬಿಚ್ಚಿ ಡುಕೊಂಡು ಬನ್ನಿರಿ.**

**3-ಯಾವನಾದರೂ ನಿಮ್ಮನ್ನು - ಏನು ಹೀಗೆ ಮಾಡುವದು ಎಂದು ಕೇಳಿದರೆ - ಇದು ಸ್ವಾಮಿಯವರಿಗೆ ಬೇಕಾಗಿದೆ, ಅವರು ತಡಮಾಡದೆ ತಿರಿಗಿ ಇಲ್ಲಿಗೆ ಕಳುಸಿಕೊಡುವರು ಅನ್ನಿರಿ ಎಂದು ಹೇಳಿ ಕಳುಸಿದನು.**

**4-ಆ ಶಿಷ್ಯರು ಹೋಗಿ ಬೀದಿಯಲ್ಲಿ ಹೊರಗೆ ಬಾಗಿಲಿನ ಹತ್ತಿರ ಒಂದು ಕತ್ತೇಮರಿ ಕಟ್ಟಿರುವದನ್ನು ಕಂಡು ಅದನ್ನು ಬಿಚ್ಚಿದರು.**

**5- ಅಲ್ಲಿ ನಿಂತಿದ್ದವರಲ್ಲಿ ಕೆಲವರು - ಈ ಮರಿಯನ್ನು ಬಿಚ್ಚಿ ಏನು ಮಾಡುತ್ತೀರಿ? ಎಂದು ಕೇಳಿದ್ದಕ್ಕೆ,**

**6-ಯೇಸು ಹೇಳಿದಂತೆಯೇ ಅವರು ಹೇಳಿದಾಗ ಆ ಜನರು ತೆಗೆದುಕೊಂಡು ಹೋಗಗೊಡಿಸಿದರು.**

**7-ಶಿಷ್ಯರು ಆ ಮರಿಯನ್ನು ಯೇಸುನ ಬಳಿಗೆ ತಂದು ತಮ್ಮ ಬಟ್ಟೆಗಳನ್ನು ಅದರ ಮೇಲೆ ಹಾಕಲು ಆತನು ಅದನ್ನು ಹತ್ತಿ ಕೂತುಕೊಂಡನು.**

**8-ಆಗ ಅನೇಕರು ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಸಿದರು. ಬೇರೆ ಕೆಲವರು ತೋಟಗಳಿಂದ ಚಿಗುರುಗಳನ್ನು ಕೊಯಿದು ತಂದು ಹಾಸಿದರು.**

**9-ಆತನ ಹಿಂದೆಯೂ ಮುಂದೆಯೂ ಹೋಗುತ್ತಿದ್ದವರು - ಜಯ; ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ! ಎಂದು ಆರ್ಭಟಿಸಿದರು**

ಯೇಸು ಯೆರೂಸಲೇಮಿಗೆ ಸಮೀಪಿಸುತ್ತಿದ್ದಂತೆಯೇ, ಆತನು ಒಂದು ಜ್ಞಾನದ ವಾಕ್ಯವನ್ನು ಹೊಂದಿಕೊಂಡನು ಮತ್ತು ತಂದೆಯು ಈಗಾಗಲೇ ವ್ಯವಸ್ಥೆ ಮಾಡಿ ಆತನಿಗಾಗಿ ಸಿದ್ಧವಾಗಿಟ್ಟಿದ್ದ ವರಗಳೊಂದಿಗೆ ಆತನು ತನ್ನ ಇಬ್ಬರು ಶಿಷ್ಯರನ್ನು ಕಳುಹಿಸಿದನು. ಅವರು ಕತ್ತೇಮರಿಯನ್ನು ಕಂಡು ಅದನ್ನು ಯೇಸುಗಾಗಿ ತಂದರು, ಆತನು ಅದನ್ನು ಹತ್ತಿ ಯೆರೂಸಲೇಮನ್ನು ಪ್ರವೇಶಿಸಿದನು. ಜ್ಞಾನದ ವಾಕ್ಯವನ್ನು

ಪಡೆದು ಅದರ ಪ್ರಕಾರ ಕ್ರಿಯೆ ಮಾಡುವದರಲ್ಲಿ, ಯೇಸು ತಂದೆಯ ಚಿತ್ತವನ್ನು ನೆರವೇರಿಸಿ ಅದೇ ರೀತಿಯಲ್ಲಿ ಪ್ರವಾದನೆಯನ್ನೂ ನೆರವೇರಿಸಿದನು (ಜೆಕರ್ಯ-9:9).

## ಜ್ಞಾನದ ವಾಕ್ಯಗಳು

ಜ್ಞಾನ ವಾಕ್ಯದ ಒಂದು ವರವು ದೇವರ ಮನಸ್ಸು, ಚಿತ್ತ ಮತ್ತು ಉದ್ದೇಶದ ಪ್ರಕಟನೆಯಾಗಿದೆ ಮತ್ತು ವಿಶೇಷವಾಗಿ ಮಾಡಬೇಕಾದ ತೀರ್ಮಾನಗಳಿಗೆ ಸಂಬಂಧಿಸಿದಂತೆ ಮತ್ತು ಭವಿಷ್ಯಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮದ ಅವಧಿಗೆ ಇದು ನಮಗೆ ಸಹಾಯ ಮಾಡುತ್ತದೆ. ದೇವರು ನಮಗೆ ಒಂದು ಜ್ಞಾನದ ವಾಕ್ಯವನ್ನು ಕೊಡುವದರಿಂದ ನಮಗೆ ಮಾರ್ಗದರ್ಶನ ಮಾಡುತ್ತಾನೆ. ಉದಾಹರಣೆಗೆ, ಒಂದು ಸಮಸ್ಯೆಯನ್ನು ಪರಿಹರಿಸಿಕೊಳ್ಳುವದಕ್ಕೆ ಯಾರ ಹತ್ತಿರ ಹೋಗಿ ಭೇಟಿಮಾಡಬೇಕು ಎನ್ನುವದನ್ನು ತಿಳಿದುಕೊಳ್ಳುವದಕ್ಕೆ ದೇವರು ನಮಗೆ ಒಂದು ಜ್ಞಾನದ ವಾಕ್ಯವನ್ನು ಕೊಡುತ್ತಾನೆ. ಅನೇಕ ಆಯ್ಕೆಗಳಲ್ಲಿ ಯಾವುದನ್ನು ಆರಿಸಿಕೊಳ್ಳಬೇಕೆನ್ನುವದರ ಕುರಿತು ಆತನು ನಿಮಗೆ ಒಂದು ಜ್ಞಾನದ ವಾಕ್ಯವನ್ನು ಕೊಡುತ್ತಾನೆ. ಯಾವುದರಲ್ಲಿ ಸಂಗತಿಗಳು ಬದಲಾಗುತ್ತವೆ ಎನ್ನುವ ಭವಿಷ್ಯದ ಸಮಯದ ಕುರಿತು ನೀವು ಒಂದು ಜ್ಞಾನದ ವಾಕ್ಯವನ್ನು ಹೊಂದಿಕೊಳ್ಳುತ್ತೀರಿ ಮತ್ತು ಇದರಿಂದ ಮುಂದಿರುವ ಕ್ಷಣಕ್ಕಾಗಿ ನಿಮ್ಮನ್ನು ನೀವು ಸಿದ್ಧಪಡಿಸಿಕೊಳ್ಳುತ್ತೀರಿ. ಪವಿತ್ರಾತ್ಮನು ಒಂದು ಜ್ಞಾನ ವಾಕ್ಯದ ಮೂಲಕ ದೇವರ ಮಾರ್ಗದರ್ಶನವನ್ನು ನಮಗೆ ಹೇಗೆ ಬಿಡುಗಡೆ ಮಾಡುತ್ತಾನೆ ಎನ್ನುವದಕ್ಕೆ ಇವು ಕೇವಲ ಕೆಲವು ಉದಾಹರಣೆಗಳಾಗಿವೆ.

## ಸತ್ಯಸತ್ಯಾತ್ಮಗಳ ವಿವೇಚನೆ

ಆತ್ಮಗಳ ವ್ಯತ್ಯಾಸ ತಿಳಿಯುವ ವರವು, ಆತ್ಮೀಕ ಕ್ಷೇತ್ರದೊಳಗೆ ಮತ್ತು ಜನರ ಹೃದಯಗಳೊಳಗೆ ನೋಡುವದಕ್ಕೆ ನಮಗೆ ಸಹಾಯ ಮಾಡುತ್ತದೆ. ಆತ್ಮಗಳ ವ್ಯತ್ಯಾಸ ತಿಳಿಯುವ ವರಗಳ ಮೂಲಕ, ನಿಮ್ಮನ್ನು, ನಿಮ್ಮ ಸಂಘಸಂಸ್ಥೆಗಳನ್ನು ಮುಂತಾದವುಗಳನ್ನು ಕಾಪಾಡುವಂತ ತೀರ್ಮಾನಗಳನ್ನು ನೀವು ಮಾಡುವದಕ್ಕೆ ದೇವರು ನಿಮಗೆ ಮಾರ್ಗದರ್ಶನ ಮಾಡುತ್ತಾನೆ. ಕೆಲವು ಸಲ ಜನರು ನಿಮ್ಮ ಆಯ್ಕೆಗಳನ್ನು ಗ್ರಹಿಸದಿರಬಹುದು, ಆದರೆ ಅವರು ನೋಡದಿರುವ ಏನಾದರೊಂದನ್ನು ನೀವು ಸತ್ಯಸತ್ಯಾತ್ಮಗಳ ವಿವೇಚನೆಯ ವರದ ಮೂಲಕ ನೋಡುತ್ತೀರಿ, ಅದು ನೀವು ನಿಮ್ಮ ತೀರ್ಮಾನಗಳನ್ನು ಮಾಡಿಕೊಳ್ಳುವಂತದ್ದರ ಮೇಲೆ ಆಧಾರವಾಗಿರುತ್ತದೆ.

## ಉತ್ತಮ ಉದ್ದೇಶದ ಶಿಷ್ಯ

ಯೇಸು ತನ್ನ ಶಿಲುಬೆಯ ಮರಣ ಮತ್ತು ದಿವ್ಯಾರೋಹಣಕ್ಕಾಗಿ ತನ್ನ ಶಿಷ್ಯರನ್ನು ಸಿದ್ಧಪಡಿಸುತ್ತಿದ್ದನು, ಅದಕ್ಕೆ ಈ ಉದಾಹರಣೆ ಸಂಬಂಧಿಸುತ್ತದೆ. ಪೇತ್ರನು ಒಬ್ಬ ಉತ್ತಮ ಉದ್ದೇಶದ ಶಿಷ್ಯನ ಹಾಗಿದ್ದು, ಮಾತಾಡುತ್ತಾ ಯೇಸುಗೆ ಇದು ಎಂದಿಗೂ ಆಗಬಾರದು ಎಂದು ಹೇಳಿದನು. ಸ್ವಾಭಾವಿಕವಾಗಿ ಇದು ನಿಮ್ಮ ಯಜಮಾನನಿಗಾಗಿ ಮತ್ತು ಆತನ ಕ್ಷೇಮಕ್ಕಾಗಿ ಚಿಂತನೆ ಮಾಡುವದು ಒಂದು ತುಂಬಾ ಉತ್ತಮ ಸ್ವಭಾವದ ಹಾಗೆ ಕಂಡುಬರುತ್ತದೆ. ಹೇಗಿದ್ದರೂ ಆ ಹೇಳಿಕೆಗಳನ್ನು ಮಾಡುವದಕ್ಕೆ ಪೇತ್ರನನ್ನು ನಿಜವಾಗಿಯೂ ಯಾವುದು ಪ್ರೇರಿಸಿತು ಎಂದು ಕರ್ತನಾದ ಯೇಸು, ಬಾಹ್ಯರೂಪದ ಹಿಂದಿನದನ್ನು ನೋಡಿದ್ದನು. ಇದರ ಮೂಲ ಸೈತಾನನೆಂಬುದನ್ನು ಆತನು ಗುರುತಿಸಿ ಅವನನ್ನು ಗದರಿಸಿದನು. ಪೇತ್ರನು ಮಾಡಿದ ಸಲಹೆಗಳ ಜೊತೆಯಲ್ಲಿ ಹೋಗುವದನ್ನು ಆತನು ತಿರಸ್ಕರಿಸಿದನು.

ಮತ್ತಾಯ-16:21-23

**21-ಅಂದಿನಿಂದ ಯೇಸು ಕ್ರಿಸ್ತನು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವದಕ್ಕೆ ಪ್ರಾರಂಭ ಮಾಡಿದನು.**

**22-ಆಗ ಪೇತ್ರನು ಆತನ ಕೈ ಹಿಡಿದು - ಸ್ವಾಮೀ ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು ಎಂದು ಆತನನ್ನು ಗದರಿಸುವದಕ್ಕೆ ಪ್ರಾರಂಭಿಸಲು**

**23-ಆತನು ತಿರುಗಿಕೊಂಡು ಪೇತ್ರನಿಗೆ - ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಹೇಳಿದನು.**

## ಪಾದಗಳನ್ನು ತೊಳೆಯುವದು ನಿಮ್ಮನ್ನು ತಟ್ಟಬಹುದು

ಯೋಹಾನ 13ನೆಯ ಅಧ್ಯಾಯದಲ್ಲಿ, ಯೇಸು ತನ್ನ ಶಿಷ್ಯರ ಪಾದಗಳನ್ನು ತೊಳೆಯುವದಕ್ಕೆ ಸಿದ್ಧಗೊಂಡಿರುವ ಹಾಗೆ, ಒಬ್ಬನು ತನಗೆ ದ್ರೋಹ ಮಾಡುತ್ತಾನೆ ಎಂಬುದನ್ನು ಚೆನ್ನಾಗಿ ತಿಳಿದಿದ್ದನು. ನಿಜವಾಗಿಯೂ, ತನಗೆ ದ್ರೋಹ ಮಾಡುವವರು ಯಾರೆಂಬುದನ್ನೂ ಸಹ ಯೇಸು ತಿಳಿದಿದ್ದನು. ಆತನು ತನ್ನ ಆತ್ಮದಲ್ಲಿ ಕಳವಳ, ಗಲಿಬಿಲಿ ಅಥವಾ ಕ್ಷೋಭೆಗೊಳಗಾಗಿದ್ದನು. ಈ ಶಿಷ್ಯನು ಇತರ ಎಲ್ಲಾ ಶಿಷ್ಯರುಗಳಂತೆ ಇರುವ ಹಾಗೆ ನಟಿಸುತ್ತಿದ್ದಾಗ್ಯೂ, ಇವನೇ ತನ್ನ ಪಾದವನ್ನು ಎತ್ತುವವನು ಅಂದರೆ ತನ್ನ ವಿರುದ್ಧವಾಗಿ ದ್ರೋಹ ಮಾಡುವವನು ಎನ್ನುವದನ್ನು ಯೇಸು ತಿಳಿದಿದ್ದನು. ಈ ಶಿಷ್ಯನ ಹೃದಯದಲ್ಲಿ ಮತ್ತು ಆತ್ಮದ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಯೇಸು

ತೀಕ್ಷ್ಣ ಬುದ್ಧಿಯಿಂದ ಚೆನ್ನಾಗಿ ತಿಳಿದಿದ್ದನು. ವಾಸ್ತವದಲ್ಲಿ, ಯೂದನಲ್ಲಿ ಸೈತಾನನು ಕಾರ್ಯ ಮಾಡುವ ಕ್ಷಣವನ್ನು ಯೇಸು ತಿಳಿದಿದ್ದನು. ಇದೆಲ್ಲವೂ ಪ್ರಕಟಗೊಳ್ಳಬೇಕಾದ ಘಟನೆಗಳಿಗಾಗಿ ಮತ್ತು ಶಿಲುಬೆಗೇರುವದಕ್ಕೆ ಆತನು ಶಿಲುಬೆಗೆ ಹೋಗುವದಕ್ಕಾಗಿ ಯೇಸುವನ್ನು ಸಿದ್ಧಪಡಿಸಿದವು. ಆದ್ದರಿಂದ ಆತನ ಸ್ವಂತದವನೇ ಆತನಿಗೆ ದ್ರೋಹ ಮಾಡುವದು ಒಂದು ಆಶ್ಚರ್ಯವೆನಿಸಲಿಲ್ಲ ಎನ್ನುವದು ಸತ್ಯಾಂಶವಾಗಿದೆ.

ಯೋಹಾನ-13:11,18,21,27

**11-ಯೇಸು ತನ್ನನ್ನು ಹಿಡುಕೊಡುವವನು ಇಂಥವನೇ ಎಂದು ತಿಳಿದಿದ್ದರಿಂದ ನಿಮ್ಮಲ್ಲಿ ಎಲ್ಲರೂ ಶುದ್ಧರಲ್ಲವೆಂದನು.**

**18-ನಾನು ನಿಮ್ಮೆಲ್ಲರನ್ನು ಕುರಿತು ಈ ಮಾತನ್ನು ಹೇಳಲಿಲ್ಲ; ನಾನು ಆದುಕೊಂಡವರನ್ನು ನಾನು ಬಲ್ಲೆನು; ಆದರೆ - ನನ್ನ ಕೂಡ ಊಟಮಾಡುವವನೇ ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ ಎಂಬ ಶಾಸ್ತ್ರದ ಮಾತು ನೆರವೇರಬೇಕಾಗಿದೆ.**

**21-ಇದನ್ನು ಹೇಳಿ ಯೇಸು ಆತ್ಮದಲ್ಲಿ ತತ್ತರಗೊಂಡು - ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನೆಂದು ಸ್ಪಷ್ಟವಾಗಿ ಹೇಳಿದನು.**

**27-ಅವನು ಆ ತುತ್ತನ್ನು ತೆಗೆದುಕೊಂಡ ಕೂಡಲೆ ಸೈತಾನನು ಅವನೊಳಗೆ ಹೊಕ್ಕನು. ಆಗ ಯೇಸು ಅವನಿಗೆ - ನೀನು ಮಾಡುವದನ್ನು ಬೇಗನೆ ಮಾಡಿಬಿಡು ಎಂದು ಹೇಳಿದನು.**

ಇದೇ ರೀತಿಯಲ್ಲಿ, ಪವಿತ್ರಾತ್ಮನು ನಮ್ಮನ್ನು ಎಚ್ಚರಿಸಿ, ಜಾಗರೂಕರನ್ನಾಗಿ ಮಾಡಿ ಮುಂಬರುವ ಸಮಯದಲ್ಲಿ ಸಂಗತಿಗಳು ಹೇಗೆ ಪ್ರಕಟಗೊಳ್ಳುತ್ತವೆ ಮತ್ತು ನಾವು ಯಾವ ಅವಧಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವದನ್ನು ತಿಳಿದುಕೊಳ್ಳುವಂತೆ ನಮ್ಮನ್ನು ಸಿದ್ಧಪಡಿಸುತ್ತಾನೆ.

ನಮಗೆ ಮಾರ್ಗದರ್ಶನ ಮಾಡಿ ನಿರ್ದೇಶನವನ್ನು ಮುಟ್ಟಿಸುವದಕ್ಕೆ ಪವಿತ್ರಾತ್ಮನು ಆತ್ಮನ ವರಗಳನ್ನು ಉಪಯೋಗಿಸುವ ಕೆಲವು ರೀತಿಗಳನ್ನು ಈ ಅಧ್ಯಾಯದಲ್ಲಿ ನಾವು ಮುಖ್ಯ ಅಂಶಗಳಾಗಿ ಹೊಂದಿದೆವು. ದೇವರಾತ್ಮನು ಕೆಲಸ ಮಾಡುವಂತಹ ಇತರ ಅನೇಕ ಮಾರ್ಗಗಳೂ ಸಹ ಇವೆ, ಆತನ ಪ್ರಕಟನೆಗಳ ಮತ್ತು ಕ್ರಿಯೆಗಳ ವಿವಿಧತೆಗಳಿಗೆ ನಾವು ಉದಾರವಾಗಿ ನೆಲೆಸಿದವರಾಗಿರಬೇಕು.

## ಪರ್ಯಾಲೋಚನೆ

1) ನೀವು ಒಂದು ನಿರ್ಧಿಷ್ಟವಾದ ಸಂಗತಿಯ ಕುರಿತು ಅನ್ಯಭಾಷೆಯಲ್ಲಿ ಪ್ರಾರ್ಥಿಸುವಾಗ, ನೀವು ದೇವರ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಹುಡುಕುತ್ತೀರಿ, ನೀವು ಏನು ಪ್ರಾರ್ಥನೆ ಮಾಡಿದ್ದೀರೋ ಅದರ ಗ್ರಹಿಕೆಯನ್ನು ಹೊಂದಿಕೊಂಡಿರುವ ಮತ್ತು ಒಂದು ತೀರ್ಮಾನವನ್ನು ಮಾಡುವದಕ್ಕೆ ನಿಮಗೆ ಯಾವುದು ಸಹಾಯ ಮಾಡಿತೆಂಬುದರ ವೈಯಕ್ತಿಕ ಅನುಭವವನ್ನು ಹೊಂದಿದ್ದೀರೋ? ಯಾವುದು ಮತ್ತು ಹೇಗೆ ಸಂಭವಿಸಿತೆಂಬುದನ್ನು ಜ್ಞಾಪಿಸಿಕೊಳ್ಳಿರಿ.

2) ನೀವು ಒಂದು ತಿಳುವಳಿಕೆಯ ವಾಕ್ಯ, ಒಂದು ಜ್ಞಾನದ ವಾಕ್ಯದ ಮೂಲಕ ಅಥವಾ ಸತ್ಯಸತ್ಯಾತ್ಮಗಳ ವಿವೇಚನೆಯ ವರದ ಮೂಲಕ ದೇವರ ಮಾರ್ಗದರ್ಶನವನ್ನು ಹೊಂದಿಕೊಂಡಿರುವ ಅನುಭವವನ್ನು ಪಡೆದಿದ್ದರೆ, ಯಾವಾಗ ಮತ್ತು ಏನು ಸಂಭವಿಸಿತೆಂಬುದನ್ನು ಜ್ಞಾಪಿಸಿಕೊಳ್ಳಿರಿ. ನೀವು ಇದನ್ನು ಹೊಂದಿಲ್ಲದಿದ್ದರೆ, ಈ ರೀತಿಗಳಲ್ಲಿ ನಿಮ್ಮ ಜೀವಿತದ ಮೂಲಕ ಕೆಲಸ ಮಾಡುವದಕ್ಕೆ ಪವಿತ್ರಾತ್ಮನನ್ನು ಕೇಳಿಕೊಳ್ಳಿರಿ, ಮತ್ತು ಆತನ ವಿಷಯದಲ್ಲಿ ಶೀಘ್ರಗ್ರಾಹಿಗಳಾಗಿರುವದಕ್ಕೆ ನಿಮಗೆ ಸಹಾಯ ಮಾಡುವಂತೆ ಆತನನ್ನು ಕೇಳಿಕೊಳ್ಳಿರಿ.

# 7

# ಕನಸುಗಳು ಮತ್ತು ದರ್ಶನಗಳು

ದೇವರು ತನ್ನ ಪವಿತ್ರಾತ್ಮನನ್ನು ಸುರಿಸುವಂತ ಸಮಯದಲ್ಲಿ ನಾವಿದ್ದೇವೆ. ಆತ್ಮನ ಈ ಹೊರಸುರಿಯುವಿಕೆಯ ಗುಣಲಕ್ಷಣಗಳು ಕನಸುಗಳಿಂದ, ದರ್ಶನಗಳಿಂದ ಮತ್ತು ಪ್ರವಾದನೆಗಳಿಂದ ವಿವರಿಸಲ್ಪಡುತ್ತದೆ. ಪವಿತ್ರಾತ್ಮನ ಇಂತಹ ಚಟುವಟಿಕೆಗೆ ನಾವು ತೆರೆಯಲ್ಪಡಬೇಕು.

ಅಪೊ.ಕೃತ್ಯ–2:17–18

**17–ಕಡೇ ದಿವಸಗಳಲ್ಲಿ ನಾನು ಎಲ್ಲ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು;**

**18–ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು; ಅವರೂ ಪ್ರವಾದಿಸುವರು.**

## ಕನಸುಗಳು

ಕನಸುಗಳು ಮೂರು ವ್ಯತ್ಯಾಸವುಳ್ಳ ಉಗಮಗಳನ್ನು ಹೊಂದಿದೆ. ನಮ್ಮ ಮನಸ್ಸು ಅನ್ಯ ವಿಚಾರಗಳಲ್ಲಿ ಮಗ್ನಗೊಂಡ ಸಂಗತಿಗಳು ನಮ್ಮ ಕೆಲವು ಕನಸುಗಳಿಗೆ ಕಾರಣವಾಗಿರುತ್ತವೆ (ಪ್ರಸಂಗಿ–5:3). ನಮ್ಮ ಕೆಲವು ಕನಸುಗಳು ದೇವರು ನಮಗೆ ಮಾತಾಡಿದವುಗಳಾಗಿರುತ್ತವೆ. ನಮ್ಮ ಕೆಲವು ಕನಸುಗಳು ನಮ್ಮ ನಿದ್ರೆಯಲ್ಲಿ ದುರಾತ್ಮನ ಅಡ್ಡಬರುಕೆಯಿಂದ ಉಂಟಾಗಿರುತ್ತವೆ. ನಾವು ಕೆಟ್ಟ ಕನಸುಗಳನ್ನು ಕಂಡಾಗ, ಅವು ನಮ್ಮ ಸ್ವಂತ ಮನಸ್ಸಿನಿಂದ ಅಥವಾ ದುರಾತ್ಮನಿಂದ ಬಂದದ್ದಾಗಿದ್ದರೆ, ನಾವು ಕೇವಲ ಅವುಗಳನ್ನು ತಿರಸ್ಕರಿಸಬೇಕು ಮತ್ತು ಅವುಗಳು ನಮ್ಮ ಮೇಲೆ ಪರಿಣಾಮ ಬೀರುವದಕ್ಕೆ ಅವಕಾಶ ಕೊಡಬಾರದು.

## ದೇವರು ಕನಸುಗಳ ಮೂಲಕ ನಮ್ಮೊಂದಿಗೆ ಮಾತಾಡುತ್ತಾನೆ.

ಕೀರ್ತನೆ–16:7

**ಯೆಹೋವನು ನನಗೆ ಆಲೋಚನೆಯನ್ನು ಹೇಳಿಕೊಡುತ್ತಾನೆ; ಆತನನ್ನು ಕೊಂಡಾಡುವೆನು. ರಾತ್ರಿ ಸಮಯಗಳಲ್ಲಿ ನನ್ನ ಅಂತರಾತ್ಮವು ನನ್ನನ್ನು ಬೋಧಿಸುತ್ತದೆ.**

ದೇವರು ರಾತ್ರಿ ಸಮಯದಲ್ಲಿ ತನ್ನ ಆಲೋಚನೆಯನ್ನೂ ಮತ್ತು ಉಪದೇಶಗಳನ್ನು ನಮಗೆ ಕೊಡುತ್ತಾನೆ.

ಯೋಬ-33:14-18

**14-ದೇವರು ಮಾತಾಡುವ ರೀತಿ ಒಂದುಂಟು, ಹೌದು ಎರಡೂ ಉಂಟು, ಮನುಷ್ಯನಾದರೋ ಲಕ್ಷಿಸುವದಿಲ್ಲ.**

**15-ಮನುಷ್ಯರಿಗೆ ಗಾಢನಿದ್ರೆಯುಂಟಾದಾಗಲೂ ಹಾಸಿಗೆಯ ಮೇಲೆ ಜಂಪುಹತ್ತಿದಾಗಲೂ ಆತನು ಸ್ವಪ್ನದಲ್ಲಿ ರಾತ್ರಿಯ ಕನಸಿನಲ್ಲಿ**

**16-ಅವರ ಕಿವಿಗಳನ್ನು ತೆರೆದು ಅವರಿಗೆ ಶಿಕ್ಷಾವಚನವನ್ನು ಉಪದೇಶಿಸಿ ಅದಕ್ಕೆ ಮುದ್ರೆ ಹಾಕುವನು.**

**17-ಹೀಗೆ ಮನುಷ್ಯನನ್ನು ಅವನ ದುಷ್ಕಾರ್ಯದಿಂದ ತಪ್ಪಿಸುವನು, ಮಾನವನಿಗೆ ಗರ್ವವನ್ನು ಮರೆಮಾಡುವನು;**

**18-ಅವನ ಆತ್ಮವನ್ನು ಅಧೋವಲೋಕಕ್ಕೆ ಬೀಳದಂತೆ ತಡೆದು ಅವನ ಜೀವವನ್ನು ದೈವಾಸ್ತ್ರದಿಂದ ಅಳಿದುಹೋಗದ ಹಾಗೆ ನಿಲ್ಲಿಸುವನು.**

ಯೋಬ 33ನೇ ಅಧ್ಯಾಯದ ಈ ವಾಕ್ಯಭಾಗವು ಆಸಕ್ತಿಯುಳ್ಳದ್ದಾಗಿದೆ. ದೇವರು ಕನಸುಗಳ ಮೂಲಕ ಜನರಿಗೆ ಮಾತಾಡುತ್ತಾನೆಂಬುದನ್ನು ಸೂಚಿಸುತ್ತದೆ. ಜನರು ನಿದ್ರೆಯಲ್ಲಿರುವ ವೇಳೆಯಲ್ಲಿ ಕೇಳಿಸಿಕೊಳ್ಳುವದಕ್ಕೆ ಕಾರಣವಾಗುವಂತೆ ಆತನು ಅವರ ಕಿವಿಗಳನ್ನು ತೆರೆಯುತ್ತಾನೆ. ಖಂಡಿತವಾಗಿ ಇದು ಆತ್ಮೀಕ ಕಿವಿಗಳ ತೆರೆಯುವಿಕೆಗೆ ಸೂಚಿತವಾಗಿದೆಯೇ ಹೊರತು ಸ್ವಾಭಾವಿಕವಾದ ಕಿವಿಗಳಿಗಲ್ಲ. ಆತನು ತನ್ನ ಉಪದೇಶವನ್ನು, ಮಾರ್ಗದರ್ಶನವನ್ನು ಮತ್ತು ನಿರ್ದೇಶನವನ್ನು ಕನಸುಗಳ ಮೂಲಕ ನಮಗೆ ಮುಟ್ಟಿಸುತ್ತಾನೆ ಮತ್ತು ತಪ್ಪಿನಿಂದ ನಮ್ಮನ್ನು ಕಾಪಾಡುವದಕ್ಕೆ ಪ್ರಯತ್ನಿಸುತ್ತಾನೆ.

ದೇವರಿಂದ ಬರುವ ಕನಸುಗಳು (ಕೆಲವು ಸಲ ರಾತ್ರಿಯ ದರ್ಶನಗಳಂತೆ ಸಹ ಸೂಚಿಸಲ್ಪಡುತ್ತದೆ) ವಿವಿಧ ಉದ್ದೇಶಗಳಿಗೆ ಉಪಯೋಗವಾಗುತ್ತವೆ.

## ದೇವರು ಕನಸುಗಳ ಮೂಲಕ ಮಾತಾಡುತ್ತಾನೆ:

1) **ನಮ್ಮನ್ನು ಸಂಧಿಸಿ ಹೋರಾಡುವದಕ್ಕೆ** (ಆದಿಕಾಂಡದಲ್ಲಿ ಯಾಕೋಬ, ಆದಿ-28:12, 1ಅರಸು-3:5-15ರಲ್ಲಿ ಸೊಲೊಮೋನ)

2) **ನಮ್ಮನ್ನು ಉತ್ತೇಜಿಸುವದಕ್ಕೆ** (ಕೊರಿಂಥದಲ್ಲಿ ಪೌಲನು ಅಪೊ.ಕೃತ್ಯ-18:9-11)

3) **ನಮಗೆ ಉಪದೇಶಿಸಿ ಮತ್ತು ಬೋಧಿಸುವದಕ್ಕೆ** (ಯೋಬ-33:14-18; ಕೀರ್ತನೆ-16:7; ಯೋಸೇಫ, ಮತ್ತಾಯ-1:20)

4) **ನಮಗೆ ಮಾರ್ಗದರ್ಶನ ಮಾಡಿ ನಿರ್ದೇಶಿಸುವದಕ್ಕೆ** (ಗಿದ್ಯೋನ, ನ್ಯಾಯ–7:13–15; ಯೋಸೇಫ, ಮತ್ತಾಯ–2:19021; ಯಾಕೋಬ, ಆದಿ–46:1–4; ಮಕೆದೋನ್ಯಕ್ಕೆ ಕರೆಯಲ್ಪಟ್ಟ ಪೌಲ, ಅಪೊ.ಕೃತ್ಯ–16:9)

5) **ಭವಿಷ್ಯದ ಘಟನೆಗಳನ್ನು ಪ್ರಕಟಿಸುವದಕ್ಕೆ** (ಯೋಸೇಫ, ಆದಿ–37:5–10; ಪಾನದಾಯಕ ಮತ್ತು ಭಕ್ಷ್ಯಕಾರ, ಆದಿ–40:5–19; ಫರೋಹ, ಆದಿ–41:1–10; ನೆಬೂಕದ್ನೆಚ್ಚರ, ದಾನಿ–2 ಮತ್ತು 4ನೇ ಅಧ್ಯಾಯ; ದಾನಿಯೇಲ, ದಾನಿ–7)

6) **ರಹಸ್ಯ ಸಂಗತಿಗಳನ್ನು ನಮಗೆ ಪ್ರಕಟಿಸುವದಕ್ಕೆ** (ಯಾಕೋಬ, ಆದಿ–31:10–13; ದಾನಿಯೇಲ, ದಾನಿ–2:19)

7) **ನಮ್ಮನ್ನು ಸರಿಪಡಿಸಿ ಮತ್ತು ಭಿನ್ನವಾದ ಸ್ಥಿತಿಗೆ ಬದಲಾಯಿಸುವದಕ್ಕೆ** (ಅಬಿಮೆಲೇಕ, ಆದಿ–20:306; ಯೋಬ–33:14–18)

8) **ನಮ್ಮನ್ನು ಎಚ್ಚರಿಸಿ ಜಾಗೃತಗೊಳಿಸುವದಕ್ಕೆ** (ಲಾಬಾನ, ಆದಿ–31:24; ಬುದ್ಧಿವಂತ ಮನುಷ್ಯ, ಮತ್ತಾಯ–2:12; ಯೋಸೇಫ, ಮತ್ತಾಯ–2:13; 2:22–23; ಪಿಲಾತನ ಹೆಂಡತಿ, ಮತ್ತಾಯ–27:19)

ಟಿಪ್ಪಣಿ: ಮೇಲಿನವುಗಳಿಗೆ ನಾವು ಒಳಗೊಂಡಿದ್ದೇವೆ, ಕೆಲವು ವಿಷಯಗಳಲ್ಲಿ ಒಬ್ಬ ವ್ಯಕ್ತಿಯು ರಾತ್ರಿಯಲ್ಲಿ ಒಂದು ದರ್ಶನವನ್ನು (ಅಥವಾ ರಾತ್ರಿಯ ದರ್ಶನಗಳು) ಕಂಡಿರುವದು ಬರೆಯಲ್ಪಟ್ಟಿದೆ. ಅವರು ಕಂಡಿರುವ ಒಂದು ದರ್ಶನವು ಒಂದು ಕನಸೂ ಸಹ ಆಗಿರಬಹುದು, ಅಥವಾ ರಾತ್ರಿಯಲ್ಲಿ ಅವರು ನೋಡಿರುವ ಒಂದು ದರ್ಶನವಾಗಿರಬಹುದು.

## ದೇವರಿಂದ ಬರುವ ಕನಸುಗಳನ್ನು ಹೊಂದಿಕೊಳ್ಳುವದಕ್ಕೆ ನಾವು ಮುಚ್ಚುಮರೆಯಿಲ್ಲದವರಾಗಿರಬೇಕು.

ನಿದ್ರೆಗೆ ಹೋಗುವದಕ್ಕಿಂತ ಮೊದಲು, ರಾತ್ರಿಯಲ್ಲಿ ಕನಸುಗಳು ಮತ್ತು ದರ್ಶನಗಳ ಮೂಲಕ ನಿಮ್ಮೊಂದಿಗೆ ಮಾತಾಡುವಂತೆ ದೇವರಲ್ಲಿ ಪ್ರಾರ್ಥಿಸಿ ಕೇಳಿಕೊಳ್ಳಿರಿ. ನೀವು ನಿದ್ರಿಸುವಾಗ ನಿಮ್ಮ ಮನಸ್ಸನ್ನು ಮತ್ತು ಮನಸ್ಸಿನ ಚಟುವಟಿಕೆಯನ್ನು ಪತ್ರಗೊಳಿಸಿಕೊಳ್ಳಿರಿ. ಕೆಲವು ಕನಸುಗಳು ವಾಸ್ತವವಾದುದು ಮತ್ತು ಗ್ರಹಿಸಿಕೊಳ್ಳುವದಕ್ಕೆ ಸುಲಭವಾದುದು ಆಗಿರುವ ವೇಳೆಯಲ್ಲಿ, ಆಗಾಗ್ಗೆ ಕನಸುಗಳು ಸಾಂಕೇತಿಕವಾಗಿರುತ್ತವೆ ಮತ್ತು ಭಾಷಾಂತರದ ಅಗತ್ಯವಾಗಿರುತ್ತವೆ. ಕನಸಿನ ಒಂದು ಅರ್ಥವನ್ನು ನಿಮಗೆ

ಕೊಡುವಂತೆ ದೇವರನ್ನು ಪ್ರಾರ್ಥಿಸಿ ಕೇಳಿಕೊಳ್ಳಿರಿ.

ನಿಮ್ಮ ಕನಸುಗಳನ್ನು ದಿನಚರಿ ಪುಸ್ತಕವನ್ನಾಗಿ ಮಾಡಿಕೊಳ್ಳಿರಿ, ಆದರಿಂದ ನೀವು ಯಾವಾಗಲೂ ಹಿಂದಕ್ಕೆ ಹೋಗಿ ದೇವರು ನಿಮಗೆ ಮಾತಾಡಿರುವದನ್ನು ಜ್ಞಾಪಿಸಿಕೊಳ್ಳಬಹುದು. ನಾನು 2007ರಿಂದಲೂ ನನ್ನ ಕನಸುಗಳನ್ನು ವ್ಯಯಕ್ತಿಕವಾಗಿ ದಿನಚರಿ ಪುಸ್ತಕವನ್ನಾಗಿ ಮಾಡಿಕೊಂಡಿದ್ದೇನೆ. ನಮಗೆ ಹಿಂದೆ ಬಂದಿರುವ ಅನೇಕ ಕನಸುಗಳು ಉದ್ದಕ್ಕೂ ಮಾರ್ಗದರ್ಶನವನ್ನು ತರುವದರಲ್ಲಿ, ಅಪಾಯವನ್ನು ಎಚ್ಚರಿಸುವದರಲ್ಲಿ, ಅಥವಾ ಮುಂದೆ ಸಂಭಸಲಿಕ್ಕಿರುವ ಘಟನೆಗಳಿಗಾಗಿ ಮುಂಚಿತವಾದ ಸಿದ್ಧತೆಯಲ್ಲಿ ಹೇಗೆ ಸಹಾಯ ಮಾಡಿದವೆಂಬುದನ್ನು ಜ್ಞಾಪಿಸಿಕೊಳ್ಳುವದಕ್ಕೆ ಶಕ್ತರಾಗಿ ಅವುಗಳನ್ನು ನೋಡುವದು ಅದ್ಭುತಕರವಾದುದಾಗಿದೆ. ದೇವರೂ ಈಗಲೂ ಕನಸುಗಳ ಮೂಲಕ ಮಾತಾಡುತ್ತಾನೆ!

## ದರ್ಶನಗಳು

ಕನಸುಗಳು ಮತ್ತು ದರ್ಶನಗಳ ನಡುವೆ ಇರುವ ಒಂದು ಸಾಮಾನ್ಯವಾದ ಮತ್ತು ಮೂಲ ವ್ಯತ್ಯಾಸವೆಂದರೆ ಅದು, ಒಬ್ಬನು ನಿದ್ದೆ ಮಾಡುವಾಗ ಕನಸುಗಳು ಬೀಳುತ್ತವೆ ಮತ್ತು ಒಬ್ಬನು ಎಚ್ಚರವಾಗಿರುವಾಗ ದರ್ಶನಗಳು ಉಂಟಾಗುತ್ತವೆ. ಕನಸುಗಳು ಮತ್ತು ದರ್ಶನಗಳು ಎರಡರಲ್ಲಿಯೂ ನಾವು ಏನಾದರೊಂದನ್ನು ನೋಡುತ್ತೇವೆ ಮತ್ತು ಒಂದು ದೃಶ್ಯದ ಸಾಧನದ ಮೂಲಕ ದೇವರಿಂದ ಒಂದು ಸಂದೇಶವನ್ನು ಪಡೆದುಕೊಳ್ಳುತ್ತೇವೆ, ಅದು ನಾವು ನೋಡುವಂತ ಒಂದು ಚಿತ್ರಾತ್ಮಕವಾದುದಾಗಿರುತ್ತದೆ.

ಅಂತರಂಗದ ಸಾಕ್ಷಿಯು ನಾವು ಅನುಭವಪಡುವಂತ ಅಭಿಪ್ರಾಯಗಳ ಮೂಲಕವಾಗಿ ಬರುತ್ತದೆ.

ಅಂತರಂಗದ ಸ್ವರವು ನಾವು ಕೇಳಿಸಿಕೊಂಡ ಶಬ್ದಗಳ ಮೂಲಕ ಬರುತ್ತದೆ.
ದರ್ಶನಗಳು ನಾವು ನೋಡುವಂತ ದೃಶ್ಯಗಳ ಮೂಲಕ ಬರುತ್ತದೆ.
ದರ್ಶನಗಳ ಮೂಲಕ ದೇವರು ನಮಗೆ ಮಾತಾಡುವದಕ್ಕೆ ನಾವು ತೆರೆದವರಾಗಿರಬೇಕು, ಯಾಕೆಂದರೆ ನಾವು ಇದನ್ನು ಸತ್ಯವೇದದಲ್ಲಿ ನೋಡುತ್ತೇವೆ.

ಜನರು ದರ್ಶನಗಳನ್ನು ನೋಡಿದ ಅನೇಕ ಉದಾಹರಣೆಗಳನ್ನು ಸತ್ಯವೇದದಲ್ಲಿ ನಾವು ನೋಡುತ್ತೇವೆ. ಅಬ್ರಹಾಮ(ಆದಿ-15:1-5), ಯಾಕೋಬ(ಆದಿ-46:1-4),

ಬಿಳಾಮ(ಅರಣ್ಯ-24:2-9, 15-25), ಸಮುವೇಲ(1ಸಮು-3:15) ಮತ್ತು ಇತರ ಅನೇಕರು. ಸಾಂಕೇತಿಕವಾಗಿ ಹಳೆ ಒಡಂಬಡಿಕೆಯಲ್ಲಿ, ದರ್ಶನಗಳನ್ನು ಕಂಡಂತಹ ಪ್ರವಾದಿಗಳನ್ನು ದಿವ್ಯದರ್ಶಿಗಳು ಎಂದು ಕರೆಯಲಾಗುತ್ತಿತ್ತು (2ಪೂರ್ವ. ಕಾ.ವೃ.-9:29).

ಒಂದು ದರ್ಶನದಲ್ಲಿ ನೀವು ದೇವದೂತರುಗಳನ್ನು ನೋಡಬಹುದು (ದಾನಿ-9:21; ಲೂಕ-1:11-12; 24:23; ಅಪೊ.ಕೃತ್ಯ-10:3), ಆತ್ಮೀಕ ಕ್ಷೇತ್ರದೊಳಗೆ ನೋಡಿರುವದು (2ಅರಸು-2:12; 2ಅರಸು-6:17), ಸ್ವಾಭಾಕವಾದ ಕ್ಷೇತ್ರದಲ್ಲಿ ಇತರ ನೇಮಿತ ಸ್ಥಳಗಳಲ್ಲಿ ನೋಡಿರುವದು (2ರಸು-5:26), ಪರಲೋಕದೊಳಗೆ ನೋಡಿರುವದು (ಯೆಶಾಯ-6:1-4; ಅಪೊ.ಕೃತ್ಯ-7:55-56). ನೀವು ನೋಡಿರುವದನ್ನು ನಿಮ್ಮ ಸುತ್ತಲಿರುವವರು ನೋಡದಿರುವದು (ದಾನಿ-10:1,7).

ದೇವರು ನಮಗೆ ಮಾರ್ಗದರ್ಶನ ಮಾಡಿ ನಿರ್ದೇಶಿಸುವದಕ್ಕೆ ದರ್ಶನಗಳನ್ನು ಕೊಡುತ್ತಾನೆ. ಅಪೊ.ಕೃತ್ಯ ಪುಸ್ತಕದಲ್ಲಿ ನಾವು ಇದನ್ನು ನೋಡುತ್ತೇವೆ, ದೇವರು ತನ್ನ ಜನರಿಗೆ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಒದಗಿಸುವದಕ್ಕೆ ವಿವಿಧ ರೀತಿಯ ದರ್ಶನಗಳನ್ನು ಉಪಯೋಗಿಸಿದ್ದಾನೆ. ದೇವರು ಈಗಲೂ ತನ್ನ ಜನರಿಗೆ ದರ್ಶನಗಳ ಮೂಲಕ ಮಾತಾಡುವದಕ್ಕೆ ಶಕ್ತನಾಗಿದ್ದಾನೆ ಮತ್ತು ಮಾತಾಡುತ್ತಾನೆ.

ಈ ಕೆಳಗಿನವುಗಳಂತೆ ನಾವು ವಿಶಾಲವಾಗಿ ಭಾಗಿಸಬಹುದಾದಂತಹ ವಿವಿಧ ರೀತಿಯ ದರ್ಶನಗಳಿರುವದನ್ನು ವಾಕ್ಯದಲ್ಲಿ ನಾವು ನೋಡುತ್ತೇವೆ. ಇಲ್ಲಿ ಮತ್ತೆ ನಾವು ದೇವರನ್ನು ಒಂದು ಪೆಟ್ಟಿಗೆಯಲ್ಲಿ ಇಡುವದಕ್ಕೆ ಹುಡುಕುತ್ತಿಲ್ಲ ಅಥವಾ ಇವುಗಳಿಗೆ ಮಾತ್ರ ಆತನ ಕೆಲಸಗಳನ್ನು ಮಿತಿಗೊಳಿಸುತ್ತಿಲ್ಲ. ಕೆಳಗಿರುವವುಗಳು ನಮ್ಮ ಕಲಿಯುವಿಕೆಗೆ ಮಾತ್ರ, ಹಾಗಾಗಿ ನಾವು ದೇವರಿಂದ ಹೊಂದಿಕೊಳ್ಳಲು ಶಕ್ತರಾಗುತ್ತೇವೆ. ನಾವು ಯಾವಾಗಲೂ ಹೆಚ್ಚಿನದಕ್ಕೆ ತೆರೆದವರಾಗಿರಬೇಕು. ಯಾವುದೇ ಅಂಶದಲ್ಲಿ ಈ ಅನುಭವಗಳ ಒಂದು ಸಂಯೋಜನೆಯನ್ನು ನೀವು ಪಡೆದುಕೊಳ್ಳಬಹುದೆಂಬುದನ್ನು ಸಹ ನೀವು ಜ್ಞಾಪದಲ್ಲಿಟ್ಟುಕೊಂಡಿರಬೇಕು.

## 1) ಆತ್ಮೀಕ ದರ್ಶನ

ಇದು ಪ್ರತಿಯೊಬ್ಬ ವಿಶ್ವಾಸಿಗೂ ತುಂಬಾ ಸಾಮಾನ್ಯವಾದುದಾಗಿದೆ, ಇಲ್ಲಿ ದೇವರು

ನಮಗೆ ವಿಷಯಗಳನ್ನು ಪ್ರಕಟಪಡಿಸುತ್ತಾನೆ ಮತ್ತು ನಾವು ನಮ್ಮ ಆತ್ಮದ ಕಣ್ಣುಗಳಿಂದ ಇದನ್ನು ನೋಡುತ್ತೇವೆ. ಸಾಂಕೇತಿಕವಾದ ಅಥವಾ ವಾಸ್ತವವಾದ ದೃಶ್ಯಗಳನ್ನು ಅಥವಾ ಚಿತ್ರಗಳನ್ನು ನಾವು ನೋಡುತ್ತೇವೆ. ನಾವು ಏನು ಮಾಡಬೇಕೆಂದು ದೇವರು ಇಷ್ಟಪಡುತ್ತಾನೋ ಅದರ ಮೇಲಿನ ಮಾರ್ಗದರ್ಶನ ಮತ್ತು ನಿರ್ದೇಶನವು, ಚಿತ್ರದ ರೀತಿಯಲ್ಲಿ ದೇವರು ನಮಗೆ ಪ್ರಕಟಪಡಿಸುವದರಲ್ಲಿ ಒಳಗೊಂಡಿರುತ್ತದೆ.

ಅಪೊ.ಕೃತ್ಯ ಪುಸ್ತಕದಲ್ಲಿರುವ ಕೆಲವು ಉದಾಹರಣೆಗಳನ್ನು ಆಲೋಚಿಸೋಣ:

## ಅನನೀಯ ಮತ್ತು ಸೌಲ

ದೇವರು ದರ್ಶನದಲ್ಲಿ ಅನನೀಯನಿಗೆ ಸೌಲನ ಬಳಿಗೆ ಹೋಗುವದಕ್ಕೆ ನಿರ್ದೇಶಿಸಿದನು. ಅನನೀಯನು ಅವನ ಬಳಿಗೆ ಬರುತ್ತಿದ್ದನೆಂಬುದನ್ನು ಸೌಲನಿಗೂ ಸಹ ದೇವರು ದರ್ಶನದಲ್ಲಿ ಪ್ರಕಟಪಡಿಸಿದನು. ಇದು ಸಂಭವಿಸುತ್ತದೆ ಎಂದು ಅವರು ನೋಡಿದ ಹಾಗೆ ಇದು ಒಂದು ಚಲನ ಚಿತ್ರದ ಹಾಗೆ ಇತ್ತು.

ಅಪೊ.ಕೃತ್ಯ –9:10–12

**10–ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು; ಕರ್ತನು ದರ್ಶನದಲ್ಲಿ – ಅನನೀಯನೇ ಎಂದು ಅವನನ್ನು ಕರೆಯಲು ಅವನು– ಕರ್ತನೇ, ಇಗೋ, ಇದ್ದೇನೆ ಅಂದನು.**

**11–ಕರ್ತನು ಅವನಿಗೆ –ನೀನೆದ್ದು ನೆಟ್ಟನೆಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬವನನ್ನು ವಿಚಾರಿಸು; ಅವನು ಪ್ರಾರ್ಥನೆ ಮಾಡುತ್ತಾನೆ.**

**12–ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣು ಕಾಣುವಂತೆ ತನ್ನ ಮೇಲೆ ಕೈಯಿಡುವದನ್ನು ನೋಡಿದ್ದಾನೆ ಎಂದು ಹೇಳಿದನು.**

## ಮಕೆದೋನ್ಯದ ಒಬ್ಬ ಮನುಷ್ಯ

ಅಪೊ.ಕೃತ್ಯ –16:9–10

**9–ರಾತ್ರಿಕಾಲದಲ್ಲಿ ಪೌಲನಿಗೆ ಒಂದು ದರ್ಶನವಾಯಿತು, ಏನೆಂದರೆ – ಮಕೆದೋನ್ಯ ದೇಶದವನಾದ ಒಬ್ಬ ಮನುಷ್ಯನು ನಿಂತುಕೊಂಡು – ನೀನು ಸಮುದ್ರವನ್ನು ದಾಟಿ ಮಕೆದೋನ್ಯಕ್ಕೆ ಬಂದು ನಮಗೆ ನೆರವಾಗಬೇಕೆಂದು ಅವನನ್ನು ಬೇಡಿಕೊಳ್ಳುತ್ತಿದ್ದನು.**

**10–ಅವನಿಗೆ ಆ ದರ್ಶನವಾದ ಮೇಲೆ ಆ ಸೀಮೆಯವರಿಗೆ ಸುವಾರ್ತೆಯನ್ನು ಸಾರುವದಕ್ಕೆ ದೇವರು ನಮ್ಮನ್ನು ಕರೆದಿದ್ದಾನೆಂದು ನಾವು ನಿಶ್ಚಯಿಸಿಕೊಂಡು ಕೂಡಲೆ ಮಕೆದೋನ್ಯಕ್ಕೆ ಹೊರಟು ಹೋಗುವ ಪ್ರಯತ್ನ ಮಾಡಿದೆವು.**

ಪೌಲನು ರಾತ್ರಿಯಲ್ಲಿ ನೋಡಿದ ಇದು ರಾತ್ರಿಯ ಒಂದು ಕನಸು ಅಥವಾ ಒಂದು ದರ್ಶನದ ಹಾಗೆ ಇತ್ತು. ಪೌಲನು ಪರಿಭಾಷೆಗಳೊಳಗೆ ಹೋಗದೆ, ಮಕೆದೋನ್ಯದ

ಒಬ್ಬ ಮನುಷ್ಯನು, ನೀವು ಬಂದು ನಮಗೆ ನೆರವಾಗಬೇಕೆಂದು ತನ್ನನ್ನು ಕೇಳಿಕೊಳ್ಳುವ ಒಂದು ದೃಶ್ಯವನ್ನು ಪೌಲನು ನೋಡಿದನು. ಈ ದರ್ಶನದ ಮೂಲಕ ಪೌಲ ಮತ್ತು ಅವನ ತಂಡದವರು ಮಕೆದೋನ್ಯ ಮತ್ತು ಅದರ ಸುತ್ತಲಿರುವ ಪ್ರದೇಶಗಳಿಗೆ ಸುವಾರ್ತೆಯನ್ನು ಸಾರುವದಕ್ಕೆ ಹೊರಟರು.

## ಏಪ್ರಿಲ್ 2014 : ಎರಡು ಕುದುರೆಗಳ ಸವಾರಿ ಮಾಡಿದ್ದು

ದೇವರು ಆಗಾಗ್ಗೆ ಆತ್ಮೀಕ ದರ್ಶನಗಳಲ್ಲಿ ಮಾತಾಡಿರುವ ವೇಳೆಯಲ್ಲಿ, ಈ ಒಂದು ಪ್ರತ್ಯೇಕವಾದ ಘಟನೆಯನ್ನು ಹಂಚಿಕೊಳ್ಳುವದಕ್ಕೆ ನಾನು ಇಷ್ಟಪಡುತ್ತೇನೆ ಯಾಕೆಂದರೆ ಇದರ ಪರಿಣಾಮ ಹಾಗಿದೆ. 2001ರ ಜನವರಿಯಿಂದ ನಾನು ತಂತ್ರಜ್ಞಾನದ ವ್ಯವಹಾರವನ್ನು ನಡೆಸುವದರೊಂದಿಗೆ ಬೆಂಗಳೂರಿನಲ್ಲಿ ಆಲ್ ಪೀಪಲ್ಸ್ ಚರ್ಚ್ ಸಹ ನಡೆಸುತ್ತಾ ಎರಡೂ ಜವಾಬ್ದಾರಿಗಳನ್ನು ಹೊತ್ತುಕೊಂಡಿದ್ದೆ. ಇದು ಒಂದು ಪ್ರತಿಫಲ ಕೊಡುವ ಅನುಭವವಾಗಿದ್ದಾಗ್ಯೂ, ನಿಜವಾಗಿಯೂ ಇದು ಸವಾಲಿನದಾಗಿತ್ತು, ಮತ್ತು ನಾನು ತಂತ್ರಜ್ಞಾನದ ದ್ರಾವಕಗಳನ್ನು ಅಭಿವೃದ್ಧಿಗೊಳಿಸಿ ನಮ್ಮ ಗ್ರಾಹಕರುಗಳಿಗೆ ಒದಗಿಸುವದರಲ್ಲಿ ಸಂತೋಷಪಟ್ಟೆ. ಹೇಗಿದ್ದರೂ, ಸೇವೆಯಲ್ಲಿ ಹೆಚ್ಚಾದ ಜವಾಬ್ದಾರಿಗಳು ಕೊಡಲ್ಪಟ್ಟಾಗ, ಕೆಲವು ಅಂಶದಲ್ಲಿ ನಾನು ಬಹಿರಂಗವಾಗಿ ಬದಲಾಗಬೇಕೆಂಬುದನ್ನು ತಿಳಿದುಕೊಂಡೆ. 2010ರ ಡಿಸೆಂಬರ್ ತಿಂಗಳಿನಲ್ಲಿ ನಾನು ನನ್ನ ಜೀವನದ ಯೋಜನೆಯನ್ನು ಆಧುನೀಕರಣಗೊಳಿಸಿದಂತೆ, 2015ರಲ್ಲಿ ಈ ಬದಲಾವಣೆಯು ಸಂಭವಿಸಬಹುದು ಎಂದು ನಾನು ಬರೆದಿಟ್ಟೆ. ಹಾಗಾಗಿ ನಾವು ಇದಕ್ಕಾಗಿ ಕ್ರಮೇಣವಾಗಿ ಸಿದ್ಧರಾಗುತ್ತಾ ಬಂದೆವು. 2014 ಮಾರ್ಚ್ 31 ರಂದು ನನಗೆ ಹೃದಯಾಘಾತವಾಯಿತು, ಆದರೆ ದೇವರು ಕೃಪೆಯಿಂದ ನನ್ನ ಜೀವವನ್ನು ರಕ್ಷಿಸಿದ. ಒಂದು ವೇಳೆ ದೇವರ ಕೃಪೆ ಮತ್ತು ಸಮಯಾನುಸಾರ ವೈದ್ಯಕೀಯ ಮಧ್ಯಸ್ಥಿಕೆಯಿಲ್ಲದಿರುತ್ತಿದ್ದರೆ ನಾನು ಸತ್ತು ಹೋಗಬೇಕಾಗುತ್ತಿತ್ತು. ಈ ರೀತಿಯಾಗಿ ಏನಾದರೂ ಸಂಭವಿಸುವದಕ್ಕೆ ಎಲ್ಲಾ ಸಾಧ್ಯವಾದ ಕಾರಣಗಳನ್ನು ನಾವು ಪರೀಕ್ಷಿಸಿದಾಗ, ಖಂಡಿತವಾಗಿಯೂ ಬಹಳಷ್ಟು ಕಾರಣಗಳು ಸಂಬಂಧಿಸಿದ್ದವು. ಇದರಲ್ಲಿನ ದೊಡ್ಡ ಭಾಗವೆಂದರೆ ಅದು ನಾನು ಹೊತ್ತುಕೊಂಡಿದ್ದ ಎರಡೆರಡು ಜವಾಬ್ದಾರಿಗಳ ಒತ್ತಡವಾಗಿತ್ತು. ನನಗೆ ನೆನಪಿದೆ, ಆಸ್ಪತ್ರೆಯಲ್ಲಿ ನಾನು ಗುಣಮುಖನಾಗುತ್ತಿರುವ ಸಮಯದಲ್ಲಿ ನಾನು ಹಾಸಿಗೆಯ ಮೇಲೆ ಮಲಗಿಕೊಂಡು ಈಗ ನಾನು ಏನು ಮಾಡಬೇಕೆಂದು ದೇವರನ್ನು ಕೇಳಿದೆ. ಆ ಕ್ಷಣದಲ್ಲಿ, ನನಗೆ ಒಂದು ದರ್ಶನವಾಯಿತು,

ಅದು ಒಬ್ಬ ಮನುಷ್ಯನು ಒಂದೇ ಸಮಯದಲ್ಲಿ ಎರಡು ಕುದುರೆಗಳ ಮೇಲೆ ಕಾಲನ್ನು ಅಗಲ ಮಾಡಿ ಕೂತುಕೊಂಡು ಸವಾರಿ ಮಾಡುವದಕ್ಕೆ ಪ್ರಯತ್ನಿಸುತ್ತಿದ್ದ ಚಿತ್ರಣವಾಗಿತ್ತು. ನನಗೆ ಸಂದೇಶ ಸಿಕ್ಕಿತು. ಅದು ನನಗೆ ಒಂದರಿಂದ ದೂರವಾಗಿ ಕೇವಲ ಒಂದು ಕುದುರೆಯ ಮೇಲೆ ಸವಾರಿ ಮಾಡಬೇಕಾದ ಸಮಯವಾಗಿತ್ತು. ಉದ್ರೇಕಿತರಾಗಿರುವ ವೇಳೆಯಲ್ಲಿ, ಇದು ಸುಲಭವಾದುದಲ್ಲ, ನಾನು ಒಪ್ಪಿಕೊಂಡು ಬದಲಾವಣೆಯನ್ನು ಮಾಡಿಕೊಂಡು ದೇವರ ಮೂಲ ಹಂಚಿಕೆಯನ್ನು ಕೇಂದ್ರೀಕರಿಸಬೇಕಾಯಿತು.

## 2) ಪರವಶತೆ

ಪರವಶತೆಯಲ್ಲಿ ವ್ಯಕ್ತಿಯು ಒಂದು ಆತ್ಮೀಕ ದರ್ಶನವನ್ನು ಅಥವಾ ಆತ್ಮೀಕ ಕ್ಷೇತ್ರದಲ್ಲಿ ಏನಾದರೊಂದನ್ನು ನೋಡುವ ವೇಳೆಯಲ್ಲಿ ತಾತ್ಕಾಲಿಕವಾಗಿ ಸ್ವಾಭಾವಿಕ ಪ್ರಪಂಚದ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಾನೆ.

ಪರವಶತೆಯ ಮೂಲಕ ಕೊರ್ನೇಲ್ಯನ ಮನೆಗೆ ಮೊದಲ ಬಾರಿಗೆ ಅನ್ಯರಿಗೆ ಸುವಾರ್ತೆಯನ್ನು ತೆಗೆದುಕೊಂಡು ಹೋಗುವದಕ್ಕೆ ಕರ್ತನು ಪೇತ್ರನಿಗೆ ಅಪ್ಪಣೆ ಕೊಡುತ್ತಾನೆ.

ಅಪೊ.ಕೃತ್ಯ–10:9–16

**9–ಮರುದಿನ ಅವರು ಪ್ರಯಾಣ ಮಾಡಿ ಆ ಊರಿನ ಹತ್ತಿರಕ್ಕೆ ಬರುತ್ತಿರುವಾಗ ಪೇತ್ರನು ಸುಮಾರು ಮಧ್ಯಾಹ್ನದಲ್ಲಿ ಪ್ರಾರ್ಥನೆ ಮಾಡುವದಕ್ಕಾಗಿ ಮಾಳಿಗೆಯನ್ನು ಹತ್ತಿದನು.**

**10–ಅವನು ಬಹಳ ಹಸಿದು ಊಟ ಮಾಡಬೇಕೆಂದಿದ್ದನು. ಊಟಕ್ಕೆ ಸಿದ್ಧವಾಗುತ್ತಿರುವಷ್ಟರಲ್ಲಿ ಅವನು ಧ್ಯಾನ ಪರವಶನಾಗಿ**

**11–ಆಕಾಶವು ತೆರೆದಿರುವದನ್ನೂ ನಾಲ್ಕು ಮೂಲೆಗಳನ್ನು ಹಿಡಿದಿದ್ದ ದೊಡ್ಡ ಜೋಳಿಗೆಯಂತಿರುವ ಏನೋ ಒಂದು ವಸ್ತುವು ಭೂಮಿಯ ಮೇಲೆ ಇಳಿಯುವದನ್ನು ಕಂಡನು.**

**12–ಅದರೊಳಗೆ ಸಕಲ ವಿವಿಧವಾದ ಪಶುಗಳೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೂ ಅಂತರಿಕ್ಷದಲ್ಲಿ ಹಾರಾಡುವ ಹಕ್ಕಿಗಳೂ ಇದ್ದವು.**

**13–ಆಗ – ಪೇತ್ರನೇ, ಎದ್ದು ಕೊಯ್ದು ತಿನ್ನು ಎಂದು ಅವನಿಗೆ ಒಂದು ವಾಣಿ ಕೇಳಿಸಿತು.**

**14–ಅದಕ್ಕೆ ಪೇತ್ರನು – ಬೇಡವೇ ಬೇಡ ಸ್ವಾಮಿ, ನಾನು ಎಂದೂ ಹೊಲೆ ಪದಾರ್ಥವನಾಗಲೀ ಅಶುದ್ಧ ಪದಾರ್ಥವನ್ನಾಗಲಿ ತಿಂದವನಲ್ಲ ಅಂದನು.**

**15–ದೇವರು ಶುದ್ಧ ಮಾಡಿದ್ದನ್ನು ನೀನು ಹೊಲೆ ಎನ್ನಬೇಡವೆಂದು ತಿರಿಗಿ ಎರಡನೆಯ ಸಾರಿ ಅವನಿಗೆ ವಾಣಿ ಕೇಳಿಸಿತು.**

**16–ಹೀಗೆ ಮೂರು ಸಾರಿ ಆಯಿತು. ಆದ ಕೂಡಲೆ ಆ ವಸ್ತುವು ಆಕಾಶದೊಳಗೆ ಸೇರಿಕೊಂಡಿತು.**

## 3) ತೆರೆದ ದರ್ಶನ

ಇದರಲ್ಲಿ ನೀವು ಚಿತ್ರಗಳನ್ನಾಗಲೀ ಅಥವಾ ದೃಶ್ಯಗಳನ್ನಾಗಲೀ ನೋಡುವದಿಲ್ಲ ಆದರೆ ಸ್ಪಷ್ಟವಾಗಿ ಆತ್ಮೀಕ ಕ್ಷೇತ್ರದಲ್ಲಿ ನೋಡುತ್ತೀರಿ. ಆತ್ಮೀಕ ಕ್ಷೇತ್ರದಲ್ಲಿ ಪ್ರಸ್ತುತ ಏನು ನಡೆಯುತ್ತಿದೆ ಎಂಬುದನ್ನು ನೀವು ನೋಡುತ್ತೀರಿ. ಅದೇ ಸಮಯದಲ್ಲಿ ನಿಮ್ಮ ಸುತ್ತಲಿರುವ ಸ್ವಾಭಾವಿಕ ಪ್ರಪಂಚದ ವಾಸ್ತಕ ಅರಿವುಳ್ಳವರಾಗಿರುತ್ತೀರಿ.

### ರೂಪಾಂತರ

ರೂಪಾಂತರ ಬೆಟ್ಟದ ಮೇಲೆ ಮೋಶೆ ಮತ್ತು ಎಲೀಯರ ಜೊತೆಯಲ್ಲಿ ಯೇಸು ರೂಪಾಂತರಗೊಂಡ ಒಂದು ತೆರೆದ ದರ್ಶನವನ್ನು ಪೇತ್ರ, ಯಾಕೋಬ ಮತ್ತು ಯೋಹಾನ ನೋಡುತ್ತಾರೆ. ಆ ಸಮಯದಲ್ಲಿ ಆತ್ಮೀಕ ಕ್ಷೇತ್ರದಲ್ಲಿ ನಿಜವಾಗಿಯೂ ಏನು ಸಂಭವಿಸುತ್ತಿದೆ ಎಂಬುದನ್ನು ಅವರು ನೋಡುತ್ತಾರೆ.

ಮತ್ತಾಯ-17:1-6

**1-ಆರು ದಿವಸಗಳಾದ ಮೇಲೆ ಯೇಸು ಪೇತ್ರನನ್ನೂ ಯಾಕೋಬನನ್ನೂ ಮತ್ತು ಇವನ ತಮ್ಮನಾದ ಯೋಹಾನನನ್ನೂ ಮಾತ್ರ ಮುಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು.**

**2-ಅಲ್ಲಿ ಅವರ ಕಣ್ಣ ಮುಂದೆ ಆತನ ರೂಪ ಬೇರೆಯಾಯಿತು. ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು.**

**3-ಇದಲ್ಲದೆ ಮೋಶೆಯೂ ಎಲೀಯನೂ ಆತನ ಸಂಗಡ ಮಾತಾಡುತ್ತಾ ಅವರಿಗೆ ಕಾಣಿಸಿಕೊಂಡರು.**

**4-ಆತ ಪೇತ್ರನು ಯೇಸುಗೆ - ಸ್ವಾಮಿ, ನಾವು ಇಲ್ಲೇ ಇರುವದು ಒಳ್ಳೇದು. ಅಪ್ಪಣೆಯಾದರೆ ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು; ನಿನಗೊಂದು, ಮೋಶೆಗೊಂದು ಎಲೀಯನಿಗೊಂದು ಎಂದು ಹೇಳಿದನು.**

**5-ಹೀಗೆ ಮಾತಾಡುತ್ತಿರುವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು. ಇದಲ್ಲದೆ ಆ ಮೋಡದೊಳಗಿಂದ - ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು.**

**6-ಶಿಷ್ಯರು ಇದನ್ನು ಕೇಳಿ ಬಹಳವಾಗಿ ಹೆದರಿ ಬೋರಲಬಿದ್ದರು.**

### ಕೊರ್ನೇಲ್ಯನು

**ಅಪೊ.ಕೃತ್ಯ-10:1-6**

**1-ಕೈಸರ್ಯೆಯದಲ್ಲಿ ಇತಾಲ್ಯದ ಪಟಾಲಮೆನಿಸಿಕೊಳ್ಳುವ ಒಂದು ಪಟಾಲಮಿನ ಶತಾಧಿಪತಿಯಾದ ಕೊರ್ನೇಲ್ಯನೆಂಬ ಒಬ್ಬ ಮನುಷ್ಯನಿದ್ದನು.**

**2–ಅವನು ಭಕ್ತನೂ ತನ್ನ ಮನೆಯವರೆಲ್ಲರ ಸಹಿತವಾಗಿ ದೇವರಿಗೆ ಭಯಪಡುವವನೂ ಆಗಿದ್ದು ಜನರಿಗೆ ಬಹಳವಾಗಿ ದಾನಧರ್ಮ ಮಾಡುತ್ತಾ ದೇವರಿಗೆ ನಿತ್ಯವೂ ಪ್ರಾರ್ಥನೆ ಮಾಡುತ್ತಾ ಇದ್ದನು.**

**3–ಮಧ್ಯಾಹ್ನದ ಮೇಲೆ ಸುಮಾರು ಮೂರು ಗಂಟೆಗೆ ಅವನಿಗೆ ಒಂದು ದರ್ಶನ ಉಂಟಾಗಿ ಒಬ್ಬ ದೇವದೂತನು ತನ್ನ ಬಳಿಗೆ ಬಂದು – ಕೊರ್ನೇಲ್ಯನೇ ಎಂದು ಕರೆಯುವದನ್ನು ಅವನು ಪ್ರತ್ಯಕ್ಷವಾಗಿ ಕಂಡನು.**

**4–ಅವನು ಆ ದೂತನನ್ನು ದೃಷ್ಟಿಸಿನೋಡಿ ಭಯಹಿಡಿದವನಾಗಿ – ಏನು ಸ್ವಾಮಿ ಎಂದು ಕೇಳಲು ದೂತನು ಅವನಿಗೆ – ನಿನ್ನ ಪ್ರಾರ್ಥನೆಗಳೂ ನಿನ್ನ ದಾನಧರ್ಮಗಳೂ ದೇವರ ಮುಂದೆ ಜ್ಞಾಪಕಾರ್ಥವಾಗಿ ಏರಿ ಬಂದವು.**

**5–ಈಗ ನೀನು ಯೊಪ್ಪಕ್ಕೆ ಜನರನ್ನು ಕಳುಸಿ ಪೇತ್ರನೆನಿಸಿಕೊಳ್ಳುವ ಸೀಮೋನನನ್ನು ಕರೆಯಿಸಬೇಕು.**

**6–ಅವನು ಚರ್ಮಕಾರನಾದ ಸೀಮೋನನ ಬಳಿಯಲ್ಲಿ ಇಳುಕೊಂಡಿದ್ದಾನೆ; ಈ ಸೀಮೋನನ ಮನೆಯು ಸಮುದ್ರದ ಬಳಿಯಲ್ಲಿ ಅದೆ ಎಂದು ಹೇಳಿದನು.**

ಒಂದು ತೆರೆದ ದರ್ಶನದಲ್ಲಿ ದೇವರ ಒಬ್ಬ ದೂತನು ಬಂದು ತನ್ನೊಂದಿಗೆ ಮಾತಾಡಿ ತಾನು ಏನು ಮಾಡಬೇಕೆಂಬುದರ ಮೇಲೆ ಅವನಿಗೆ ಆದೇಶಗಳನ್ನು ಕೊಡುವದನ್ನು ಕೊರ್ನೇಲ್ಯನು ನೋಡಿದ್ದನು.

## 4) ದರ್ಶನಗಳಲ್ಲಿ ಪ್ರಯಾಣಿಸುವದು

ಇದರಲ್ಲಿ ನೀವು ದರ್ಶನಗಳಲ್ಲಿ ಆತ್ಮೀಕ ಪ್ರಪಂಚ ಅಥವಾ ಸ್ವಾಭಾವಿಕ ಪ್ರಪಂಚದಲ್ಲಿ ಸ್ಥಳಗಳಿಗೆ ಪ್ರಯಾಣದಲ್ಲಿ ಹೋಗುತ್ತೇವೆ. ಒಂದು ಸ್ಥಳದಲ್ಲಿ ನಿಮ್ಮ ಆತ್ಮ, ಪ್ರಾಣ ಮತ್ತು ಶರೀರಗಳಿರುತ್ತವೆ, ಆದರೆ ನೀವು ಒಂದು ದರ್ಶನದಲ್ಲಿ ಭೌಗೋಳಿಕವಾಗಿ 'ಪ್ರಯಾಣಿಸುತ್ತೀರಿ' ಅದೇ ರೀತಿಯಾಗಿ ಹಿಂದಿನ ಕಾಲಕ್ಕೆ ಅಥವಾ ಭವಿಷ್ಯದ ಸ್ಥಿತಿಗೆ ಹೋಗುತ್ತೀರಿ.

ಇವುಗಳಲ್ಲಿ ಅನೇಕವಾದವುಗಳು ಪ್ರವಾದಿಯಾದ ಯೆಹೆಜ್ಕೇಲನ ಅನುಭವಗಳ ರೀತಿಯಲ್ಲಿವೆ (ಯೆಹೆ–8:3, 11:24, 40:2, 43:3)

ದಾನಿಯೇಲನು ಸಹ ಒಂದು ದರ್ಶನದಲ್ಲಿ ಸಾಗಿಸಲ್ಪಟ್ಟನು ಮತ್ತು ಮುಂದೆ ಏನು ಸಂಭವಿಸುತ್ತದೆ ಎನ್ನುವದನ್ನು ನೋಡಿದನು (ದಾನಿ–8).

## 5) ಆತ್ಮದಲ್ಲಿ ಸಾಗಿಸಲ್ಪಡುವದು

ಇದರಲ್ಲಿ ನಿಮ್ಮ ಆತ್ಮವು ಶರೀರವನ್ನು ಬಿಟ್ಟು ಪ್ರಯಾಣಿಸಿ ಆತ್ಮೀಕ ಪ್ರಪಂಚ ಮತ್ತು ಸ್ವಾಭಾವಿಕ ಪ್ರಪಂಚದಲ್ಲಿರುವ ಸಂಗತಿಗಳನ್ನು ಗಮನಿಸುತ್ತದೆ.

ಪೌಲನು ಮೂರನೆಯ ಆಕಾಶದ ಪರ್ಯಂತರಕ್ಕೂ ಒಯ್ಯಲ್ಪಟ್ಟನು (2ಕೊರಿಂಥ-12:1-3)

ಯೋಹಾನನು ಪರಲೋಕಕ್ಕೆ ಒಯ್ಯಲ್ಪಟ್ಟನು (ಪ್ರಕ-4:1-2).

## ಕನಸುಗಳನ್ನು ಮತ್ತು ದರ್ಶನಗಳನ್ನು ಹೊಂದಿಕೊಳ್ಳುವದಕ್ಕೆ ತೆರೆದವರಾಗಿರಿ

ನಾವು ವಾಕ್ಯದಲ್ಲಿ ನೋಡಿದ ಹಾಗೆ, ದೇವರು ನಮಗೆ ಮಾತಾಡಿ ಆದೇಶಿಸುವದಕ್ಕೆ ಆಗಾಗ್ಗೆ ಉಪಯೋಗಿಸಿದ ರೀತಿಗಳಲ್ಲಿ ಕನಸುಗಳು ಮತ್ತು ದರ್ಶನಗಳು ಒಂದು ರೀತಿಯಾಗಿವೆ. ಈ ರೀತಿಯಲ್ಲಿ ದೇವರು ನಮಗೆ ಮಾತಾಡುವದಕ್ಕೆ ನಾವು ತೆರೆದವರೂ ಮತ್ತು ತೀವ್ರ ಗ್ರಹಣ ಶಕ್ತಿಯುಳ್ಳವರೂ ಆಗಿರಬೇಕು. ಆತ್ಮೀಕ ದರ್ಶನವು ತುಂಬಾ ಸಾಮಾನ್ಯವಾದುದು ಮತ್ತು ವಿಶ್ವಾಸಿಗಳ ಹಾಗೆ ನಾವೆಲ್ಲರೂ ಆಗಾಗ್ಗೆ ಅನುಭವಪಡುವಂತಾದ್ದು ಆಗಿದೆ. ದರ್ಶನಗಳ ಮೂಲಕವಾಗಿ ಪವಿತ್ರಾತ್ಮನು ನಮಗೆ ಸಂಪರ್ಕಿಸುವಾಗ ನಾವು ಇವುಗಳಿಗೆ ಗಮನಕೊಡುವವರಾಗಿರಬೇಕು.

## ಪರ್ಯಾಲೋಚನೆ

1) ದೇವರು ಮಾತಾಡಿದ್ದಾನೆ ಎಂದು ನೀವು ತಿಳಿದಿರುವ ಒಂದು ಕನಸನ್ನು ನೆನಪು ಮಾಡಿಕೊಳ್ಳಿರಿ. ಇದು ದೇವರಿಂದ ಬಂದ ಒಂದು ಕನಸು ಎಂದು ನೀವು ಹೇಗೆ ಗುರುತಿಸಿದಿರಿ? ಆ ಕನಸಿನಿಂದ ನೀವು ಏನು ಮಾಡುತ್ತೀರಿ? ಇದು ಯಾವುದಾದರೂ ರೀತಿಯಲ್ಲಿ ನಿಮಗೆ ಸಹಾಯವಾಯಿತೋ?

2) ನಾವು ಆತ್ಮೀಕ ದರ್ಶನ ಎಂದು ಕರೆಯುವಂತದ್ದರ ಅನುಭವವನ್ನು ನೀವು ಪಡೆದಿದ್ದೀರೋ? ಇದು ದೇವರಿಂದ ಬಂದದ್ದೆಂದು ನೀವು ಹೇಗೆ ತಿಳಿದಿದ್ದೀರಿ? ನೀವು ತೀರ್ಮಾನ ತೆಗೆದುಕೊಳ್ಳುವದರಲ್ಲಿ ಇದು ಹೇಗೆ ಸಹಾಯಕವಾಗಿದೆ?

# 8

# ಪ್ರವಾದನೆಗಳು

ಪ್ರವಾದನೆಯು ಪವಿತ್ರಾತ್ಮನಿಂದ ಪ್ರೇರೇಪಿಸಲ್ಪಟ್ಟು ದೇವರಿಂದ ಬಂದ ಒಂದು ಸಂದೇಶವನ್ನು ಮಾತಾಡುವಂತದ್ದಾಗಿದೆ. ಸತ್ಯವೇದದಲ್ಲಿ, ಹಳೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲಿಯೂ ಪ್ರವಾದನೆಯ ಸೇವೆಯು ಹೇಳಲ್ಪಟ್ಟಿರುವದನ್ನು ನಾವು ನೋಡುತ್ತೇವೆ.

ಹೊಸ ಒಡಂಬಡಿಕೆಯಲ್ಲಿನ ಪ್ರವಾದನೆಯು ಎಲ್ಲಾ ವಿಶ್ವಾಸಿಗಳಿಗಾಗಿ ದೊರಕಿರುವ ಆತ್ಮದ ವರಗಳಲ್ಲಿ ಒಂದಾಗಿದೆ. ಪ್ರವಾದನೆಯ ವರವು ಜನರಿಗೆ ಭಕ್ತಿವೃದ್ಧಿಯನ್ನೂ ಪ್ರೋತ್ಸಾಹವನ್ನೂ ಮತ್ತು ಸಂತೈಸುಕೆಯನ್ನೂ ಉಂಟುಮಾಡುತ್ತದೆ (1ಕೊರಿಂಥ-14:3). ಕ್ರಿಸ್ತನ ಸಭೆಯಲ್ಲಿ ಪ್ರವಾದಿಗಳೆಂದು ಕರೆಯಲ್ಪಡುವವರು ಕೆಲವರಿದ್ದರು (ಎಫೆಸ-4:11).

1ಕೊರಿಂಥ-14:3
**ಪ್ರವಾದಿಸುವವನಾದರೋ ಮನುಷ್ಯರ ಸಂಗಡ ಮಾತಾಡುವವನಾಗಿ ಅವರಿಗೆ ಭಕ್ತಿವೃದ್ಧಿಯನ್ನೂ ಪ್ರೋತ್ಸಾಹವನ್ನೂ ಸಂತೈಸುವಿಕೆಯನ್ನೂ ಉಂಟುಮಾಡುತ್ತಾನೆ.**

ವಿಶ್ವಾಸಿಗಳಾಗಿದ್ದು, ನಾವು ಪ್ರವಾದನೆಗಳನ್ನು ಕಡೆಗಣಿಸಬಾರದು. ಆದಾಗ್ಯೂ, ನಾವು ಎಲ್ಲಾ ಪ್ರವಾದನೆಗಳನ್ನೂ ಪರೀಕ್ಷಿಸಬೇಕು; ಯಾವುದು ಪವಿತ್ರಾತ್ಮನದಲ್ಲವೋ ಮತ್ತು ಉತ್ತಮವೂ ಮತ್ತು ನಿರಾಕರಿಸಲ್ಪಡುವದು (ಪಕ್ಕಕ್ಕೆ ಬಿಟ್ಟುಬಿಡುವದು) ಯಾವುದು ಎನ್ನುವದರ ಮೇಲೆ ನಾವು ಕಾಯಬೇಕು.

1ಥೆಸ-5:20-21
**20-ಪ್ರವಾದನೆಗಳನ್ನು ಹೀನೈಸಬೇಡಿರಿ;**

**21-ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ.**

ಪ್ರೇರಣೆಯ ಮೂಲವನ್ನು ಪರೀಕ್ಷಿಸಿರಿ. ವ್ಯಕ್ತಿಯು ನಿಜವಾಗಿಯೂ ದೇವರಿಂದ ಬಂದ ಮಾತುಗಳನ್ನು ಮಾತಾಡುತ್ತಿದ್ದಾನೋ ಅಥವಾ ತನ್ನ ಸ್ವಂತ ಆಲೋಚನೆಗಳನ್ನು ಇಲ್ಲವೆ

ದುರಾತ್ಮನ ಮೂಲದಿಂದ ಬಂದಿರುವದನ್ನು ಮಾತಾಡುತ್ತಿದ್ದಾನೊ? ಎನ್ನುವದನ್ನು ಪರೀಕ್ಷಿಸಿರಿ.

ಪ್ರವಾದನೆಯಲ್ಲಿ ಕೊಡಲ್ಪಟ್ಟ ಸಂದೇಶದ ನ್ಯಾಯಸಮ್ಮತವನ್ನು ಪರೀಕ್ಷಿಸಿರಿ. ಸಂದೇಶವು ಬರೆಯಲ್ಪಟ್ಟಿರುವ ವಾಕ್ಯದೊಂದಿಗೆ ಹೊಂದಿಕೆಯಲ್ಲಿದೆಯೋ? ಸಂದೇಶವು ಯೇಸು ಕ್ರಿಸ್ತನನ್ನು ಘನಪಡಿಸುತ್ತದೋ? ಪ್ರವಾದನೆಗೆ ಪವಿತ್ರಾತ್ಮನು ನನ್ನ ಆತ್ಮದಲ್ಲಿ ಸಾಕ್ಷಿಯಾಗಿದ್ದಾನೋ? ಇತರ ರೀತಿಗಳ ಮೂಲಕ ದೇವರು ನನಗೆ ಏನು ಮಾತಾಡಿದ್ದಾನೋ ಅದಕ್ಕೆ ಈ ಪ್ರವಾದನೆಯು ಸಮರೇಖೆಗೊಳಿಸಲ್ಪಟ್ಟಿದೆಯೋ?

ಪ್ರವಾದನೆಯ ಸಮಯವನ್ನು ಅರ್ಥಮಾಡಿಕೊಳ್ಳಿರಿ. ಒಂದು ನಿಜವಾದ ಪ್ರವಾದನೆಯ ಮಾತು ಅದರ ಸರಿಯಾದ ಸಮಯದಲ್ಲಿ ಕೆಲಸ ಮಾಡುತ್ತದೆ. ಪ್ರವಾದನೆಯ ನಿರ್ವಹಣೆಗಾಗಿ ಸಮಯವನ್ನು ಅರ್ಥಮಾಡಿಕೊಳ್ಳುವಂತಾದ್ದು ಪ್ರವಾದನೆಯನ್ನು ಅದರ ಹಾಗೆ ಅರ್ಥಮಾಡಿಕೊಳ್ಳುವದು ಸಮಾನವಾದ ಪ್ರಾಮುಖ್ಯವಾದುದಾಗಿದೆ.

ದೇವರು ತನ್ನ ಮಾರ್ಗದರ್ಶನವನ್ನು ನಮಗೆ ತರುವದಕ್ಕೆ ಪ್ರವಾದನೆಯನ್ನು ಉಪಯೋಗಿಸುವಂತ ಅನೇಕ ರೀತಿಗಳಿವೆ.

## ಪ್ರವಾದನಾತ್ಮಕ ದೃಢೀಕರಿಸುವಿಕೆ

ದೇವರು ನಮಗೆ ಏನು ಮಾತಾಡುತ್ತಾನೋ ಅದನ್ನು ದೃಢೀಕರಿಸುವದಕ್ಕೆ ಪ್ರವಾದನೆಯನ್ನು ಉಪಯೋಗಿಸುತ್ತಾನೆ. ಇದು ಅನೇಕ ಸಂದರ್ಭಗಳಲ್ಲಿ ಸಂಭವಿಸುವದನ್ನು ನಾವು ನೋಡುತ್ತೇವೆ. ಯಾರಾದರೂಬ್ಬರು ಒಂದು ವಿಷಯದ ಕುರಿತು ಪ್ರಾರ್ಥಿಸುತ್ತಾರೆ ಅಥವಾ ಒಂದು ನಿಶ್ಚಿತವಾದ ತೀರ್ಮಾನವನ್ನು ತೆಗೆದುಕೊಳ್ಳುವದಕ್ಕೆ ಸಿದ್ಧರಾಗುತ್ತಿರುತ್ತಾರೆ ಇಲ್ಲವೇ ತಮ್ಮ ಜೀವಿತಗಳಲ್ಲಿ ಒಂದು ನಿಶ್ಚಿತ ವಾದ ಅವಧಿಗೆ ಇಳಿದು ಹೋಗುತ್ತಾರೆ. ಒಬ್ಬರು, ಈ ಸಂಗತಿಗಳ ಕಲ್ಪನೆಯಿಲ್ಲದೆ, ಪ್ರವಾದನೆಯ ಒಂದು ಮಾತನ್ನು ತರುತ್ತಾರೆ, ತಮ್ಮ ಜೀವಿತಗಳ ಆ ಭಾಗದ ಕುರಿತು ನೇರವಾಗಿ ಮಾತಾಡುತ್ತಾರೆ, ಹೀಗೆ ಅವರು ಮುಂದುವರಿಯುವಂತದ್ದರಲ್ಲಿ ಆದೇಶವನ್ನು ದೃಢಪಡಿಸಿಕೊಳ್ಳುತ್ತಾರೆ.

## ಪ್ರವಾದನಾತ್ಮಕ ನಿರ್ದೇಶನ

ದೇವರು ನಮಗೆ ಏನು ಮಾಡಬೇಕೆಂದು ಬಯಸುತ್ತಾನೋ ಅದನ್ನು ನಮಗೆ ತೋರಿಸುವದಕ್ಕೆ ಪ್ರವಾದನೆಯನ್ನು ಉಪಯೋಗಿಸುತ್ತಾನೆ. ಒಂದು

ನಿರ್ದಿಷ್ಟವಾದ ಸಂಗತಿಗಳಿಗೆ ಉಪದೇಶಿಸುವದಕ್ಕೆ ಅಥವಾ ಒಂದು ನಿರ್ಧಿಷ್ಟವಾದ ಸ್ಥಳಗಳಿಗೆ ಹೋಗುವದಕ್ಕೆ ಮತ್ತು ಚಟುವಟಿಕೆಯ ಒಂದು ನಿರ್ಧಿಷ್ಟ ರೀತಿಯಲ್ಲಿ ತೊಡಗಿಕೊಳ್ಳುವದಕ್ಕೆ ಪ್ರವಾದನೆಯು ಬರಬಹುದು.

## ಪ್ರವಾದನಾತ್ಮಕ ಪ್ರಕಟನೆ

ದೇವರು ತಮ್ಮೊಳಗೆ ಇಟ್ಟಿರುವಂತಹ ಸಾಮರ್ಥ್ಯವನ್ನು ಅನೇಕ ಸಲ ಜನರು ತಿಳಿದಿರುವದಿಲ್ಲ. ದೇವರ ಕರೆಯ ಕುರಿತಾದ ಅಥವಾ ಅವರ ಜೀವಿತಗಳಿಗಾಗಿ ಭವಿಷ್ಯದ ದೇವರ ಯೋಜನೆಗಳ ಅರಿವು ಸಹ ಅವರಿಗಿರುವದಿಲ್ಲ. ಅವರಲ್ಲಿರುವ ಗುರುತಿಸದೆ ಬಿಡಲ್ಪಟ್ಟಿರುವದನ್ನು ಪ್ರವಾದನೆಗಳ ಮೂಲಕವಾಗಿ ದೇವರು ಎಚ್ಚರಿಸುತ್ತಾನೆ. ಅವರ ಭವಿಷ್ಯದಲ್ಲಿ ಅವರಿಗಾಗಿ ದೇವರು ಹೊಂದಿರುವ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ಪ್ರವಾದನೆಯ ಮೂಲಕ ದೇವರು ಅನಾವರಣ ಮಾಡುತ್ತಾನೆ. ಭವಿಷ್ಯದ ಕುರಿತಾದ ಸಂಗತಿಗಳನ್ನು ಪ್ರಕಟಪಡಿಸುವದಕ್ಕೆ ದೇವರು ಪ್ರವಾದನೆಯನ್ನು ಉಪಯೋಗಿಸುತ್ತಾನೆ, ಇದರಿಂದ ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳುವದಕ್ಕೆ ಸಾಧ್ಯವಾಗುತ್ತದೆ.

ಒಪ್ಪಿಕೊಳ್ಳುವದಕ್ಕಿಂತ ಮುಂಚೆ ಎಲ್ಲಾ ಪ್ರವಾದನೆಗಳು ಪರೀಕ್ಷಿಸಲ್ಪಡಬೇಕು ಎಂದು ಬಹಳಷ್ಟು ಒತ್ತುಕೊಟ್ಟು ಮತ್ತೆ ಮತ್ತೆ ಹೇಳುವದಕ್ಕೆ ನಾವು ಇಚ್ಛಿಸುತ್ತೇವೆ.

ಪ್ರವಾದನೆಗಳಿಗಾಗಿ ಎಲ್ಲಾ ಕಡೆ ಹುಡುಕಿಕೊಂಡು ಹೋಗಬೇಡಿರಿ. ದೇವರು ಯಾರನ್ನು ಆರಿಸಿಕೊಂಡಿದ್ದಾನೋ ಅವರ ಮೂಲಕ ತಕ್ಕ ಸಮಯದಲ್ಲಿ ದೇವರು ನಿಮ್ಮೊಂದಿಗೆ ಮಾತಾಡುವದಕ್ಕೆ ಅವಕಾಶ ಕೊಡಿರಿ.

## ಮೇ 1993 : ಒಬ್ಬ ಪೂರ್ತಿ ಹೊಸಬನಿಂದ ಪ್ರವಾದನೆ

ನಾನು ವೈಯಕ್ತಿಕವಾಗಿ ಸ್ವೀಕರಿಸಿದ ಪ್ರವಾದನೆಗಳಲ್ಲಿ ಹೆಚ್ಚು ಗಮನಾರ್ಹವಾದದು ಅದು ಮೇ 1993ರಲ್ಲಿ ನಾನು ಹೊಂದಿಕೊಂಡ ಪ್ರವಾದನೆ, ತಮ್ಮ ಪ್ರವಾದನೆಯ ಸೇವೆಯಿಂದ ಪರಿಚಿತರಾಗಿರುವ ಕೆವಿನ್ ವ್ಯಾನ್ ಡೆನ್ ವೆಸ್ಟ್ರೂಯ್ಝೆನ್‌ರವರು ತುಲ್ಸಾ, ಓಕ್ಲಾಹೋಮಾದಲ್ಲಿ ಆತ್ಮೀಕ ಕೌಶಲ್ಯತೆಯ ಒಂದು ಕೋರ್ಸ್‌ನಲ್ಲಿ ಸೇವೆಸಲ್ಲಿಸುತ್ತಿದ್ದಾಗ. ಕೆನ್‌ರವರು ತಮ್ಮ ಎರಡನೆಯ ಅವಧಿಯ ಕೊನೆಯಲ್ಲಿ ಮಾತಾಡುತ್ತಿದ್ದಾಗ, ಪ್ರವಾದನೆಯ ಕುರಿತು ಅವರು ನಮಗೆ ಉಪದೇಶಿಸುತ್ತಿದ್ದಾಗ, ಅವರು ನನ್ನ ಹತ್ತಿರ ಬಂದು ನನಗಾಗಿ ಪ್ರಾರ್ಥಿಸುತ್ತಾ ನನ್ನ ಜೀವಿತದ ಕುರಿತು ಪ್ರವಾದಿಸುವದಕ್ಕೆ

ಆರಂಭಿಸಿದರು. ಕರ್ತನೇ, ಮುಂಬರುವ ಸಂಗತಿಗಳಿಗಾಗಿ ನೀನು ಈತನನ್ನು ಸಿದ್ಧಪಡಿಸುತ್ತಿದ್ದೀಯಾ. ನೀನು ತಾಂತ್ರಿಕತೆಯ ಸಾಮರ್ಥ್ಯಗಳನ್ನು ಉಪಯೋಗಿಸುತ್ತೀ ಮತ್ತು ದೇವರ ರಾಜ್ಯಕ್ಕಾಗಿ ಈತನಲ್ಲಿ ನೀನು ಸಂಗತಿಗಳನ್ನು ಇಡುತ್ತಿದ್ದೀ. ಈಗಲೇ ಸಂಗತಿಗಳು ಚಲನೆಯಲ್ಲಿರುವಂತೆ ನೀನು ಮಾಡುತ್ತಿದ್ದೀ, ನಿನ್ನ ಕ್ಷೇತ್ರದಲ್ಲಿ ನೀನು ದೈವಿಕ ಸಂಪರ್ಕಗಳನ್ನು ಜೋಡಣೆ ಮಾಡುತ್ತಿದ್ದೀ. ಈತನ ಸಂಪರ್ಕಕ್ಕೆ ಬರಬೇಕಾದ ಜನರನ್ನು ನೀನು ಸಿದ್ಧಪಡಿಸುತ್ತಿದ್ದೀ. ಈತನ ಪರವಾಗಿ ಸಂಗತಿಗಳು ನಡೆಯುತ್ತವೆ ಮತ್ತು ನೀನು ಈತನಿಗಾಗಿ ಇರುತ್ತೀ. ನೀನು ದಾರಿಯನ್ನು ತೆರೆಯುತ್ತಿದ್ದೀ. ನೀನು ಬಾಗಿಲನ್ನು ತೆರೆಯುತ್ತಿದ್ದೀ. ನೀನೇ ಆತನ ಜೀವಿತಕ್ಕಾಗಿ ಈ ಇಡೀ ಸಂಗತಿಯನ್ನು ಚಲನೆಯಲ್ಲಿ ಇಡುವದಕ್ಕೆ ಹೋಗುವವನಾಗಿದ್ದೀ. ಇವನು ಇಲ್ಲಿ ಇದ್ದಾಗ್ಯೂ ಸಹ, ಒಂದು ಸಮಯದವರೆಗೆ ಇರುತ್ತಾನೆ. ಅವನು ಒಂದು ಅವಧಿಯವರೆಗೆ ಇಲ್ಲಿರುತ್ತಾನೆ. ಇಲ್ಲಿ ಸಂಭವಿಸಬೇಕಾಗಿರುವ ಸಂಗತಿಗಳಿವೆ, ಆದರೆ ಒಂದು ದಿನ ಬರುತ್ತದೆ ಆಗ ನೀನು ಅವನನ್ನು ಅವನ ಜನರ ಬಳಿಗೆ ಹಿಂದಕ್ಕೆ ಕರೆದುಕೊಂಡು ಹೋಗುತ್ತೀ ಮತ್ತು ಅವನು ಅನೇಕ ಜನರ ಜೀವಿತಗಳನ್ನು ಮುಟ್ಟುತ್ತಾನೆ. ಆದರೆ ಅದೂ ಸಹ ಒಂದು ಸಕಾಲಕ್ಕಾಗಿ ಇದೆ, ನೀನು ಈ ಮನುಷ್ಯನನ್ನು ಒಂದು ಜನರ ಗುಂಪಿಗೆ ಮಾತ್ರ ಕರೆದಿಲ್ಲ, ಅಥವಾ ಒಂದು ದೇಶದ ಗುಂಪಿಗೆ ಕರೆದಿಲ್ಲ, ಆದರೆ ಅವನನ್ನು ಅವಲಂಬಿಸಿರುವ ಒಂದು ಕರೆ ಇದೆ, ಅದನ್ನು ನೀನು ಅವನ ಜೀವಿತದ ಮೇಲೆ ಇಟ್ಟಿದೀ ಮತ್ತು ಅದನ್ನು ಅವನಿಗೆ ಕೊಟ್ಟಿದ್ದೀ, ಯಾಕೆಂದರೆ ನೀನು ಅವನನ್ನು ದೇಶಗಳಿಗಾಗಿ ಕರದಿದ್ದೀ. ಮತ್ತು ದೇವರೇ, ನೀನು ಅವನ ಜೀವಿತಗಳೊಳಗೆ ಅನುಮತಿಸಿರುವ ಬಹಳಷ್ಟು ತೊಂದರೆಗಳೂ ಇವೆ. ಅವುಗಳು ಪರಿಣಾಮಕಾರಿಯಾಗಿರುವದಕ್ಕೆ ಮತ್ತು ಅವನ ಜೀವಿತದ ಮುಂದೆ ಅವು ನೇರವಾಗಿರುವದಕ್ಕೆ ನೀನು ಕಾರಣನಾಗಿದ್ದೀ. ದೇವರೇ, ಅನೇಕ ದೇಶಗಳ ಜನರ ಜೀವಿತಗಳನ್ನು ಮುಟ್ಟುವದಕ್ಕೆ ಈತನ ಸ್ವಾಭಾವಿಕವಾದ ಪ್ರಾಪಂಚಿಕ ಭಾಗದ ಕೊಡುಗೆಯಾಗಿರುವದಕ್ಕೆ ಇವನನ್ನು ಉಪಯೋಗಿಸಿದಾಗ್ಯೂ ಅವನು ಅತ್ತಿಂದಿತ್ತ ಮತ್ತು ಸ್ಥಳದಿಂದ ಸ್ಥಳಕ್ಕೆ ಹೋಗುವದಕ್ಕೆ ನೀನು ಕಾರಣನಾಗಿದ್ದೀ. . . . ಹೀಗೆ ಅವರು ನನ್ನ ಹೃದಯದಲ್ಲಿರುವ ಅದೇ ಸಂಗತಿಗಳನ್ನು ಮಾತಾಡುತ್ತಿದ್ದರು. ಈ ಮೊದಲು ಕೆವಿನ್ ಮತ್ತು ನನಗೆ ಪರಸ್ಪರ ಪರಿಚಯರಲಿಲ್ಲ. ಮತ್ತೆ ಮುಂದಿನ ವಾಕ್ಯಭಾಗದ ಅವಧಿಯಲ್ಲಿ, ಕೆವಿನ್ ನನ್ನ ಬಳಿ ಬಂದು ಮತ್ತೆ ಮುಂದುವರಿಸಿದರು, ಕೆಲವು ಹೋರಾಟಗಳೂ ಸಹ ಇವೆ, ಆದರೆ ದೇವರು ನಿನ್ನನ್ನು ಹತಾಶೆಯಿಂದ ಹತಾಶೆಗೆ ಕರೆದಿಲ್ಲ. ಆತನು ನಿನ್ನನ್ನು ಮಹಿಮೆಯಿಂದ ಮಹಿಮೆಗೆ ಕರೆದಿದ್ದಾನೆ. ನಿನ್ನ ಜೀವಿತದ ಪೂರಾ ಸೇವೆಯು ಬರೆಯಲ್ಪಟ್ಟಿರುವದನ್ನು ನಾನು ನೋಡುತ್ತಿದ್ದೇನೆ. ನಿನ್ನ ಜೀವಿತದಲ್ಲಿ ದೇವರ ಒಂದು ಕರೆಯನ್ನು ನಾನು ನೋಡುತ್ತಿದ್ದೇನೆ. . . . ಮುಂಬರುವ

ದಿವಸಗಳಲ್ಲಿ ತಾನು ಮಾಡಲಿರುವ ಸಂಗತಿಗಳನ್ನು ಕರ್ತನು ವರಿಸುತ್ತಾ ಹೋದನು. ಕೆವಿನ್‌ರವರ ಪ್ರವಾದನೆಯು ಅನೇಕ ಸಂಗತಿಗಳ ದೃಢೀಕರಣವಾಗಿತ್ತು, ಅವು ಈಗಾಗಲೇ ನನ್ನ ಹೃದಯದಲ್ಲಿತ್ತು ಮತ್ತು ಅವು ನಿಜವಾಗಿಯೂ ಆ ಸಮಯದಲ್ಲಿ ನನ್ನನ್ನು ಮುಂದೂಡಿದವು.

ಪ್ರವಾದನೆಯ ಮೇಲಿನ ಪೂರ್ಣವಾದ ಹೆಚ್ಚಿನ ಒಂದು ಅಧ್ಯಯನಕ್ಕಾಗಿ, ದಯವಿಟ್ಟು ಪ್ರವಾದನೆಯನ್ನು ಅರ್ಥ ಮಾಡಿಕೊಳ್ಳುವದು ಎಂಬ ಎಪಿಸಿಯ ಉಚಿತ ಪ್ರಕಾಶನ ಗ್ರಂಥವನ್ನು ನೋಡಿರಿ.

## ಪರ್ಯಾಲೋಚನೆ

1. ನಿನಗೆ ಹೇಳಲ್ಪಟ್ಟಿರುವ ಪ್ರವಾದನೆಯನ್ನು ನೀನು ಸ್ವೀಕರಿಸಿದ್ದೀಯೋ, ಅದು ನಿನಗೆ ನಿಜವಾಗಿಯೂ ಸಹಾಯ ಮಾಡಿತೋ? ಇದು ದೇವರಿಂದ ಬಂದಿತೆಂಬುದನ್ನು ನೀನು ಹೇಗೆ ತಿಳಿದುಕೊಂಡೆ? ಪ್ರವಾದನೆಯ ಮೂಲಕವಾಗಿ ದೇವರು ನಿನ್ನ ಜೀವಿತದಲ್ಲಿ ಏನು ಮಾಡಿದ್ದಾನೋ ಅದನ್ನು ಹಂಚಿಕೋ?

# 9

# ದೇವದೂತರುಗಳು

ನಾವು ಇನ್ನೂ ಸಭಾ ಯುಗದಲ್ಲಿ ವಾಸಿಸುತ್ತಿದ್ದೇವೆ, ಅಂದರೆ ಪಂಚಾಶತ್ತಮ ದಿನದಂದು ಹುಟ್ಟಿದ್ದ ಸಭೆಯ ಹಾಗೆ ಅದೇ ಹಂಚಿಕೆಯಲ್ಲಿ (ಅಥವಾ ಯುಗ, ಅಥವಾ ದೇವರ ಕ್ಯಾಲೆಂಡರ್‌ನಲ್ಲಿನ ಸಮಯದಲ್ಲಿ) ಇದ್ದೇವೆ. ಪಂಚಾಶತ್ತಮ ಸಭೆ ಇದ್ದುದಕ್ಕಿಂತಲೂ ಖಂಡಿತವಾಗಿಯೂ ನಾವು ಕಡೇ ದಿವಸಗಳ ಅಂತ್ಯದ ಕಡೆಗೆ ಸಮೀಪದಲ್ಲಿದ್ದೇವೆ, ಆದರೆ ನಾವಿನ್ನೂ ಸಭಾಯುಗದಲ್ಲಿದ್ದೇವೆ. ದೇವದೂತರುಗಳು ಸತ್ಯವೇದದ ಕಾಲದಲ್ಲಿ ಮತ್ತು ಆದಿ ಸಭೆಯ ಸಮಯದಲ್ಲಿ ಕ್ರಿಯಾತ್ಮಕರಾಗಿದ್ದರು ಮತ್ತು ಈಗಲೂ ಅವರು ಕ್ರಿಯಾತ್ಮಕರಾಗಿದ್ದಾರೆ.

ಇಬ್ರಿಯ–1:14
**ಇವರೆಲ್ಲರೂ ರಕ್ಷಣೆಯನ್ನು ಬಾಧ್ಯವಾಗಿ ಹೊಂದಬೇಕಾಗಿರುವವರ ಸೇವೆಗೋಸ್ಕರ ಕಳುಹಿಸಲ್ಪಡುವ ಊಳಿಗದ ಆತ್ಮಗಳಲ್ಲವೋ?**

ದೇವರು ತನ್ನ ಜನರಿಗೆ ಮಾರ್ಗದರ್ಶನ ಮಾಡುವದಕ್ಕೆ, ಆದೇಶಿಸುವದಕ್ಕೆ ಮತ್ತು ತಾನು ಏನು ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದಾನೋ ಅದನ್ನು ಅವರಿಗೆ ಪ್ರಕಟಪಡಿಸುವದಕ್ಕೆ ಮತ್ತು ಅವರು ದೇವರಿಂದ ಸ್ವೀಕರಿಸಿಕೊಂಡಿರುವ ದರ್ಶನಗಳ ಅರ್ಥವನ್ನು ವಿವರಿಸುವದಕ್ಕೆ, ಸಂದೇಶಗಳನ್ನು ಕಳಿಸುವದಕ್ಕೆ ದೇವರು ತನ್ನ ದೂತರುಗಳನ್ನು ಉಪಯೋಗಿಸಿರುವದನ್ನು ನಾವು ಹಳೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲೂ ನೋಡುತ್ತೇವೆ. ದೇವದೂತರುಗಳು ಇನ್ನೂ ಸುತ್ತಲೂ ಇದ್ದಾರೆ ಮತ್ತು ಆತನ ಜನರಾದ ನಮಗಾಗಿ ದೇವರು ಅವರನ್ನು ನಿರ್ದೇಶನದ ಮೇಲೆ ಇನ್ನೂ ಕಳಿಸುತ್ತಿದ್ದಾನೆ.

ಒಬ್ಬ ದೇವದೂತನು ಮರಿಯಳಿಗೆ, ಪವಿತ್ರಾತ್ಮನ ಶಕ್ತಿಯಿಂದ ನೀನು ಒಂದು ಮಗುವನ್ನು ಪಡೆಯುತ್ತೀ ಮತ್ತು ಈ ಮಗುವು ಹೀಗೆ ಇರುತ್ತದೆ ಎಂದು ಪ್ರಕಟಿಸಿದನು (ಲೂಕ–1:26–38).

ಒಬ್ಬ ದೇವದೂತನು ಕನಸಿನಲ್ಲಿ ಯೋಸೇಫನಿಗೆ ಕಾಣಿಸಿಕೊಂಡು ಮರಿಯಳನ್ನು ಹೆಂಡತಿಯನ್ನಾಗಿ ತೆಗೆದುಕೊಳ್ಳಬೇಕೆಂದು ಅವಳನ್ನು ಬಿಟ್ಟು ಬಿಡಬಾರದೆಂದು ತಿಳಿಸಿದನು (ಮತ್ತಾ-1:18-24).

ಒಬ್ಬ ದೇವದೂತನು ಕನಸಿನಲ್ಲಿ ಯೋಸೇಫನಿಗೆ ಕಾಣಿಸಿಕೊಂಡು ಭದ್ರತೆಗಾಗಿ ಮರಿಯಳನ್ನು ಮತ್ತು ಮಗುವಾದ ಯೇಸುವನ್ನು ಕರೆದುಕೊಂಡು ಐಗುಪ್ತ ದೇಶಕ್ಕೆ ಹೋಗುವಂತೆ ಸೂಚಿಸಿದನು (ಮತ್ತಾಯ-2:13-15).

ಅಪೊ.ಕೃತ್ಯದಲ್ಲಿ ನಮಗಾಗಿ ಬರೆಯಲ್ಪಟ್ಟಿರುವ ಆದಿ ಸಭೆಯಲ್ಲಿನ ದೇವದೂತರುಗಳ ಬಹಳಷ್ಟು ಚಟುವಟಿಕೆಗಳನ್ನು ನಾವು ನೋಡುತ್ತೇವೆ.

- ಒಬ್ಬ ದೇವದೂತನು ಪೇತ್ರನನ್ನು ಸೆರೆಯಿಂದ ಬಿಡಿಸಿ ದೇವಾಲಯಕ್ಕೆ ಹೋಗಿ ಪ್ರಸಂಗ ಮಾಡುವಂತೆ ತಿಳಿಸುತ್ತಾನೆ (ಅಪೊ.ಕೃತ್ಯ-5:19:20)
- ಒಬ್ಬ ದೇವದೂತನು ಫಿಲಿಪ್ಪನಿಗೆ ಕೆಳಗಿಳಿದು ಗಾಜಕ್ಕೆ ಹೋಗುವಂತೆ ಆದೇಶಿಸುತ್ತಾನೆ (8:26), ಅಲ್ಲಿ ಫಿಲಿಪ್ಪನು ಇಥಿಯೋಫಿಯಾದ ಒಬ್ಬ ಮನುಷ್ಯನಿಗೆ ಸುವಾರ್ತೆಯನ್ನು ಸಾರುತ್ತಾನೆ.
- ಒಬ್ಬ ದೇವದೂತನು ಕೊರ್ನೇಲ್ಯನಿಗೆ ಕಾಣಿಸಿಕೊಂಡು, ಸುವಾರ್ತೆಯನ್ನು ಕೇಳುವದಕ್ಕೆ ಪೇತ್ರನನ್ನು ಕರೆಸಿಕೊಳ್ಳಬೇಕೆಂದು ತಿಳಿಸುತ್ತಾನೆ (10:1-7).
- ಒಬ್ಬ ದೇವದೂತನು ಪೇತ್ರನನ್ನು ಸರಪಳಿಗಳಿಂದ ಬಿಡಿಸಿ ಸೆರೆಯಿಂದ ಹೊರಗೆ ತಂದನು (12:7-10).
- ಒಬ್ಬ ದೇವದೂತನು ಹೆರೋದನನ್ನು ಹೊಡೆಯಲು ಅವನು ಸತ್ತು ಹೋದನು (12:23).
- ಪೌಲನು ಸಮುದ್ರ ಪ್ರಯಾಣ ಮಾಡಿ ರೋಮ್‌ಗೆ ಹೋಗುತ್ತಿದ್ದಾಗ ಒಬ್ಬ ದೇವದೂತನು ಕಾಣಿಸಿಕೊಂಡು, ಹಡಗು ಒಡೆಯಲ್ಪಟ್ಟಿದ್ದರೂ ಸಹ ಒಬ್ಬರ ಪ್ರಾಣವೂ ನಷ್ಟವಾಗುವದಿಲ್ಲ ಮತ್ತು ಪೌಲನು ಚಕ್ರವರ್ತಿಯ ಮುಂದೆ ನಿಲ್ಲುತ್ತಾನೆಂದು ಅವನಿಗೆ ಭರವಸೆ ಕೊಟ್ಟನು (27:22-25)

ದೇವದೂತರುಗಳು ನಮಗೆ ಕಾಣಿಸಿಕೊಳ್ಳುತ್ತಾರೆ ಮತ್ತು ನಮಗೆ ಕೇಳಿಸುವ ಹಾಗೆ ಮಾತಾಡುತ್ತಾರೆ, ನಮ್ಮ ಕಣ್ಣಿಗೆ ಕಾಣಿಸದೇ ಅವರು ಮಾತಾಡುತ್ತಾರೆ ಅಥವಾ ಕನಸಿನಲ್ಲಿ ಅವರು ನಮ್ಮೊಂದಿಗೆ ಮಾತಾಡುತ್ತಾರೆ. ದೇವದೂತರುಗಳು ನಮ್ಮ

ಆಲೋಚನೆಗಳ ಮೇಲೆ ಪ್ರಭಾವ ಬೀರುತ್ತಾರೆ ಅಥವಾ ಆಲೋಚನೆಗಳನ್ನು ನಮ್ಮ ಮನಸ್ಸಿನಲ್ಲಿಡುತ್ತಾರೆ (ದುರಾತ್ಮಗಳು ಹೇಗೆ ನಮ್ಮನ್ನು ಶೋಧನೆಗೊಳಪಡಿಸುತ್ತವೆಯೋ ಹಾಗೆ). ದೂತರುಗಳು ಮಾತಾಡುತ್ತಾರೆ ಮತ್ತು ನಾವು ಅದನ್ನು ನಮ್ಮ ಆತ್ಮದ ಕಿವಿಗಳಿಂದ ಕೇಳಿಸಿಕೊಳ್ಳುತ್ತೇವೆ. ದೂತರುಗಳು ನಮಗೆ ಕಾಣಿಸದಿದ್ದಾಗ್ಯೂ ಅವರು ನಮಗೆ ಸೇವೆ ಸಲ್ಲಿಸುತ್ತಾರೆ. ಅವರು ಕಾಣಿಸದಿದ್ದರೂ ಸಹ ನೀವು ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತೀರಿ.

ಸ್ತುತಿ ಆರಾಧನೆಯ ಸಮಯದಲ್ಲಿ ಆಗಾಗ್ಗೆ ನಾವು ನಮ್ಮ ಮಧ್ಯದಲ್ಲಿ ದೇವದೂತರುಗಳು ಸೇವೆ ಸಲ್ಲಿಸುತ್ತಿರುವ ಪ್ರಸನ್ನತೆಯನ್ನು ಅನುಭವಪಡುತ್ತೇವೆ (ಆತ್ಮೀಕವಾಗಿ ಗುರುತಿಸುತ್ತೇವೆ). ನಮ್ಮ ಮಧ್ಯದಲ್ಲಿ ಆತನ ದೂತರುಗಳ ಸೇವೆಗಾಗಿ ನಾವು ದೇವರಿಗೆ ವಂದನೆಗಳನ್ನು ಸಲ್ಲಿಸುತ್ತೇವೆ.

ನಮ್ಮ ಸುತ್ತಲೂ ದೇವದೂತರ ಚಟುವಟಿಕೆಯ ಅರಿವುಳ್ಳವರಾಗಿ ತೆರೆದವರಾಗಿರುವ ವೇಳೆಯಲ್ಲಿ ಈ ಕೆಳಗಿನವುಗಳನ್ನು ನಾವು ನಮ್ಮ ಮನಸ್ಸಿನಲ್ಲಿಟ್ಟುಕೊಂಡಿರಲೇಬೇಕು:

- ನಾವು ದೇವದೂತರುಗಳನ್ನು ಆರಾಧಿಸುತ್ತಿಲ್ಲ. ನಾವು ಮಹೋನ್ನತನಾದ ಕರ್ತನನ್ನು ಆರಾಧಿಸುತ್ತೇವೆ.
- ನಾವು ದೇವದೂತ ಸಾದೃಶ್ಯದ ಅಧಿಕೃತ ಭೇಟಿಗಳನ್ನು ಹುಡುಕುವವರಲ್ಲ. ನಮ್ಮ ಕೇಂದ್ರಿಕರಣವು ಯೇಸುವಿನ ಮೇಲೆ ಉಳಿದುಕೊಂಡಿದೆ.
- ಸೈತಾನನು ಮತ್ತು ಅವನ ದುರಾತ್ಮಗಳು ಪ್ರಕಾಶಿಸುವ ದೇವದೂತರುಗಳ ಹಾಗೆ ವೇಷಹಾಕಿಕೊಳ್ಳುತ್ತಾರೆ ಎನ್ನುವದು ನಮಗೆ ಗೊತ್ತಿರುವದರಿಂದ ನಾವು ದೇವದೂತ ಸಾದೃಶ್ಯದ ಅಧಿಕೃತ ಭೇಟಿಗಳನ್ನು ಗ್ರಹಿಸಿಕೊಳ್ಳಲೇಬೇಕು.
- ದೇವರ ವಾಕ್ಯಕ್ಕನುಸಾರವಾಗಿ ಆತನ ದೂತರುಗಳ ಸಹಾಯಕ್ಕಾಗಿ ದೇವರನ್ನು ಕೇಳಿಕೊಳ್ಳೋಣ.
- ಆತನ ದೂತರುಗಳು ನಮಗಾಗಿ ಏನು ಮಾಡುತ್ತಾರೆ ಮತ್ತು ಅವರು ಆತನ ವಾಕ್ಯದ ಸ್ವರಕ್ಕೆ ಪ್ರತಿಕ್ರಿಯಿಸುತ್ತಾರೆ ಎಂದು ಪ್ರಕಟಿಸುವ ದೇವರ ವಾಗ್ದಾನಗಳನ್ನು ನಾವು ಮಾತಾಡುತ್ತೇವೆ (ಕೀರ್ತನೆ-103:20).

## ಪರ್ಯಾಲೋಚನೆ

1) ನೀವು ಯಾವಾಗಲಾದರೂ ನಿಮ್ಮ ಸುತ್ತಲೂ ದೇವದೂತರಿರುವದನ್ನು ನೋಡಿದ್ದೀರೋ ಅಥವಾ ತಿಳುವಳಿಕೆಯುಳ್ಳವರಾಗಿದ್ದೀರೋ? ನೀವು ಯಾವಾಗಲಾದರೂ ಅಲೌಕಿಕವಾದ ಮಧ್ಯಸ್ಥಿಕೆಯನ್ನು ಅನುಭವಪಟ್ಟಿದ್ದೀರೋ (ಅಪಾಯದಿಂದ ರಕ್ಷಣೆ, ನೀವು ಯಾವುದನ್ನು ಮಾಡುವದಕ್ಕೆ ಹೋಗುತ್ತಿದ್ದೀರೋ ಅದರ ಪುನರ್‌ನಿರ್ದೇಶನ, ಒಂದು ಅಸಮಾನ್ಯವಾದ ಕಲ್ಪನೆ ಅಥವಾ ಅಲೋಚನೆ ಸಂದೇಶ ನೀವು ತಿಳಿದಿರುವ ಮತ್ತು ನಿಮಗೆ ಬರುವ ಇವು ದೇವರಿಂದ ಬಂದವುಗಳು), ಮತ್ತು ಒಬ್ಬ ದೇವದೂತನು ನಿಮಗೆ ಸೇವೆ ಸಲ್ಲಿಸಿದ್ದರಿಂದ ಇದು ಆಯಿತು ಎಂಬ ಅನುಭವಪಟ್ಟಿದ್ದೀರೋ?

2) ಕನಸುಗಳನ್ನು ದರ್ಶನಗಳನ್ನು ಪ್ರವಾದನೆಗಳನ್ನು ಮತ್ತು ದೇವದೂತ ಸಾದೃಶ ಸಂಧಿಸುವಿಕೆಯು ನಿಮಗಾಗಿ ಹೆಚ್ಚಾಗುವದಕ್ಕೆ ದೇವರನ್ನು ಪ್ರಾರ್ಥಿಸಿ ಕೇಳಿಕೊಳ್ಳಿರಿ ಅದರಿಂದ ಯಾವಾಗ ಮತ್ತು ಹೇಗೆ ಆತನು ಮಾತಾಡುವದಕ್ಕೆ ಆಯ್ಕೆ ಮಾಡಿಕೊಳ್ಳುತ್ತಾನೋ ಈ ರೀತಿಗಳ ಮೂಲಕ ಆತನಿಂದ ನೀವು ಕೇಳಿಸಿಕೊಳ್ಳುವದಕ್ಕೆ ಸಾಧ್ಯವಾಗುತ್ತದೆ.

# 10

# ದೈವಿಕ ಸಮಾಲೋಚನೆ

ದೇವರು ತನ್ನ ಮಾರ್ಗದರ್ಶನವನ್ನು ನಮ್ಮೊಂದಿಗೆ ಸಂಪರ್ಕಿಸುವದಕ್ಕೆ ತೆಗೆದುಕೊಂಡ ಒಂದು ಪ್ರಾಮುಖ್ಯವಾದ ರೀತಿಯೆಂದರೆ ಅದು ದೈವಿಕ ಸಮಾಲೋಚನೆ. ನಮ್ಮ ಜೀವಿತಗಳೊಳಗೆ ಮಾತಾಡುವದಕ್ಕೆ ಮತ್ತು ನಮ್ಮ ಜೀವಿತಗಳಿಗಾಗಿ ಸರಿಯಾದ ದಾರಿಯ ಜೊತೆಗೆ ನಮಗೆ ಮಾರ್ಗದರ್ಶನ ಮಾಡುವದಕ್ಕೆ ಸಹಾಯಕವಾಗಿ ದೇವರು ತನ್ನ ಜನರನ್ನು ಉಪಯೋಗಿಸುತ್ತಾನೆ.

ಕೀರ್ತನೆ–73:24
**ನಿನ್ನ ಚಿತ್ತವನ್ನು ತಿಳಿಯಪಡಿಸಿ ನನ್ನನ್ನು ನಡಿಸಿ ತರುವಾಯ ಮಹಿಮೆಗೆ ಸೇರಿಸಿಕೊಳ್ಳು.**

ಜ್ಞಾನೋಕ್ತಿ–19:21
**ಮನುಷ್ಯನ ಮನಸ್ಸಿನಲ್ಲಿ ಅನೇಕ ಸಂಕಲ್ಪಗಳಿವೆ; ಯೆಹೋವನ ಸಂಕಲ್ಪವೇ ಈಡೇರುವದು.**

ದೇವರು ತನ್ನ ಸಮಾಲೋಚನೆಯೊಂದಿಗೆ ನಮಗೆ ಮಾರ್ಗದರ್ಶನ ಮಾಡುತ್ತಾನೆ, ದೇವರ ಮಾರ್ಗವನ್ನು ತಿಳಿದವರೂ, ಯಾರು ದೇವರ ಹೃದಯವನ್ನು ಗ್ರಹಿಸಿಕೊಂಡವರೂ ಮತ್ತು ದೇವರ ಜ್ಞಾನವನ್ನು ಹೊಂದಿದವರೂ ಆಗಿರುತ್ತಾರೋ ಅಂತಹ ಜನರ ಮೂಲಕವಾಗಿ ಆಗಾಗ್ಗೆ ಇದು ನಮಗೆ ತರಲ್ಪಡುತ್ತದೆ.

ಈಗ, ಸಾಧಾರಣವಾಗಿ, ನಮ್ಮಲ್ಲಿ ಹೆಚ್ಚಿನವರು ದೇವರ ಸಮಲೋಚನೆಗಾಗಿ ಕೇಳುವದನ್ನು ಮತ್ತು ಹುಡುಕುವದನ್ನು ದೂರವಿರಿಸಿದ್ದೇವೆ. ಹೇಗಾದರೂ, ನಾವು ಅದನ್ನು ಬದಲಾಯಿಸಿಕೊಳ್ಳಬೇಕು. ನಾವು ಒಂದು ದೀನತೆಯ ಹೃದಯವನ್ನು, ದೇವರ ಸಮಾಲೋಚನೆಯನ್ನು ಕೇಳಿಸಿಕೊಂಡು ಅದನ್ನು ಸ್ವೀಕರಿಸಿಕೊಳ್ಳುವಂತ ಒಂದು ಹೃದಯವನ್ನು ಕಾಪಾಡಿಕೊಳ್ಳುವದು ಅಗತ್ಯವಾದುದಾಗಿದೆ. ಒಳ್ಳೇ ಸಮಾಲೋಚನೆಯ ಪ್ರಾಮುಖ್ಯತೆಯನ್ನು ಮತ್ತು ಮೌಲ್ಯವನ್ನು ನಮಗೆ ಬೋಧಿಸುವ ಜ್ಞಾನೋಕ್ತಿಗಳಲ್ಲಿರುವ ಈ ವಾಕ್ಯಗಳನ್ನು ಆಲೋಚಿಸೋಣ.

ಜ್ಞಾನೋಕ್ತಿ–11:14
**ಉಚಿತಾಲೋಚನೆಯಿಲ್ಲದ ಕಡೆ ಪ್ರಜೆಯು ಬಿದ್ದು ಹೋಗುವದು; ಬಹು ಸುಮಂತ್ರಿಗಳು ಇರುವಲ್ಲಿ ಸುರಕ್ಷಣೆಯಿರುವದು.**

ಸರಿಯಾದ ಸಮಾಲೋಚನೆಯನ್ನು ಸ್ವೀಕರಿಸಿಕೊಳ್ಳುವದು ನಮ್ಮನ್ನು ಭದ್ರತೆಯ ಮತ್ತು ಬಲವಾದ ಸ್ಥಳದಲ್ಲಿಡುತ್ತದೆ. ನಾವು ದೇವ ಜನರ ಜ್ಞಾನದಿಂದ, ಅನುಭವದಿಂದ ಮತ್ತು ಕಲಿಯುವಿಕೆಯಿಂದ ಎಳೆಯಲ್ಪಡುತ್ತೇವೆ.

ಜ್ಞಾನೋಕ್ತಿ–15:22
**ಯೋಚನೆ ಹೇಳುವವರಿಲ್ಲದೆ ಉದ್ದೇಶಗಳು ನೆರವೇರವು, ಬಹುಮಂದಿ ಆಲೋಚನಾಪರರಿರುವಲ್ಲಿ ಈಡೇರುವವು.**

ಒಂದು ದೊಡ್ಡದಾದ ಕಲ್ಪನೆಯನ್ನು ಹೊಂದಿಕೊಳ್ಳುವದು ಉತ್ತಮವಾದುದು. ಸರಿಯಾದ ಜನರಿಂದ ಸರಿಯಾದ ಸಹಾಯವನ್ನು ಹೊಂದಿಕೊಳ್ಳುವದು ನಮ್ಮ ಕಲ್ಪನೆಯು ನಿಜವಾಯಿತು ಎನ್ನುವದನ್ನು ನೋಡುವದಕ್ಕೆ ಸಹಾಯಕವಾಗುತ್ತದೆ. ಆಗಾಗ್ಗೆ ನಾವು ಸರಿಯಾದ ಜನರಿಂದ ಸಹಾಯವನ್ನು ಹೊಂದಿಕೊಳ್ಳುವದು ಅಗತ್ಯ, ಯಾಕೆಂದರೆ ಅಗತ್ಯವಾಗಿರುವ ಎಲ್ಲಾ ಸುದ್ದಿಗಳನ್ನು ಒಬ್ಬ ವ್ಯಕ್ತಿಯು ಹೊಂದಿರುವದಿಲ್ಲ.

ಜ್ಞಾನೋಕ್ತಿ–19:20
**ಬುದ್ಧಿವಾದವನ್ನು ಕೇಳು, ಉಪದೇಶವನ್ನಾಲಿಸು, ಮುಂದೆ ಜ್ಞಾನಿಯಾಗು.**

ನಾವು ಕೇಳಿಸಿಕೊಳ್ಳುವ ಮತ್ತು ಸ್ವೀಕರಿಸಿಕೊಳ್ಳುವ ಸಾಮರ್ಥ್ಯವನ್ನು ವೃದ್ಧಿಗೊಳಿಸಿಕೊಳ್ಳಬೇಕು. ನಮ್ಮಲ್ಲಿ ಹೆಚ್ಚಿನವರು ಕೇಳಿಸಿಕೊಳ್ಳುವದಕ್ಕೆ ಇಷ್ಟಪಡುವದಿಲ್ಲ, ವಿಶೇಷವಾಗಿ ಉಪದೇಶವನ್ನು ಕೇಳಿಸಿಕೊಳ್ಳುವದಕ್ಕೆ ಇಷ್ಟಪಡುವದಿಲ್ಲ. ನಮಗೆ ನಿಜವಾಗಿಯೂ ಸಹಾಯ ಮಾಡುವಂತ ಉಪದೇಶವನ್ನು ಸ್ವೀಕರಿಸಿಕೊಳ್ಳುವದರಿಂದ ನಮ್ಮನ್ನು ದೂರಡುವಂತಹ ಪೂರ್ವ ಕಲ್ಪಿತ ಅಭಿಪ್ರಾಯಗಳನ್ನು ಅಥವಾ ಮೊದಲೇ ಅಭಿಪ್ರಾಯಗೊಂಡಿರುವ ನಮ್ಮ ತತ್ವಗಳನ್ನು ನಾವು ಹೊಂದಿದ್ದೇವೆ. ಏನು ಮಾಡಬೇಕೆಂದು ಹೇಳಲ್ಪಟ್ಟಿದೆಯೋ ಅದನ್ನು ನಾನು ಇಷ್ಟಪಡುವದಿಲ್ಲ, ಯಾರೋ ಒಬ್ಬರು ನನ್ನನ್ನು ನಿಯಂತ್ರಿಸುವದು ನನಗೆ ಇಷ್ಟಲ್ಲ, ನಾನೇ ಇದನ್ನು ಅರ್ಥಮಾಡಿಕೊಳ್ಳುತ್ತೇನೆ, ನಾನು ಸ್ವತಂತ್ರವಾಗಿರುವದಕ್ಕೆ ಇಷ್ಟಪಡುತ್ತೇನೆ, ಇತ್ಯಾದಿಯಾಗಿ ನಾವು ತಪ್ಪಾಗಿ ಆಲೋಚಿಸುತ್ತೇವೆ. ಇದು ಉಪದೇಶ ಕೇಳಿಸಿಕೊಳ್ಳುವದು ಮತ್ತು ಸ್ವೀಕರಿಸಿಕೊಳ್ಳುವದನ್ನು ಸಮ್ಮತಿಸುವದಕ್ಕೆ ನಮ್ರತೆಯನ್ನು ತೆಗೆದುಕೊಳ್ಳುತ್ತದೆ.

ನಮ್ಮನ್ನು ನಾವು ದೀನರಾಗಿ ಮಾಡಿಕೊಂಡು ಉಪದೇಶವನ್ನು ಸ್ವೀಕರಿಸಿಕೊಂಡರೆ, ಕಾಲ ಕಳೆದಂತೆ ಇದು ಪ್ರಯೋಜನಕರವಾಗಿ ರುಜುವಾತುಗೊಳ್ಳುತ್ತದೆ.

ಜ್ಞಾನೋಕ್ತಿ–20:18
**ಉದ್ದೇಶಗಳು ಮಂತ್ರಾಲೋಚನೆಯಿಂದ ನೆರವೇರುವವು; ಮಂತ್ರಾಲೋಚನೆಯಿಂದಲೇ ಯುದ್ಧವನ್ನು ನಡಿಸು.**

ನೀವು ಹೊಂದಿಕೊಳ್ಳುವ ಸಮಾಲೋಚನೆಯು ಯುದ್ಧಕ್ಕಾಗಿ ನಿಮ್ಮನ್ನು ಸಜ್ಜುಗೊಳಿಸುವ ಆಯುಧಗಳು ಅಥವಾ ಯುದ್ಧ ಸಾಮಗ್ರಿಗಳ ಹಾಗಿರುತ್ತವೆ. ಬುದ್ಧಿವಂತ ಜನರಿಂದ ಪಡೆದ ಸಮಾಲೋಚನೆಯೊಂದಿಗೆ ಶಸ್ತ್ರಸಜ್ಜಿತರಾಗಿ ಹೋರಾಟಕ್ಕೆ ಹೊರಡಿರಿ. ನೀವು ಸವಾಲುಗಳನ್ನು ಎದುರಿಸುವಾಗ ಮತ್ತು ಗೆಲುವಿಗೆ ಒತ್ತಾಯ ಪಡಿಸುವದರ ಮೂಲಕ ಹಾಗೂ ಕಷ್ಟಕರವಾದ ಪರಿಸ್ಥಿತಿಗಳನ್ನು ನಿಭಾಯಿಸುವದಕ್ಕೆ ಇವುಗಳನ್ನು ಸರಿಯಾದ ಸಮಯದಲ್ಲಿ ಉಪಯೋಗಿಸಿರಿ.

## ಸರಿಯಾದ ಸಮಾಲೋಚನೆಯನ್ನು ಹೊಂದಿಕೊಳ್ಳುವದು

ನೀವು ಯಾರಿಂದ ಸಮಾಲೋಚನೆಯನ್ನು ಹೊಂದಿಕೊಳ್ಳುತ್ತೀರಿ ಎನ್ನುವದೂ ಸಹ ತುಂಬಾ ಪ್ರಾಮುಖ್ಯವಾದುದಾಗಿದೆ. ನಾವು ಏನು ಅಭ್ಯಾಸ ಮಾಡುತ್ತಿದ್ದೆವೋ ಅದರ ಸನ್ನಿವೇಶದಲ್ಲಿ – ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದು – ಅಂದರೆ ಯಾರು ಒಂದು ಆಳವಾದ, ಕಾಲ–ಪರೀಕ್ಷೆಗೊಂಡ ಮತ್ತು ದೇವರೊಂದಿಗಿನ ನಡೆಯನ್ನು ರುಜುವಾತುಪಡಿಸಿದ, ದೇವರ ವಾಕ್ಯದ ಅಧಿಕಾರದ ಆಧಾರದ ಮೇಲೆ ಮಾತಾಡುವವರು ಮತ್ತು ಪವಿತ್ರಾತ್ಮನ ಅಧೀನತೆಯಲ್ಲಿರುವ ಜನರಿಂದ ಸಮಾಲೋಚನೆಯನ್ನು ನಾವು ಹೊಂದಿಕೊಳ್ಳಬೇಕು.

ದೈವತ್ವಲ್ಲದವರ ಸಮಾಲೋಚನೆಯಲ್ಲಿ ನಡೆಯದಿರುವಂತೆ ನಾವು ಜಾಗೃತೆಯುಳ್ಳವರಾಗಿರಲೇಬೇಕು.

ಕೀರ್ತನೆ–1:1
**ಯಾವನು ದುಷ್ಟರ ಆಲೋಚನೆಯಂತೆ ನಡೆಯದೇ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೇ ಧರ್ಮನಿಂದಕರೊಡನೆ ಕೂತುಕೊಳ್ಳದೇ ಇರುವ ಮನುಷ್ಯನು ಧನ್ಯನು.**

ಖಂಡಿತವಾಗಿ ಜೀವನದ ಇತರ ಸಂಗತಿಗಳಲ್ಲಿ, ನಾವು ಅನುಭವಶಾಲಿಗಳ ಬಳಿಗೆ ಹೋಗುತ್ತೇವೆ (ಉದಾ: ಕಾನೂನು, ಹಣಕಾಸು, ಜೀವನೋಪಾಯಕ್ರಮ,

ಶಿಕ್ಷಣ, ಉದ್ಯೋಗದ ಸಂಗತಿಗಳು ಇತ್ಯಾದಿ). ಅವರು ದೈವತ್ವಲ್ಲದ (ದೇವರಿಗೆ ಮೆಚ್ಚಿಕೆಯಿಲ್ಲದಿರುವ) ಯಾವುದನ್ನಾದರು ಮಾಡುವದಕ್ಕೆ ನಿಮಗೆ ಉಪದೇಶಿಸದಿರುವ ಸಂದರ್ಭದಲ್ಲಿ, ಈ ಅನುಭವಶಾಲಿಗಳಿಂದ ನೀವು ಸಮಾಲೋಚನೆಯನ್ನು ಹೊಂದಿಕೊಳ್ಳಬಹುದು.

## ತಿದ್ದುಕೊಳ್ಳುವದಕ್ಕೆ ಇಚ್ಛೆಯುಳ್ಳವರಾಗಿರುವದು

ಸಮಾಲೋಚನೆಯು ಮೂಲಕವಾಗಿ ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ನಮಗೆ ಇರುವ ತಡೆಗಳಲ್ಲಿ ಒಂದು ಯಾವುದೆಂದರೆ, ನಾವು ಯಾವುದನ್ನು ಮಾಡುವದಕ್ಕೆ ಒಲವುಳ್ಳವರಾಗಿರುತ್ತೇವೋ ಅದನ್ನು ದೃಢೀಕರಿಸುವಂತ ಸಮಾಲೋಚನೆಯನ್ನು ಮಾತ್ರ ನಾವು ಹೊಂದಿಕೊಳ್ಳುತ್ತೇವೆ. ಒಂದು ವೇಳೆ ನಮ್ಮನ್ನು ತಿದ್ದುವಂತಹ ಸಮಾಲೋಚನೆಯಿದ್ದರೆ, ಅದನ್ನು ಹೊಂದಿಕೊಳ್ಳಬಾರದೆನ್ನುವ ಪ್ರವೃತ್ತಿಯನ್ನು ನಾವು ಹೊಂದಿರುತ್ತೇವೆ.

## ವಾಕ್ಯಗಳು ನಮಗೆ ಏನು ಬೋಧಿಸುತ್ತವೆ ಎಂಬುದನ್ನು ಅಲೋಚಿಸೋಣ;

ಜ್ಞಾನೋಕ್ತಿ–12:1
**ತಿಳುವಳಿಕೆಯನ್ನು ಪ್ರೀತಿಸುವವನು ಶಿಕ್ಷಣವನ್ನು ಪ್ರೀತಿಸುತ್ತಾನೆ; ಪಶುಪ್ರಾಯನು ಗದರಿಕೆಯನ್ನು ದ್ವೇಷಿಸುತ್ತಾನೆ.**

ಜ್ಞಾನೋಕ್ತಿ–13:18
**ಶಿಕ್ಷೆಯನ್ನು ತ್ಯಜಿಸುವವನಿಗೆ ಬಡತನ ಮತ್ತು ಅವಮಾನ; ಗದರಿಕೆಯನ್ನು ಗಮನಿಸುವವನಿಗೆ ಮಾನ.**

ಜ್ಞಾನೋಕ್ತಿ–29:1
**ಬಹಳವಾಗಿ ಗದರಿಸಿದರೂ ತಗ್ಗದವನು ಏಳದ ಹಾಗೆ ಫಕ್ಕನೆ ಮುರಿದು ಬೀಳುವನು.**

ದೈವಿಕ ಸಮಾಲೋಚನೆಯನ್ನು ಕೇಳುವದು ಮತ್ತು ಹುಡುಕುವದು ಬೋಧನಾತ್ಮಕವಾಗಿದ್ದು, ಒಂದು ದೀನತೆಯ ಹೃದಯವನ್ನು ಕಾಪಾಡುವಂತಾದ್ದು ಮತ್ತು ತಿದ್ದುಕೊಳ್ಳುವದಕ್ಕೆ ಇಚ್ಛೆಯುಳ್ಳದ್ದೂ ಆಗಿರುತ್ತದೆ. ಇದರ ಅರ್ಥವೇನೆಂದರೆ, ನೀವು ಆಲೋಚಿಸುವಂತ ಯಾವುದಾದರೂ, ನೀವು ಅದನ್ನು ಮಾಡುವದಕ್ಕೆ ದೇವರು ಅಲೋಚಿಸಿರುವದಿಲ್ಲ ಮತ್ತು ನೀವು ಬದಲಾಯಿಸಿಕೊಳ್ಳುವದಕ್ಕೆ ಇಚ್ಛಿಸಬೇಕು ಮತ್ತು ನಿಮ್ಮನ್ನು ದೇವರ ರೀತಿಗಳಿಗೆ ಸರಿಯಾಗಿರಿಸಿಕೊಳ್ಳಬೇಕು.

ಕೀರ್ತನೆ-141:5
**ನೀತಿವಂತರು ನನಗೆ ಹೊಡೆಯಲಿ, ಅದು ನನಗುಪಕಾರ; ಅವರು ನನ್ನನ್ನು ಶಿಕ್ಷಿಸಲಿ, ಅದು ನನ್ನ ತಲೆಗೆ ಎಣ್ಣೆಯಂತಿದೆ; ಆದರೆ ದುಷ್ಟರ ಕೆಟ್ಟತನಕ್ಕೆ ವಿರೋಧವಾಗಿ ದೇವರನ್ನು ಪ್ರಾರ್ಥಿಸುತ್ತಿರುವೆನು.**

ಜ್ಞಾನೋಕ್ತಿ-15:31
**ಜೀವಪ್ರದವಾದ ಗದರಿಕೆಗೆ ಕಿವಿಗೊಡುವವನು ಜ್ಞಾನಿಗಳ ನಡುವೆ ನೆಲೆಗೊಳ್ಳುವನು.**

ಜ್ಞಾನೋಕ್ತಿ-15:32
**ಶಿಕ್ಷೆಯನ್ನೊಲ್ಲದವನು ತನ್ನನ್ನೇ ನಿರಾಕರಿಸುವನು; ಗದರಿಕೆಯನ್ನು ಕೇಳುವವನು ಬುದ್ಧಿಯನ್ನು ಪಡೆಯುವನು.**

ಪ್ರಸಂಗಿ-7:5
**ಅಜ್ಞಾನಿಗಳ ಗಾನಕ್ಕಿಂತ ಜ್ಞಾನಿಗಳ ಗದರಿಕೆಯನ್ನು ಕೇಳುವದು ಲೇಸು.**

## ದೈವಿಕ ತಂದೆತಾಯಿಯರ ಸಮಾಲೋಚನೆ

ಜ್ಞಾನೋಕ್ತಿ-13:1
**ಜ್ಞಾನಿಯಾದ ಮಗನು ತಂದೆಯ ಶಿಕ್ಷೆಯನ್ನು ಕೇಳುವನು; ಧರ್ಮನಿಂದಕನೋ ಗದರಿಕೆಯನ್ನು ಕೇಳನು.**

ಜ್ಞಾನೋಕ್ತಿ-1:8-9
**8-ಮಗನೇ, ನಿನ್ನ ತಂದೆಯ ಉಪದೇಶವನ್ನು ಕೇಳು, ನಿನ್ನ ತಾಯಿಯ ಬೋಧನೆಯನ್ನು ತೊರೆಯಬೇಡ.**
**9-ಅವು ನಿನ್ನ ತಲೆಗೆ ಅಂದದ ಪುಷ್ಪಕಿರೀಟ; ಕೊರಳಿಗೆ ಹಾರ.**

ನಾವು ನಮ್ಮ ಸ್ವಂತ ತಂದೆತಾಯಿಯರ ಸಮಾಲೋಚನೆಯನ್ನು ಪಡೆದುಕೊಳ್ಳುವದೇ ನಾವು ಮಾಡುವಂತಹ ಒಂದು ಗೌರವಾರ್ಹವಾದ ಸಂಗತಿಯಾಗಿದೆ, ಅದರಲ್ಲೂ ಅವರು ದೈವಿಕ ತಂದೆತಾಯಿಯರಾಗಿದ್ದಾಗ ಇದು ವಿಶೇಷವಾದುದಾಗಿರುತ್ತದೆ. ಮಕ್ಕಳು ಮತ್ತು ಯೌವನಸ್ಥರು, ವಾಕ್ಯದ ಪ್ರಕಾರ ನಿಮ್ಮ ತಂದೆ ತಾಯಿಯ ಸಮಾಲೋಚನೆಯನ್ನು ಮತ್ತು ಉಪದೇಶವನ್ನು ಕೇಳಿಸಿಕೊಳ್ಳಬೇಕು ಮತ್ತು ಹೊಂದಿಕೊಳ್ಳಬೇಕು. ನೀವು ಗೌರವದಲ್ಲಿ ನಡೆಯುವದಕ್ಕೆ ಮತ್ತು ಜನರೊಳಗೆ ಪ್ರಶಂಸಿಸಲ್ಪಡುವದಕ್ಕೆ ಅವರು ಕಾರಣರಾಗುತ್ತಾರೆ.

## ಮಾರ್ಚ್ 1984: ಯೇಸು ಮೂವತ್ತು ವರ್ಷಗಳವರೆಗೆ ಕಾದಿದ್ದನು.

ಅನೇಕ ಸಂದರ್ಭಗಳಲ್ಲಿ ನನ್ನ ಸುತ್ತಲಿರುವ ಜನರ ಸಹಾಯ ಮತ್ತು ಸಮಾಲೋಚನೆಯ ಮೂಲಕ ನಾನು ಆಶೀರ್ವದಿಸಲ್ಪಟ್ಟಿರುವ ವೇಳೆಯಲ್ಲಿ, ನಾನು ನನ್ನ 10ನೆಯ ತರಗತಿಯನ್ನು ಮುಗಿಸಿದ ನಂತರ ಮಾರ್ಚ್ 1984ರಲ್ಲಿ ಸಂಭವಿಸಿರುವದು

ನಿಜವಾಗಿಯೂ ಪ್ರಮುಖವಾದುದಾಗಿದೆ. ಕರ್ತನ ಸೇವೆಮಾಡುವದಕ್ಕೆ ನಾನು ಬಹಳ ಭಾವೋದ್ದೀಪ್ತನಾಗಿದ್ದೆ, ನಾನು ಇನ್ನು ಮುಂದೆ ವಿದ್ಯಾಭ್ಯಾಸ ಮಾಡುವ ಅಗತ್ಯ ನನಗಿಲ್ಲ ಆದರೆ ಪೂರ್ಣಾವಧಿ ಸೇವೆಗೆ ಹೋಗಬೇಕು ಎಂದು ನಾನು ತೀರ್ಮಾನಿಸಿದ್ದೆ. ಆ ಸಮಯದಲ್ಲಿ ನಾನು ನನ್ನ ತಂದೆ ತಾಯಿಗೆ, ವಿಶೇಷವಾಗಿ ನನ್ನ ತಂದೆಗೆ ತುಂಬಾ ಮಾನಸಿಕ ವ್ಯಥೆಗೆ ಕಾರಣನಾಗಿದ್ದೆ. ಹೇಗಿದ್ದರೂ, ನನ್ನ ತಂದೆ ಒಂದು ಅದ್ಭುತವಾದ ಸಂಗತಿಯನ್ನು ಮಾಡಿದರು. ಇಬ್ಬರು ಕ್ರೈಸ್ತ ನಾಯಕರುಗಳಿಂದ ಸಮಾಲೋಚನೆಯನ್ನು ನಾವು ತೆಗೆದುಕೊಳ್ಳುವದಕ್ಕೆ ಅವರು ಸೂಚಿಸಿದರು, ಇದನ್ನು ನಾನು ಒಪ್ಪಿಕೊಂಡೆ. ಮೊದಲು ಅವರು ನನ್ನನ್ನು ಇಂಡಿಯನ್ ಇವ್ಯಾಂಜಿಲಿಕಲ್ ಮಿಷನ್ (ಐಇಎಮ್) ಇದರ ಜನರಲ್ ಸೆಕ್ರೆಟರಿಯಾಗಿದ್ದ ಡಾ. ಥಿಯೋಡರ್ ವಿಲ್ಲಿಯ್ಸಂರವರ ಬಳಿಗೆ ಕರೆದುಕೊಂಡು ಹೋದರು. ನಾನು ಅವರ ವಿಷಯದಲ್ಲಿ ತುಂಬಾ ಗೌರವವುಳ್ಳವನಾಗಿದ್ದೆ ಮತ್ತು ರೇಡಿಯೋದಲ್ಲಿ ಅವರ ಮಾತುಗಳನ್ನು ಯಾವಾಗಲೂ ಕೇಳುತ್ತಿದ್ದೆ ಮತ್ತು ರಿಚ್ಮಂಡ್ ಟೌನ್ ಮೆಥೋಡಿಸ್ಟ್ ಚರ್ಚ್‌ನಲ್ಲಿ ಅವರು ಪ್ರಸಂಗ ಮಾಡುವಾಗ ಯಾವಾಗಲೂ ನಾನು ಸಂತೋಸುತ್ತಿದ್ದೆ. ಡಾ. ಥಿಯೋಡರ್ ವಿಲ್ಲಿಯ್ಸಂ ತಾಳ್ಮೆಯಿಂದ ನಮ್ಮ ಮಾತುಗಳನ್ನು ಕೇಳಿಸಿಕೊಂಡರು ಮತ್ತು ನಂತರ ಅವರು ಒಂದು ಸರಳವಾದ ಹೇಳಿಕೆಯನ್ನು ಅವರು ಕೊಟ್ಟರು. ಯೇಸು ತನ್ನ ಸೇವೆಯನ್ನು ಪ್ರಾರಂಭಿಸುವದಕ್ಕಿಂತ ಮುಂಚೆ ಆತನು ಮೂವತ್ತು ವರ್ಷಗಳವರೆಗೆ ಕಾದನು, ಹಾಗಾಗಿ ನೀನು ಯಾಕೆ ಇಷ್ಟೊಂದು ಅವರಸರದಲ್ಲಿದ್ದೀ ಎಂದು ಹೇಳಿದರು. ಅವರು ಹೇಳಿದ್ದು ಬಹಳಷ್ಟು ತಿಳುವಳಿಕೆಯನ್ನುಂಟು ಮಾಡಿತು. ನಾವು ಅಲ್ಲಿಂದ ಹೊರಟು ಬಂದೆವು ನಂತರ ನನ್ನ ತಂದೆ, ಆರ್‌ಟಿಎಂಸಿ ಯಲ್ಲಿ ಸೇವೆ ಮಾಡುತ್ತಿದ್ದ ಡಾ. ಜ್ಞಾನಮುತ್ತು ಇವರನ್ನು ಭೇಟಿಮಾಡುವದಕ್ಕೆ ನನ್ನನ್ನು ಕರೆದುಕೊಂಡು ಹೋದರು. ನಮ್ಮ ಮಾತುಗಳನ್ನು ಕೇಳಿಸಿಕೊಂಡ ಡಾ. ಜ್ಞಾನಮುತ್ತುರವರು ಹೇಳಿದ್ದೇನೆಂದರೆ: ಯೇಸು ತನ್ನ ಸೇವೆಯನ್ನು ಪ್ರಾರಂಭಿಸುವದಕ್ಕಿಂತ ಮುಂಚೆ ಆತನು ಮೂವತ್ತು ವರ್ಷಗಳವರೆಗೆ ಕಾದನು, ಹಾಗಾಗಿ ನೀನು ಯಾಕೆ ಇಷ್ಟೊಂದು ಅವರಸರದಲ್ಲಿದ್ದೀ. ಇದು ನಿಜವಾಗಿಯೂ ನನಗೆ ಆಶ್ಚರ್ಯವನ್ನುಂಟು ಮಾಡಿತು. ಇಬ್ಬರೂ ನನಗೆ ಸಮಾಲೋಚನೆ ಮಾಡಿ ಒಂದೇ ರೀತಿಯ ವಿಷಯವನ್ನು ತಿಳಿಸಿದ್ದರು. ನಾನು ಶೀಘ್ರವಾಗಿ ಸರಿಯಾದ ಸ್ಥಿತಿಗೆ ಬಂದೆ ಮತ್ತು ನನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವದಕ್ಕೆ ಒಪ್ಪಿಕೊಂಡೆ. ಹಿಂದಕ್ಕೆ ನೋಡಿದಾಗ, ನಾನು ಜ್ಞಾನಲ್ಲದೆ ಆಸಕ್ತಿಯನ್ನು ಹೊಂದಿದ್ದೆ ಎನ್ನುವದನ್ನು ನಾನು ಗ್ರಹಿಸಿಕೊಂಡೆ, ನನ್ನ ತಂದೆ ಮಾಡಿದ ಕಾರ್ಯಕ್ಕೆ ಮತ್ತು ಈ ದೈವಿಕ ನಾಯಕರುಗಳ

ಸಮಾಲೋಚನೆಗಾಗಿ ನಾನು ತುಂಬಾ ಕೃತಜ್ಞತೆಯುಳ್ಳವನಾಗಿದ್ದೆ. ನಾನು ಮುಂದೆ ಹೋಗುವದಕ್ಕೆ ದೇವರು ಆಶಿಸಿದ್ದ ದಿಕ್ಕಿನಲ್ಲಿ ನನ್ನ ಜೀವಿತವನ್ನು ತಿರುಗಿಸುವದಕ್ಕೆ ಅದು ಸಹಾಯ ಮಾಡಿತು.

## ಪರ್ಯಾಲೋಚನೆ

1) ನಿಮ್ಮ ಸ್ವಂತ ಜೀವಿತದಲ್ಲಿ ನೀವು ದೈವಿಕ ಸಮಾಲೋಚನೆಯನ್ನು ಹುಡುಕುವಂತಹ ಒಂದು ಸಮಯ ಬಂದಿದೆಯೋ? ಇದನ್ನು ಮಾಡುವದಕ್ಕೆ ನೀವು ಹೇಗೆ ಪ್ರಾರಂಭಿಸಿದಿರಿ? ನೀವು ಯಾರ ಹತ್ತಿರ ಹೋದಿರಿ? ಇದರ ಫಲಿತಾಂಶವೇನು?

2) ದೈವಿಕ ಸಮಾಲೋಚನೆಯನ್ನು ಕೇಳುವದಕ್ಕೆ ಜನರು ಯಾಕೆ ಹಿಂಜರಿಯುತ್ತಾರೆ? ಈ ಅಡ್ಡಿಗಳನ್ನು ನಾವು ಹೇಗೆ

# 11

# ನವೀಕರಣಗೊಂಡ ಮನಸ್ಸು

ನಮ್ಮ ನವೀಕರಣಗೊಂಡ ಮನಸ್ಸನ್ನು ಉಪಯೋಗಿಸುವದರ ಮೂಲಕ ನಮ್ಮ ಜೀವಿತಗಳಲ್ಲಿ ದೇವರ ಮಾರ್ಗದರ್ಶನವನ್ನು ನಾವು ಹೊಂದಿಕೊಳ್ಳುವದು ಇನ್ನೊಂದು ಮುಖ್ಯವಾದ ರೀತಿಯಾಗಿದೆ.

ನಾವು ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಪ್ರಾಕೃತ ಮನಸ್ಸು ದೇವರ ಸಂಗತಿಗಳನ್ನು ತಿಳಿದಿರುವದಿಲ್ಲ ಎಂದು ನಮಗೆ ಗೊತ್ತು (1ಕೊರಿಂಥ-2:14). ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು(ರೋಮಾ-8:7) ಎಂಬುದೂ ಸಹ ನಮಗೆ ಗೊತ್ತು. ದೇವರ ಮಾರ್ಗಗಳೂ ಮತ್ತು ದೇವರ ಆಲೋಚನೆಗಳೂ ನಮ್ಮ ಮಾರ್ಗಗಳು ಮತ್ತು ನಮ್ಮ ಆಲೋಚನೆಗಳಿಗಿಂತ ಉನ್ನತವಾದವು(ಯೆಶಾಯ-55:8-9) ಎಂಬ ತಿಳುವಳಿಕೆ ನಮಗಿರಬೇಕು. ಆದದರಿಂದ ದೇವರೊಂದಿಗೆ ನಡೆಯುವದಕ್ಕೆ, ನಾವು ನಮ್ಮ ಸ್ವಂತ ಪ್ರಾಕೃತ ಅಥವಾ ಶಾರೀರಿಕ ಸ್ವಭಾವಗಳೊಂದಿಗೆ ಆಳಲ್ಪಡಲೇಬಾರದು.

ನಮ್ಮ ಸ್ವಂತ ಗ್ರಹಿಕೆಯ ಮೇಲೆ ನಾವು ಆತುಕೊಳ್ಳಬಾರದೆಂದು(ಶ್ವಾಸ, ಅವಲಂಬನೆ, ಸಹಾಯ) ವಾಕ್ಯಗಳು ನಮಗೆ ಬೋಧಿಸುತ್ತವೆ. ಬದಲಿಗೆ ನಮ್ಮ ಎಲ್ಲಾ ಮಾರ್ಗಗಳಲ್ಲಿ ಆತನನ್ನೇ ಅನುಸರಿಸಬೇಕು.

ಜ್ಞಾನೋಕ್ತಿ-3:5-6

**5-ಸ್ವಬುದ್ಧಿಯನ್ನೇ ಆಧಾರ ಮಾಡಿಕೊಳ್ಳದೆ ಪೂರ್ಣಮನಸ್ಸಿನಿಂದ ಯೆಹೋವನಲ್ಲಿ ಭರವಸಡು.**

**6-ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು.**

ನಮ್ಮ ಗ್ರಹಿಸುವಿಕೆಯನ್ನು ನಾವು ಉಪಯೋಗಿಸಬಾರದು ಎಂಬುದಾಗಿ ಆಗಾಗ್ಗೆ, ಈ ವಚನವನ್ನು ನಾವು ತಪ್ಪಾಗಿ ಅರ್ಥಮಾಡಿಕೊಳ್ಳುತ್ತೇವೆ. ಇಲ್ಲಿ ದೇವರು ಆ ರೀತಿಯಾಗಿ ನಮಗೆ ಬೋಧಿಸುತ್ತಿಲ್ಲ. ನಾವು ನಮ್ಮ ತಿಳುವಳಿಕೆಯನ್ನು ಉಪಯೋಗಿಸಬೇಕು,

ನಾವು ಹಾಗೆ ಮಾಡಿದಾಗ್ಯೂ ಸಹ, ನಾವು ನಮ್ಮ ಹೆಜ್ಜೆಗಳನ್ನು ಕ್ರಮಪಡಿಸಿಕೊಳ್ಳುವದಕ್ಕೆ ಮತ್ತು ನಮ್ಮ ಮಾರ್ಗಗಳನ್ನು ಸ್ಥಿರಪಡಿಸಿಕೊಳ್ಳುವದಕ್ಕೆ ಪೂರ್ತಿಯಾಗಿ ಕರ್ತನ ಮೇಲೆ ಆತುಕೊಂಡು, ಭರವಸೆಯಿಟ್ಟು ಅವಲಂಬಿತರಾಗಿರಬೇಕು.

ದೇವರು ನಮ್ಮ ಮನಸ್ಸನ್ನು ಸೃಷ್ಟಿಸಿದ್ದಾನೆ. ದೇವರು ನಮ್ಮ ಬೌದ್ಧಿಕ ಸಾಮರ್ಥ್ಯಗಳನ್ನು ರಚನೆ ಮಾಡಿ ನಮಗೆ ಕೊಟ್ಟಿದ್ದಾನೆ. ನಮ್ಮ ಮನಸ್ಸನ್ನು ಉಪಯೋಗಿಸುವಂತೆ ದೇವರು ನಮಗೆ ಹೇಳಿದ್ದಾನೆ.

ಜ್ಞಾನೋಕ್ತಿ–4:26
**ನೀನು ನಡೆಯುವ ದಾರಿಯನ್ನು ಸಮಮಾಡು; ನಿನ್ನ ಮಾರ್ಗಗಳೆಲ್ಲಾ ದೃಢವಾಗಿರಲಿ.**

ನಾವು ತೆಗೆದುಕೊಳ್ಳುವ ದಾರಿಯನ್ನು ನಾವು ವಿಚಾರ ಮಾಡಬೇಕು(ತೂಗುವದು, ತಿಳಿಯುವದು, ದೃಢಪಡಿಸಿಕೊಳ್ಳುವದು, ಜಾಗ್ರತೆಯಿಂದ ಯೋಜನೆ, ಅಧ್ಯಯನ, ಜಾಗರೂಕತೆ), ಇದರಿಂದ, ನಾವು ಏನು ಮಾಡುತ್ತೇವೋ ಅದರಲ್ಲಿ ದೃಢವಾಗಿದ್ದೇವೆ, ಭದ್ರವಾಗಿದ್ದೇವೆ, ಅಲುಗಾಡುವದಿಲ್ಲ ಮತ್ತು ಸ್ಥಿರವಾಗಿದ್ದೇವೆ ಎಂಬುದನ್ನು ನಾವು ನಿಶ್ಚಿತಪಡಿಸಿಕೊಳ್ಳುತ್ತೇವೆ.

ದೇವರು ನಮಗೆ ನಮ್ಮ ಮನಸ್ಸನ್ನು ಕೊಟ್ಟಿದ್ದಾನೆ ಮತ್ತು ಇದನ್ನು ನಾವು ಸರಿಯಾಗಿ ಹೇಗೆ ಉಪಯೋಗಿಸಬೇಕೆಂಬುದನ್ನೂ ಸಹ ಉಪದೇಶಿಸಿದ್ದಾನೆ. ನಮ್ಮಲ್ಲಿ ಅನೇಕರಿಗಿರುವ ಸಮಸ್ಯೆಯೇನೆಂದರೆ, ನಮ್ಮ ಮನಸ್ಸನ್ನು ನಾವು ಒಂದು ಶತ್ರುವಾಗಿ ಪರಿಗಣಿಸುತ್ತೇವೆ. ದೇವರು ನಮಗೆ ಬೋಧಿಸಿರುವಂತೆ ನಾವು ನಮ್ಮ ಮನಸ್ಸನ್ನು ಉಪಯೋಗಿಸಿದರೆ, ಆಗ ಇದು ಜೀವನದ ಪರಿಸ್ಥಿತಿಗಳಲ್ಲಿ ದೇವರ ನಿರ್ದೇಶನಗಳನ್ನು ಪಡೆಯುವದಕ್ಕೆ ನಮಗೆ ಸಹಾಯಕವಾಗಿ ಕೆಲಸಮಾಡುತ್ತದೆ.

## ಯಾವುದು ಉತ್ತಮವೆಂದು ರುಜುವಾತುಪಡಿಸು

ರೋಮಾ–12:1–2
**1–ಆದದರಿಂದ ಸಹೋದರರರೇ ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ, ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು.**

**2–ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ.**

ವಿಶ್ವಾಸಿಗಳ ಹಾಗೆ, ನಾವು ನಮ್ಮ ಮನಸ್ಸಿನ ಉಪಯೋಗವನ್ನು ನಿರಾಕರಿಸಬಾರದು. ಬದಲಿಗೆ, ನಾವು ನಮ್ಮ ಮನಸ್ಸನ್ನು ನವೀಕರಿಸಿಕೊಂಡು ದೇವರು ನಮಗೆ ಏನು ಸಂಕಲ್ಪಸಿದ್ದಾನೋ ಹಾಗೆ ಅದನ್ನು ಉಪಯೋಗಿಸೋಣ. ನವೀಕರಣಗೊಂಡ ಮನಸ್ಸಿನ ಒಂದು ಲಾಭವೇನೆಂದರೆ, ಯಾವುದೇ ಪರಿಸ್ಥಿತಿಯಲ್ಲಿ ದೇವರ ಚಿತ್ತ ಏನೆಂಬುದನ್ನು ಗುರುತಿಸುವದಕ್ಕೆ ಇದು ಶಕ್ತವಾಗಿರುತ್ತದೆ.

ದೇವರ ಆಲೋಚನೆಗಳು ಮತ್ತು ಮಾರ್ಗಗಳಿಗೆ ನೇರವಾಗಿರುವ ಹಾಗೆ ಆಲೋಚಿಸುವದಕ್ಕೆ ನಾವು ನಮ್ಮ ಮನಸ್ಸನ್ನು ನವೀಕರಿಸಿ ತರಬೇತುಗೊಳಿಸಬೇಕು. ದೇವರ ವಾಕ್ಯದ ಮೂಲಕವಾಗಿ ದೇವರ ಆಲೋಚನೆಗಳಿಗೆ ಮತ್ತು ಉನ್ನತವಾದ ಮಾರ್ಗಗಳಿಗೆ ಸತತವಾಗಿ ನೇರವಾಗಿರುವದೇ ಒಂದು ನವೀಕರಣಗೊಂಡ ಮನಸ್ಸು. ನಾವು ಇದನ್ನು ದೇವರ ವಾಕ್ಯದೊಂದಿಗೆ ಮಾಡಬೇಕು.

ನವೀಕರಣಗೊಂಡ ಮನಸ್ಸು ರುಜುವಾತುಪಡಿಸುವದಕ್ಕೆ(ಗ್ರೀಕ್‌ನಲ್ಲಿ 'ಡೊಕಿಮಾಝೋ') ಅಂದರೆ ಪರೀಕ್ಷಿಸುವದಕ್ಕೆ, ಪರೀಕ್ಷೆಯ ನಂತರ ನಿಷ್ಕಪಟದ ಹಾಗೆ ಗುರುತಿಸುವದಕ್ಕೆ, ದೇವರ ಚಿತ್ತವೇನೆಂಬುದನ್ನು ಒಪ್ಪಿಕೊಳ್ಳುವದಕ್ಕೆ ಶಕ್ತವಾಗಿರುತ್ತದೆ. ಇಲ್ಲಿರುವ ಚಿತ್ರಣವೇನೆಂದರೆ, ಲೋಹಗಳು ಅಪ್ಪಟವಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಪರೀಕ್ಷಿಸುವಂತಾದ್ದು. ಆದ್ದರಿಂದ ನವೀಕರಣಗೊಂಡ ಮನಸ್ಸು, ಪ್ರಯೋಜನಕರವಾದ ವರ್ತಮಾನವನ್ನು ಸಾಗಿಸುತ್ತದೆ ಮತ್ತು ಯಾವುದು ಅಪ್ಪಟವಾದುದು, ಉತ್ತಮವಾದುದು, ಒಪ್ಪಿಕೊಳ್ಳುವಂತಾದ್ದು ಮತ್ತು ಸಂಪೂರ್ಣವಾದದು ಹಾಗೂ ದೇವರ ಚಿತ್ತ ಇವೆಲ್ಲದರಿಂದ ಗುರುತಿಸಲ್ಪಡುತ್ತದೆ.

## ತಿಳಿದುಕೊಳ್ಳುವದಕ್ಕೆ ತರಬೇತಿ ಹೊಂದುವದು

ದೇವರ ವಾಕ್ಯದ ಸಂಬಂಧದಲ್ಲಿ ಇಬ್ರಿಯ–5:12–14 ರಲ್ಲಿ ನಾವು ಏನು ಓದುತ್ತೇವೆ ಎನ್ನುವದನ್ನು ಗಮನಿಸಿರಿ:

ಇಬ್ರಿಯ–5:12–14

**12–ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲ ಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ; ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ.**

**13–ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ.**

**14–ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ.**

ನಾವು ಪ್ರಾಯಸ್ಥರಾಗಿ ದೇವರ ವಾಕ್ಯದಲ್ಲಿ ನೆಲೆಗೊಂಡಾಗ ನಮ್ಮ ಇಂದ್ರಿಯಗಳು (ಗ್ರಹಣಶಕ್ತಿಯ ಅಂಗಗಳು) ಯಾವುದು ಸರಿ ಮತ್ತು ಯಾವುದು ತಪ್ಪು ಎನ್ನುವದರ ವ್ಯತ್ಯಾಸ ತಿಳಿಯುವದಕ್ಕೆ (ಗುಣಲಕ್ಷಣದ ವರ, ವಿವೇಚನೆ) ಅಭ್ಯಾಸ ಮಾಡುತ್ತವೆ (ಒಬ್ಬ ಓಟಗಾರನ ಹಾಗೆ ತರಬೇತಿಗೊಳ್ಳುವದು). ವಾಕ್ಯದ ನಮ್ಮ ಸತತವಾದ ಉಪಯೋಗದ ಕಾರಣದಿಂದ, ಯಾವುದು ಸರಿ ಮತ್ತು ತಪ್ಪು ಎಂಬುದನ್ನು ನಾವು ತಕ್ಷಣವೇ ತಿಳಿದುಕೊಳ್ಳುತ್ತೇವೆ.

ಗಟ್ಟಿಯಾದ ಆಹಾರವು ವಾಕ್ಯದ ಬಲವಾದ ಮಾಂಸಹಾರಕ್ಕೆ ಹೋಲಿಕೆಯಾಗಿದೆ. ಯಾರು ಪ್ರಾಯಸ್ಥರಾಗಿರುತ್ತಾರೋ ಅಂತಹ ಜನರು ವಾಕ್ಯದ ಗಟ್ಟಿಯಾದ ಆಹಾರವನ್ನು ಸೇವಿಸುವವರಾಗಿರುತ್ತಾರೆ. ಈ ಜನರು ಯಾವುದು ಸರಿ ಮತ್ತು ತಪ್ಪುಗಳನ್ನು ತಿಳಿದುಕೊಳ್ಳುವದಕ್ಕೆ ತಮ್ಮ ಇಂದ್ರಿಯಗಳನ್ನು(ಗ್ರಹಣ ಶಕ್ತಿಯ, ವಿವೇಚನೆಯ ಅಂಗ) ತರಬೇತಿಗೊಳಿಸಿರುತ್ತಾರೆ.

ಬೇರೆ ಭಾಷಾಂತರಗಳು ಈ ವಚನವನ್ನು ಹೇಗೆ ನೆರವೇರಿಸುತ್ತವೆ ಎಂಬುದನ್ನು ಆಲೋಚಿಸೋಣ:

(ಕಾಂಟೆಂಪರರಿ ಇಂಗ್ಲೀಷ್ ವರ್ಷನ್) ಗಟ್ಟಿಯಾದ ಆಹಾರವು ಸರಿ ಮತ್ತು ತಪ್ಪುಗಳನ್ನು ತಿಳಿಯುವದಕ್ಕೆ ತರಬೇತುಗೊಂಡಿರುವ ಪ್ರಾಯಸ್ಥರಿಗೋಸ್ಕರ ಇದೆ.

(ಓದುವದಕ್ಕೆ ಸುಲಭವಾಗಿರುವ ಭಾಷಾಂತರ) ಆದರೆ ಗಟ್ಟಿಯಾದ ಅಹಾರವು ದೊಡ್ಡವರಿಗೋಸ್ಕರ ಇದೆ. ಅವರ ಅನುಭವಗಳಿಂದ ಅವರು ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ವ್ಯತ್ಯಾಸವನ್ನು ನೋಡುವದಕ್ಕೆ ಕಲಿತಿರುತ್ತಾರೆ.

(ಇಂಗ್ಲೀಷ್ ಸ್ಟ್ಯಾಂಡರ್ಡ್ ವರ್ಷನ್) ಆದರೆ ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಇದೆ, ಅವರು ಒಳ್ಳೇದು ಮತ್ತು ಕೆಟ್ಟದ್ದರ ಲಕ್ಷಣ ವಿವರಿಸುವದಕ್ಕೆ ಸತತವಾದ ಅಭ್ಯಾಸದಿಂದ ತಮ್ಮ ಗ್ರಹಣಶಕ್ತಿಯ ಬಲಗಳನ್ನು ತರಬೇತಿಗೊಳಿಸಿರುತ್ತಾರೆ.

(ಗುಡ್ ನ್ಯೂಸ್ ಬೈಬಲ್) ಗಟ್ಟಿಯಾದ ಆಹಾರವು, ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ಒಳ್ಳೇದು ಮತ್ತು ಕೆಟ್ಟದ್ದರ ನಡುವೆ ವ್ಯತ್ಯಾಸ ತಿಳಿಯುವದನ್ನು ಅಭ್ಯಾಸ ಮಾಡುವದರ ಮೂಲಕ ಶಕ್ತರಾಗಿರುವ ಪ್ರಾಯಸ್ಥರಿಗಾಗಿ ಇದೆ.

ಯಾವುದು ಸರಿ ಮತ್ತು ಯಾವುದು ತಪ್ಪು ಎನ್ನುವದರ ವ್ಯತ್ಯಾಸ ಕಾಣುವ ಸಾಮರ್ಥ್ಯವನ್ನು ನವೀಕರಣಗೊಂಡ ಮನಸ್ಸು ಹೊಂದಿರುತ್ತದೆ, ಈ ಪ್ರಕಾರ ದೇವರ ಚಿತ್ತ ಯಾವುದು ಮತ್ತು ಯಾವುದಲ್ಲ ಎನ್ನುವದನ್ನು ನಿಶ್ಚಯಿಸುವದಕ್ಕಾಗುತ್ತದೆ.

## ಗ್ರಹಿಸುವದನ್ನು ತಿಳುಕೊಳ್ಳುವದು

ನಾವು ಹಿಂದಿನ ಒಂದು ಅಧ್ಯಾಯದಲ್ಲಿ ಎಫೆಸ 5ನೆಯ ಅಧ್ಯಾಯವನ್ನು ಆಲೋಚಿಸಿದ್ದೇವೆ ಮತ್ತು ಈ ವಾಕ್ಯಭಾಗವನ್ನು ಮತ್ತೆ ಗಮನಿಸೋಣ:

ಎಫೆಸ-5:8-10,17

**8-ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ.**

**9-ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ.**

**10-ಕರ್ತನಿಗೆ ಮೆಚ್ಚಿಕೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳುಕೊಳ್ಳಿರಿ.**

**17-ಮತ್ತು ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬುದನ್ನು ವಿಚಾರಿಸಿ ತಿಳಿದವರಾಗಿರ್ರಿ.**

ಬೆಳಕಿನ ಮಕ್ಕಳಂತೆ, ನಾವು ಕರ್ತನಿಗೆ ಮೆಚ್ಚಕೆಯಾದದ್ದು ಯಾವುದು ಎನ್ನುವದನ್ನು ತಿಳುಕೊಳ್ಳುವದರಲ್ಲಿ ನಮ್ಮ ಜೀವಿತಗಳನ್ನು ಜೀವಿಸಬೇಕು (ಅಂದರೆ ಶೋಧಿಸುವದು, ಪರೀಕ್ಷಿಸುವದು, ರುಜುವಾತುಪಡಿಸುವದು, ವ್ಯತ್ಯಾಸ ತಿಳಿಯುವದು, ಅರ್ಥಮಾಡಿಕೊಳ್ಳುವದು). ತಿಳುಕೊಳ್ಳುವದು ಎನ್ನುವದರ ಪ್ರವೃತ್ತಿಯ ಅರ್ಥವೇನೆಂದರೆ ನಾವು ನಮ್ಮ ನವೀಕರಣಗೊಂಡ ಮನಸ್ಸನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ ಎಂಬುದು. ಕರ್ತನಿಗೆ ಯಾವುದು ಚೆನ್ನಾಗಿ ಮೆಚ್ಚಿಕೆಯಾದದ್ದು ಮತ್ತು ಸರಿ ಹಾಗೂ ತಪ್ಪು ಯಾವುದು ಎಂದು ಒಂದು ನವೀಕರಣಗೊಂಡ ಮನಸ್ಸಿನೊಂದಿಗೆ ನಾವು ಗುಣಲಕ್ಷಣ ವಿವರಿಸಿದಂತೆ ನಾವು ಸತ್ಯಗಳನ್ನು, ವರ್ತಮಾನಗಳನ್ನು ಪರೀಕ್ಷಿಸುತ್ತೇವೆ, ನಾವು ಸಂಶೋಧಿಸುತ್ತೇವೆ, ನಾವು ವಿಮರ್ಶಿಸುತ್ತೇವೆ, ನಾವು ಉದ್ದೇಶಿಸುತ್ತೇವೆ, ಪರಿಶೋಧಿಸುತ್ತೇವೆ, ಊರ್ಜಿತಗೊಳಿಸುತ್ತೇವೆ, ಪ್ರಶ್ನಿಸುತ್ತೇವೆ ಇತ್ಯಾದಿ.

ಮೆಚ್ಚಿಕೆಯಾದದ್ದು ಎಂಬ ಶಬ್ದವು ಗ್ರೀಕ್‌ನಲ್ಲಿ ('enarestos') ಇದರ ಅರ್ಥವೇನೆಂದರೆ, ಪೂರ್ತಿಯಗಿ ಒಪ್ಪುವದು ಮತ್ತು ಕರ್ತನಿಗೆ ಚೆನ್ನಾಗಿ ಮೆಚ್ಚಿಕೆಯಾದದ್ದು ಎಂಬುದು. ಆದದರಿಂದ ವಿಶ್ವಾಸಿಗಳಂತೆ, ಪೂರ್ತಿಯಾಗಿ

ಒಪ್ಪುವದು ಮತ್ತು ದೇವರಿಗೆ ಚೆನ್ನಾಗಿ ಮೆಚ್ಚಿಕೆಯಾದದ್ದು ಯಾವುದು ಎಂದು ದೇವರ ಚಿತ್ತವನ್ನು ಕಂಡುಹಿಡಿಯುವ ಈ ಪ್ರಯತ್ನದಲ್ಲಿ ನಾವು ಪ್ರೋತ್ಸಾಹಿಸಲ್ಪಡಬೇಕು.

ಮುಂದೆ 17ನೆಯ ವಚನವು, ನಾವು ಬುದ್ಧಿಹೀನರಾಗಿರಬಾರದು ಎಂಬುದನ್ನು ಉಪದೇಶಿಸುತ್ತದೆ. 'ಬುದ್ದಿಹೀನ' ಎಂಬುದಕ್ಕೆ ಗ್ರೀಕ್‌ನಲ್ಲಿ ('aphroon') ಈ ಶಬ್ದಕ್ಕೆ ಥೇಯರ್ಸ್ ಗ್ರೀಕ್ ಡೆಫಿನಿಶನ್ಸ್ ಈ ಮುಂದಿರುವ ಅರ್ಥಗಳನ್ನು ಕೊಡುತ್ತದೆ: ವೇಚನೆಯಿಲ್ಲದ್ದು, ವಿವೇಕಲ್ಲದ್ದು, ಮೂರ್ಖ, ದಡ್ಡ, ಪರ್ಯಾಲೋಚನೆ ಅಥವಾ ಬುದ್ಧಿವಂತಿಕೆ ಇಲ್ಲದಿರುವ, ದುಡುಕಿನ ವರ್ತನೆ. ಬುದ್ಧೀನರಾಗಿರುವದರ ಬದಲಿಗೆ, ನಾವು ದೇವರ ಚಿತ್ತವನ್ನು ತಿಳುಕೊಂಡವರಾಗಿರಬೇಕು.

ತಿಳುಕೊಳ್ಳುವದು ಎನ್ನುವದಕ್ಕೆ ಗ್ರೀಕ್‌ನಲ್ಲಿ ಒಟ್ಟಿಗೆ ಇಡುವದು, ಗ್ರಹಿಸುವದು, ಮನಸ್ಸಿನಲ್ಲಿ ಒಟ್ಟಾಗಿ ಜೋಡಿಸುವದು ಅಥವಾ ಇಡುವದು, ಒಂದು ವಿರುದ್ಧದ ಅರ್ಥದಲ್ಲಿ ಒಟ್ಟಾಗಿ ತರುವಂತದ್ದು, ಎರಡು ಜಟ್ಟಿಗಳನ್ನು ಒಟ್ಟಿಗೆ ತರುವಂತದ್ದು, ಇದು ಹೊರತೋರಿಕೆಯಲ್ಲಿ ವಿರೋಧಿಸುವ ಮನೋಭಾವನೆಗಳ ಮೂಲಕ ಆಲೋಚನೆಯನ್ನು ಸೂಚಿಸುವಂತಾದ್ದಾಗಿದೆ. ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದರಲ್ಲಿ ಮತ್ತು ದೇವರ ಚಿತ್ತವನ್ನು ತಿಳುಕೊಳ್ಳುವದರಲ್ಲಿ ನಮ್ಮ ಮನಸ್ಸಿನೊಂದಿಗೆ ನಾವು ದೂರ ಹೋಗಬಾರದು ಎಂಬುದನ್ನು ಈ ವಚನವು ನಮಗೆ ಕಲಿಸುತ್ತದೆ.

## ದೇವರ ಮಾರ್ಗಗಳು ಮತ್ತು ಆಲೋಚನೆಗಳು

ಅಗತ್ಯವಾಗಿ, ನವೀಕರಣಗೊಂಡ ಮನಸ್ಸು ದೇವರ ಮಾರ್ಗಗಳನ್ನು ಮತ್ತು ಆಲೋಚನೆಗಳನ್ನು ಯಾವುದೇ ಪರಿಸ್ಥಿತಿಗಳಲ್ಲಿ ಸಹಸಿಕೊಳ್ಳುವಂತೆ ಮಾಡುತ್ತದೆ. ನವೀಕರಣಗೊಂಡ ಮನಸ್ಸು ದೇವರ ಮಾರ್ಗಗಳ ಮತ್ತು ಆತನ ಆಲೋಚನೆಗಳ ತಿಳುವಳಿಕೆಯನ್ನು ಮತ್ತು ಜ್ಞಾನವನ್ನು ಹಾಗೂ ಅದರಿಂದ ದೊರಕುವ ಕಾರ್ಯ ವಿಧಾನದ ವರ್ತಮಾನವನ್ನು ಉಪಯೋಗಿಸುವದಕ್ಕೆ ಸಮರ್ಥವಾಗಿರುತ್ತದೆ, ಅದರಿಂದ ಆ ಪರಿಸ್ಥಿತಿಯಲ್ಲಿ ದೇವರಿಗೆ ಯಾವುದು ಮೆಚ್ಚಿಕೆಯುಳ್ಳದ್ದೆನ್ನುವದನ್ನು ನಾವು ತಿಳುಕೊಳ್ಳುತ್ತೇವೆ.

ನಾವು ಒಂದು ನವೀಕರಣಗೊಂಡ ಮನಸ್ಸಿನೊಂದಿಗೆ ಜೀವಿಸಿ ಒಂದು ನವೀಕರಣಗೊಂಡ ಮನಸ್ಸಿನೊಂದಿಗೆ ತೀರ್ಮಾನಗಳನ್ನು ಮಾಡುವಂತೆ ದೇವರು ಇಚ್ಛಿಸುತ್ತಾನೆ. ನಮ್ಮ

ನವೀಕರಣಗೊಂಡ ಮನಸ್ಸನ್ನು ಉಪಯೋಗಿಸುವದರ ಮೂಲಕ ಆತನ ಮಾರ್ಗ ದರ್ಶನವು ಆಗಾಗ್ಗೆ ನಮಗೆ ಒದಗಿಬರುತ್ತದೆ.

## ನವೀಕರಣಗೊಂಡ ಮನಸ್ಸು ಸ್ವಾಭಾವಿಕ ಮನಸ್ಸಿಗಿಂತ ಮುಂದೆ ಹೋಗುತ್ತದೆ

ನಮ್ಮ ಬುದ್ಧಿಯುಳ್ಳ ಮನಸ್ಸಿನಿಂದ ಸೃಷ್ಟಿಸಲ್ಪಟ್ಟ ನಿರ್ಬಂಧಗಳನ್ನು ಪಕ್ಕಕ್ಕಿಡುವದಕ್ಕೆ ನಮಗೆ ದೇವರ ಮಾರ್ಗದರ್ಶನದ ಅಗತ್ಯರುವ ಸಮಯಗಳು ಇವೆ ಎನ್ನುವದನ್ನು ನಾವು ತಿಳಿದಿರಬೇಕು. ನವೀಕರಣಗೊಂಡ ಮನಸ್ಸು ದೇವರ ಮಾರ್ಗಗಳಲ್ಲಿ ನಡೆಯುವದಕ್ಕೆ ಮತ್ತು ಆತನ ಆಲೋಚನೆಗಳಿಗೆ ನೇರವಾಗಿ ಆಲೊಚಿಸುವದಕ್ಕೆ ನಮ್ಮನ್ನು ಶಕ್ತರನ್ನಾಗಿಸುತ್ತದೆ. ಇದು ನಮ್ಮನ್ನು ಸ್ವಾಭಾವಿಕವಾದ ಮನಸ್ಸಿನ ಕ್ಷೇತ್ರದ ಇನ್ನೂ ಮುಂದಕ್ಕೆ ತೆಗೆದುಕೊಂಡು ಹೋಗುತ್ತದೆ. ಅದ್ಭುತಗಳನ್ನು ಮತ್ತು ದೈವಿಕ ಸಾಧ್ಯತೆಗಳನ್ನು ಯೋಚಿಸುವದಕ್ಕೆ ನವೀಕರಣಗೊಂಡ ಮನಸ್ಸು ಶಕ್ತವಾಗಿರುತ್ತದೆ. ಇದು ಕೇವಲ ಸಂಭವಿಸಲಿಕ್ಕಿರುವ ಯಾವುದೋ ಒಂದನ್ನು ಯೋಚಿಸುವದಲ್ಲ, ಆದರೆ ದೇವರ ವಾಕ್ಯಕ್ಕೆ ಸಾಲಾಗಿರುವದಕ್ಕೆ ಮತ್ತು ದೇವರು ಯಾರೆನ್ನುವದಕ್ಕೆ ಸಾಲಾಗಿರುವದು ಹಾಗೂ ಯಾವುದೇ ಕೊಡಲ್ಪಟ್ಟ ಕ್ಷಣದಲ್ಲಿ ಆತನು ಏನು ಅಪೇಕ್ಷಿಸುತ್ತಾನೆ ಎಂದು ಯೋಚಿಸುವಂತದ್ದಾಗಿದೆ. ದೇವರು ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಐದು ಸಾರ ಜನರಿಗೆ ಉಣಬಡಿಸಿದನು ಎನ್ನುವದನ್ನು ನೋಡುವದಕ್ಕೆ ನವೀಕರಣಗೊಂಡ ಮನಸ್ಸು ಶಕ್ತವಾಗಿರುತ್ತದೆ. ದೇವರು ನಮ್ಮ ಮಧ್ಯದಲ್ಲಿ ಚಲಿಸುವಾಗ ನೀರು ದ್ರಾಕ್ಷಾರಸವಾಗುತ್ತದೆ, ಜನರು ನೀರಿನ ಮೇಲೆ ನಡೆಯುತ್ತಾರೆ, ಮತ್ತು ಇತರ ಎಲ್ಲಾ ರೀತಿಯ ಅದ್ಭುತಗಳು ನಡೆಯುತ್ತವೆ ಎನ್ನುವದನ್ನು ನವೀಕರಣಗೊಂಡ ಮನಸ್ಸು ನೋಡುವದಕ್ಕೆ ಶಕ್ತವಾಗಿರುತ್ತದೆ. ಇದು ತರ್ಕವಿರುದ್ಧವಾಗಿ ಮತ್ತು ಸ್ವಾಭಾಕವಾದ ತರ್ಕದ ಮನಸ್ಸಿಗೆ ಅಸಂಬದ್ಧವಾಗಿ ಕಂಡುಬರುವ ವೇಳೆಯಲ್ಲಿ, ಕೇವಲ ಸ್ವಾಭಾವಿಕವಾಗಿರುವದಕ್ಕೆ ನವೀಕರಣಗೊಂಡ ಮನಸ್ಸು ಅಲೌಕಿಕವಾಗಿ ಆಲೋಚಿಸುತ್ತದೆ.

## ಪರ್ಯಾಲೋಚನೆ

1) ರೋಮಾ–12:2ರಲ್ಲಿ ವಾಕ್ಯವು ಮಾತಾಡುವಂತ ನವೀಕರಣಗೊಂಡ ಮನಸ್ಸು ಎಂಬ ಶಬ್ದವನ್ನು ನೀವು ಯಾವ ರೀತಿ ಅರ್ಥಮಾಡಿಕೊಂಡಿದ್ದೀರಿ?

2) ನಮ್ಮ ಮನಸ್ಸನ್ನು ನವೀಕರಿಸಿಕೊಳ್ಳುವದರ ಕುರಿತು ನಾವು ಹೇಗೆ ಮುಂದೆ ಸಾಗಬೇಕು?

3) ಜೀವನದ ಪರಿಸ್ಥಿತಿಗಳಲ್ಲಿ ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದರಲ್ಲಿ ನವೀಕರಣಗೊಂಡ ಮನಸ್ಸು ನಮಗೆ ಹೇಗೆ ಸಹಾಯಕವಾಗುತ್ತದೆ?

# 12

# ಸಮಯಗಳು ಮತ್ತು ಕಾಲಗಳು

ಪ್ರಸಂಗಿ-3: 1, 11

**1-ಪ್ರತಿಯೊಂದು ಕಾರ್ಯಕ್ಕೂ ಕಾಲವು ಕ್ಲುಪ್ತವಾಗಿದೆ; ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು.**

**11-ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ; ಇದಲ್ಲದೆ ಮನುಷ್ಯರ ಹೃದಯದಲ್ಲಿ ಅನಂತ ಕಾಲದ ಯೋಚನೆಯನ್ನು ಇಟ್ಟಿದ್ದಾನೆ; ಆದರೂ ದೇವರು ಆದ್ಯಂತವಾಗಿ ನಡಿಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ.**

ದಾನಿಯೇಲ-2:21

**ಕಾಲ ಸಮಯಗಳನ್ನು ಮಾರ್ಪಡಿಸುತ್ತಾನೆ, ರಾಜರನ್ನು ತಳ್ಳುತ್ತಾನೆ, ನಿಲ್ಲಿಸುತ್ತಾನೆ; ಜ್ಞಾನಿಗಳ ಜ್ಞಾನವು, ವಿವೇಕಿಗಳ ವಿವೇಕವು ಆತನ ವರವೇ.**

ನಮ್ಮ ದೇವರು ಯೋಜನೆಯ, ಕ್ರಮದ ಮತ್ತು ಸಂಕಲ್ಪಿಸುವ ದೇವರಾಗಿದ್ದಾನೆ. ದೇವರು ಇಚ್ಛಾನುಸಾರವಾಗಿ ಅಥವಾ ಗೊತ್ತು ಗುರಿಯಿಲ್ಲದೆ ಕೆಲಸವನ್ನು ಮಾಡುವದಿಲ್ಲ. ದೇವರು ಒಂದು ಯೋಜನೆಯೊಂದಿಗೆ ಕೆಲಸ ಮಾಡುತ್ತಾನೆ. ದೇವರು ತನ್ನ ಯೋಜನೆಗಳನ್ನು ಅವುಗಳ ನೇಮಿತ ಕಾಲದಲ್ಲಿ ಪ್ರಕಟಿಸುತ್ತಾನೆ. ಸಮಯವು ನಾವು ಕೆಲಸ ಮಾಡುವದರೊಂದಿಗೆ ಒಂದು ಚೌಕಟ್ಟಿನ ಅನ್ವಯವಾಗಿದೆ. ನಮಗಾಗಿ ನಾವು ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳನ್ನು ಹೊಂದಿದ್ದೇವೆ. ದೇವರು ಕಾಲದ ಹೊರಗೆ ಜೀವಿಸುತ್ತಾನೆ. ದೇವರು ಈಗ ನಿತ್ಯತ್ವದಲ್ಲಿ ಜೀವಿಸುತ್ತಿದ್ದಾನೆ. ಆತನು ಮಹತ್ವವುಳ್ಳ ನಾನು ಆಗಿದ್ದಾನೆ. ಆತನು ಯಾವಾಗಲೂ ವರ್ತಮಾನದಲ್ಲಿ ಇರುವವನಾಗಿದ್ದಾನೆ. ದೇವರು ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವಾಗ, 'ಕೈರೋಸ್' ಕಾಲದಲ್ಲಿ ಅಂದರೆ ಸರಿಯಾದ ಸಮಯದಲ್ಲಿ, ಯಾವುದಾದರು ಒಂದು ಕೆಲಸ ಆಗಬೇಕೆಂದು ದೇವರು ಅಪೇಕ್ಷಿಸುವ ಸಮಯದ ಉತ್ತಮವಾದ ಕ್ಷಣಕ್ಕೆ ಅನುಸಾರವಾಗಿ (ಅನ್ವಯದ ನಮ್ಮ ಚೌಕಟ್ಟಿನಲ್ಲಿ) ಆತನು ಸಂಗತಿಗಳನ್ನು ಪ್ರಕಟಿಸುತ್ತಾನೆ.

ದೇವರು ಸಮಯಕ್ಕಿಂತ ಮೊದಲೇ ನಮ್ಮ ಜೀವಿತಗಳಲ್ಲಿ ಸಂಗತಿಗಳ ಕುರಿತು ಆಗಾಗ್ಗೆ ನಮಗೆ ಮಾತಾಡುತ್ತಾನೆ. ನಂತರ ಆತನು ಯಾವುದರ ಕುರಿತು ನಮಗೆ ಮಾತಾಡಬೇಕೆಂದು ಪ್ರಕಟಿಸುವದಕ್ಕೆ ಪ್ರಾರಂಭಿಸುತ್ತಾನೋ ಆ 'ಕೈರೋಸ್' ಕ್ಷಣಕ್ಕೆ ನಮ್ಮನ್ನು ತರುವದಕ್ಕೆ ಸಮಯದ ಮೇಲೆ ನಮ್ಮನ್ನು ಸಿದ್ಧಪಡಿಸುತ್ತಾನೆ ('ಕ್ರೋನೋಸ್', ಸಮಯದ ಮಾರ್ಗ, ಸಮಯದ ಅವಧಿ ಅಥವಾ ಉದ್ದ). ಉದಾ: ಸರ್ಪದ ತಲೆಯನ್ನು ಜಜ್ಜುವಂತಹ ಒಂದು ಸ್ತ್ರೀಯ ಸಂತಾನವನ್ನು ಕಳುಹಿಸುವದರ ಕುರಿತು ಆದಿ-3:15ರಲ್ಲಿ ಏದೇನ್ ತೋಟದಲ್ಲಿ ದೇವರು ಮಾತಾಡಿದ್ದಾನೆ. ಇದಾದ ಸುಮಾರು 4000 ವರ್ಷಗಳ ನಂತರ ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದನು. ಹಾಗಾದರೆ ಯಾಕೆ ಇಷ್ಟೊಂದು ದೀರ್ಘವಾದ ಕಾಯುವಿಕೆ? ಇದಕ್ಕೆ ಒಂದೇ ಕಾರಣವನ್ನು ವಾಕ್ಯಗಳು ನಮಗೆ ತಿಳಿಸುವದೇನೆಂದರೆ, ಕಾಲವು ಪರಿಪೂರ್ಣವಾದಾಗ(ಗ್ರೀಕ್ ನಲ್ಲಿ 'ಕ್ರೋನೋಸ್') ದೇವರು ತನ್ನ ಮಗನನ್ನು ಕಳಿಸಿದನು (ಗಲಾತ್ಯ-4:4). ಕಾಲಾನುಸಾರವಾದ ಸಮಯದ ಪೂರ್ಣ ಅಳತೆಯು ವ್ಯರ್ಥಗೊಳಿಸಲ್ಪಟ್ಟು ನಮ್ಮನ್ನು 'ಕೈರೋಸ್' ಕ್ಷಣಕ್ಕೆ ತಂದಾಗ ದೇವರು ತನ್ನ ಮಗನನ್ನು ಕಳಿಸಿದನು.

ಇತರ ಉದಾಹರಣೆಗಳಲ್ಲಿಯೂ ದೇವರು ಇದೇ ರೀತಿಯಲ್ಲಿಯೇ ಕೆಲಸ ಮಾಡುವದನ್ನು ನಾವು ನೋಡುತ್ತೇವೆ. 'ಕ್ರೋನೋಸ್' ಅದರ ಪೂರ್ಣ ಅವಧಿಯಲ್ಲಿ ವ್ಯಾಪಿಸುವಾಗ, ಆದರಿಂದ 400 ವರ್ಷ ಸಮಯದ ಅವಧಿಯು('ಕ್ರೋನೋಸ್') ಅದು ದೇವರು ಮಾತಾಡಿದ್ದು ಪೂರ್ಣವಾಯಿತು (ಅಪೊ.ಕೃತ್ಯ-7:17) ಈ ಸಮಯದಲ್ಲಿ ('ಕೈರೋಸ್', ಅಪೊ.ಕೃತ್ಯ-7:20) ಮೋಶೆ ಜನಿಸಿದನು.

ನಮ್ಮ ಸಮಯವು (ಹೀಬ್ರೂ, 'ayth') ಯಾವಾಗ ಮತ್ತು ವರ್ತಮಾನ ಕ್ಷಣಗಳು ಎನ್ನುವದಕ್ಕೆ ಅನ್ವಯವಾಗುತ್ತದೆ, ಮತ್ತು ಇವು ಆತನ ಹಸ್ತಗಳಲ್ಲಿವೆ (ಕೀರ್ತನೆ-31:15). ದೇವರು ನಮಗೆ ಏನು ಮಾಡಬೇಕೆಂದು ಇಷ್ಟಪಟ್ಟಿದ್ದಾನೋ ಅದನ್ನು ತಿಳಿಯುವದಕ್ಕೆ ದೇವರ ಮಾರ್ಗಗಳ ಈ ಅಂಶವನ್ನು ತಿಳುಕೊಳ್ಳುವದು ಪ್ರಾಮುಖ್ಯವಾದುದಾಗಿದೆ. ಆತನ ಮಾರ್ಗದರ್ಶನವನ್ನು ಸರಿಯಾಗಿ ಹೊಂದಿ -ಕೊಳ್ಳುವದಕ್ಕೆ ಇದು ನಮಗೆ ಸಹಾಯ ಮಾಡುತ್ತದೆ.

ನಾವು ಗ್ರಹಿಸಿಕೊಳ್ಳುವ ಜನರಾಗಿರಬೇಕೆಂದು ದೇವರು ಇಚ್ಛೆಸುತ್ತಾನೆ - ಅಂದರೆ ಆತನ ದೃಷ್ಟಿಯಿಂದ ಸಮಯಗಳನ್ನು ಮತ್ತು ಕಾಲಗಳನ್ನು ತಿಳುಕೊಂಡು ನಂತರ ಆದರ ಪ್ರಕಾರ ಕ್ರಿಯೆ ಮಾಡುವ ಜನರಾಗಿರಬೇಕು. ಈ ವಾಕ್ಯಗಳನ್ನು ಆಲೋಚಿಸಿರಿ:

1ಪೂರ್ವ.ಕಾ.ವೃತ್ತಾಂತ-12:32

**ಇಸ್ಸಾಕಾರ್ಯರಿಂದ ಇನ್ನೂರು ಮಂದಿ ಮುಖ್ಯಸ್ಥರು; ಇವರು ಸಮಯೋಚಿತ ಜ್ಞಾನವುಳ್ಳವರಾಗಿ ಇಸ್ರಾಯೇಲ್ಯರು ಮಾಡತಕ್ಕದ್ದನ್ನು ಅರಿತವರು; ಇವರ ಸಹೋದರರೆಲ್ಲರೂ ಇವರ ಆಜ್ಞೆಗೆ ಒಳಗಾಗಿದ್ದರು.**

ಇಸ್ಸಾಕಾರನ ಗಂಡುಮಕ್ಕಳ ಹಾಗೆ, ನಾವು ಕಾಲ ಮತ್ತು ಸಮಯಗಳನ್ನು ಗ್ರಹಿಸಿಕೊಂಡಾಗ, ನಾವು ಏನು ಮಾಡಬೇಕೆಂಬುದನ್ನು ಬಹುಮಟ್ಟಿಗೆ ತಿಳುಕೊಳ್ಳುತ್ತೇವೆ. ಆದಾಗ್ಯೂ, ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದರಲ್ಲಿ, ದೇವರು ನಮಗೆ ನೇಮಕ ಮಾಡಿರುವ ಕಾಲಗಳಿಗೆ ಮತ್ತು ಸಮಯಗಳಿಗೆ ನಾವು ಗಮನ ಕೊಡಲೇಬೇಕು.

ಪ್ರಸಂಗಿ-8:5-6

**5-ಆಜ್ಞೆಯನ್ನು ಕೈಕೊಳ್ಳುವವನು ಕೇಡನ್ನು ಅನುಭವಿಸನು; ಕಾಲವೂ ನ್ಯಾಯತೀರ್ಪೂ ಉಂಟೆಂಬುದು ಜ್ಞಾನಿಯ ಬುದ್ದಿಗೆ ಗೊತ್ತು.**

**6-ಪ್ರತಿಯೊಂದು ಕಾರ್ಯಕ್ಕೆ ಕಾಲವೂ ನ್ಯಾಯತೀರ್ಪೂ ಇರುವವಲ್ಲವೆ; ಮನುಷ್ಯನು ಪಡುವ ಕಷ್ಟವು ಅವನಿಗೆ ಘೋರವಾಗಿದೆ.**

ಈ ವಾಕ್ಯಗಳು ಹೇಳುವದರ ಕುರಿತು ಆಲೋಚಿಸಿರಿ: ಬುದ್ದಿವಂತ ಜನರು ಸಂಗತಿಗಳನ್ನು ಮಾಡುವದಕ್ಕೆ ಸರಿಯಾದ ಸಮಯವನ್ನು ತಿಳಿದಿದ್ದಾರೆ, ಯಾಕೆಂದರೆ ಪ್ರತಿಯೊಂದಕ್ಕೂ ಒಂದು ಸರಿಯಾದ ಸಮಯವಿದೆ ಮತ್ತು ಇದಕ್ಕಾಗಿ ಸರಿಯಾದ ದಾರಿಯಿದೆ.

ಒಂದು ವೇಳೆ ನಾವು ಸರಿಯಾದ ಸಂಗತಿಗಳನ್ನು ಮಾಡಿದಾಗ್ಯೂ ಅದನ್ನು ತಪ್ಪಾದ ಸಮಯದಲ್ಲಿ ಮಾಡಿದರೆ, ನಾವು ತೊಂದರೆಯಲ್ಲಿ ಸಿಕ್ಕಿಕೊಳ್ಳಬಹುದು. ಉದಾ: ವಿವಾಹದ ಕುರಿತು ಆಲೋಚಿಸಿರಿ. ಮದುವೆಯು ಒಂದು ಒಳ್ಳೆಯ ವಿಷಯ, ಇದು ದೇವರಿಂದ ಯೋಜಿಸಲ್ಪಟ್ಟು ಗೊತ್ತುಮಾಡಲ್ಪಟ್ಟಿದೆ. ಆದರೆ ಒಂದುವೇಳೆ ಒಬ್ಬ ಯೌವನಸ್ಥ ವ್ಯಕ್ತಿಯು ಕಿಂಚಿತ್ತಾಗಿ ಶಾಲೆ/ಕಾಲೇಜಿನಿಂದ ಹೊರಗೆ ಬಂದು ಕೆಲಸಲ್ಲದೆ, ಪ್ರಬುದ್ಧತೆಯಿಲ್ಲದೆ ಜೀವನೋಪಾಯದ ಸಾಧನಗಳಿಲ್ಲದೆ, ಪ್ರೀತಿಯಲ್ಲಿ ಬಿದ್ದು ಮದುವೆಯಾಗುವದಕ್ಕೆ ತೀರ್ಮಾನಿಸಿದರೆ ಇದು ಬಹಳಷ್ಟು ತೊಂದರೆಗಳಿಗೆ ಕಾರಣವಾಗುತ್ತದೆ. ಒಂದು ಒಳ್ಳೆಯ ವಿಷಯವನ್ನು ತಪ್ಪಾದ ಸಮಯದಲ್ಲಿ ಮಾಡಿದಾಗಲೂ ಸಹ ಸಮಸ್ಯೆಗಳಿಗೆ ಕಾರಣವಾಗುತ್ತದೆ.

ನಾವು ಜೀವಿತದ ಮೂಲಕ ಪ್ರಯಾಣಿಸಿದ ಹಾಗೆ ದೇವರ ಮಾರ್ಗದರ್ಶನವನ್ನು ಹುಡುಕಬೇಕು, ನಮ್ಮ ಜೀವಿತಗಳಿಗಾಗಿ ದೇವರ ಸಮಯಗಳ ಮತ್ತು ಕಾಲಗಳ ಒಂದು

ತಿಳುವಳಿಕೆಯೊಂದಿಗೆ ನಾವು ನಡೆಯಬೇಕೆಂದು ದೇವರು ಇಚ್ಛಿಸುತ್ತಾನೆ ಎನ್ನುವದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಹಾಗಾಗಿ ನಾವು ದೇವರ ಕಡೆಗೆ ನೋಡಬೇಕು, ನಾವು ಏನು ಮಾಡಬೇಕೆಂದು ಆತನು ಇಷ್ಟಪಡುವಂತದ್ದಕ್ಕೆ ಮಾತ್ರವಲ್ಲ, ಆದರೆ ಆತನು ನಮಗೆ ಏನನ್ನಾದರೂ ಮಾಡುವದಕ್ಕೆ ಇಷ್ಟಪಟ್ಟಾಗಲು ಸಹ ನಾವು ದೇವರ ಕಡೆಗೆ ನೋಡಬೇಕು. ನಮ್ಮನ್ನು ನಾವು ಸಿದ್ಧಪಡಿಸಿಕೊಂಡು ಸರಿಯಾದ (ಕಾಲೋಚಿತ) ಸಮಯದೊಳಗೆ ಹೆಜ್ಜೆ ಇಡುವದಕ್ಕೆ ಅದಕ್ಕಾಗಿ ಕಾಯೋಣ.

ದೇವರು ಸರಿಯಾದ ಸಮಯವನ್ನು ಅನೇಕ ಮಾರ್ಗಗಳ ಮೂಲಕವಾಗಿ ನಮಗೆ ಪ್ರಕಟಪಡಿಸುತ್ತಾನೆ. ನಾವು ಚರ್ಚೆಮಾಡಿರುವ ಮೊದಲಿನ ಧ್ಯಾನಗಳ ಮೂಲಕ ನಮಗೆ ಇದು ಬರುತ್ತದೆ, ಉದಾ: ವಾಕ್ಯ, ಅಂತರಂಗದ ಸಾಕ್ಷಿ, ಅಥವಾ ಪವಿತ್ರಾತ್ಮನ ಅಂತರಂಗದ ಸ್ವರ ಇತ್ಯಾದಿ. ನಾವು ಸನ್ನಿವೇಶಗಳನ್ನು ಗುರುತಿಸುವ ಸಮಯಗಳಿದ್ದವು ಸಮಯಗಳ ಸೂಚನೆಗಳು – ಮತ್ತು ನಂತರ ಸರಿಯಾದ ಸಮಯ ಬಂದಿತು ಎಂದು ತಿಳುಕೊಳ್ಳುವದು.

## ಈಗ ಒಂದು ಪ್ರಾಯೋಗಿಕವಾದ ಉದಾಹರಣೆಯನ್ನು ಆಲೋಚಿಸೋಣ:

ನೀವು ಒಬ್ಬ ಕಾಲೇಜು ವಿದ್ಯಾರ್ಥಿ ಎಂದುಕೊಳ್ಳೋಣ ಮತ್ತು ಒಂದು ನಿರ್ಧಿಷ್ಟವಾದ ಕಂಪನಿಯಲ್ಲಿ ವ್ಯವಹಾರವನ್ನು ಪ್ರಾರಂಭಿಸುವದಕ್ಕೆ ನಿಮ್ಮ ಹೃದಯದಲ್ಲಿ ಒಂದು ಹುರಿದುಂಬಿಸುಕೆ ಇರುತ್ತದೆ. ನೀವು ಇದರ ಕುರಿತು ಪ್ರಾರ್ಥಿಸುತ್ತಾ ದೇವರ ಮಾರ್ಗದರ್ಶನಕ್ಕಾಗಿ ಕೇಳುತ್ತಿರುವಂತೆಯೇ, ಆತನು ಏನು ಮಾತಾಡುತ್ತಾನೆಂದು ನಾವು ಈವರೆಗೆ ಅಧ್ಯಯನ ಮಾಡಿರುವ ಎಲ್ಲಾ ದಾರಿ(ವಿಧಾನ)ಗಳಿಗಾಗಿ ಎದುರು ನೋಡುತ್ತೀರಿ. ನೀವು ತರಬೇತಿ ಪಡೆದು ಇದಕ್ಕಾಗಿ ಸಜ್ಜುಗೊಳ್ಳುವಂತೆ ದೇವರು ನಿಮ್ಮ ಹೃದಯದಲ್ಲಿ ಇಡುತ್ತಾನೆ. ಆದದರಿಂದ ನೀವು ಅಗತ್ಯವಾದ ಅಧ್ಯಯನಗಳನ್ನು ಮಾಡುತ್ತೀರಿ. ವ್ಯವಹಾರವನ್ನು ಪ್ರಾರಂಭಿಸುವದಕ್ಕೆ ನೀವು ದಹಿಸುವ ಭಾವೋದ್ರೇಕವನ್ನು ಅನುಭವಪಡುವ ವೇಳೆಯಲ್ಲಿ, ಸಮಯವು ಇನ್ನೂ ಬಂದಿಲ್ಲ ಎಂಬ ಭಾವನೆ ನಿಮಗೆ ಬರುತ್ತದೆ ಮತ್ತು ನೀವು ಒಂದು ಸಂಘ ಸಂಸ್ಥೆಯಲ್ಲಿ ಕೆಲಸ ಮಾಡುವಂತೆ ದೇವರು ಆದೇಶಿಸುತ್ತಿದ್ದಾನೆಂದು ತಿಳಿದು ಹೆಚ್ಚಾದ ಕೌಶಲ್ಯತೆಗಳನ್ನು, ನೆಟ್ ವರ್ಕ್ಸ್‌ಗಳನ್ನು ಕಟ್ಟುವದು ಇತ್ಯಾದಿಯನ್ನು ವೃದ್ಧಿಸಿಕೊಳ್ಳುತ್ತೀರಿ. ಹಾಗಾಗಿ ಎಲ್ಲದರ ಜೊತೆಗೆ ದೇವರು ನಿಮ್ಮ 'ಕ್ರೋನೋಸ್' ಮೂಲಕ ಕರೆದುಕೊಂಡು ಹೋಗು

ತ್ತಾನೆ, ಇದು ನಿಮ್ಮ ಸಮಯದ ಸಿದ್ಧತೆಯ ಹಾಗೆ ಕೆಲಸ ಮಾಡುತ್ತದೆ ಮತ್ತು ಆತನು ನಿಮ್ಮನ್ನು 'ಕೈರೋಸ್'ಗೆ ತರುತ್ತಾನೆ, ಇದು ನಿಮ್ಮ ವ್ಯವಹಾರದ ಯೋಜನೆಯನ್ನು ಪ್ರಾರಂಭಿಸುವದಕ್ಕೆ ಸರಿಯಾದ ಸಮಯವಾಗಿರುತ್ತದೆ. ಆದ್ದರಿಂದ ನಿಮ್ಮ ವ್ಯವಹಾರದ ಯೋಜನೆಗೆ ಕಾವು ಕೊಟ್ಟಂತಹ ಈ ವರ್ಷಗಳ ನಂತರ, ಸಮಯವು ಸರಿಯಾಗಿದೆ ಎಂಬ ಅನುಭವಪಡುತ್ತೀರಿ. ನೀವು ಸಿದ್ಧರಾಗಿ ವ್ಯವಹಾರವನ್ನು ಪ್ರಾರಂಭಿಸುವದಕ್ಕೆ ಬೌದ್ಧಿಕವಾಗಿ, ಭಾವನಾತ್ಮಕವಾಗಿ, ಆರ್ಥಿಕವಾಗಿ ಮತ್ತು ಔದ್ಯೋಗಿಕವಾಗಿ ಸಜ್ಜುಗೊಂಡಿರುತ್ತೀರಿ. 'ಕೈರೋಸ್' ಕ್ಷಣದಲ್ಲಿಯೂ ಸಹ ದೇವರು ಸಂಗತಿಗಳನ್ನು ಸರಿಯಾಗಿ ಸಂಘಟಿಸುತ್ತಾನೆ (ಇದರ ಕುರಿತು ಮುಂದಿನ ಅಧ್ಯಾಯದಲ್ಲಿ ಹೆಚ್ಚಾಗಿ ತಿಳಿಯೋಣ). ನಿಮ್ಮೊಂದಿಗೆ ಪಾಲುದಾರರಾಗುವದಕ್ಕೆ ಸಿದ್ಧರಿರುವ ಜನರನ್ನು ಆತನು ಕರೆತರುತ್ತಾನೆ. ನಿಮ್ಮ ವ್ಯವಹಾರದ ಯೋಜನೆಗೆ ಹಣ ತೊಡಗಿಸುವದಕ್ಕೆ ಸಿದ್ದರಿರುವ ಜನರನ್ನು ಸಹ ಕರೆತರುತ್ತಾನೆ. ಈ ಎಲ್ಲಾ ಸಂಗತಿಗಳು ಇದ್ದಕ್ಕಿದ್ದಂತೆಯೇ 'ಕೈರೋಸ್' ಕ್ಷಣದಲ್ಲಿ ಒಟ್ಟಿಗೆ ಬರುತ್ತವೆ. ಆದ್ದರಿಂದ ಅನೇಕ ವರ್ಷಗಳವರೆಗೆ ನಿಮ್ಮೊಳಗೆ ಹೊತ್ತುಕೊಂಡಿದ್ದ ವ್ಯವಹಾರವನ್ನು ಪ್ರಾರಂಭಿಸುವದಕ್ಕೆ ದೇವರು ಮಾರ್ಗದರ್ಶನ ಮಾಡುತ್ತಿದ್ದಾನೆ ಎಂಬುದನ್ನು ಈಗ ನೀವು ತಿಳಿಯುತ್ತೀರಿ. ನಿಮ್ಮ ಜೀವಿತಕ್ಕಾಗಿ ದೇವರ ಸಮಯಗಳನ್ನು ಮತ್ತು ಕಾಲಗಳನ್ನು ತಿಳುಕೊಳ್ಳುವಂತದ್ದು, ಆತನ ಮಾರ್ಗದರ್ಶನ ಮತ್ತು ನಿರ್ದೇಶನವನ್ನು ಗ್ರಹಿಸಿ ಹೊಂದಿಕೊಳ್ಳುವದಕ್ಕೆ ಸಹಾಯವಾಗುತ್ತದೆ. ದಯಟ್ಟು ಗಮನಿಸಿ: ಒಂದು ವ್ಯವಹಾರವನ್ನು ಪ್ರಾರಂಭಿಸುವದಕ್ಕೆ ದೇವರು ಯಾರನ್ನಾದರೂ ಮುನ್ನಡೆಸುವದಕ್ಕೆ ಒಂದೇ ಮಾರ್ಗವಲ್ಲ, ಅನೇಕ ಮಾರ್ಗಗಳಲ್ಲಿ ಒಂದನ್ನು ಉದಾಹರಿಸುವದಕ್ಕೆ ಕೇವಲ ಇದು ಉದಾಹರಣೆಯಷ್ಟೆ.

## ಡಿಸೆಂಬರ್ 2000: ಭಾರತಕ್ಕೆ ಹಿಂದಿರುಗಿದ್ದು.

ಬೆಂಗಳೂರಿನಲ್ಲಿ ಒಂದು ಬಲವಾದ ಸ್ಥಳೀಯ ಸಭೆಯನ್ನು ನಾನು ಸ್ಥಾಪಿಸುವದಕ್ಕೆ ಮತ್ತು ಅಲ್ಲಿಂದ ದೇಶದಲ್ಲಿ ಸೇವೆ ಮಾಡಬೇಕೆಂದು ದೇವರು ಇಚ್ಛಿಸಿದ್ದಾನೆ ಎಂಬುದಾಗಿ ನಾನು ನನ್ನ ಯೌವನದ ಪ್ರಾರಂಭದ ವರ್ಷಗಳಿಂದ ತಿಳಿದುಕೊಂಡದ್ದನ್ನು ಈ ಮೊದಲು ನಾನು ಹಂಚಿಕೊಂಡಿದ್ದೇನೆ. ಆ ಪ್ರಾರಂಭದ ವರ್ಷಗಳಿಂದ ನಾನು ಇದನ್ನು ನನ್ನ ಹೃದಯದಲ್ಲಿ ಹೊತ್ತುಕೊಂಡಿದ್ದೆ, ಮತ್ತು ಇದರೊಳಗೆ ಹೆಜ್ಜೆಯಿಡುವದಕ್ಕೆ ಸರಿಯಾದ ಆತನ ಸಮಯ ಯಾವಾಗ ಎಂದು ಸತತವಾಗಿ ದೇವರನ್ನು ಕೇಳುತ್ತಾ ಪ್ರಾರ್ಥಿಸುತ್ತಿದ್ದೆ. ನಾನು ಹೋಗುತ್ತಿದ್ದ ಪ್ರತಿಯೊಂದರ ಮೂಲಕವೂ ಜೀವನದ ಈ ಪ್ರಾಮುಖ್ಯವಾದ ಹಂಚಿಕೆಯ ಕಡೆಗೆ ಒಂದು ಸಿದ್ದತೆಯನ್ನು ನಾನು

ನೋಡುತ್ತಿದ್ದೆ. 1998ರ ಕೊನೆಯಲ್ಲಿ, ಭಾರತಕ್ಕೆ ಹಿಂದಿರುಗಿ ಹೋಗುವದಕ್ಕೆ ಸಿದ್ಧರಾಗುವದಕ್ಕೆ ಇದು ಸರಿಯಾದ ಸಮಯ ಎನ್ನುವ ದೇವರ ಮುನ್ನಡೆಸುಕೆಯನ್ನು ನಾವು ಹೊಂದಿಕೊಂಡೆವು. ಆದ್ದರಿಂದ ನಾವು ನಮ್ಮನ್ನು ಸಿದ್ಧಪಡಿಸಿಕೊಂಡು ಡಿಸೆಂಬರ್ 2000 ದಲ್ಲಿ ಭಾರತಕ್ಕೆ ಹಿಂದಿರುಗಿದೆವು. ಇದು ದೇವರ ಸಮಯ ಎಂಬುದು ನಮಗೆ ಭರವಸೆಯಿತ್ತು. ನಾವು ಈ ಪ್ರಯಾಣವನ್ನು ಮಾಡುವದಕ್ಕೆ ಮತ್ತು ಈ ಹಂಚಿಕೆಯಲ್ಲಿ ಹೆಜ್ಜೆಯಿಡುವದಕ್ಕೆ ನಮಗೆ ಇದು ಸರಿಯಾದ ಸಮಯವಾಗಿತ್ತು.

## ಡಿಸೆಂಬರ್ 2000: ಒಂದು ಕಂಪನಿಯನ್ನು ಆರಂಭಿಸುವ ಅಪೇಕ್ಷೆಯ ನೆರವೇರಿಕೆ.

ನಾವು ಡಿಸೆಂಬರ್ 2000 ದಲ್ಲಿ ಪ್ರಯಾಣ ಮಾಡಿದಂತೆಯೇ ಇನ್ನೊಂದು ಆಶ್ಚರ್ಯಕರವಾದ ಸಂಗತಿಯೊಂದು ಸಂಭಸಿತು. ಚಿಕಾಗೋದಲ್ಲಿ ನಾನು ಕೆಲಸಮಾಡುತ್ತಿದ್ದ ಕಂಪನಿಯು, ಅವರಿಗಾಗಿ ನಾನು ಭಾರತದಲ್ಲಿ ಕೆಲಸ ಮಾಡುವಂತೆ ಕೇಳಿತು. ನಾನು ಬೆಂಗಳೂರಿಗೆ ಹಿಂದಿರುಗಿದ ನಂತರ ನನ್ನ ತೀರ್ಮಾನದ ಕುರಿತು ನಿಮಗೆ ತಿಳಿಸುತ್ತೇನೆ ಎಂದು ನಾನು ಅವರಿಗೆ ಹೇಳಿದೆ. ನಾನು ಅವರಿಗಾಗಿ ಕೆಲಸ ಮಾಡುತ್ತೇನೆಂದು ಜನವರಿ 2001ರಲ್ಲಿ ಅವರಿಗೆ ದೃಢಪಡಿಸಿದೆ, ಮತ್ತು ಈ ಸದವಕಾಶದ ಸುತ್ತಲೂ, ಒಂದು ತಾಂತ್ರಿಕ ವ್ಯವಹಾರವನ್ನು ಸಿದ್ಧಪಡಿಸುವದಕ್ಕೆ ನಾನು ಶಕ್ತನಾಗಿದ್ದೆ ಮತ್ತು ಆ ದಿಕ್ಕಿನಿಂದ ಬೆಳೆದು ಬಂದೆ. ದೇವರು ತುಂಬಾ ಕೃಪಾಳುವಾಗಿದ್ದ ಯಾಕಂದರೆ ನಾನು ಎಲ್ಲಿ ಸತ್ಯವೇದದ ತತ್ವಗಳನ್ನು ಅಭ್ಯಾಸಮಾಡುವದಕ್ಕೆ ಇಡುವದಕ್ಕಿದ್ದೆನೋ ಅಲ್ಲಿ ನನ್ನ ಸ್ವಂತ ತಾಂತ್ರಿಕ ಕಂಪನಿಯನ್ನು ಹೊಂದಬೇಕೆಂಬ ನನ್ನ ಆಶೆಯನ್ನು ಅನೇಕ ವರ್ಷಗಳವರೆಗೆ ಹೊತ್ತುಕೊಂಡಿದ್ದೆ. ನಾನು ಇದರ ಕುರಿತು ಆಲೋಚಿಸುತ್ತಿದ್ದೆ ಮತ್ತು ಬಹಳವಾಗಿ ಕನಸು ಕಂಡಿದ್ದೆ. ಇಲ್ಲಿ ಜನವರಿ 2001ರಂದು ಈ ಆಶೆಯು ನೆರವೇರಿತು. ಇದೆಲ್ಲವೂ ದೇವರ ನೇಮಕದ ಸರಿಯಾದ ಸಮಯದಲ್ಲಿ ಒಟ್ಟಿಗೆ ನೆರವೇರಿದವು.

## ಯೇಸು ತಂದೆಯೊಂದಿಗೆ ತಕ್ಕ ಸಮಯದಲ್ಲಿ ಮುಂದೆ ಸಾಗಿದನು

ಸಮಯಗಳ ಮತ್ತು ಕಾಲಗಳ ಪ್ರಾಮುಖ್ಯತೆಯನ್ನು ತಿಳುಕೊಳ್ಳಲು ನಮಗೆ ಸಹಾಯವಾಗುವದಕ್ಕೆ, ಕರ್ತನಾದ ಯೇಸು ತಂದೆಗೆ ವಿಧೇಯತೆಯಲ್ಲಿ ನಡೆದು ತನ್ನ ಭೂಲೋಕದ ಜೀವಿತವನ್ನು ಹೇಗೆ ಜೀವಿಸಿದನೆಂಬುದನ್ನು ನಾವು ನೋಡಬೇಕು. ಯೇಸು ತನ್ನ ತಂದೆಯ ಸಮಯಗಳಿಗೆ ಗಮನ ಕೊಡುತ್ತಿದ್ದನು ಎಂಬುದನ್ನು ನಾವು ಸ್ಪಷ್ಟವಾಗಿ ಹೇಳುವದಕ್ಕೆ ಅನೇಕ ಉದಾಹರಣೆಗಳು ನಮಗಿವೆ. ಯೇಸು ಹೀಗೆ ಮಾಡಿರುವದಾದರೆ, ನಾವೂ ಸಹ ಮಾಡಲೇಬೇಕು.

## ಅದ್ಭುತ ಮಾಡುವ ತನ್ನ ಸೇವೆಯನ್ನು ಪ್ರಾರಂಭಿಸುವದರಲ್ಲಿ

ಯೋಹಾನ-2:4.

**ಯೇಸು ಆಕೆಗೆ, ಅಮ್ಮಾ, ನನ್ನ ಗೊಡವೇ ನಿನಗೇಕೆ? ನನ್ನ ಸಮಯವು ಇನ್ನೂ ಬಂದಿಲ್ಲ ಎಂದನು.**

## ಯೆರೂಸಲೇಮಿಗೆ ಹೋಗುವ ಅವಧಿಯಲ್ಲಿ

ಯೋಹಾನ-7:6,8

**6-ಯೇಸು ಅವರಿಗೆ, ನನ್ನ ಸಮಯವು ಇನ್ನೂ ಬಂದಿಲ್ಲ; ನಿಮ್ಮ ಸಮಯವು ಯಾವಾಗಲೂ ಸಿದ್ಧವಾಗಿದೆ ಎಂದು ಹೇಳಿದನು.**

**8-ನೀವೇ ಜಾತ್ರೆಗೆ ಹೋಗಿರಿ; ನನ್ನ ಸಮಯವು ಇನ್ನೂ ಒದಗದೆ ಇರುವದರಿಂದ ನಾನು ಈ ಜಾತ್ರೆಗೆ ಈಗ ಹೋಗುವದಿಲ್ಲವೆಂದು ಹೇಳಿದನು.**

## ಲಾಜರನನ್ನು ಎಬ್ಬಿಸುವ ವೇಳೆಯಲ್ಲಿ

ಯೋಹಾನ-11:5-6

**5-ಮಾರ್ಥಳಲ್ಲಿಯೂ ಆಕೆಯ ತಂಗಿಯಲ್ಲಿಯೂ ಲಾಜರನಲ್ಲಿಯೂ ಯೇಸುಗೆ ಪ್ರೀತಿಯಿತ್ತು.**

**6-ಆದರೂ ಲಾಜರನು ಅಸ್ವಸ್ಥನಾಗಿದ್ದಾನೆಂದು ಆತನು ಕೇಳಿದ ಮೇಲೆ ಎರಡು ದಿನ ತಾನಿದ್ದ ಸ್ಥಳದಲ್ಲೇ ನಿಂತನು.**

## ಶಿಲುಬೆಗೆ ಹೋಗುವ ಅವಧಿಯಲ್ಲಿ

ಯೋಹಾನ-12:23, 27

**23-ಆಗ ಯೇಸು ಅವರಿಗೆ ಉತ್ತರಕೊಟ್ಟು ಹೇಳಿದ್ದೇನಂದರೆ – ಮನುಷ್ಯಕುಮಾರನು ತನ್ನ ಮಹಿಮೆಯ ಪದವಿಯನ್ನು ಹೊಂದುವ ಸಮಯ ಬಂದದೆ.**

**27-ಈಗ ನನ್ನ ಪ್ರಾಣವು ತತ್ತರಿಸುತ್ತದೆ; ಮತ್ತು ನಾನೇನು ಹೇಳಲಿ? ತಂದೆಯೇ, ಈ ಕಾಲದೊಳಗಿಂದ ನನ್ನನ್ನು ತಪ್ಪಿಸು. ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು.**

ಯೋಹಾನ-13:1

**ಪಸ್ಕಹಬ್ಬದ ಮುಂದೆ ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗಬೇಕಾದ ಕಾಲ ಬಂತೆಂದು ತಿಳುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಪ್ರೀತಿಸುತ್ತಾ ಬಂದನು.**

## ತನ್ನ ಶಿಷ್ಯರಿಗೆ ಸತ್ಯವನ್ನೂ ಮತ್ತು ಪ್ರಕಟನೆಯನ್ನೂ ತಿಳಿಸುವ ಅವಧಿಯಲ್ಲಿ

ಯೋಹಾನ-16:4

**ಆ ಕಾಲ ಬಂದಾಗ ಆತನು ನಮಗೆ ಇಂಥಿಂಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ.**

ಯೋಹಾನ–16:25

**ಈ ಸಂಗತಿಗಳನ್ನು ಗೂಡಾರ್ಥವಾಗಿ ನಿಮಗೆ ಹೇಳಿದ್ದೇನೆ; ಆದರೆ ಇನ್ನು ಮೇಲೆ ಸಾಮ್ಯ ರೂಪವಾಗಿ ನಿಮ್ಮ ಸಂಗಡ ಮಾತಾಡದೆ ತಂದೆಯ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುವ ಕಾಲ ಬರುತ್ತದೆ.**

## ತಾನು ಶಿಲುಬೆಗೇರುವದನ್ನು ಮತ್ತು ಮಹಿಮೆ ಹೊಂದುವದನ್ನು ತಿಳಿದುಕೊಳ್ಳುವ ಸಮಯದಲ್ಲಿ

ಯೋಹಾನ–16:32

**ನೋಡಿರಿ, ನಿಮ್ಮಲ್ಲಿ ಒಬ್ಬೊಬ್ಬನು ತನ್ನ ತನ್ನ ಸ್ಥಳಕ್ಕೆ ಚದರಿಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವದು, ಈಗ ಬಂದಿದೆ. ಆದರೆ ನಾನು ಒಂಟಿಗನಲ್ಲ, ತಂದೆಯು ನನ್ನ ಸಂಗಡ ಇದ್ದಾನೆ.**

ಯೋಹಾನ–17:1

**ಯೇಸು ಈ ಮಾತುಗಳನ್ನಾಡಿದ ಮೇಲೆ ಆಕಾಶದ ಕಡೆಗೆ ಕಣ್ಣೆತ್ತಿ ಹೇಳಿದ್ದೇನೆಂದರೆ – ತಂದೆಯೇ ಕಾಲ ಬಂದದೆ; ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆಪಡಿಸುವದಕ್ಕಾಗುವದು.**

### ಇದು ಸರಿಯಾದ ಸಮಯವೋ? ಎಂದು ಕೇಳು

ನಿಮ್ಮ ಜೀವಿತಕ್ಕಾಗಿ ದೇವರ ಸಮಯಗಳನ್ನೂ ಮತ್ತು ಕಾಲಗಳನ್ನೂ ತಿಳುಕೊಳ್ಳುವಂತದ್ದು, ಆತನ ಮಾರ್ಗದರ್ಶನವನ್ನು ಹೊಂದಿಕೊಂಡು ಜೀವನದ ವಿವಿಧ ಕಾಲಗಳ ಮೂಲಕ ಆತನನ್ನು ಅನುಸರಿಸುವದಕ್ಕೆ ಸಹಾಯಕವಾಗುತ್ತದೆ.

ತೀರ್ಮಾನಗಳನ್ನು ಮಾಡುವದರಲ್ಲಿ, ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ, ಇದನ್ನು ಮಾಡುವದಕ್ಕೆ ಇದು ಸರಿಯಾದ ಸಮಯ ಮತ್ತು ಕಾಲವಾಗಿದೆಯಾ? ಆ ಪ್ರಶ್ನೆಗೆ ಉತ್ತರವು ಆತನ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ನಿಮಗೆ ಸಹಾಯ ಮಾಡುತ್ತದೆ. ನಾವು ಮಾಡಿದ ಅನೇಕ ತೀರ್ಮಾನಗಳಲ್ಲಿ ಮತ್ತು ಎಪಿಸಿಯಲ್ಲಿ ಮಾಡುವದಕ್ಕೆ ಮುಂದುವರಿಸಿದ್ದು, ಇವೆಲ್ಲಕ್ಕೂ ಸಮಯದ ಈ ವಿಷಯವು ತುಂಬ ಮುಖ್ಯವಾದುದಾಗಿತ್ತು. ಆಗಸ್ಟ್ 2005ರಲ್ಲಿ, ಸಮಯವು ಸರಿ ಎಂಬುದನ್ನು ನಾವು ತಿಳಿದಾಗ, ನಾವು ನಮ್ಮ ಸತ್ಯವೇದದ ಕಾಲೇಜನ್ನು ಪ್ರಾರಂಭಿಸಿದೆವು. ನಾವು ಇನ್ನೂ ಚಿಕ್ಕದಾದ ಸಮೂಹವಾಗಿದ್ದೆವು, ಆದರೆ ನಾವು ಯಾವುದನ್ನು ಮಾಡುವದಕ್ಕೆ ಕರೆಯಲ್ಪಟ್ಟಿದ್ದೆವೋ ಅಂದರೆ ದೇವರ ರಾಜ್ಯವನ್ನು ವಿಸ್ತರಿಸುವದಕ್ಕೆ ಜನರನ್ನು ಸಜ್ಜುಗೊಳಿಸಿ ಕಳಿಸಿಕೊಡುವದರಲ್ಲಿ ಇದು ಒಂದು ಮುಖ್ಯವಾದ ಭಾಗವಾಗಿತ್ತು.

ಸ್ಥಳೀಯವಾಗಿ ನಮ್ಮ ನಾಯಕರುಗಳನ್ನು ಅಭಿವೃದ್ಧಿಗೊಳಿಸುವ ಈ ರೀತಿಯಲ್ಲಿ, ಸಮಯವು ಮುಖ್ಯವಾದುದು. ನಾಯಕತ್ವದ ಕೆಲಸವನ್ನು ಅವರಿಗೆ ಒಪ್ಪಿಸಿ

ಕೊಡುವದರಲ್ಲಿ ನಾವು ಅವಸರಪಡಲಿಲ್ಲ. ಅವರು ಒಂದು ಮಟ್ಟದಲ್ಲಿ ಜವಾಬ್ದಾರಿಗಳೊಂದಿಗೆ ತಮ್ಮನ್ನು ದೃಢಪಡಿಸಿಕೊಳ್ಳುವದಕ್ಕೆ, ಕಲಿಯುವದು, ಬೆಳೆಯುವದು, ಪ್ರಬುದ್ಧರಾಗುವದು ಮತ್ತು ನಂತರ ಮುಂದಿನದಕ್ಕೆ ಹೋಗುವಂತೆ ನಾವು ಬಿಟ್ಟೆವು. ನಾವು ಸರಿಯಾದ ಸಮಯದಲ್ಲಿ ಜನರನ್ನು ನಾಯಕತ್ವದ ಸ್ಥಾನಗಳೊಳಗೆ ಕಾರ್ಯಪ್ರವೃತ್ತರನ್ನಾಗಿ ಮಾಡಿ, ಬೆಳೆಸಿ, ಶಿಕ್ಷಣ ನೀಡಿದೆವು.

ಸಮಯಗಳು ಮತ್ತು ಕಾಲಗಳ ಮೇಲೆ ಹೆಚ್ಚಿನದಕ್ಕೆ ದಯವಿಟ್ಟು ಎಪಿಸಿಯ ಉಚಿತ ಪ್ರಕಾಶನ: ಪ್ರತಿಯೊಂದು ಉದ್ದೇಶಕ್ಕಾಗಿ ಒಂದು ಸಮಯವಿದೆ ಎಂಬುದನ್ನು ನೋಡಿರಿ.

1) ಸಮಯಗಳು ಮತ್ತು ಕಾಲಗಳನ್ನು ತಿಳುಕೊಳ್ಳುವಂತದ್ದು (ನಮ್ಮ ವೈಯಕ್ತಿಕ ಜೀವಿತಗಳಲ್ಲಿ) ನಮ್ಮ ಜೀವಿತಗಳಲ್ಲಿ ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಹೇಗೆ ಸಹಾಯಕವಾಗುತ್ತವೆ?

2) ನೀವು ಯಾವುದರ ಮೇಲೆ ವಿಚಾರ ಮಾಡುತ್ತಿರೋ ಆ ಒಂದು ನಿರ್ಧಿಷ್ಟವಾದ ಕೆಲಸ/ತೀರ್ಮಾನಕ್ಕಾಗಿ ಇದೇ ಸರಿಯಾದ ಸಮಯ ಎಂಬುದರ ಕುರಿತು ನೀವು ಹೇಗೆ ಗುರುತಿಸುತ್ತೀರಿ?

# 13

# ಸನ್ನಿವೇಶಗಳು ಮತ್ತು ದೈವಿಕ ಸಂಘಟಿಸುವಿಕೆಗಳು

ನಮ್ಮ ಸನ್ನಿವೇಶಗಳಲ್ಲಿ ಮತ್ತು ಜೀವನದ ಪರಿಸ್ಥಿತಿಗಳಲ್ಲಿ ಆತನು ಯಾವುದನ್ನು ಸಂಘಟಿಸಿದ್ದಾನೆ ಎನ್ನುವದನ್ನು ಗುರುತಿಸುವದರಿಂದ ನಾವು ಯಾವುದರ ಮೂಲಕ ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುತ್ತೇವೋ ಅದನ್ನು ಆಲೋಚಿಸುವಂತಾದ್ದೇ ಕೊನೆಯ ವಿಧಾನ ಅಥವಾ ರೀತಿಯಾಗಿದೆ.

2ಪೂರ್ವ.ಕಾ.ವೃತ್ತಾಂತ-16:9
**ಯೆಹೋವನು ಭೂಲೋಕದ ಎಲ್ಲಾ ಕಡೆಗಳಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತಾ ತನ್ನ ಕಡೆಗೆ ಯಥಾರ್ಥ ಮನಸ್ಸುಳ್ಳವರ ರಕ್ಷಣೆಗಾಗಿ ತನ್ನ ಪ್ರತಾಪವನ್ನು ತೋರ್ಪಡಿಸುತ್ತಾನೆ. . . . .**

ದೇವರು ನಮ್ಮ ಪರವಾಗಿ ತನ್ನ ಬಲವನ್ನು ಪ್ರಯೋಗಿಸುತ್ತಾನೆ. ಆತನು ಎಲ್ಲಿ ನಮಗಾಗಿ ದೈವಿಕವಾಗಿ ಸಂಗತಿಗಳನ್ನು ಸಂಘಟಿಸುತ್ತಾನೋ ಅದು ದೇವರು ನಮ್ಮ ಸನ್ನಿವೇಶಗಳಲ್ಲಿ ಮತ್ತು ಜೀವನದ ಪರಿಸ್ಥಿತಿಗಳಲ್ಲಿ ಇದನ್ನು ಮಾಡುವಂತ ಒಂದು ಭಾಗವಾಗಿದೆ. ಇದು ಒಂದು ಅಸಹಜವಾದ ಸದವಕಾಶದ ಬಾಗಿಲುಗಳು, ಜನರಿಗೆ ಒಲವು ಮತ್ತು ಮಾರ್ಗ, ಹೊಸ ಒಪ್ಪಂದಗಳು, ಮತ್ತು ನಮ್ಮ ಜೀವನದ ಸನ್ನಿವೇಶಗಳಲ್ಲಿ ದೇವರು ಕಾರಣವಾಗಿರುವ ಇತರ ಅನೇಕ ಸಂಗತಿಗಳಾಗಬಹುದು. ದೇವರು ಇಂತಹ ಸಂಗತಿಗಳನ್ನು ಮಾಡುವಾಗ, ಯಾರೂ ಅದನ್ನು ತಡೆಯುವದಕ್ಕಾಗುವದಿಲ್ಲ ಅಥವಾ ಆತನನ್ನು ನಿಲ್ಲಿಸುವದಕ್ಕಾಗುವದಿಲ್ಲ. ಹೆಚ್ಚು ಆಶ್ಚರ್ಯಕರವಾದ ಸಂಗತಿಗಳು ವಾಸ್ತವವಾಗಿ, ಯಾವುದನ್ನು ಕಣ್ಣುಗಳು ಕಂಡಿಲ್ಲವೋ, ಯಾವುದನ್ನು ಕಿವಿಗಳು ಕೇಳಿಲ್ಲವೋ, ಯಾವುದನ್ನು ಜನರು ಎಂದಿಗೂ ಊಹಿಸಲಿಲ್ಲವೋ ಅಂತಹ ಸಂಗತಿಗಳು ನಮ್ಮ ಜೀವನದ ಪರಿಸ್ಥಿತಿಗಳಲ್ಲಿ ಸಂಭಸುತ್ತವೆ.

ಯೋಬ-42:2
**ನೀನು ಸಕಲ ಕಾರ್ಯಗಳನ್ನು ನಡಿಸಬಲ್ಲಿಯೆಂತಲೂ ಯಾವ ಸಂಕಲ್ಪವೂ ನಿನಗೆ ಅಸಾಧ್ಯವಲ್ಲವೆಂತಲೂ ತಿಳಿದುಕೊಂಡೇ ಇದ್ದೇನೆ.**

ಪ್ರಕಟನೆ–3:7

**ಫಿಲದೆಲ್ಫಿಯದಲ್ಲಿರುವ ಸಭೆಯ ದೂತನಿಗೆ ಬರೆ – ಪರಿಶುದ್ಧನೂ ಸತ್ಯವಂತನೂ ದಾವೀದನ ಬೀಗದಕ್ಕೈಯುಳ್ಳವನೂ ಯಾರೂ ಮುಚ್ಚ ಕೂಡದಂತೆ ತೆರೆಯುವವನೂ ಯಾರೂ ತೆರೆಯದಂತೆ ಮುಚ್ಚುವವನೂ ಆಗಿರುವಾತನು ಹೇಳುವದೇನೆಂದರೆ. . . . .**

ಹೀಗೆ ನಮ್ಮ ಜೀವನದ ಪರಿಸ್ಥಿತಿಗಳಲ್ಲಿ ಸಂಭಸಿದ ದೈವಿಕ ಸಂಘಟಿಸುವಿಕೆಗಳಿಗೆ ಗಮನ ಕೊಡುವದು ಮತ್ತು ಸರಿಯಾಗಿ ಪ್ರತಿಕ್ರಿಯಿಸುವದು ನಮಗೆ ಅಗತ್ಯವಾದುದಾಗಿದೆ.

ಉದಾಹರಣೆಗಾಗಿ, ನೀವು ನಿಮ್ಮ ಔದ್ಯೋಗಿಕ ಜೀವನೋಪಾಯದ ಕುರಿತು ಪ್ರಾರ್ಥಿಸುತ್ತಾ ದೇವರ ನಿರ್ದೇಶನಕ್ಕಾಗಿ ಕೇಳುತ್ತಿರುವಂತೆಯೇ, ನಿಮ್ಮ ಭಾಗವನ್ನು ನೀವು ಮಾಡಿರಿ. ನಿಮಗೆ ಅಗತ್ಯರುವ ಕೌಶಲ್ಯತೆಗಳನ್ನು ಕಟ್ಟಿಕೊಳ್ಳಿರಿ. ಉದ್ಯೋಗಕ್ಕಾಗಿ ನಿರೀಕ್ಷಿಸಿರಿ, ಸಂದರ್ಶನಗಳಲ್ಲಿ ಭಾಗವಸಿರಿ ಇತ್ಯಾದಿ. ಇವು ನೀವು ಮಾಡಬೇಕಾದ ಸಂಗತಿಗಳು. ನೀವು ಸರಿಯಾದ ಉದ್ಯೋಗದೊಳಗೆ ನಿಮ್ಮ ಹೆಜ್ಜೆಗಳನ್ನಿಡುವದಕ್ಕೆ ಮತ್ತು ಬೆಳವಣಿಗೆಗಾಗಿ ಹಾಗೂ ಹೆಚ್ಚಳಕ್ಕಾಗಿ ನೀವು ಆಯಕಟ್ಟಿನ ಸ್ಥಳದಲ್ಲಿರುವಂತೆ ದೇವರು ಆಜ್ಞಾಪಿಸಿದ್ದಾನೆ ಎಂಬ ಭರವಸೆ ನಿಮಗಿರಬೇಕು. ಖಂಡಿತವಾಗಿಯೂ, ಪ್ರಕಟಗೊಂಡಿರುವ ಅನೇಕ ವಿವಿಧ ಚಿತ್ರಣಗಳು ಇವೆ, ಆದರೆ ಒಂದು ಸರಳವಾದ ಮತ್ತು ಸುಲಭವಾದ ಒಂದನ್ನು ಆಲೋಚಿಸಿರಿ. ನೀವು ಕೇವಲ ಒಂದು ಉದ್ಯೋಗದ ಪ್ರಸ್ತಾಪವನ್ನು ಹೊಂದಿಕೊಳ್ಳುತ್ತೀರಿ ಮತ್ತು ಇದು ಒಂದು ದೊಡ್ಡ ಸದವಕಾಶವಾಗಿರುತ್ತದೆ, ಹಾಗೂ ನಿಮ್ಮ ಕೌಶಲ್ಯಗಳಿಗೆ ಮತ್ತು ಸಾಮರ್ಥ್ಯಗಳಿಗೆ ಉತ್ತಮವಾಗಿ ಸರಿ ಹೊಂದಿಕೆಯಾಗಿರುತ್ತದೆ. ನಾವು ಮೊದಲು ಆಲೋಚಿಸಿದಂತ ಇತರ ದೃಢೀಕರಣಗಳನ್ನು ನೀವು ಎದುರು ನೋಡುವ ವೇಳೆಯಲ್ಲಿ (ಉದಾ: ಆತ್ಮನ ಅಂತರಂಗದ ಸ್ವರ, ನವೀಕರಣಗೊಂಡ ಮನಸ್ಸು ಇತ್ಯಾದಿ) ಹೆಚ್ಚಿನ ಸಂಗತಿಗಳಲ್ಲಿ, ಈ ಸದವಕಾಶವು ನಿಮ್ಮ ಮುಂದೆ ಇಡಲ್ಪಟ್ಟಿರುತ್ತದೆ, ನೀವು ಈ ದಿಕ್ಕಿನ ಕಡೆಗೆ ಮುಂದೆ ಸಾಗುವದು ನಿಮಗೆ ಅಗತ್ಯ ಎಂಬ ದೇವರ ಮಾರ್ಗದರ್ಶನ ಇದಾಗಿದೆ ಎನ್ನುವದು ಸತ್ಯವಾಗಿರುತ್ತದೆ. ಈ ಉದ್ಯೋಗವನ್ನು ಉನ್ನತಿಗೆ ತೆಗೆದುಕೊಂಡು ಹೋಗಬಾರದು ಎನ್ನುವದಕ್ಕೆ ತೀರಾ ಖಂಡಿತವಾದ ಕಾರಣಗಳ ಹೊರತಾಗಿಯೂ (ಉದಾ: ನೀವು ನೀತಿನಿಯಮಗಳಿಲ್ಲದ ಸಂಗತಿಗಳನ್ನು ಮಾಡುವ ಅಗತ್ಯವುಳ್ಳವರಾಗಿರುವಾಗ, ಅಥವಾ ಇದನ್ನು ಮೇಲಕ್ಕೆ ತೆಗೆದುಕೊಂಡು ಹೋಗಬಾರದು ಎಂದು ನಿಮ್ಮ ಆತ್ಮದಲ್ಲಿ ಒಂದು ಸ್ಪಷ್ಟವಾದ ಸಾಕ್ಷಿಯನ್ನು ನೀವು ಹೊಂದಿದ್ದರೆ, ಅಥವಾ ಇದನ್ನು ಮೇಲಕ್ಕೆ ತೆಗೆದುಕೊಂಡು ಹೋಗಬಾರದು ಎಂದು ದೇವರು ನಿಮಗೆ ಒಂದು ಕನಸನ್ನು ಕೊಟ್ಟಿದ್ದರೆ ಇತ್ಯಾದಿ) ನೀವು ಈ ಉದ್ಯೋಗದಲ್ಲಿ ಮುಂದುವರಿಯಲು ಶಕ್ತರಾಗುತ್ತೀರಿ. ಆದದರಿಂದ ಈ

ವಿಷಯದಲ್ಲಿ, ದೇವರು ನಿಮಗಾಗಿ ಸಂಘಟಿಸಿರುವಂತಹ ಸನ್ನಿವೇಶಗಳ ಮೂಲಕ ನೀವು ಮುಂದೆ ಸಾಗುವದನ್ನು ಆಜ್ಞಾಪಿಸುತ್ತಾನೆ. ಜೀವನದ ಪರಿಸ್ಥಿತಿಗಳು ಮತ್ತು ಸನ್ನಿವೇಶಗಳ ದೈವಿಕ ಸಂಘಟಿಸುವಿಕೆಗಳ ಮೂಲಕ ನೀವು ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುತ್ತೀರಿ.

## ಜೀವನದ ಪರಿಸ್ಥಿತಿಗಳಲ್ಲಿ ಇತರ ಸಂಗತಿಗಳ ಕೆಲಸದಲ್ಲಿ ಕಾಯುವದು

ನಮ್ಮ ಸನ್ನಿವೇಶಗಳಲ್ಲಿ ಮತ್ತು ಪರಿಸ್ಥಿತಿಗಳಲ್ಲಿ ಸಂಭಸುವಂತಹ ಪ್ರತಿಯೊಂದು ದೇವರ ಕೆಲಸವಲ್ಲ ಎನ್ನುವದನ್ನು ಜ್ಞಾಪದಲ್ಲಿಟ್ಟುಕೊಳ್ಳುವದು ತುಂಬಾ ಮುಖ್ಯವಾದ ಸತ್ಯವಾಗಿದೆ. ದೇವರು ನಿಯಂತ್ರಣದಲ್ಲಿದ್ದಾನೆ, ದೇವರ ಚಿತ್ತದ್ದಿದ್ದರೆ ಇದಾಗುತ್ತಿತ್ತು, ಇತ್ಯಾದಿ ಹೇಳಿಕೆಗಳನ್ನು ನಾವು ಕೇಳುತ್ತಿರುತ್ತೇವೆ. ಮತ್ತು ನಮ್ಮ ಜೀವನದ ಪರಿಸ್ಥಿತಿಗಳಲ್ಲಿ ಏನೇ ಸಂಭಸಿದರೂ ಅದು ದೇವರಿಂದ ಆಯಿತು ಎಂದುಕೊಳ್ಳುವದಕ್ಕೆ ಈ ಹೇಳಿಕೆಗಳನ್ನು ಉಪಯೋಗಿಸುತ್ತಾರೆ. ಆದರೆ ಅದು ನಿಜವಲ್ಲ. ನಮಗೆ ತಡೆಯೊಡ್ಡುವುದರಲ್ಲಿ, ದೇವರ ಉದ್ದೇಶಗಳನ್ನು ವಿರೋಧಿಸುವದರಲ್ಲಿ, ಗಲಿಬಿಲಿಗಳಿಗೆ ಕಾರಣವಾಗುವದರಲ್ಲಿ, ಇತ್ಯಾದಿ ಕೆಲಸ ಮಾಡುವದಕ್ಕೆ ಸೈತಾನನು ಸಹ ಇದ್ದಾನೆ. ಅದಕ್ಕಾಗಿಯೇ, ಸೈತಾನನನ್ನು ಎದುರಿಸಿ ಲೋಕವನ್ನು ಜಯಿಸಬೇಕು, ಬಿರುಗಾಳಿಗಳಿಗೆ ಶಾಂತವಾಗುವಂತೆ ಅಪ್ಪಣೆ ಕೊಡಬೇಕು ಮತ್ತು ಪರ್ವತಗಳಿಗೆ ಸ್ಥಳಬಿಟ್ಟು ಹೋಗುವಂತೆ ಅವುಗಳಿಗೆ ಹೇಳಬೇಕು. ಬಿರುಗಾಳಿಗಳೂ ಮತ್ತು ಪರ್ವತಗಳೂ ತಡೆಗಳಾಗಿ ಇದ್ದು ನಮಗಾಗಿ ಇರುವ ದೇವರ ಚಿತ್ತದ ಹಾಗೆ ಒಪ್ಪಿಕೊಳ್ಳುವಂತವುಗಳಲ್ಲ. ಅವು ದೇವರ ಚಿತ್ತಕ್ಕೆ ಒಂದು ತಡೆಗಳ ಹಾಗೆ ಕಂಡುಬರುತ್ತವೆ ಹಾಗಾಗಿ ನಂಬಿಕೆಯ ಮೂಲಕ ಅವುಗಳೊಂದಿಗೆ ವ್ಯವಹರಿಸಬೇಕು. ಇನ್ನು ವಿವಿಧ ಪರಿಸ್ಥಿತಿಗಳು ಸಂಭವಿಸುವದಕ್ಕೆ ಕಾರಣವಾಗಿ ಕೆಲವು ಜನರಿದ್ದಾರೆ ಮತ್ತು ನಮ್ಮ ಸ್ವಂತ ಆಯ್ಕೆಗಳು ಹಾಗೂ ತೀರ್ಮಾನಗಳು ಸಹ ಇವೆ. ಉದಾಹರಣೆಗಾಗಿ, ನಾವು ಏನು ಬಿತ್ತುತ್ತೇವೋ ಅದನ್ನೇ ಕೊಯ್ಯುತ್ತೇವೆ, ಅಥವಾ ಇದನ್ನು ವ್ಯತ್ಯಾಸವಾಗಿ ಇಡೋಣ, ನಾವು ನಮ್ಮ ಆಯ್ಕೆಗಳ ಮತ್ತು ಕ್ರಿಯೆಗಳ ಪರಿಣಾಮಗಳನ್ನು ಎದುರಿಸುತ್ತೇವೆ. ಈ ಪರಿಣಾಮಗಳು ದೇವರನ್ನು, ಸೈತಾನನನ್ನು ಅಥವಾ ಇತರ ಜನರನ್ನು ದೂಷಿಸುವದಕ್ಕೆ ಕಾರಣವಾಗಿರುವದಿಲ್ಲ. ಈ ಪರಿಣಾಮಗಳು ನಮ್ಮ ಆಯ್ಕೆಗಳಿಂದ ಆಗಿರುತ್ತವೆ ಮತ್ತು ನಾವು ಅದರ ಜವಾಬ್ದಾರಿಯನ್ನು ಹೊತ್ತುಕೊಳ್ಳಲೇಬೇಕು.

ದೇವರು ನಮ್ಮ ಪರಿಸ್ಥಿತಿಗಳು ಮತ್ತು ಸನ್ನಿವೇಶಗಳಲ್ಲಿ ಕೆಲಸ ಮಾಡುತ್ತಾನೆ ಎಂಬ ಅರಿವುಳ್ಳವರಾಗಿರುವ ವೇಳೆಯಲ್ಲಿ, ನಮ್ಮ ದಾರಿಯಲ್ಲಿ ಬರುವಂತಹ ಪ್ರತಿಯೊಂದು

ದೇವರಿಂದ ಬಂದದ್ದೆಂದು ನಾವು ಒಪ್ಪಿಕೊಳ್ಳಬಾರದು. ನಾವು ಗ್ರಹಿಸಿಕೊಂಡವರಾಗಿ ಜ್ಞಾನದೊಂದಿಗೆ ಕ್ರಿಯೆ ಮಾಡಬೇಕು. ದೇವರಿಂದ ಬಂದಿರುವದನ್ನು ಒಪ್ಪಿಕೊಳ್ಳಬೇಕು. ಸೈತಾನನಿಂದ ಬಂದಿರುವದನ್ನು ಎದುರಿಸಿ ಜಯಿಸಬೇಕು.

## ನಿಮ್ಮ ತುಪ್ಪಟವು ನಿಮಗೆ ಹೊದಿಕೆಯನ್ನು ದೊರಕಿಸಿಕೊಡುತ್ತದೆ

ನ್ಯಾಯ ಸ್ಥಾಪಕರು–6:36–40

**36–ಮತ್ತು ಗಿದ್ಯೋನನು ದೇವರಿಗೆ – ನೀನು ಹೇಳಿದಂತೆ ಇಸ್ರಾಯೇಲ್ಯರನ್ನು ನನ್ನ ಮೂಲಕವಾಗಿ ರಕ್ಷಿಸುವಿಯೋ ಇಲ್ಲವೋ ಎಂಬುದನ್ನು ತಿಳಿಯಪಡಿಸು.**

**37–ಇಗೋ, ನಾನು ಕಣದಲ್ಲಿ ಕುರಿಯ ತುಪ್ಪಟವನ್ನು ಇಡುತ್ತೇನೆ, ಅದರಲ್ಲಿ ಮಾತ್ರ ಮಂಜುಬಿದ್ದು ನೆಲವೆಲ್ಲಾ ಒಣಗಿದ್ದರೆ ನೀನು ಹೇಳಿದಂತೆಯೆ ಇಸ್ರಾಯೇಲ್ಯರನ್ನು ನನ್ನ ಮೂಲಕವಾಗಿ ರಕ್ಷಿಸುಯೆಂದು ತಿಳಿಯುವೆನು ಎಂಬದಾಗಿ ಪ್ರಾರ್ಥಿಸಿದನು.**

**38–ಹಾಗೆಯೇ ಆಯಿತು; ಅವನು ಮರುದಿವಸ ಹೊತ್ತಾರೆಯಲ್ಲಿ ಎದ್ದು ತಪ್ಪಟವನ್ನು ಒತ್ತಿ ಹಿಂಡಲು ಮಂಜಿನ ನೀರು ಒಂದು ಬಟ್ಟಲು ತುಂಬಾ ಆಯಿತು.**

**39–ಅವನು ತಿರಿಗಿ ದೇವರಿಗೆ – ಸ್ವಾಮೀ ಸಿಟ್ಟಾಗಬಾರದು; ಇನ್ನೊಂದು ಸಾರಿ ಮಾತಾಡುತ್ತೇನೆ. ಇನ್ನು ಒಂದೇ ಸಾರಿ ಈ ತುಪ್ಪಟದಿಂದ ನಿನ್ನನ್ನು ಪರೀಕ್ಷಿಸುವದಕ್ಕೆ ಅಪ್ಪಣೆಯಾಗಲಿ; ಈ ತುಪ್ಪಟವು ಮಾತ್ರವೇ ಒಣಗಿದ್ದು ನೆಲದ ಮೇಲೆಲ್ಲಾ ಹನಿ ಬಿದ್ದಿರಲಿ ಅಂದನು.**

**40–ಆ ರಾತ್ರಿ, ದೇವರು ಹಾಗೆಯೇ ಮಾಡಿದನು; ತುಪ್ಪಟವು ಮಾತ್ರ ಒಣಗಿತ್ತು, ನೆಲದ ಮೇಲೆಲ್ಲಾ ಹನಿ ಬಿದ್ದಿತ್ತು.**

ಇಸ್ರಾಯೇಲ್ಯರಿಗಾಗಿ ಒಬ್ಬ ಬಿಡುಗಡೆಗೊಳಿಸುವವನಾಗುವದಕ್ಕೆ ತನ್ನ ಕರೆಯ ಕುರಿತಾಗಿ ದೇವರ ದೃಢೀಕರಣವನ್ನು ಹೊಂದಿಕೊಳ್ಳುವ ಕ್ರಮದಲ್ಲಿ ಗಿದ್ಯೋನನು ದೇವರ ಮುಂದೆ ಒಂದು ಕುರಿಯ ತುಪ್ಪಟವನ್ನು ಇಟ್ಟಂತಹ ಈ ಘಟನೆಯನ್ನು ನಾವು ಹಳೆ ಒಡಂಬಡಿಕೆಯಲ್ಲಿ ಕಾಣುತ್ತೇವೆ. ದೇವರು ಅವನಿಗೆ ಅನುಕೂಲ ಮಾಡಿಕೊಟ್ಟು ಅದರ ಮೂಲಕವಾಗಿ ಮುನ್ನಡೆಸಿದನು. ದೇವರು ಮತ್ತೆ ಇದನ್ನು ಮಾಡುವ ವೇಳೆಯಲ್ಲಿ, ನೀವು ಒಂದು ತುಪ್ಪಟವನ್ನು ಇಡುವದಕ್ಕೆ ಪ್ರಯತ್ನಿಸಬೇಡಿರಿ ಎಂದು ವಿಶ್ವಾಸಿಗಳಿಗೆ ನಾವು ಬಲವಾಗಿ ಒತ್ತಾಯಿಸುತ್ತೇವೆ. ಆ ಸಮಯದಲ್ಲಿ ಗಿದ್ಯೋನನಿಗೆ ಬೇರೆ ಆಯ್ಕೆಗಳಿರಲಿಲ್ಲ. ಹೇಗಿದ್ದರೂ, ಹೊಸ ಒಡಂಬಡಿಕೆಯ ವಿಶ್ವಾಸಿಗಳಿಗಾಗಿ, ಒಂದು ಪ್ರಾಥಮಿಕ ಮಾರ್ಗಗಳ ಮೂಲಕವಾಗಿ ದೇವರು ನಮಗೆ ಮಾರ್ಗದರ್ಶನ ಮಾಡಿ ಮುನ್ನಡೆಸುವಂತ ಆತನ ಬರೆಯಲ್ಪಟ್ಟ ವಾಕ್ಯ ಮತ್ತು ಪವಿತ್ರಾತ್ಮನ ಅಂತರಂಗದ ಸಾಕ್ಷಿಯನ್ನು ನಾವು ಹೊಂದಿದ್ದೇವೆ. ಹೊಸ ಒಡಂಬಡಿಕೆಯ ವಿಶ್ವಾಸಿಗಳಿಗಾಗಿ, ದೇವರು ತನ್ನ ವಾಕ್ಯದಿಂದ ಉಪದೇಶಿಸಲ್ಪಡುವದಕ್ಕಾಗಿ (2ತಿಮೊಥೆ–3:16–17) ಮತ್ತು ಕೇಳಿಸಿಕೊಳ್ಳುವದನ್ನು ಕಲಿತು ಆತನ ಆತ್ಮನಿಂದ ಮುನ್ನಡೆಸಲ್ಪಡುವದಕ್ಕೆ

ನಮ್ಮನ್ನು ಕರೆದನು (ರೋಮಾ–8:14). ನಾವು ಇವುಗಳನ್ನು ಅಸಡ್ಡೆ ಮಾಡಬಾರದು, ಮತ್ತು ತುಪ್ಪಟಗಳನ್ನು ಉಪಯೋಗಿಸುವದಕ್ಕೆ ಪ್ರಯತ್ನಿಸಬೇಕು. ನೆನಪಿಡಿರಿ, ನಿಮ್ಮ ತುಪ್ಪಟವು ನಿಮಗೆ ಹೊದಿಕೆಯನ್ನು ದೊರಕಿಸಿಕೊಡುತ್ತದೆ. ಹಾಗಾಗಿ ಜಾಗ್ರತೆಯುಳ್ಳವರಾಗಿರ್ರಿ!

## ಚೀಟು ಹಾಕುವದರ ವಿಷಯವೇನು

ಅಪೊ.ಕೃತ್ಯ–1:24–26

**24,25–ಅವರು ಪ್ರಾರ್ಥನೆ ಮಾಡುತ್ತಾ – ಕರ್ತನೇ, ಎಲ್ಲರ ಹೃದಯವನ್ನು ಬಲ್ಲಾತನೇ, ಯೂದನು ಅಪೊಸ್ತಲತನವೆಂಬ ಈ ಸೇವಾ ಸ್ಥಾನದಿಂದ ಭ್ರಷ್ಟನಾಗಿ ತನಗೆ ತಕ್ಕ ಸ್ಥಳಕ್ಕೆ ಹೋಗಿರುವದರಿಂದ ಆ ಸ್ಥಾನವನ್ನು ಹೊಂದುವದಕ್ಕೆ ಈ ಇಬ್ಬರಲ್ಲಿ ನೀನು ಆರಿಸಿಕೊಂಡವನನ್ನು ತೋರಿಸಿಕೊಡು ಎಂದು ಹೇಳಿದರು.**

**26–ಆ ಮೇಲೆ ಅವರು ಚೀಟು ಹಾಕಿದರು. ಚೀಟು ಮತ್ತೀಯನಿಗೆ ಬಂದದರಿಂದ ಅವನು ಹನ್ನೊಂದು ಮಂದಿ ಅಪೊಸ್ತಲರ ಸಂಗಡ ಸೇರಿ ಎಣಿಸಲ್ಪಟ್ಟನು.**

ಯೇಸುವಿನ ದಿವಾರೋಹಣದ ನಂತರ ಅಪೊಸ್ತಲರುಗಳು, ಇಸ್ಕರಿಯೋತ ಯೂದನ ಸ್ಥಾನವನ್ನು ತೆಗೆದುಕೊಳ್ಳುವದಕ್ಕೆ ಒಬ್ಬ ಮನುಷ್ಯನನ್ನು ಹುಡುಕುವದಕ್ಕೆ ಬಯಸಿದರು. ಆದದರಿಂದ ಯೂದನಿಗೆ ಬದಲಾಗಿ ಆರಿಸಲ್ಪಡುವ ಈ ಪರೀಕ್ಷೆಯನ್ನು ಯಾರು ತೃಪ್ತಿಗೊಳಿಸುತ್ತಾರೆ ಎನ್ನುವದಕ್ಕೆ ಅವರು ಇಬ್ಬರು ವ್ಯಕ್ತಿಗಳನ್ನು ಆರಿಸಿಕೊಂಡು ಚೀಟು ಹಾಕಿದರು. ಈ ಆಯ್ಕೆಯಲ್ಲಿ ಮಾರ್ಗದರ್ಶನ ಮಾಡುವಂತೆ ಅವರು ದೇವರನ್ನು ಕೇಳಿಕೊಂಡರು, ಮತ್ತು ಹನ್ನೆರಡು ಜನ ಅಪೊಸ್ತಲರ ಸಂಗಡ ಸೇರಿಸಿಕೊಳ್ಳುವದಕ್ಕೆ ಅವರು ಮತ್ತೀಯನನ್ನು ಕಂಡುಕೊಂಡರು.

ಏನೇ ಆದರೂ, ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಚೀಟು ಹಾಕುವ ಈ ಪ್ರಯೋಗವು ಪಂಚಾಶತ್ತಮ ದಿನಕ್ಕಿಂತ ಮೊದಲು ನಡೆದದ್ದು. ಅಪೊಸ್ತಲರು ಪವಿತ್ರಾತ್ಮನ ಚಟುವಟಿಕೆ ಮತ್ತು ಕೆಲಸದೊಂದಿಗೆ ಇನ್ನೂ ಪರಿಚಯವುಳ್ಳವರಾಗಿರಲಿಲ್ಲ.

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಾವು ಮುಂದೆ ನೋಡುವದೇನೆಂದರೆ, ಪ್ರಾಮುಖ್ಯವಾದ ತೀರ್ಮಾನಗಳನ್ನು ಮಾಡಬೇಕಾದಾಗ, ಅವರು ಪವಿತ್ರಾತ್ಮನ ಮುನ್ನಡೆಸುವಿಕೆಯ ಮೇಲೆ ಆತುಕೊಳ್ಳುತ್ತಿದ್ದರು.

## ಈ ಎರಡು ಉದಾಹರಣೆಗಳನ್ನು ಗಮನಿಸಿರಿ:

ಅಪೊ.ಕೃತ್ಯ 13ನೆಯ ಅಧ್ಯಾಯದಲ್ಲಿ, ಅಪೊಸ್ತಲಿಕ ಸೇವೆಯಲ್ಲಿ ಕೆಲಸ ಮಾಡುವದಕ್ಕೆ ಸೌಲ ಮತ್ತು ಬಾರ್ನಬರನ್ನು ಕರೆದವನು ಪವಿತ್ರಾತ್ಮನಾಗಿದ್ದನು. ಇದಕ್ಕಾಗಿ ಅಂತಿಯೋಕ್ಯದ ನಾಯಕರುಗಳು ಚೀಟು ಹಾಕಲಿಲ್ಲ.

ಅಪೊ.ಕೃತ್ಯ-13:2
**ಇವರು ಕರ್ತನನ್ನು ಸೇರಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು - ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು**

ಯೆರೂಸಲೇಮಿನಲ್ಲಿನ ಮುಖ್ಯವಾದ ಸಭೆಯಲ್ಲಿ, ಅಪೊಸ್ತಲರು ಮತ್ತು ನಾಯಕರುಗಳು ತಮ್ಮ ತೀರ್ಮಾನವನ್ನು ಮಾಡುವಾಗ ಯಾಕೋಬನು ಬೇರೆ ಗ್ರಂಥದಲ್ಲಿರುವ ವಾಕ್ಯಭಾಗವನ್ನು ಉಲ್ಲೇಖಿಸಿದನು (ಆಮೋಸ-9:11-13) ಮತ್ತು ತಮ್ಮ ತೀರ್ಮಾನವು ಪವಿತ್ರಾತ್ಮನದಾಗಿದೆ ಎಂದು ಹೇಳುತ್ತಾನೆ. ಇಲ್ಲಿ ಮತ್ತೆ ಚೀಟುಗಳು ಹಾಕಲ್ಪಡಲಿಲ್ಲ.

ಅಪೊ.ಕೃತ್ಯ-15:28
**ಇದಕ್ಕೆ ಹೆಚ್ಚಿನ ಭಾರವನ್ನು ಹಾಕಬಾರದೆಂದು ಪವಿತ್ರಾತ್ಮನಿಗೂ ನಮಗೂ ಹಿತವಾಗಿ ತೋರಿತು.**

ಹೊಸ ಒಡಂಬಡಿಕೆಯ ವಿಶ್ವಾಸಿಗಳ ಹಾಗೆ ಪ್ರಾಮುಖ್ಯವಾದ ತೀರ್ಮಾನಗಳನ್ನು ಮಾಡುವದಕ್ಕೆ ಚೀಟು ಹಾಕುವದನ್ನು ನಾವು ಉಪಯೋಗಿಸಬಾರದು ಎಂಬ ವಿಷಯವನ್ನು ತಿಳಿಸುವದಕ್ಕೆ ಇಚ್ಛಿಸುತ್ತೇವೆ. ತುಪ್ಪಟಗಳನ್ನು ನಾವು ಇಡಬಾರದು ಎನ್ನುವ ಹಾಗೆಯೇ ನಾವು ಚೀಟುಗಳನ್ನು ಸಹ ಹಾಕಬಾರದು, ಆದರೆ ವಾಕ್ಯಗಳ ಮೇಲೆ ಮತ್ತು ಪವಿತ್ರಾತ್ಮನ ಮುನ್ನಡೆಸುವಿಕೆಯ ಮೇಲೆ ಅವಲಂಬಿತರಾಗಿರೋಣ. ದೇವರು ನಮಗೆ ಮಾರ್ಗದರ್ಶನ ಮಾಡುವಂತಹ ಇತರ ಮಾಧ್ಯಮಿಕ ರೀತಿಗಳನ್ನು ಸಹ ಈ ಪುಸ್ತಕದಲ್ಲಿ ನಾವು ತಿಳಿಸಿದ್ದೇವೆ, ಆದರೆ ಇವು ವಾಕ್ಯದ ಮತ್ತು ಆತ್ಮನ ಅಂತರಂಗದ ಸಾಕ್ಷಿಯ ವಿರುದ್ಧವಾಗಿ ಪರೀಕ್ಷಿಸಲ್ಪಡಬೇಕು.

ನಿಮ್ಮ ಜೀವಿತಕ್ಕಾಗಿ ದೇವರ ನಿರ್ದೇಶನವನ್ನು ತಿಳುಕೊಳ್ಳುವದಕ್ಕೆ ಜೀವನದ ಸನ್ನಿವೇಶಗಳು ಮತ್ತು ಪರಿಸ್ಥಿತಿಗಳನ್ನು ನೀವು ಗಮನಿಸುವ ಹಾಗೆ ನೀವು ನೆನಪಿನಲ್ಲಿಡಬೇಕಾದ ಕೆಲವು ಸತ್ಯಗಳು ಇಲ್ಲಿವೆ:

## ಮುಚ್ಚಿರುವ ಪ್ರತಿಯೊಂದು ಬಾಗಿಲು 'ಇಲ್ಲ' ಎನ್ನುವಂತದ್ದಲ್ಲ

ಕೆಲವೊಂದು ಮುಚ್ಚಿರುವ ಬಾಗಿಲುಗಳಿರುತ್ತವೆ, ಯಾಕೆಂದರೆ ನೀವು ಅವುಗಳ ಮೇಲೆ 'ತಟ್ಟಬೇಕು' ಎನ್ನುವದನ್ನು ಯೋಚಿಸಬೇಕು, ಬಹುಮಟ್ಟಿಗೆ ಅವುಗಳು ತೆರೆಯುವದಕ್ಕಾದರೂ ಸಹ ನೀವು 'ತಟ್ಟಬೇಕು'.

ಮತ್ತಾಯ-7:7-8

**7-ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ ನಿಮಗೆ ಸಿಕ್ಕುವದು; ತಟ್ಟಿರಿ ನಿಮಗೆ ತೆರೆಯುವದು;**

**8-ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು.**

ಸರಿಯಾದ ಬಾಗಿಲಿಗೆ ನಿಮ್ಮನ್ನು ಪುನರ್-ಮಾರ್ಗನಿರ್ದೇಶಿಸುವದಕ್ಕೆ ಕೆಲವು ಬಾಗಿಲುಗಳು ಸುಮ್ಮನೆ ಮುಚ್ಚಿರುತ್ತವೆ, ಇವು ನಿಮಗಾಗಿ ಸರಿಯಾದ ಸ್ಥಳವನ್ನು ತೆರೆಯುತ್ತವೆ. ಮುಚ್ಚಿದ ಬಾಗಿಲುಗಳು, ನೀವು ಅನುಸರಿಸಿ ಹೋಗುತ್ತಿರುವ ಉದ್ದೇಶವು ನಿಮಗಾಗಿ ಅಲ್ಲ ಎಂಬ ಅರ್ಥಕೊಡುವದಿಲ್ಲ. ಉದ್ದೇಶವು ಒಂದು ವ್ಯತ್ಯಾಸವುಳ್ಳ ಸ್ಥಳದಿಂದ ಬಿಡುಗಡೆಯಾಗಬೇಕು ಎಂಬುದು ಕೇವಲ ಇದರ ಅರ್ಥವಾಗಿದೆ.

ಯೋಸೇಫ ಮತ್ತು ಮರಿಯಳು ಯೆರೂಸಲೇಮಿಗೆ ಬಂದಾಗ, ಛತ್ರದಲ್ಲಿ ಅವರಿಗಾಗಿ ಒಂದು ಚಿಕ್ಕ ಕೋಣೆಯಾದರೂ ಇರಲಿಲ್ಲ. ಛತ್ರದಲ್ಲಿನ ಒಂದು ಕೋಣೆಯ ಅಭಾವವು, ಅವಳು ದೇವರ ಆತ್ಮನ ಶಕ್ತಿಯಿಂದ ಗರ್ಭಧರಿಸಿ ನಿಜವಾದ ದೇವರ ಮಗನನ್ನು ಹೊತ್ತುಕೊಂಡಿದ್ದಾಳೆ ಎನ್ನುವ ಸತ್ಯವನ್ನು ಯಾವುದೇ ರೀತಿಯಲ್ಲಿಯೂ ಅಲ್ಲಗಳೆಯುವಂತದ್ದಾಗಿರಲಿಲ್ಲ. ಪ್ರಾಣಿಗಳು ಇರುವಂಥ ಸ್ಥಳ ಮತ್ತು ಅವು ಹುಲ್ಲು ಮೇಯುವ ನೀರಿನ ದೋಣಿಯಲ್ಲಿ (ಗೋದಲಿ, ಲೂಕ-2:7) ಯೇಸು ಹುಟ್ಟಿದನು, ಆದರೆ ಆತನು ಯಾರಾಗಿದ್ದನು ಮತ್ತು ಮಾನವ ಜನಾಂಗದ ಮೇಲೆ ಆತನ ಪರಿಣಾಮವೇನು ಎನ್ನುವದರ ಪ್ರಾಮುಖ್ಯತೆಯನ್ನು ಇವುಗಳಲ್ಲಿ ಯಾವುದು ಕುಗ್ಗಿಸಲಿಲ್ಲ.

ಒಂದು ಮುಚ್ಚಲ್ಪಟ್ಟ ಬಾಗಿಲು ಯಾವಾಗಲೂ 'ಇಲ್ಲ' ಎಂಬ ಅರ್ಥವಾಗಿರುವದಿಲ್ಲ ಎನ್ನುವದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ದೇವರು ಯಾವುದನ್ನು ಅಪೇಕ್ಷಿಸುತ್ತಾನೋ ಅದನ್ನು ಮುಂದುವರೆಸುತ್ತಾನೆ ಎಂಬುದನ್ನು ನೀವು ಗ್ರಹಿಸಿಕೊಳ್ಳಲೇಬೇಕು.

## ಪ್ರತಿಯೊಂದು ವಿಳಂಬವು ಒಂದು ನಿರಾಕರಣೆಯಲ್ಲ

ಕೆಲವು ಸಲ ನಾವು ಯಾವುದಾದರು ಒಂದು ವಿಷಯವು ಒಂದು ನಿರ್ಧಿಷ್ಟವಾದ ಸಮಯದ ಚೌಕಟ್ಟಿನಲ್ಲಿಯೇ ಆಗಬೇಕೆಂದು ನಿರೀಕ್ಷಿಸುತ್ತೇವೆ ಮತ್ತು ನಾವು ಅಂದುಕೊಂಡಂತೆ ಸಮಯದ ಚೌಕಟ್ಟಿನಲ್ಲಿ ಅದು ನಡೆಯದಿದ್ದರೆ ಅದನ್ನು ತೊರೆಯುವದಕ್ಕೆ ಅಥವಾ ಬಿಟ್ಟುಬಿಡುವದಕ್ಕೆ ನಾವು ಹವಣಿಸುತ್ತೇವೆ. ಆದ್ದರಿಂದ ಆಗಾಗ್ಗೆ ನಾವು ನಿರಾಕರಣೆಗಳ ಹಾಗೆ ವಿಳಂಬವನ್ನು ಅನುವಾದಿಸುತ್ತೇವೆ. ಇದು ಹಾಗಲ್ಲ. ನಾವು ಈ ಹಿಂದಿನ ಅಧ್ಯಾಯಗಳಲ್ಲಿ ಕಲಿತುಕೊಂಡಂತೆ, ದೇವರು ವಿಷಯಗಳನ್ನು ಅವುಗಳು ನೇಮಕವಾದ ಸಮಯದಲ್ಲಿ ಪ್ರಕಟಪಡಿಸುತ್ತಾನೆ ಮತ್ತು ದೇವರ 'ಕೈರೋಸ್' ಸಮಯಕ್ಕಾಗಿ ನಾವು ಕಾಯುವದು ಅವಶ್ಯ.

ಯೋಸೇಫನ ಕುರಿತು ಆಲೋಚಿಸಿರಿ. ಅವನು ಒಬ್ಬ ಯೌವನಸ್ಥನಾಗಿದ್ದು, ಅವನ ಜೀವನದ ಮೂಲಕವಾಗಿ ದೇವರು ಏನು ಮಾಡಬೇಕೆಂದಿದ್ದನೋ ಅವುಗಳ ಕನಸುಗಳು ಅವನಿಗೆ ಕೊಡಲ್ಪಟ್ಟವು. ಸಮಯವು ಕಳೆಯುತ್ತಾ ಹೋಯಿತು. ವಿಷಯಗಳು ಅವನಿಗೆ ಕೆಟ್ಟದ್ದಾಗಿಯೇ ಇರುವಂತೆ ಕಂಡುಬಂದವು. ಗುಲಾಮನಾಗಿ ಮಾರಲ್ಪಟ್ಟು ಐಗುಪ್ತ್ಯಕ್ಕೆ ಕಳಿಸಲ್ಪಟ್ಟನು, ನಂತರ ಸುಳ್ಳಾಗಿ ತಪ್ಪುಹೊರಿಸಲ್ಪಟ್ಟು ಸೆರೆಮನೆಗೆ ಹಾಕಲ್ಪಟ್ಟನು. ಅವನ ಜೀವಿತಕ್ಕಾಗಿ ದೇವರಿಗಿದ್ದ ಉದ್ದೇಶಗಳು ಎಂದಿಗೂ ನೆರವೇರಲಿಲ್ಲ ಎಂಬುದು ಇದರ ಅರ್ಥವೋ? ಇಲ್ಲ! ದೇವರು ನಿಜವಾಗಿಯೂ ಸಂಗತಿಗಳನ್ನು ಸಂಘಟಿಸುತ್ತಿದ್ದನು, ಮತ್ತು ಅವನು ಸೆರೆಮನೆಗೆ ಬರುವದರ ಮೂಲಕವೂ ಸಹ ವಿಷಯಗಳ ಮೇಲೆ ಕೆಲಸ ಮಾಡುತ್ತಿದ್ದನು. ಸೆರೆಮನೆಯಲ್ಲಿ ಆತನ ಮಾತು (ಕನಸುಗಳ ಅರ್ಥವರಣೆ) ಬಿಡುಗಡೆ ಮಾಡಲ್ಪಟ್ಟು ಇದು ಸಂಭಸಿತು. ಮತ್ತು ಇದ್ದಕ್ಕಿದ್ದಂತೆಯೇ, ಸಂಗತಿಗಳು ಬದಲಾದವು ಮತ್ತು ಅವನ ಕಣ್ಣುಗಳ ಮುಂದೆಯೇ ನೇರವಾಗಿ ದೇವರ ಯೋಜನೆಗಳು ಪ್ರಕಟವಾಗುವದಕ್ಕೆ ಪ್ರಾರಂಭವಾದವು. ಇದರೊಟ್ಟಿಗೆ, ದೇವರು ಯೋಸೇಫನನ್ನು ಪರೀಕ್ಷೆಗೊಳಪಡಿಸಿ (ಲೋಹವು ಶೋಧಿಸಲ್ಪಟ್ಟು ಶುದ್ಧೀಕರಿಸಲ್ಪಡುವ ಹಾಗೆ ಶೋಧಿಸಲ್ಪಟ್ಟನು) ಅವನ ಜೀವನದ ಹಂಚಿಕೆಗಾಗಿ ಅವನನ್ನು ಸಿದ್ಧಪಡಿಸಿದನು.

ಕೀರ್ತನೆ–105:17–22

**17–ಆತನು ಅವರ ಮುಂದಾಗಿ ಒಬ್ಬನನ್ನು ಕಳುಸಿದನು; ದಾಸತ್ವಕ್ಕೆ ಮಾರಲ್ಪಟ್ಟ ಯೋಸೇಫನೇ ಅವನು.**

**18–ಅವನ ಕಾಲುಗಳು ಕೋಳದಲ್ಲಿ ನೊಂದವು; ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು.**

**19–ಅವನು ತನ್ನ ಮಾತು ನೆರವೇರುವ ತನಕ ಯೆಹೋವನ ವಾಕ್ಯದಿಂದ ಶೋಧಿತನಾದನು.**

**20–ಅರಸನು ಅಪ್ಪಣೆಮಾಡಿ ಅವನನ್ನು ತಪ್ಪಿಸಿದನು; ಜನಪತಿಯು ಅವನನ್ನು ಬಿಡಿಸಿದನು.**

**21–ಅವನನ್ನು ತನ್ನ ಮನೆಗೆ ಯಜಮಾನನ್ನಾಗಿಯೂ ತನ್ನ ಆಸ್ತಿಗೆಲ್ಲಾ ಅಧಿಕಾರಿಯನ್ನಾಗಿಯೂ ಮಾಡಿದನು.**

**22–ತನ್ನ ಪ್ರಧಾನರನ್ನು ಇಚ್ಛಾನುಸಾರವಾಗಿ ಬದುಕಿಸುವದಕ್ಕೂ ತನ್ನ ಮಂತ್ರಿಗಳಿಗೆ ಬುದ್ಧಿಕಲಿಸುವದಕ್ಕೂ ಅವನಿಗೆ ಅಧಿಕಾರ ಕೊಟ್ಟನು.**

ಆದ್ದರಿಂದ ನಾವು ನಮ್ಮ ಸನ್ನಿವೇಶಗಳನ್ನು ಮತ್ತು ಪರಿಸ್ಥಿತಿಗಳನ್ನು ಆಲೋಚಿಸುವ ಹಾಗೆ, ಅಡಚಣೆಗಳನ್ನು ವಿಳಂಬ ಎಂಬುದಾಗಿ ಭಾಷಾಂತರ ಮಾಡದಂತೆ ಜಾಗ್ರತೆಯುಳ್ಳವರಾಗಿರಬೇಕು.

## ಮುಚ್ಚಿದ ಬಾಗಿಲುಗಳನ್ನು ಒತ್ತಾಯದಿಂದ ತೆರೆದು ವಿಳಂಬಗಳ ಮೂಲಕ ನಿಲ್ಲುವದು

ಆದದರಿಂದ, ನಮ್ಮ ಜೀವಿತದ ಪರಿಸ್ಥಿತಿಗಳಲ್ಲಿ ಆತನ ಕೆಲಸದ ಹಸ್ತಗಳನ್ನು ಮತ್ತು ಆತನ ದೈಹಿಕ ಸಂಘಟಿಸುಕೆಗಳನ್ನು ಗುರುತಿಸುವದರಿಂದ ದೇವರ ಮಾರ್ಗದರ್ಶನವನ್ನು ಗ್ರಹಿಸಿ ಹೊಂದಿಕೊಳ್ಳುವ ವೇಳೆಯಲ್ಲಿ, ನಾವು ಜಾಗ್ರತೆಯುಳ್ಳವರಾಗಿರಬೇಕು.

(ಎ) ಪ್ರತಿಯೊಂದು ಮುಚ್ಚಿದ ಬಾಗಿಲನ್ನು 'ಇಲ್ಲ' ಎಂದು ಒಪ್ಪಿಕೊಳ್ಳಬಾರದು. ಕೆಲವು ಬಾಗಿಲುಗಳನ್ನು ಒತ್ತಾಯದಿಂದ ತೆಗೆಯಬೇಕು.

(ಬಿ) ಪ್ರತಿಯೊಂದು ವಿಳಂಬವನ್ನು ಒಂದು ನಿರಾಕರಣೆಯ ಹಾಗೆ ಒಪ್ಪಿಕೊಳ್ಳಬಾರದು. ಕೆಲವು ಸಲ ಸಮಯದ ಮೂಲಕ ನಿಂತುಕೊಳ್ಳುವದು ನಮಗೆ ಅಗತ್ಯವಿರುತ್ತದೆ.

(ಸಿ) ಆದಾಗ್ಯೂ, ಸಂಭಸಿದ್ದರ ಪ್ರತಿಯೊಂದರೊಳಗೆ ಅತಿಯಾಗಿ ಮಾನಸಿಕವಾಗಿ ವಿಚಾರಮಾಡಬೇಡಿರಿ. 'ಭೂತ' ಮತ್ತು 'ಅತಿಮಾನುಷರು' ಆಗಬೇಡಿರಿ. ಅಂಧವಿಶ್ವಾಸಿಗಳು ಅಥವಾ ವಿಚಾರವಿಲ್ಲದವರೂ ಆಗಬೇಡಿರಿ.

ದೇವರು ಏನಾದರೊಂದನ್ನು ಸಂಘಟಿಸಿರುವಾಗ ಮತ್ತು ಆತನು ಇದನ್ನು ಮಾಡದಿರುವಾಗ ಅದನ್ನು ಗ್ರಹಿಸಿಕೊಳ್ಳುವದು ನಮಗೆ ಅಗತ್ಯವಾಗಿರುತ್ತದೆ. ದೇವರು ಕೆಲಸದಲ್ಲಿರುವಾಗ ಗುರುತಿಸಿರಿ. ಆತನ ಉದ್ದೇಶಗಳೊಳಗೆ ನಿಮ್ಮನ್ನು ಮಾರ್ಗದರ್ಶನ ಮಾಡುವ ಆತನ ರೀತಿಯನ್ನು ಒಪ್ಪಿಕೊಳ್ಳಿರಿ. ನಿಮಗಾಗಿ ಆತನು ಯಾವುದನ್ನು ಸಂಘಟಿಸಿದ್ದಾನೋ ಅದರೊಳಗೆ ನಡೆಯಿರಿ.

ಒಂದು ಸ್ಥಳೀಯ ಸಭೆಯ ಹಾಗೆ ನಮ್ಮ ಪ್ರಯಾಣದಲ್ಲಿ, ಸನ್ನಿವೇಶಗಳು ಮತ್ತು ದೈವಿಕ ಸಂಘಟಿಸುಕೆಗಳ ಮೂಲಕ ದೇವರು ನಮಗೆ ಮಾರ್ಗದರ್ಶನ ಮಾಡಿದ ಬಹಳಷ್ಟು

ಸಮಯಗಳಿವೆ. ಬಹುಮಟ್ಟಿಗೆ ಇದು, ಯಾರಾದರೂ ದಾರಿಯುದ್ದಕ್ಕೂ ನಮ್ಮ ಜೊತೆ ಬಂದು ಕೆಲವು ಸುದ್ದಿಗಳನ್ನು ನಮ್ಮೊಟ್ಟಿಗೆ ಹಂಚಿಕೊಳ್ಳಬಹುದು; ಒಂದು ಅಸಹಜವಾದ ಬಾಗಿಲು ನಮಗಾಗಿ ತೆರೆಯುತ್ತದೆ. ಇಲ್ಲಿ ಕೆಲವು ಉದಾಹರಣೆಗಳಿವೆ:

## ಮೇ/ಜೂನ್ 2002: ಮಂಗಳೂರಿನ ಎಪಿಸಿಯ ಆರಂಭ

ನವೆಂಬರ್ 2001ರಲ್ಲಿ, ಡಾ. ರಂಜಿತ್ ಪೀಟರ್, ಬೆಂಗಳೂರಿನಲ್ಲಿ ನಮ್ಮನ್ನು ಭೇಟಿ ಮಾಡಿ ಮಂಗಳೂರಿನ ಹೊರಭಾಗದಲ್ಲಿರುವ ದೇರಳಕಟ್ಟೆ ಎನ್ನುವ ಒಂದು ಸ್ಥಳದ ಕುರಿತು ತಿಳಿಸಿದರು. ಅಲ್ಲಿ ಅನೇಕ ಕಾಲೇಜುಗಳಿದ್ದು, ಅಲ್ಲಿರುವ ವಿದ್ಯಾರ್ಥಿಗಳಿಗಾಗಿ ಒಂದು ಸ್ಥಳೀಯ ಸಭೆಯನ್ನು ನಾವು ಪ್ರಾರಂಭಿಸೋಣ ಎಂದು ಸಲಹೆಕೊಟ್ಟರು. ನಾವು ಅದನ್ನು ಮನಸ್ಸಿನಲ್ಲಿಟ್ಟುಕೊಂಡೆವು. ಬೆಂಗಳೂರಿನ ಎಪಿಸಿಯು ತುಂಬಾ ಚಿಕ್ಕದಾಗಿದ್ದು, ಆರಂಭವಾಗಿ ಒಂದು ವರ್ಷವೂ ಸಹ ಆಗಿರಲಿಲ್ಲ. 2002ರ ಆದಿಭಾಗದಲ್ಲಿ, ನಾವು ನಾಲ್ಕು ಜನರು ಸ್ಥಳದ ಗೂಢಚಾರಿಕೆ ಮಾಡುವದಕ್ಕೆ ದೇರಳಕಟ್ಟೆಗೆ ಹೋದೆವು. ನಾವು ಕಾಲೇಜುಗಳನ್ನು ನೋಡಿದೆವು ಮತ್ತು ಒಂದು ರೇಡಿಯೋ ಸಿನೆರಮವನ್ನು ಸಹ ಗಮನಿಸಿದೆವು, ಅದು 50 ಜನರು ಕೂತುಕೊಳ್ಳಬಹುದಾದ ಒಂದು ಚಿಕ್ಕದಾದ ಸಭಾಂಗಣವಾಗಿದ್ದು ಅಲ್ಲಿ ಪರದೆಯ ಮೇಲೆ ವೀಡಿಯೋ ಸಿನೆಮಾಗಳನ್ನು ಹಾಕುತ್ತಿದ್ದರು. ನಾವು ಅದರ ಮಾಲೀಕನ ಬಳಿ ಮಾತಾಡಿ, ಒಂದು ಶನಿವಾರ ಒಂದು ಸಂಗೀತ ಕಚೇರಿಯನ್ನು ನಡೆಸಲು ಮತ್ತು ಪ್ರತಿ ಭಾನುವಾರ ಬೆಳಿಗ್ಗೆ 10:30ರಿಂದ ಮಧ್ಯಾಹ್ನ 12:30ರವರೆಗೆ ಸಭೆಯ ಆರಾಧನೆಗಳನ್ನು ನಡೆಸಲು ಇದನ್ನು ಬಾಡಿಗೆಗೆ ಕೊಡಬಹುದಾ ಎಂದು ಕೇಳಿದೆವು, ಮಧ್ಯಾಹ್ನ 1ಗಂಟೆಗೆ ಅವನ ಸಿನೆಮಾದ ಮೊದಲ ಷೋ ಆರಂಭವಾಗುತ್ತಿತ್ತು ಅದಕ್ಕಿಂತ ಮೊದಲು ನಾವು ಆರಾಧನೆಯನ್ನು ಮುಗಿಸುತ್ತೇವೆ ಎಂದು ಹೇಳಿದೆವು. ಅವನು ಒಪ್ಪಿಕೊಂಡನು. ಹಾಗಾಗಿ ನಾವು ಏಕವ್ಯಕ್ತಿ ಸಂಗೀತ ಕಚೇರಿಯನ್ನು ಮಾಡಿದೆವು! ಜೂನ್ 8 ರಂದು ಶನಿವಾರ ಮಂಗಳೂರಿನ ದೇರಳಕಟ್ಟೆಯಲ್ಲಿರುವ ಈ ಚಿಕ್ಕದಾದ ಬಾಡಿಗೆಯ ಸಿನೆಮಾ ಹಾಲ್‌ನಲ್ಲಿ ಜಾರ್ಜ್ ಸ್ಯಾಮ್ ಒಂದು ಸಂಗೀತ ಕಚೇರಿಯನ್ನು ನಡೆಸಿದರು. ಬಹುಶ: ಸುಮಾರು 20 ಜನರು ಈ ಸಂಗೀತ ಕಚೇರಿಗೆ ಬಂದಿದ್ದರು! ಅನಂತರ ಮಾರನೆಯ ದಿನ ಭಾನುವಾರ ಜೂನ್ 9, 2002 ರಂದು ನಾವು ಆಲ್ ಪೀಪಲ್ಸ್ ಚರ್ಚ್–ಮಂಗಳೂರು ಇದರ ನಮ್ಮ ಮೊದಲ ಆರಾಧನೆಯನ್ನು ನಡೆಸಿದೆವು (ಪ್ರಾರಂಭದಲ್ಲಿ ಇದು ಎಪಿಸಿ – ದೇರಳಕಟ್ಟೆ ಎಂದು ಕರೆಯಲ್ಪಡುತ್ತಿತ್ತು). ವರ್ಷಗಳು ಕಳೆದಂತೆ ಈ ಸಭಾಸ್ಥಾಪನೆಯ ಮೂಲಕ ಅನೇಕ ಕಾಲೇಜು ವಿದ್ಯಾರ್ಥಿಗಳ ಜೀವಿತಗಳು ಬಲಯುತವಾಗಿ ಮುಟ್ಟಲ್ಪಟ್ಟಿತು,

ಸಮೃದ್ಧಗೊಂಡಿತು ಮತ್ತು ರೂಪಾಂತರಗೊಂಡಿತು. ಮಂಗಳೂರು ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಸ್ಥಳೀಯ ಸಭೆಯು ಈದಿನ ಒಂದು ವೇಗವಾಗಿ ಬೆಳೆದಿರುವ ಸಭೆಯಾಗಿದೆ.

## ಜುಲೈ 2002: ಎಪಿಸಿ ನೇಪಾಳಿ ಸಭೆಯ ಆರಂಭ

ಜುಲೈ 2002ರಲ್ಲಿ, ಸುಮಾರು 10 ಜನರಿರುವ ನೇಪಾಳಿ ಜನರ ಒಂದು ಗುಂಪು ನನ್ನ ಬಳಿ ಬಂದು ಪ್ರತಿ ಮಂಗಳವಾರ ಸಾಯಂ –ಕಾಲ 4 ಗಂಟೆಯಿಂದ 5:30 ರವರೆಗೆ ಆರಾಧನೆಯಲ್ಲಿ ತಮ್ಮನ್ನು ನಡೆಸಿ ವಾಕ್ಯವನ್ನು ಬೋಧಿಸುವಂತೆ ನನ್ನನ್ನು ಕೇಳಿಕೊಂಡರು. ನೇಪಾಳಿ ಜನರ ಮಧ್ಯದಲ್ಲಿ ಸೇವೆ ಮಾಡುವದು ಅಥವಾ ಒಂದು ನೇಪಾಳಿ ಸಭೆಯನ್ನು ಹೊಂದುವದು ಈಗ ನಮ್ಮ ಯೋಜನೆಯಲ್ಲಿರಲಿಲ್ಲ. ಹೇಗಿದ್ದರೂ, ಈ ಚಿಕ್ಕದಾದ ಮತ್ತು ಸರಳವಾದ ಪ್ರಾರಂಭದೊಂದಿಗೆ, ಆಲ್ ಪೀಪಲ್ಸ್ ಚರ್ಚ್ – ನೇಪಾಳಿ

ಅನ್ಯೋನ್ಯತೆಯು ಜುಲೈ 2002 ರಂದು ಆರಂಭವಾಯಿತು. ನೇಪಾಳಿ ಜನರಿಗೆ ಸೇವೆ ಮಾಡುವದಕ್ಕಾಗಿ ನಮಗೆ ಸಹಾಯ ಮಾಡಲು ಜನರನ್ನು ಒದಗಿಸುವದರಲ್ಲಿ ದೇವರು ನಂಬಿಗಸ್ತನಾಗಿದ್ದನು. ನೇಪಾಳಿ ಸಭೆಯು ಬೆಳೆಯಿತು, ವರ್ಷಗಳು ಕಳೆದಂತೆ ನೂರಾರು ನೇಪಾಳಿ ಜನರಿಗೆ ಸೇವೆ ಸಲ್ಲಿಸುವದಕ್ಕೆ ಸಾಧ್ಯವಾಯಿತು. 2017ರಲ್ಲಿ, ಅವರ ಸ್ವಂತ ಸ್ಥಳಿಯ ಸಭೆಯನ್ನು ರಚಿಸಿಕೊಳ್ಳುವದಕ್ಕೆ ಮತ್ತು ಒಂದು ಅದ್ಭುತವಾದ ವಿಶ್ವಾಸಿಗಳ ಸಮಾಜವು ಸ್ಥಾಪಿಸಿಕೊಳ್ಳುವದಕ್ಕೆ ಅವರಿಗೆ ಅವಕಾಶ ಮಾಡಿಕೊಟ್ಟೆವು.

## ಜೂನ್ 2008: ಕ್ಯಾಟಲಿಸ್ಟ್‌ನ ಆರಂಭ

ಯಾವಾಗಲೋ ಒಂದು ಸಲ ಮಾರ್ಚ್/ಏಪ್ರಿಲ್‌ನಲ್ಲಿ, ಡಾ.ಎ.ಎಫ್.ಪಿಂಟೋ, ರಯನ್ ಇಂಟರ್‌ನ್ಯಾಷನಲ್ ಸ್ಕೂಲ್ಸ್‌ಗಳ ಮತ್ತು ಕ್ಸೇವಿಯರ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಛೇರ್‌ಮನ್, ನನ್ನನ್ನು ಭೇಟಿ ಮಾಡಿ ಯಲಹಂಕದಲ್ಲಿರುವ ರಯನ್ ಇಂಟರ್‌ನ್ಯಾಷನಲ್‌ನ ವಿದ್ಯಾರ್ಥಿಗಳಿಗಾಗಿ ಸತ್ಯವೇದದ ತರಗತಿಗಳನ್ನು ನಡೆಸುವದಕ್ಕಾಗುತ್ತದೋ ಎಂದು ಕೇಳಿದರು. ಇದನ್ನು ಹೇಗೆ ಮಾಡಬೇಕೆಂಬುದು ಇಲ್ಲವೇ ಸರಿಯಾದ ಜನರು ನಮಗೆ ಸಿಗುತ್ತಾರೋ ಎನ್ನುವದು ನಮಗೆ ಗೊತ್ತಿಲ್ಲದಿದ್ದಾಗ್ಯೂ ಸಹ, ಇದನ್ನು ಮಾಡುವದಕ್ಕೆ ನಾನು ಒಪ್ಪಿಕೊಂಡೆ. ಆದರೆ ಸಾಕಷ್ಟು ಖಂಡಿತವಾಗಿ, ಪಾ. ಸೆಲಿನಾ ಮ್ಯಾಕ್ವಾನ ಸಂದರ್ಶನಕ್ಕೆ ಬಂದು ಜೂನ್ 2008ರಲ್ಲಿ

ನಮ್ಮೊಂದಿಗೆ ಸೇರಿಕೊಂಡರು, ಮತ್ತು ಶಾಲೆಗಳಲ್ಲಿನ ನಮ್ಮ ಔಟ್‌ರೀಚ್‌ಗೆ ನೇರವಾಗಿ ಕ್ಯಾಟಲಿಸ್ಟ್ ಆರಂಭಗೊಂಡಿತು. ನಾವು ಇದನ್ನು ಯಲಹಂಕದ ರಯನ್ ಇಂಟರ್ ನ್ಯಾಷನಲ್‌ನೊಂದಿಗೆ ಆರಂಭಮಾಡಿದ್ದು, ನಂತರ ಇತರ ಶಾಲೆಗಳಿಗೆ ವಿಸ್ತರಿಸಲ್ಪಟ್ಟಿದೆ.

## ಜೂನ್ 2012: ಗಾಡ್ ಟಿ ವಿ (ಏಷ್ಯಾ)

ಜೂನ್ 2012ರಲ್ಲಿ, ಚೆನ್ನೈನಲ್ಲಿರುವ ಗಾಡ್ ಟಿವಿಯವರಿಂದ ನಾನು ಒಂದು ಕರೆಯನ್ನು ಸ್ವೀಕರಿಸಿದೆ, ಗಾಡ್ ಟಿವಿ (ಏಷ್ಯಾ) ಯಲ್ಲಿ ಹಣ ಸಂದಾಯದ ಕಾರ್ಯಕ್ರಮವನ್ನು ನಡೆಸುವದಕ್ಕೆ ನಮ್ಮನ್ನು ಆಹ್ವಾನಿಸಿದರು. ಎಪಿಸಿಯು ಬೆಂಗಳೂರಿನಲ್ಲಿ ದೊಡ್ಡದಾದ ಸಭೆಯಾಗಿರಲಿಲ್ಲ ಆದಾಗ್ಯೂ ಈ ರೀತಿಯ ಆಹ್ವಾನ ಕೊಡಲ್ಪಡುವ ವಿಶೇಷ ಪ್ರಯೋಜನ ನಮ್ಮದಾಗಿತ್ತು. ನಾವು ಅಗತ್ಯವುಳ್ಳ ಆರ್ಥಿಕ ವ್ಯವಸ್ಥೆಯನ್ನು ಹೊಂದಿದ್ದೆವು ಮತ್ತು ಕಾರ್ಯಕ್ರಮಗಳನ್ನು ತಯಾರಿಸಲು ನಮಗೆ ಸಹಾಯ ಮಾಡುವದಕ್ಕೆ ಜನರಿದ್ದರು, ಆದ್ದರಿಂದ ನಾವು ಇದರೊಳಗೆ ಹೆಜ್ಜೆಯಿಟ್ಟೆವು.

## ಅಕ್ಟೋಬರ್ 2012: ಅಲ್ಪ ಅವಧಿಯ ಸತ್ಯವೇದದ ಕೋರ್ಸ್‌ನ ಆರಂಭ

ಎಪಿಸಿಯು ಆಸ್ಪತ್ರೆಗಳಲ್ಲಿ ಆತ್ಮೀಕವಾದ ಸೇವೆಗಳನ್ನು ಸಲ್ಲಿಸಬಹುದೇನೋ ಎಂಬುದನ್ನು ತಿಳಿಯುವದಕ್ಕೆ 2011ರಲ್ಲಿ, ಇಮ್ಮಾನುಯೇಲ್ ಹಾಸ್ಪಿಟಲ್ ಅಸೋಸಿಯೇಷನ್‌ನಿಂದ (ಇಹೆಚ್‌ಎ) ಡಾ. ಅಶೋಕ್ ಚಾಕೋರವರು ಎಪಿಸಿಯನ್ನು ಸಂಪರ್ಕಿಸಿದರು. ನವಂಬರ್ 2011ರಲ್ಲಿ ನಾನು ಚಂಪಾದಲ್ಲಿರುವ ಇಹೆಚ್‌ಎ ಕ್ರಿಶ್ಚಿಯನ್ ಆಸ್ಪತ್ರೆಯನ್ನು (ಛತ್ತೀಸ್‌ಗಡ) ಮತ್ತು ಚತ್ತಾರ್‌ಪುರ್‌ನಲ್ಲಿರುವ ಇಹೆಚ್‌ಎ ಕ್ರಿಶ್ಚಿಯನ್ ಆಸ್ಪತ್ರೆಯನ್ನು (ಮಧ್ಯ ಪ್ರದೇಶ) ಸಂದಿಸಿದೆ. ಚಂಪಾದಲ್ಲಿನ ಈ ಆಸ್ಪತ್ರೆಯ ನಿದೇಶಕರಾದ ಮಿ. ಜೋನ್ ವಿಲ್ಸ್ ಸ್ಥಳೀಯ ಪಾಸ್ಟರ್ಸ್‌ಗಳೊಂದಿಗೆ ಒಂದು ಮೀಟಿಂಗನ್ನು ಏರ್ಪಡಿಸಿದರು. ತಮ್ಮ ಜನರನ್ನು ಸತ್ಯವೇದದಲ್ಲಿ ಅಣಿಗೊಳಿಸುವದಕ್ಕೆ ಒಂದು ಅಲ್ಪ ಅವಧಿಯ ಸತ್ಯವೇದದ ಕೋರ್ಸ್‌ಗಾಗಿ ತಮ್ಮ ಅಪೇಕ್ಷೆಯನ್ನು ಅವರು ತಿಳಿಸಿದರು. ಆದ್ದರಿಂದ ತಮ್ಮ ಸೇವೆಯ ಭಾಗಗಳಲ್ಲಿ ಒಂದು ಪರಿಣಾಮವನ್ನುಂಟು ಮಾಡುವದಕ್ಕೆ ಯಾವುದೇ ಪೂರ್ವ ತರಬೇತಿಯನ್ನು ಪಡೆಯದಿರುವ ಸೇವೆಯ ನಾಯಕರುಗಳನ್ನು ಮತ್ತು ಪಾಸ್ಟರ್ಸ್‌ಗಳನ್ನು ಸಜ್ಜುಗೊಳಿಸುವದಕ್ಕೆ ಅಕ್ಟೋಬರ್ 2012ರಲ್ಲಿ ಎಪಿಸಿಯು ಚಂಪಾದಲ್ಲಿರುವ ಇಹೆಚ್‌ಎ ಕ್ರಿಶ್ಚಿಯನ್ ಆಸ್ಪತ್ರೆಯಲ್ಲಿ ಒಂದು ಅಲ್ಪ ಅವಧಿಯ ಸತ್ಯವೇದದ ಕೋರ್ಸನ್ನು ಸಂಘಟಿಸಿತು. ನಾವು ಇದನ್ನು ಎರಡು ವರ್ಷಗಳವರೆಗೆ (2012–2013) ನಡೆಸಿದೆವು. ಎಪಿಸಿಯ ಈ ಅಲ್ಪ ಅವಧಿಯ ಸತ್ಯವೇದದ ಕೋರ್ಸ್ ಹುಟ್ಟಿದ್ದರಿಂದ, ಭಾರತದ ಇತರ ಭಾಗಗಳಲ್ಲಿಯೂ ಇದನ್ನು ನಡೆಸುವದಕ್ಕೆ ನಾವು

ಶಕ್ತರಾದೆವು. ನಾವು ಇದನ್ನು ಪ್ರತಿವರ್ಷ ವಾರಣಾಸಿಯಲ್ಲಿ (2015ರಿಂದಲೂ) ಮಾಡುತ್ತಿದ್ದೇವೆ ಮತ್ತು ವರ್ಷ ವರ್ಷವೂ ಅನೇಕ ಜನರು ತರಬೇತಿಗೊಳ್ಳುವದಕ್ಕೆ ಶಕ್ತರಾಗಿದ್ದಾರೆ.

## ಪರ್ಯಾಲೋಚನೆ

1) ದೇವರು ನಿಮಗೆ ಮಾರ್ಗದರ್ಶನ ಮಾಡುವದಕ್ಕೆ ನೀವು ಹುಡುಕಿದಂತಹ ಮತ್ತು ನಿಮ್ಮ ಜೀವನದ ಸನ್ನಿವೇಶಗಳನ್ನು ಮತ್ತು ಪರಿಸ್ಥಿತಿಗಳನ್ನು ಸಂಘಟಿಸುವದರಿಂದ ಆತನು ಹಾಗೆ ಮಾಡಿದಂತಹ ಜೀವನದಲ್ಲಿನ ಒಂದು ಅಥವಾ ಎರಡು ಅನುಭವಗಳನ್ನು ನೆನಪು ಮಾಡಿಕೊಳ್ಳುತ್ತಿರೋ?

2) ದೇವರು ನಮಗಾಗಿ ಸಂಗತಿಗಳನ್ನು ಸಂಘಟಿಸುತ್ತಿದ್ದಾನೆ ಎನ್ನುವದನ್ನು ಗ್ರಸುವದಕ್ಕೆ(ಗುರುತಿಸುವದಕ್ಕೆ)ಸಹಾಯವಾಗುವಂತ ಯಾವ ಮಾರ್ಗಸೂಚಿಯನ್ನು ನಾವು ಉಪಯೋಗಿಸುತ್ತೇವೆ? (ಸೈತಾನನು ನಮಗಾಗಿ ಸಿದ್ಧಪಡಿಸಿದ ಒಂದು 'ಯುಕ್ತಿ' ಯನ್ನು ವಿರೋಧಿಸುವ ಹಾಗೆ).

3) ನೀವು ಒಂದು ನಿರ್ಧಿಷ್ಟವಾದ ಪರಿಸ್ಥಿತಿಯಲ್ಲಿ ಒಂದು 'ಮುಚ್ಚಿರುವ ಬಾಗಿಲನ್ನು' ಎದುರಿಸಿದಾಗ ಅದನ್ನು ಒಡಿದು ತೆರೆಯಬೇಕು, ಮತ್ತು ಅದರಿಂದ ದೂರ ಹೋಗಬಾರದು ಎಂಬುದನ್ನು ನೀವು ಹೇಗೆ ಗ್ರಹಿಸುತ್ತೀರಿ?

# 14

# ಇದೆಲ್ಲವನ್ನೂ ಒಟ್ಟಾಗಿ ಇಡುವದು

ಈ ಕೊನೆಯ ಅಧ್ಯಾಯದಲ್ಲಿ ನಾವು ಪ್ರತಿಯೊಂದನ್ನೂ ಒಟ್ಟಿಗೆ ಕಟ್ಟುತ್ತೇವೆ ಮತ್ತು ನಮ್ಮ ಜೀವಿತಗಳನ್ನು ಕ್ರಮಪಡಿಸಿಕೊಳ್ಳುವದಕ್ಕೆ ದೇವರಿಂದ ಮಾರ್ಗದರ್ಶನವನ್ನು ಹಾಗೂ ಆದೇಶವನ್ನು ನಾವು ಹುಡುಕುವ ಹಾಗೆ ಸಹಾಯವಾಗುವಂತ ಕೆಲವು ಪ್ರಾಯೋಗಿಕ ಒಳನೋಟಗಳನ್ನು ಹಂಚಿಕೊಳ್ಳುತ್ತೇವೆ.

ನಾವು ದೇವರ ಮುಂದೆ ದೀನರಾಗಿ ನಡೆಯಬೇಕು, ಯಾವಾಗಲೂ ಆತನ ಆದೇಶವನ್ನು ಹುಡುಕುವವರೂ, ಕೇಳುವವರೂ ಆಗಿದ್ದು ಮಾಡಬೇಕೆಂದು ಆತನು ನಮಗೆ ಏನು ಸಲಹೆಗಳನ್ನು ಕೊಡುತ್ತಾನೋ ಅದರಲ್ಲಿ ಆತನಿಗೆ ನಾವು ವಿಧೇಯರಾಗಿರಬೇಕು.

## ಒಂದಕ್ಕಿಂತಲೂ ಹೆಚ್ಚು ರೀತಿಗಳು

ಯೋಬ-33:14-16

**14-ದೇವರು ಮಾತಾಡುವ ರೀತಿ ಒಂದುಂಟು ಹೌದು ಎರಡೂ ಉಂಟು ಮನುಷ್ಯನಾದರೋ ಲಕ್ಷಿಸುವದಿಲ್ಲ.**

**15-ಮನುಷ್ಯರಿಗೆ ಗಾಢನಿದ್ರೆಯುಂಟಾದಾಗಲೂ ಹಾಸಿಗೆಯ ಮೇಲೆ ಜಂಪು ಹತ್ತಿದಾಗಲೂ ಆತನು ಸ್ವಪ್ನದಲ್ಲಿ ರಾತ್ರಿಯ ಕನಸಿನಲ್ಲಿ**

**16-ಅವರ ಕಿವಿಗಳನ್ನು ತೆರೆದು ಅವರಿಗೆ ಶಿಕ್ಷಾವಚನವನ್ನು ಉಪದೇಶಿಸಿ ಅದಕ್ಕೆ ಮುದ್ರೆ ಹಾಕುವನು.**

ಆಗಾಗ್ಗೆ, ದೇವರು ಮಾತಾಡುವಾಗ, ಆತನು ಎರಡು ರೀತಿಗಳಲ್ಲಿ ನಮಗೆ ಮಾತಾಡುತ್ತಾನೆ. ಅಂದರೆ ನಾವು ವಿವರಿಸಿರುವ ಹನ್ನೊಂದು ರೀತಿಗಳ ಯಾವುದಾದರೂ ಒಂದು ಒಟ್ಟುಗೂಡುಕೆಯಲ್ಲಿ ಆತನು ಮಾತಾಡುತ್ತಾನೆ. ಅದಕ್ಕೆ ಲಕ್ಷ್ಯ ಕೊಡುವದು (ಹೀಬ್ರೂನಲ್ಲಿ 'ಶೂರ್' ಅಂದರೆ ತಪಾಸಣೆಯಲ್ಲಿ ಸುತ್ತಲೂ ಹೋಗುವದು, ಸಮೀಕ್ಷೆ ಮಾಡುವದು, ನೋಡುವದು) ನಮ್ಮ ಜವಾಬ್ದಾರಿಯಾಗಿದೆ, ಮತ್ತು ದೇವರು ವಿವಿಧ ರೀತಿಗಳ ಮೂಲಕವಾಗಿ ಏನು ಮಾತಾಡಿದ್ದಾನೋ ಅವುಗಳನ್ನು ಗುರುತಿಸಿ, ನಮ್ಮ ಜೀವಿತಗಳಿಗಾಗಿ ಆತನ ಮಾರ್ಗದರ್ಶನವನ್ನೂ ಮತ್ತು ಆದೇಶವನ್ನೂ ಹೊಂದಿಕೊಳ್ಳುವದಕ್ಕೆ ಅವೆಲ್ಲವನ್ನೂ ಒಟ್ಟಿಗೆ ಇಡಬೇಕು.

## ನಿಮ್ಮ ಮುನ್ನಡೆಸುಕೆಯನ್ನು ಪರೀಕ್ಷಿಸುವದು ಮತ್ತು ಊರ್ಜಿತಗೊಳಿಸುವದು

ನಮ್ಮ ಜೀವಿತಗಳಿಗಾಗಿ ದೇವರ ಮಾರ್ಗದರ್ಶನವನ್ನು ಮತ್ತು ಆದೇಶವನ್ನು ನಾವು ಹೊಂದಿಕೊಳ್ಳುವ ಹನ್ನೊಂದು ರೀತಿಗಳನ್ನು ನಾವು ಗಮನಿಸಿದ್ದೇವೆ. (1) ವಾಕ್ಯ, (2) ಆತನ ಆತ್ಮನ ಅಂತರಂಗದ ಸಾಕ್ಷಿ, (3)ಪವಿತ್ರಾತ್ಮನ ಸ್ವರ, (4)ಪವಿತ್ರಾತ್ಮನ ವರಗಳು, (5)ಕನಸುಗಳು ಮತ್ತು ದರ್ಶನಗಳು, (6)ಪ್ರವಾದನೆಗಳು, (7)ದೇವದೂತರುಗಳು, (8)ದೈವಿಕ ಸಮಾಲೋಚನೆ, (9) ನವೀಕರಣಗೊಂಡ ಮನಸ್ಸು, (10)ಸಮಯಗಳು ಮತ್ತು ಕಾಲಗಳು (11)ಸನ್ನಿವೇಶಗಳು ಮತ್ತು ದೈವಿಕ ಸಂಘಟಿಸುವಿಕೆಗಳು. ಕೇವಲ ಈ ರೀತಿಗಳೊಂದಿಗೆ ತನ್ನ ಮಾರ್ಗದರ್ಶನವನ್ನು ನಮಗೆ ಮಾತಾಡುವದಕ್ಕೆ ನಾವು ದೇವರನ್ನು ಖಂಡಿತವಾಗಿಯೂ ಮಿತಿಗೊಳಿಸಿಲ್ಲ ಅಥವಾ ನಿರ್ಬಂಧಿಸಿಲ್ಲ. ನಿಜವಾಗಿ ಹೇಳುವದಾದರೆ, ನಾವು ಇವುಗಳಿಗೆ ಒಗ್ಗಿಕೊಂಡುಬಿಟ್ಟಿದ್ದೇವೆ. ದೇವರು ಮಾತಾಡಿ ಹೊಸದಾದ ನೂತನ ರೀತಿಗಳಲ್ಲಿ ಚಲಿಸಲು ಶಕ್ತನಾಗಿದ್ದಾನೆ.

ಹೇಗಿದ್ದರೂ, ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಪ್ರಾಥಮಿಕ ರೀತಿಗಳ ಹಾಗೆ, ನಾವು ಮೊದಲ ಮೂರನ್ನು ಗಮನಿಸೋಣ: (1)ವಾಕ್ಯ, (2) ಆತನ ಆತ್ಮನ ಅಂತರಂಗದ ಸಾಕ್ಷಿ ಮತ್ತು (3)ಪವಿತ್ರಾತ್ಮನ ಸ್ವರ. ಅವು ನಂಬಿಕೆ ಇಡತಕ್ಕವುಗಳಾಗಿರುವದರಿಂದ ನಾವು ಇವುಗಳನ್ನು 'ಪ್ರಾಥಮಿಕ' ಎಂಬಂತೆ ಉಲ್ಲೇಖಿಸಿದ್ದೇವೆ. ಉಳಿದ ಎಂಟು ವಿಷಯಗಳನ್ನು ನಾವು ಮಾಧ್ಯಮಿಕ ಎನ್ನುವದಕ್ಕೆ ಉಲ್ಲೇಖಿಸಿದ್ದೇವೆ, ಇವು ದೇವರ ವಾಕ್ಯದೊಂದಿಗೆ ಮತ್ತು ಪವಿತ್ರಾತ್ಮನ ಅಂತರಂಗದ ಸಾಕ್ಷಿಯೊಂದಿಗೆ ಊರ್ಜಿತಗೊಂಡು, ಪರೀಕ್ಷಿಸಲ್ಪಟ್ಟು ಮತ್ತು ಪ್ರಮಾಣೀಕರಿಸಲ್ಪಡಬೇಕು.

ಯಾವುದಾದರೂ ಮಾಧ್ಯಮಿಕ (ಕೊನೆಯ ಎಂಟು) ಅಂಶಗಳ ಮೂಲಕವಾಗಿ ನೀವು ಮಾರ್ಗದರ್ಶನವನ್ನು ಹೊಂದಿಕೊಂಡಾಗ, ಇದನ್ನು ಪರೀಕ್ಷಿಸುವದಕ್ಕೆ ಯಾವಾಗಲೂ ಒಂದು ಅಂಶವನ್ನಾಗಿ ಮಾಡಿಕೊಳ್ಳಬೇಕು. ದೇವರ ವಾಕ್ಯದೊಂದಿಗೆ ಮತ್ತು ಪವಿತ್ರಾತ್ಮನ ಅಂತರಂಗದ ಸಾಕ್ಷಿಯೊಂದಿಗೆ ಇದನ್ನು ಊರ್ಜಿತಗೊಳಿಸದೇ ಅಥವಾ ಪರೀಕ್ಷಿಸದೇ ಏನಾದರೊಂದನ್ನು ಮಾಡುವದಕ್ಕೆ ಆತುರಪಡಬೇಡಿರಿ.

## ಎರಡು ಸರಳವಾದ ಪ್ರಶ್ನೆಗಳನ್ನು ನಿಮಗೆ ಕೇಳಿಕೊಳ್ಳಿರಿ:

1) ದೇವರ ವಾಕ್ಯದೊಂದಿಗೆ ಐಕ್ಯತೆಯಲ್ಲಿ ಮತ್ತು ಜೋಡನೆಯಲ್ಲಿರುವದಕ್ಕೆ ನನ್ನನ್ನು ಮುನ್ನಡೆಸಿತು ಎಂದು ನಾನು ಹೇಗೆ ಅನುಭವ ಪಡುತ್ತೇನೆ? ವಿಷಯದ

ಮೇಲೆ ನಿರ್ಧಿಷ್ಟವಾದ ವಾಕ್ಯ ಇಲ್ಲದಿದ್ದರೆ, ಒಂದುವೇಳೆ ಮಾಡಬೇಕೆಂದು ನೀವು ಮುನ್ನಡೆಸಲ್ಪಟ್ಟಿರುವ ಅನುಭವವು ದೇವರ ಗುಣಲಕ್ಷಣ ಮತ್ತು ಸ್ವಭಾವಕ್ಕೆ ಜೋಡನೆಯಾಗಿದೆಯಾ ಎನ್ನುವದನ್ನು ನೀವು ಪರೀಕ್ಷಿಸಬೇಕು.

2) ಇದರ ಕುರಿತು ಪವಿತ್ರಾತ್ಮನು ನನ್ನ ಆತ್ಮದಲ್ಲಿ ಏನು ಸಾಕ್ಷಿಕೊಡುತ್ತಿದ್ದಾನೆ (ಮಾತಾಡುತ್ತಿದ್ದಾನೆ)? ಈ ವಿಷಯದ ಮೇಲೆ ಆತನ ಅನುಮತಿಯನ್ನು ಮತ್ತು ಆತನ ಸಮಾಧಾನವನ್ನು ನಾನು ಅರ್ಥಮಾಡಿಕೊಳ್ಳುತ್ತೇನೋ?

## ಎರಡು ಅಥವಾ ಮೂರು ಸಾಕ್ಷಿಗಳು

2ಕೊರಿಂಥ-13:1

**ನಾನು ನಿಮ್ಮ ಬಳಿಗೆ ಬರುವದು ಇದು ಮೂರನೆಯ ಸಾರಿ. ಇಬ್ಬರು ಮೂವರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಸಂಗತಿ ಸ್ಥಾಪಿತವಾಗಬೇಕು.**

ಅಪೊಸ್ತಲನಾದ ಪೌಲನು ಕೊರಿಂಥದಲ್ಲಿನ ಸ್ಥಳೀಯ ಸಭೆಯಲ್ಲಿ ವಿಷಯಗಳನ್ನು ತಿಳಿಸುವಾಗ ಹಳೆ ಒಡಂಬಡಿಕೆಯಿಂದ (ಧರ್ಮೋ. ಕಾಂಡ-19:15) ಉಲ್ಲೇಖಿಸುತ್ತಿದ್ದಾನೆ. ನಾವು ಮೇಲೆ ತಿಳಿಸಿರುವ ರೀತಿಗಳಲ್ಲಿ ಯಾವುದಾದರೂ ಮಾಧ್ಯಮಿಕ(ಕೊನೆಯ ಎಂಟು) ಅಂಶಗಳ ಮೂಲಕವಾಗಿ ದೇವರಿಂದ ಮಾರ್ಗದರ್ಶನವನ್ನು ನಾವು ಹೊಂದಿಕೊಂಡಿದ್ದರೆ ಅದನ್ನು ಊರ್ಜಿತಗೊಳಿಸುವದಕ್ಕೆ ಮತ್ತು ಪರೀಕ್ಷಿಸುವದಕ್ಕೆ ನಾವು ಅನ್ವಯಿಸಬೇಕು, ಇದು ಒಂದು ಸತ್ಯವಾದುದಾಗಿದೆ. ನಾವು ಹೊಂದಿಕೊಂಡಿರುವ ಮಾರ್ಗದರ್ಶನವನ್ನು ಎರಡು ಅಥವಾ ಮೂವರು ಸಾಕ್ಷಿಗಳು ದೃಢಪಡಿಸುದನ್ನು ನಾವು ನಿಶ್ಚಿತಗೊಳಿಸಿಕೊಳ್ಳಬೇಕು.

ಉದಾಹರಣೆಗಾಗಿ, ಒಂದುವೇಳೆ ನಿಮ್ಮ ತೀರ್ಮಾನವು ದೇವರ ವಾಕ್ಯದಲ್ಲಿನ ನಿರ್ಧಿಷ್ಟವಾದ ಆದೇಶದ ಮೇಲೆ ಆಧಾರಗೊಂಡಿದ್ದರೆ, ಆಗ ನೀವು ಇದರ ಮೇಲೆ ಭರವಸೆಯೊಂದಿಗೆ ಮುಂದೆ ಸಾಗಬಹುದು. ಬೇರೆ ಪರಿಸ್ಥಿತಿಗಳಲ್ಲಿ ನೀವು ವಾಕ್ಯದ ತೀವ್ರತೆಯನ್ನು ಮತ್ತು ಆತ್ಮನ ಅಂತರಂಗದ ಸಾಕ್ಷಿಯನ್ನು ಹೊಂದಿಕೊಳ್ಳಬಹುದು. ಮತ್ತೊಮ್ಮೆ, ಇಂತಹ ಒಂದು ಪರಿಸ್ಥಿತಿಯಲ್ಲಿ, ಮಾಡುವದಕ್ಕೆ ಕರ್ತನಿಂದ ನೀವು ಯಾವುದರಿಂದ ನಿರ್ದೇಶಿಸಲ್ಪಡುತ್ತೀರೋ ಅದರಲ್ಲಿ ಭರವಸೆಯೊಂದಿಗೆ ಮುಂದೆ ಸಾಗಿರಿ.

ಸ್ವಭಾವದಲ್ಲಿ ಸರಿಯಾದ ಮಾರ್ಗವನ್ನು ತೋರಿಸಿದ ಪ್ರವಾದನೆಯ ಒಂದು ವಾಕ್ಯವನ್ನು ಯಾರಾದರೂ ನಿಮಗೆ ಕೊಟ್ಟಿರುವ ಒಂದು ಪರಿಸ್ಥಿತಿಯನ್ನು ಗಮನಿಸಿರಿ.

ಬಹುಶ: ನೀವು ಒಂದು ನಿಶ್ಚಿತವಾದ ಪಟ್ಟಣಕ್ಕೆ ಹೋಗಿ ಒಂದು ನಿರ್ಧಿಷ್ಟವಾದ ವ್ಯವಹಾರವನ್ನು ಆರಂಭಿಸುವಂತೆ ನಿಮಗೆ ಹೇಳಿರಬಹುದು. ಆ ಪ್ರವಾದನೆಗಾಗಿ ದೇವರಿಗೆ ವಂದನೆಗಳನ್ನು ತಿಳಿಸುವದು ನಿಮ್ಮ ಜವಾಬ್ದಾರಿಯಾಗಿರುತ್ತದೆ ಮತ್ತು ಅದನ್ನು ಬರೆದುಕೊಳ್ಳಿರಿ, ನಂತರ ಇದು ಕರ್ತನಿಂದ ಬಂದಿರುವಂತದ್ದಾ ಎಂಬುದನ್ನು ಪರೀಕ್ಷಿಸುವದಕ್ಕೆ ಮುಂದುವರಿಯಿರಿ. ತಕ್ಷಣವೇ ನಿಮ್ಮ ವಸ್ತುಗಳನ್ನೆಲ್ಲಾ ತೆಗೆದುಕೊಂಡು ಆ ಪಟ್ಟಣದಲ್ಲಿ ವಾಸಿಸುವದಕ್ಕೆ ಹೊರಡಬೇಡಿರಿ. ಇಲ್ಲ. ಹಾಗೆ ಮಾಡಬೇಡಿರಿ. ಆ ಪ್ರವಾದನೆಯು ಪರೀಕ್ಷಿಸಲ್ಪಡಬೇಕು (1ಥೆಸ-5:20-21), ಅದರ ನೆರವೇರುವಿಕೆಗಾಗಿ ಸಮಯವನ್ನು ತಿಳಿದುಕೊಳ್ಳುವದು ಸಹ ನಿಮಗೆ ಅಗತ್ಯವಾಗಿರುತ್ತದೆ, ಮತ್ತು ಅದೇ ರೀತಿಯಾಗಿ ಅಲ್ಲಿಗೆ ಹೋಗುವದಕ್ಕಿಂತ ಮೊದಲು ಅಗತ್ಯವಾದ ಸಿದ್ಧತೆಯನ್ನು ಮಾಡಿಕೊಳ್ಳಿರಿ. ಪ್ರವಾದನೆಯನ್ನು ಪರೀಕ್ಷಿಸುವದರಲ್ಲಿ, ನಿಮ್ಮ ಆತ್ಮದಲ್ಲಿ ಪವಿತ್ರಾತ್ಮನು ಯಾವ ಸಾಕ್ಷಿಯನ್ನು ಇಡುತ್ತಿದ್ದಾನೆ (ಮಾತಾಡುತ್ತಿದ್ದಾನೆ) ಎಂಬುದನ್ನು ನೀವು ನೋಡಿಕೊಳ್ಳಲು ಇಚ್ಛಿಸಬೇಕಾಗುತ್ತದೆ. ಪ್ರವಾದನೆಯ ಕುರಿತಾಗಿ ದೈವಿಕ ಸಮಾಲೋಚನೆಯನ್ನು ಪಡೆದುಕೊಳ್ಳುವದಕ್ಕೆ ಸಹ ನೀವು ಆಶೆಯುಳ್ಳವರಾಗಿರಬೇಕು. ತೀವ್ರಗೊಳಿಸುವ ವಾಕ್ಯದ ಮೂಲಕ ದೇವರು ನಿಮ್ಮೊಂದಿಗೆ ಮಾತಾಡುವದಕ್ಕೆ ನೀವು ನಿರೀಕ್ಷಿಸುವವರಾಗಿರಬೇಕು. ಕನಸುಗಳು, ದರ್ಶನಗಳು, ಇದರ ಕುರಿತು ಮೊದಲೇ ತಿಳಿಯದಿರುವ ಇನ್ನೊಬ್ಬ ವ್ಯಕ್ತಿಯ ಮೂಲಕ ಪ್ರವಾದನೆ, ದೇವದೂತರುಗಳು ಇತ್ಯಾದಿ, ಇತರ ಸಾಧನಗಳ ಮೂಲಕ ಇದೇ ವಿಷಯದ ಕುರಿತು ದೇವರು ಮಾತಾಡಿದ್ದಾನೋ ಎಂಬುದನ್ನು ನೋಡುವದಕ್ಕೆ ನೀವು ಬಿಚ್ಚು ಮನಸ್ಸಿನವರಾಗಿರಬೇಕು. ಇದನ್ನು ಮಾಡಬೇಕೆಂದು ದೇವರು ಬಯಸಿದ್ದಾನೆ ಎನ್ನುವದು ಒಂದು ಸಲ ನಿಮಗೆ ಗ್ಯಾರಂಟಿಯಾದರೆ, ಆಗ ನೀವು ಇದರ ಮೇಲಿನ ದೇವರ ಸಮಯವನ್ನು ಪಡೆಯಲು ಪ್ರಯತ್ನಿಸಿರಿ. ಇದಕ್ಕಾಗಿ ನಿಮ್ಮನ್ನು ಸಿದ್ಧಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಸಹ ನೀವು ಪ್ರಾರಂಭಿಸಿರಿ. ಆತನು ನಿಮ್ಮ ಮಾರ್ಗದಲ್ಲಿ ತರುತ್ತಿರುವ ಸದವಕಾಶಗಳನ್ನು ಹಿಡಿದುಕೊಳ್ಳುವದನ್ನು ಮತ್ತು ನಿಮ್ಮ ಪರಿಸ್ಥಿತಿಗಳಲ್ಲಿ ದೇವರು ಸಂಘಟಿಸಿರುವದನ್ನು ನೀವು ಗಮನಿಸಿರಿ. ಹೀಗೆ ನಾವು ಇದೆಲ್ಲವನ್ನೂ ಒಟ್ಟಿಗೆ ಇಟ್ಟಿರುವ ಹಾಗೆ, ನಮ್ಮ ಜೀವಿತಗಳಿಗಾಗಿ ದೇವರ ಉದ್ದೇಶಗಳು ಮತ್ತು ಯೋಜನೆಗಳೊಳಗೆ ನಾವು ಭರವಸೆ ಮತ್ತು ಬಲದೊಂದಿಗೆ ನಡೆಯುವದಕ್ಕೆ ಶಕ್ತರಾಗುತ್ತೇವೆ.

## ನಾವೆಲ್ಲರೂ ಕಲಿಯುತ್ತಿದ್ದೇವೆ, ಹಾಗಾಗಿ ನಾವು ತಪ್ಪುಗಳನ್ನು ಮಾಡುತ್ತೇವೆ.

ಯೋಹಾನ-10:4-5, 27

**4-ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ. ಸ್ವಂತ ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ.**

**5-ಅವು ಅನ್ಯರ ಸ್ವರವನ್ನು ತಿಳಿಯುವದಿಲ್ಲ; ಅನ್ಯನ ಹಿಂದೆ ಹೋಗದೆ ಅವನ ಬಳಿಯಿಂದ ಓಡಿಹೋಗುತ್ತವೆ.**

**27-ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ.**

ದೇವರ ಮಾರ್ಗದರ್ಶನ ಹೊಂದಿಕೊಳ್ಳುವದನ್ನು ಕಲಿಯುವದರಲ್ಲಿ ನನ್ನ ಪ್ರಯಾಣವು ಸಂಪೂರ್ಣವಾಗಿರಲಿಲ್ಲ. ನಾನು ತಪ್ಪುಗಳನ್ನು ಮಾಡುತ್ತಿದ್ದೆ. ಆದರೆ ಪ್ರತಿಯೊಂದು ತಪ್ಪು ಕಲಿಯುವದಕ್ಕೆ ಒಂದು ಸದವಕಾಶವನ್ನು ಹೊಂದಿದೆ. ನಾವು ದೇವರ ಮಾತನ್ನು ಕೇಳಿಸಿಕೊಳ್ಳುವದರಲ್ಲಿ ಮಾಡುವ ತಪ್ಪುಗಳಿಂದ ಏನಾದರೂ ಒಳ್ಳೆಯದನ್ನು ಪಡೆದುಕೊಳ್ಳಲು ಶಕ್ತರಾಗುತ್ತೇವೆ.

ನಮ್ಮ ಸ್ವಂತ ಆತ್ಮಗಳಿಂದ (ಸ್ವಯಂ, ಆಶೆಗಳು), ಲೋಕದ ಸ್ವರಗಳಿಂದ ಮತ್ತು ದುರಾತ್ಮನಾಗಿರುವ ಅಪರಿಚಿತನ ಸ್ವರದಿಂದ ನಮ್ಮ ಕುರುಬನ ಸ್ವರದ ವ್ಯತ್ಯಾಸವನ್ನು ತಿಳಿದುಕೊಳ್ಳುವದೇ ನಮ್ಮ ಸವಾಲಾಗಿದೆ. ಸೈತಾನನು ವಂಚಕ. ಇವನು ನಮ್ಮ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವದಕ್ಕೆ ತನ್ನ ಸ್ವರವನ್ನು ಕರ್ತನ ಸ್ವರದ ಹಾಗೆಯೇ ಕೇಳಿಸುವಂತೆ ಮಾಡಿಕೊಳ್ಳುತ್ತಾನೆ. ಆದರೆ ದೇವರ ಕುರಿಗಳ ಹಾಗೆ, ನಾವು ಆತನ ಸ್ವರವನ್ನು ತಿಳಿದಿರುವದಕ್ಕೆ ಕಲಿತಿರಬೇಕು, ಆಗ ನಾವು ವೈರಿಯ ಸ್ವರದಿಂದ ಅಥವಾ ನಮ್ಮ ಸ್ವಯಂ ಸ್ವರದಿಂದ ಮತ್ತು ನಮ್ಮ ಸುತ್ತಲಿರುವ ಲೋಕದ ಸ್ವರದಿಂದ ಕರ್ತನ ಸ್ವರದ ವ್ಯತ್ಯಾಸವನ್ನು ತಿಳಿಯಬಹುದು. ನಾವು ಆತನ ಸ್ವರವನ್ನು ತಿಳಿದಾಗ ಆತನ ಸ್ವರವನ್ನು ನಾವು ಕೇಳಿಸಿಕೊಳ್ಳುತ್ತೇವೆ ಮತ್ತು ಆತನನ್ನು ಹಿಂಬಾಲಿಸುತ್ತೇವೆ

ಇದು ಒಂದು ಕಲಿಯುಕೆಯ ಕಾರ್ಯವಿಧಾನ. ಮತ್ತು ಇದರ ಜೊತೆಗೆ ನಾವು ತಪ್ಪುಗಳನ್ನು ಮಾಡುತ್ತೇವೆ. ಆದರೆ ದೇವರು ನಮ್ಮೊಂದಿಗಿದ್ದಾನೆ ಮತ್ತು ಆತನು ನಮ್ಮನ್ನು ಗುಣಪಡಿಸುತ್ತಾನೆ ಹಾಗೂ ನಮ್ಮನ್ನು ಮತ್ತೆ ದಾರಿಗೆ ತರುತ್ತಾನೆ. ನಾವು ನಮ್ಮ ಸ್ವಂತ ತಪ್ಪುಗಳನ್ನು ನೋಡಿಕೊಳ್ಳದಿದ್ದಾಗ ನಮ್ಮ ಕುರುಡುತನದ ಮೇಲೆ ವೈರಿಯು ಆಗಾಗ್ಗೆ ಆಕ್ರಮಣ ಮಾಡುತ್ತಿರುತ್ತಾನೆ. ಅದಕ್ಕೋಸ್ಕರವೇ ನಮಗೆ

ಪರಸ್ಪರರ ಅಗತ್ಯವಿದೆ, ಪರಸ್ಪರರ ದಾರಿನೋಡುತ್ತಿರುತ್ತೇವೆ, ಇದರಿಂದ ನಾವು ನಮ್ಮ ಹೆಜ್ಜೆಜಾಡಿನಲ್ಲಿ ಉಳಿದುಕೊಳ್ಳುವದಕ್ಕೆ ಪರಸ್ಪರ ಸಹಾಯಕರಾಗಿರುತ್ತೇವೆ. ನಾವು ನಮ್ಮ ತಪ್ಪುಗಳನ್ನು ಒಪ್ಪಿಕೊಂಡು ಚಲನೆಯ ಮೇಲೆ ಹಿಂದಕ್ಕೆ ಬರಬೇಕು.

ಇಲ್ಲಿ ವಾಕ್ಯದ ಒಂದು ಆಸಕ್ತಿಕರವಾದ ಭಾಗವು ಇದೆ. ಯೆಶಾಯ30ರಲ್ಲಿ, ದೇವರು ತನ್ನ ಜನರು ಸಹಾಯಕ್ಕಾಗಿ ತನ್ನ ಕಡೆಗೆ ನೋಡುವದರ ಬದಲಿಗೆ ಐಗುಪ್ತ್ಯರ ಸಹಾಯವನ್ನು ಎದುರು ನೋಡಿದ್ದಕ್ಕಾಗಿ ಪ್ರವಾದಿಯ ಮೂಲಕವಾಗಿ ತನ್ನ ಜನರನ್ನು ದೇವರು ಗದರಿಸುತ್ತಿದ್ದಾನೆ. ಜನರು ದೇವರ ನಿಯಮವನ್ನು ತಿರಸ್ಕರಿಸಿದ್ದಾರೆ(30:9), ಪ್ರವಾದಿಗಳನ್ನು ಮತ್ತು ದೇವದರ್ಶಕರನ್ನು ತಿರಸ್ಕರಿಸಿದ್ದಾರೆ(30:10) ಸ್ವತ: ಕರ್ತನನ್ನೇ ಅವರು ತಿರಸ್ಕರಿಸಿದ್ದಾರೆ(30:11). ಆದಾಗ್ಯೂ ಇಂತಹ ಎದುರುಬಿದ್ದಿರುವ ಜನರಿಗೆ ದೇವರು, ನೀವು ಹಿಂತಿರುಗಿ ಬರುವವರೆಗೂ ನಾನು ನಿಮಗಾಗಿ ಕಾಯುತ್ತಿರುತ್ತೇನೆ ಎಂದು ಹೇಳುತ್ತಿದ್ದಾನೆ. ಆತನು ಅವರಿಗೆ ವಾಗ್ದಾನಗಳನ್ನು ಸಹ ಮಾಡುತ್ತಿದ್ದಾನೆ:

ಯೆಶಾಯ-30:20-21

**20-ಕರ್ತನು ಕಷ್ಟವನ್ನೂ ಶ್ರಮವನ್ನೂ ನಿಮಗೆ ಅನ್ನಪಾನಗಳನ್ನಾಗಿ ಕೊಟ್ಟರೂ ನಿಮ್ಮ ಬೋಧಕನು ಇನ್ನು ಮರೆಯಾಗಿರನು, ನಿಮ್ಮ ಬೋಧಕನನ್ನು ಕಣ್ಣಾರೆ ಕಾಣುವಿರಿ;**

**21-ನೀವು ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ, ಇದರಲ್ಲೇ ನಡೆಯಿರಿ ಎಂದು ನಿಮ್ಮ ಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವದು.**

ಕೆಲವು ಇಂಗ್ಲೀಷ್ ಭಾಷಾಂತರಗಳು ಬೋಧಕರುಗಳು ಎಂಬುದನ್ನು ಬೋಧಕ ಎಂಬಂತೆ ಅನುವಾದಿಸಿವೆ, ಮತ್ತು ಕರ್ತನು ತಾನೇ ತನ್ನ ಜನರಿಗೆ ಬೋಧಕನಾಗಿದ್ದನು ಎನ್ನುವದನ್ನು ಉಲ್ಲೇಖಿಸಿವೆ. ಇನ್ನೊಂದು ರೀತಿಯಲ್ಲಿ, ತನ್ನ ಜನರು ಎದುರು ಬಿದ್ದಾಗಲೂ ಸಹ ದೇವರು ತನ್ನ ಜನರಿಗೆ ವಾಗ್ದಾನ ಮಾಡಿ ಅವರು ಸರಿಯಾದ ರೀತಿಯಲ್ಲಿ ನಡೆಯುವದಕ್ಕೆ ಆತನ ಮಾತನ್ನು ಕೇಳಿ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ಸಮರ್ಥರಾಗುವಂತೆ ಅವರೊಂದಿಗೆ ತಪ್ಪುತಿದ್ದಲು ಅರ್ಹತೆಯುಳ್ಳ ವ್ಯವಹರಿಸುಕೆಯನ್ನು ಮಾಡುತ್ತಾನೆ. ನಾವು ಆತನ ಮಾರ್ಗದರ್ಶನಕ್ಕಾಗಿ ಆತನನ್ನು ಪ್ರಾಮಾಣಿಕವಾಗಿ ಹುಡುಕುವಾಗ ಇದೇ ಮಾರ್ಗ, ಇದರಲ್ಲಿಯೇ ನಡೆಯಿರಿ ಎಂದು ನಮಗೆ ಬೋಧಿಸುವ ಆತನ ಸ್ವರವನ್ನು ಕೇಳುವದಕ್ಕೆ ನಾವು ಇನ್ನು ಎಷ್ಟು ಹೆಚ್ಚಾಗಿ ಶಕ್ತರಾಗಿರಬೇಕು?

## ಚಲನೆಯ ಮೇಲೆ ಹಿಂದಕ್ಕೆ ಬರುವಂತದ್ದು

ಕೀರ್ತನೆ–18:236

**ನೀನು ನನ್ನ ಕಾಲುಗಳಿಗೆ ವಿಶಾಲಸ್ಥಳವನ್ನು ಕೊಟ್ಟದ್ದರಿಂದ ನನ್ನ ಹರಡುಗಳು ಕದಲುವದಿಲ್ಲ,**

ನಾವು ತೆಗೆದುಕೊಳ್ಳುವ ಪ್ರತಿಯೊಂದು ಹೆಜ್ಜೆಗೂ ದೇವರು ದಾರಿಯನ್ನು ಸ್ಪಷ್ಟಪಡಿಸುವ ಅನುಭವವನ್ನು ನಾವು ಹೊಂದಿರುವ ಇಂತಹ ಒಂದು ಸ್ಥಿತಿಯಲ್ಲಿ ದೇವರೊಂದಿಗೆ ನಡೆಯುವದಕ್ಕೆ ಇದು ಸಾಧ್ಯವಾದುದಾಗಿದೆ, ಆದ್ದರಿಂದ ನಾವು ಮುಗ್ಗರಿಸದೆ ನಡೆಯುತ್ತೇವೆ. ದೇವರನ್ನು ಸತತವಾಗಿ ವಿಚಾರಿಸುತ್ತಿದ್ದ ಮನುಷ್ಯನಾಗಿದ್ದ ದಾವೀದನು ಈ ಮಾತುಗಳನ್ನು ಹೇಳಿರುವದು ನಮಗೆ ತಿಳಿದದೆ (ಕೀರ್ತನೆ 18). ಅವನು ತನ್ನ ಆಯ್ಕೆಗಳಲ್ಲಿ ದೇವರನ್ನು ಘನಪಡಿಸುತ್ತಿದ್ದ. ಅವನು ಜ್ಞಾನದೊಂದಿಗೆ ನಡೆಯುತ್ತಿದ್ದ.

ಹೇಗಿದ್ದರೂ, ದಾವೀದನೂ ಸಹ ಯೋಗ್ಯವಾದ ಆಯ್ಕೆಗಳ, ಸ್ವಾರ್ಥದ ಆಶೆಗಳ ಮೂಲಕ ತಪ್ಪುಗಳನ್ನು ಮಾಡಿದ, ಮತ್ತು ಕಷ್ಟವನ್ನು ಅನುಭಸಿದ.

## ದಾವೀದನು ಹೇಳಿರುವದನ್ನು ಗಮನಿಸಿರಿ:

ಕೀರ್ತನೆ 25 ರಲ್ಲಿ, ದಾವೀದನು ತನಗೆ ಬೋಧಿಸಿ ಮಾರ್ಗದರ್ಶನ ಮಾಡುವಂತೆ ದೇವರಲ್ಲಿ ಪ್ರಾರ್ಥಿಸುವ ವೇಳೆಯಲ್ಲಿ, ತನ್ನ ಪಾದಗಳು ಬಲೆಯಲ್ಲಿ ಸಿಕ್ಕಿಕೊಂಡಿರುವದು ದಾವೀದನಿಗೆ ಕಂಡುಬಂದಾಗ (ಯಾವುದೇ ಬಿಗಿಯಾದ ಪರಿಸ್ಥಿತಿ, ಮನುಷ್ಯನ ಯಾವುದೇ ಉರುಲು), ಇದರಿಂದ ದೇವರು ತನ್ನನ್ನು ಹೊರಗೆ ತರುತ್ತಾನೆ ಎನ್ನುವದನ್ನು ತಿಳಿದವನಾಗಿ ಅವನು ತನ್ನ ಕಣ್ಣುಗಳನ್ನು ಕರ್ತನ ಮೇಲೆ ಇಟ್ಟಿರುವದನ್ನು ಸಹ ದೃಢೀಕರಿಸುತ್ತಾನೆ.

ಕೀರ್ತನೆ–25:4,15

**4–ಯೆಹೋವನೇ ನಿನ್ನ ಮಾರ್ಗವನ್ನು ನನಗೆ ತಿಳಿಸು; ನೀನು ಒಪ್ಪುವ ದಾರಿಯನ್ನು ತೋರಿಸು.**

**25–ನನ್ನ ದೃಷ್ಟಿ ಯಾವಾಗಲೂ ಯೆಹೋವನಲ್ಲಿದೆ; ಆತನೇ ನನ್ನ ಕಾಲುಗಳನ್ನು ಬಲೆಯಿಂದ ಬಿಡಿಸುವವನು.**

ಕೀರ್ತನೆ– 37ರಲ್ಲಿ, ತನ್ನ ಪಾದಗಳು ಕರ್ತನಿಂದ ಆಜ್ಞಾಪಿಸಲ್ಪಟ್ಟಿವೆ ಎನ್ನುವದನ್ನು ದಾವೀದನು ದೃಢಪಡಿಸುತ್ತಾನೆ, ಯಾಕಂದರೆ ದೇವರು ಅವನ ದಾರಿಗಳಲ್ಲಿ ಸಂತೋಷಪಡುತ್ತಿದ್ದನು. ದಾವೀದನು ತಾನು ಮುಗ್ಗರಿಸಿ ಬಿದ್ದರೂ ಸಹ ದೇವರು ತನ್ನನ್ನು ಮೇಲಕ್ಕೆತ್ತುತ್ತಾನೆ ಎನ್ನುವ ಭರವಸೆಯುಳ್ಳವನಾಗಿದ್ದನು. ಇದು ಕೊನೆಯಲ್ಲ.

ಕೀರ್ತನೆ-37:23-24

**23-ಸತ್ಪುರುಷನ ಗತಿಸ್ಥಾಪನೆಯು ಯೆಹೋವನಿಂದಲೇ ಆಗಿದೆ, ಆತನು ಅವನ ಪ್ರವರ್ತನೆಯನ್ನು ಮೆಚ್ಚುತ್ತಾನೆ.**

**24-ಅವನು ಕೆಳಗೆ ಬಿದ್ದರೂ ಏಳದೆ ಹೋಗುವದಿಲ್ಲ; ಯೆಹೋವನು ಅವನನ್ನು ಕೈಹಿಡಿದು ಉದ್ಧಾರ ಮಾಡುವನು.**

ಜೀವನದ ಮೂಲಕದ ನಮ್ಮ ಪ್ರಯಾಣದಲ್ಲಿ, ನಾವೆಲ್ಲರೂ ತಪ್ಪುಗಳನ್ನು ಮಾಡುತ್ತೇವೆ. ವೈರಿಯ ಶೋಧನೆಗಳನ್ನು ಎದುರಿಸುವದು ಮತ್ತು ನಮ್ಮ ಶಾರೀರಿಕ ಆಶೆಗಳನ್ನು ಶಿಲುಬೆಗೆ ಹಾಕುವದು ಹೇಗೆಂಬುದನ್ನು ನಾವು ಇನ್ನೂ ಕಲಿಯುತ್ತಿದ್ದೇವೆ. ದೇವರ ಮಾತನ್ನು ಕೇಳುವದು ಹೇಗೆ ಮತ್ತು ನಮ್ಮ ಜೀವಿತಗಳಲ್ಲಿ ಆತನ ಮಾರ್ಗದರ್ಶನವನ್ನು ಹೊಂದಿಕೊಳ್ಳುವದು ಹೇಗೆ ಎನ್ನುವದನ್ನು ನಾವು ಕಲಿಯುತ್ತಿದ್ದೇವೆ. ಆದ್ದರಿಂದ ಮಾರ್ಗದುದ್ದಕ್ಕೂ, ನಾವು ತಪ್ಪಾದ ಆಯ್ಕೆಗಳನ್ನು, ತಪ್ಪಾದ ತೀರ್ಮಾನಗಳನ್ನು ಮಾಡಿದರೂ ಸಹ, ನಾವು ನಮ್ಮ ಕಣ್ಣುಗಳನ್ನು ಕರ್ತನ ಮೇಲೆ ನೆಲೆಗೊಳಿಸಬೇಕು. ನಮ್ಮ ತಪ್ಪುಗಳಿಗಿಂತಲೂ ಆತನು ದೊಡ್ಡವನು. ನಾವು ತೆಗೆದುಕೊಂಡಿರುವ ಸುತ್ತು ಮಾರ್ಗಗಳಿಗಿಂತಲೂ ಆತನು ದೊಡ್ಡವನು. ನಾವು ಸೃಷ್ಟಿಸಿರುವ ಅಸ್ತವ್ಯಸ್ತತೆಗಳಿಗಿಂತಲೂ ಆತನು ದೊಡ್ಡವನು. ನಾವು ಆತನ ಕಡೆಗೆ ಮತ್ತೆ ಬರುವದಕ್ಕೆ ಹಂಬಲಿಸುವ ಹಾಗೆ ಆತನು ತನ್ನ ಯೋಜನೆಗಳ ಮತ್ತು ಉದ್ದೇಶಗಳ ಮೇಲೆ ಕೆಲಸ ಮಾಡುತ್ತಾನೆ, ನಮ್ಮನ್ನು ಪುನ:-ಜೋಡನೆಯಲ್ಲಿಡುವದಕ್ಕೆ ಮತ್ತು ನಮ್ಮಲ್ಲಿ ಹಾಗು ನಮ್ಮ ಮೂಲಕವಾಗಿ ಕೆಲಸ ಮಾಡುವದಕ್ಕೆ ಆತನಿಗೆ ಅವಕಾಶ ಕೊಡೋಣ. ಆತನ ಯಾವ ಯೋಜನೆಗಳು ಸೋಲಿಸಲ್ಪಡುವದಿಲ್ಲ. ಆತನು ಸಮಯವನ್ನು ಹಿಂದಕ್ಕೆ ಕೊಡುತ್ತಾನೆ. ವ್ಯರ್ಥವಾಗಿ ಹೋಗಿರುವದೆಲ್ಲವನ್ನೂ ಆತನು ಹಿಂದಕ್ಕೆ ಕೊಡುತ್ತಾನೆ. ಆತನು ದೊಡ್ಡ ವಿಮೋಚಕನು.

ನಾವು ಇಲ್ಲಿ ಹಾಜರಿದ್ದೇವೆ, ಈ ಅಧ್ಯಾಯದ ಉಳಿದ ಭಾಗದಲ್ಲಿ, ಪ್ರಾಯೋಗಿಕವಾದ ಉಪದೇಶಗಳು ನಮಗಾಗಿ ಇವೆ, ಆದರಿಂದ ನಾವು ಆಜ್ಞಾಪಿಸಲ್ಪಟ್ಟು ಆತನ ಮಾರ್ಗದರ್ಶನವನ್ನು ಹೊಂದಿಕೊಂಡು ನಮ್ಮ ಜೀವಿತಗಳನ್ನು ಯಥಾರ್ಥವಾದ ಮತ್ತು ಶುದ್ಧವಾದ ರೀತಿಯಲ್ಲಿ ಜೀವಿಸುವದಕ್ಕೆ ಶಕ್ತರಾಗುತ್ತೇವೆ.

ಎಚ್ಚರಿಕೆಯ ಪಾರ್ಶ್ವದ ಮೇಲೆ ಉಳಿದುಕೊಳ್ಳುವದು ಮತ್ತು ನಂಬಿಕೆಯಲ್ಲಿ ಅಪಾಯಗಳನ್ನು ತೆಗೆದುಕೊಳ್ಳುವದು

ರೋಮಾ-11:33-34

**33-ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ!**

**34-ಕರ್ತನ ಮನಸ್ಸನ್ನು ತಿಳುಕೊಂಡವನಾರು? ಆತನಿಗೆ ಆಲೋಚನಾ ಕರ್ತನು ಯಾರು?**

ದೇವರ ಜ್ಞಾನ, ತಿಳುವಳಿಕೆ, ತೀರ್ಮಾನಗಳು ಮತ್ತು ಮಾರ್ಗಗಳು ಗ್ರಹಿಕೆಗೆ ಮೀರಿದವುಗಳಾಗಿವೆ. ನಾವು ಸತತವಾಗಿ ಆತನ ಜ್ಞಾನ, ತಿಳವಳಿಕೆ, ತೀರ್ಮಾನಗಳು ಮತ್ತು ಮಾರ್ಗಗಳನ್ನು ಒಂದು ಸ್ವಲ್ಪ ಹೆಚ್ಚಾಗಿ ಕಲಿಯುತ್ತಾ ಕಲಿಯುತ್ತಾ ಹೋಗುತ್ತೇವೆ. ನಾವು ದೇವರನ್ನು ಒಂದು ಪೆಟ್ಟಿಗೆಯಲ್ಲಿ ಇಡುವದಕ್ಕಾಗುವದಿಲ್ಲ. ಆತನು ಅನಂತನಾಗಿದ್ದಾನೆ. ನಾವು ಈಗ ಏನು ಹೊಂದಿದ್ದೇವೋ ಅದು ಆತನ ಮಾರ್ಗಗಳನ್ನು ಗ್ರಹಿಸಿಕೊಳ್ಳುವದಕ್ಕೆ ಕೇವಲ ಒಂದು ಮಿತಿಯುಳ್ಳದ್ದು, ಮತ್ತು ಅತೀ ಚಿಕ್ಕದೂ ಆಗಿದೆ. ನಾವು ಎಂದೂ ಊಹಿಸದಿರುವ ರೀತಿಯಲ್ಲಿ, ಒಂದು ಅಸಾಮಾನ್ಯವಾದ ರೀತಿಯಲ್ಲಿ ದೇವರು ನಮಗೆ ಮಾರ್ಗದರ್ಶನ ಮಾಡಿ ನಮ್ಮನ್ನು ಮುನ್ನಡೆಸುತ್ತಾನೆ. ನಾವು ತೆರೆದ ಮನಸ್ಸಿನವರೂ, ಶೀಘ್ರವಾಗಿ ಗ್ರಹಿಸಬಲ್ಲವರೂ ಮತ್ತು ವಿಧೇಯರೂ ಆಗಿರಬೇಕು.

ಅಬ್ರಹಾಮನ ಹಾಗೆ ನಾವೂ ದೇವರೊಂದಿಗೆ ಹೊರಗೆ ಹೆಜ್ಜೆ ಇಡುವ ಸಮಯಗಳು ಬಂದಾಗ, ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎನ್ನುವದು ತಿಳಿಯದಿದ್ದಾಗ್ಯೂ, ದೇವರು ಮಾತಾಡಿರುವದನ್ನು, ಆತನು ನಮಗೆ ಮಾರ್ಗದರ್ಶನ ಮಾಡುತ್ತಿದ್ದಾನೆ ಎನ್ನುವದನ್ನು ತಿಳಿದುಕೊಳ್ಳಬೇಕು. ನಾವು ಕೇವಲ ಹಿಂಬಾಲಿಸಬೇಕು, ಒಂದು ಸಮಯದಲ್ಲಿ ಒಂದು ಹೆಜ್ಜೆ, ಕ್ಷಣದಿಂದ ಕ್ಷಣಕ್ಕೆ. ನಾವು ನಂಬಿಕೆಯಿಂದ ಅಪಾಯಗಳನ್ನು ತೆಗೆದುಕೊಳ್ಳಬೇಕು.

ಇಬ್ರಿಯ-11:8

**ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೆ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು.**

ನಂತರ ನಾವು ಎಚ್ಚರಿಕೆಯ ಪಾರ್ಶ್ವದ ಮೇಲೆ ಉಳಿದುಕೊಂಡಾಗ ಅಲ್ಲಿ ಕೆಲವು ತೀರ್ಮಾನಗಳಿರುತ್ತವೆ. ನಮ್ಮಲ್ಲಿ ಸಾಕಷ್ಟು ವರಗಳಿವೆ ಎನ್ನುವದು ನಮಗೆ ಗೊತ್ತಾದಾಗ ಮತ್ತು ದೇವರು ನಮಗೆ ಮಾರ್ಗದರ್ಶನ ಮಾಡುತ್ತಾನೆ ಹಾಗೂ ನಮ್ಮನ್ನು ಮುನ್ನಡೆಸುತ್ತಾನೆ ಎನ್ನುವದು ಪೂರ್ಣವಾಗಿ ನಿಶ್ಚಿತವಾದಾಗ ಮಾತ್ರ ನಾವು ಹೊರಡುತ್ತೇವೆ.

ನಾವು ಜೀವನದ ಮೂಲಕ ಪ್ರಯಾಣಿಸಿದ ಹಾಗೆ ಎರಡು ರೀತಿಗಳಲ್ಲಿಯೂ ದೇವರೊಂದಿಗೆ ನಡೆಯುವದನ್ನು ನಾವು ಕಲಿತುಕೊಳ್ಳಬೇಕು - ಎಚ್ಚರಿಕೆಯ ಪಾರ್ಶ್ವದ ಮೇಲೆ ನಾವು ಉಳಿದುಕೊಂಡ ಸಮಯಗಳು, ಮತ್ತು ನಂಬಿಕೆಯಲ್ಲಿ ನಾವು ತೆಗೆದುಕೊಂಡ ಅಪಾಯಗಳ ಸಮಯಗಳು. ನಾವು ಎಲ್ಲಾ ತೀರ್ಮಾನಗಳನ್ನು ಮಾಡುವಂತದ್ದರಲ್ಲಿ ಒಂದೂ ಸಮಾನವಾಗಿ, ನಿರ್ಧಿಷ್ಟ ಮಟ್ಟದ ರೀತಿಯಲ್ಲಿರುವದಿಲ್ಲ. ನಾವು ಯಾವಾಗ ಯಾವುದನ್ನು ಮಾಡಬೇಕು, ಯಾವಾಗ ಎಚ್ಚರಿಕೆಯಿಂದ ಮುಂದೆ ಹೋಗಬೇಕು ಮತ್ತು ಯಾವಾಗ ಅಪಾಯಗಳನ್ನು ತೆಗೆದುಕೊಳ್ಳಬೇಕು ಎನ್ನುವದನ್ನು ನಾವು ತಿಳಿದಿರಬೇಕು.

ನಾವು ತೀರ್ಮಾನಗಳನ್ನು ಮಾಡಿ ದೇವರೊಂದಿಗೆ ಹೆಜ್ಜೆ ಹಾಕಿದಂತೆಯೇ, ಆತನು ಸಂಗತಿಗಳನ್ನು ಸ್ಪಷ್ಟವಾಗಿಯೂ ಮತ್ತು ಹೊಳೆಯುವಂತೆಯೂ ಮಾಡುವದು ಒಂದು ಸುಂದರವಾದ ವಿಷಯವಾಗಿದೆ. ನಾವು ಅದನ್ನು ಆತನ ಸಹಾಯದೊಂದಿಗೆ ಕಂಡುಹಿಡಿಯುತ್ತೇವೆ, ನಾವು ಮಾಡುವ ತೀರ್ಮಾನಗಳು ಸರಿಯಾದವುಗಳು ಮತ್ತು ಆತನು ನಮ್ಮನ್ನು ತನ್ನ ಮಕ್ಕಳ ಹಾಗೆ ಸತತವಾಗಿ ಮಾರ್ಗದರ್ಶನ ಮಾಡಿ ಮುನ್ನಡೆಸುತ್ತಾನೆ.

ಜ್ಞಾನೋಕ್ತಿ–4:18
**ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ.**

## ಆತನ ಕೊನೆಯ ಬೋಧನೆಯೊಂದಿಗೆ ಉಳಿದುಕೊಳ್ಳುವದು

ದೇವರೊಂದಿಗಿನ ಪ್ರಯಾಣದಲ್ಲಿ ನಾವು ಕಲಿತುಕೊಳ್ಳಬೇಕಾದ ಇನ್ನೊಂದು ವಿಷಯವೆಂದರೆ ಅದು, ನಾವು ಯಾವುದಾದರೂ ಹೊಸದಾದ ಅಥವಾ ವ್ಯತ್ಯಾಸವಾದದ್ದನ್ನು ಮಾಡುವದಕ್ಕೆ ದೇವರು ಮಾತಾಡದಿರುವ ಅಥವಾ ನಮ್ಮನ್ನು ಮುನ್ನಡೆಸದಿರುವ ಕಾಲಗಳು ಇರುತ್ತವೆ ಎಂಬುದು. ನೀವು ಜೀವನದ ಒಂದು ನಿಶ್ಚಿತವಾದ ಕಾಲದಲ್ಲಿರುವಾಗ, ಸಂಗತಿಗಳು ಸ್ಥಳದಲ್ಲಿದ್ದು ಉತ್ತಮವಾಗಿ ನಡೆಯುತ್ತಿರುತ್ತವೆ. ನೀವು ಏನಾದರೂ ವ್ಯತ್ಯಾಸವುಳ್ಳದ್ದರೊಳಗೆ ಹೆಜ್ಜೆ ಇಡುವದನ್ನು ಅಥವಾ ಮಾಡುವದನ್ನು ಬದಲಾಯಿಸುವದರ ಕುರಿತಾಗಿ ದೇವರಿಂದ ಹೊಸದಾಗಿ ಏನನ್ನಾದರೂ ಕೇಳಿಸಿಕೊಳ್ಳುವ ಹಾಗೆ ನೀವು ಕಂಡುಬರುವದಿಲ್ಲ.

ನೀವು ಏನಾದರೂ ವ್ಯತ್ಯಾಸದ ಅಥವಾ ಹೊಸದಾದ ವಿಷಯವನ್ನು ಕೇಳಿಸಿಕೊಳ್ಳದಿದ್ದರೆ ಅಥವಾ ಅದನ್ನು ನಿರ್ಬಂಧದಲ್ಲಿಟ್ಟಿರುವಂತೆ ಇದು ಕಂಡುಬಂದಾಗ, ಆಗ ಆತನ ಕೊನೆಯ

ಬೋಧನೆಯೊಂದಿಗೆ ನೀವು ಉಳಿದುಕೊಳ್ಳುವದು ಪ್ರಾಮುಖ್ಯವಾದುದಾಗಿರುತ್ತದೆ. ಮಾಡಬೇಕೆಂದು ಆತನು ನಿಮಗೆ ಏನು ಹೇಳಿದ್ದಾನೋ ಅದನ್ನು ನಂಬಿಗಸ್ತಿಕೆಯಿಂದ, ಸ್ಥಿರವಾಗಿ, ಶ್ರೇಷ್ಠತೆಯೊಂದಿಗೆ ಮತ್ತು ಆತನ ಮಹಿಮೆಗಾಗಿ ಮಾಡುತ್ತಲೇ ಇರ್ರಿ. ಆತನು ನಿಮಗೆ ಹಂಚಿಕೆ ಮಾಡಿಕೊಟ್ಟಿರುವ ಕೊನೆಯ ಸಂಗತಿಗಳಲ್ಲಿ ಹೊಸ ಮಟ್ಟಗಳಿಗೆ ಚಲಿಸುವದಕ್ಕೆ, ವಿಸ್ತಾರಗೊಳ್ಳುವದಕ್ಕೆ, ವೃದ್ಧಿಯಾಗುವದಕ್ಕೆ ಮತ್ತು ಬೆಳೆಯುವದಕ್ಕೆ ನೀವು ಸತತವಾಗಿ ಶಕ್ತರಾಗಬಹುದು.

1ಕೊರಿಂಥ-4:1-2

**1-ಜನರು ನಮ್ಮನ್ನು ಕ್ರಿಸ್ತನ ಕೈಕೆಳಗಿನವರೆಂತಲೂ ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರೆಂತಲೂ ಎಣಿಸಬೇಕು.**

**2-ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ.**

ದೇವರು ನಮಗೆ ಒಪ್ಪಿಸಿಕೊಟ್ಟಿರುವ ಎಲ್ಲದಕ್ಕೂ ನಾವು ಮನೆವಾರ್ತೆಯವರಾಗಿದ್ದೇವೆ. ಮನೆವಾರ್ತೆಯವರಾಗಿ ನಮ್ಮಿಂದ ದೇವರು

ನಿರೀಕ್ಷಿಸುವದು ಏನೆಂದರೆ ನಾವು ನಂಬಿಗಸ್ತರಾಗಿ ಉಳಿದುಕೊಳ್ಳಬೇಕೆನ್ನುವದು. ವಿಶ್ವಾಸಾರ್ಹ, ನಂಬಲರ್ಹ ಎಂದು ಯಾರಾದರೂ ಪರಿಗಣಿಸುವಂತಿರುವದರ ಮೇಲೆ ನಂಬಿಗಸ್ತರಾಗಿರುವದು. ತಮ್ಮ ಸ್ಥಾನದಲ್ಲಿ ಉಳಿದುಕೊಳ್ಳುವ ಯಾರಾದರೂ ತಮಗೆ ಯಾವದು ವಹಿಸಲ್ಪಟ್ಟಿದೆ ಎಂಬ ವಿಷಯವಿಲ್ಲದೆ, ಮಾಡುವದಕ್ಕೆ ವಹಿಸಿಕೊಟ್ಟಿರುವದನ್ನು ಮಾಡುತ್ತಾರೆ. ದೇವರು ಏನಾದರೂ ಹೊಸದನ್ನು ಅಥವಾ ವ್ಯತ್ಯಾಸವುಳ್ಳದ್ದನ್ನು ಮಾಡುವಂತೆ ಹೇಳುವವರೆಗೆ ನಿಮಗೆ ವಹಿಸಿಕೊಟ್ಟಿರುವದರಲ್ಲಿ ನಂಬಿಗಸ್ತರಾಗಿ ಉಳಿದುಕೊಳ್ಳಿರಿ ಮತ್ತು ಅದರಲ್ಲಿ ಬೆಳೆಯುತ್ತಾ ಹೋಗಿರಿ.

## ಸ್ವಯಂ-ಚಾಲಿತ ಮತ್ತು ಮೊಂಡತನವನ್ನು ದೂರವಿರಿಸುವದು

ಜ್ಞಾನೋಕ್ತಿ-14:12

**ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣ ಮಾರ್ಗವೇ.**

ನಮ್ಮ ಜೀವಿತಗಳಿಗಾಗಿ ದೇವರ ಮಾರ್ಗದರ್ಶನವನ್ನು ಮತ್ತು ಮುನ್ನಡೆಸುಕೆಯನ್ನು ಹೊಂದಿಕೊಳ್ಳುವದಕ್ಕೆ ಇರುವ ಒಂದು ದೊಡ್ಡದಾದ ಸವಾಲೆಂದರೆ ಅದು, ಸ್ವಯಂ ಎಂಬ ಚಾಲಿತ ಮತ್ತು ಪ್ರೇರಿಸುಕೆಯ ಸಂಗತಿಗಳನ್ನು (ಉದ್ದೇಶಗಳು, ಕನಸುಗಳು) ನಾವು ಬಹುಮಟ್ಟಿಗೆ ಅನುಸರಿಸಿ ಹೋಗುವದು. ಕೆಲವು ಸಲ ಏನು ಎನ್ನುವದು

ಬಹುಮಟ್ಟಿಗೆ ಉತ್ತಮವಾದುದು ಮತ್ತು ಶ್ರೀಮಂತವಾದುದು ಆಗಿರುತ್ತದೆ. ಹೇಗಿದ್ದರೂ, ಯಾಕೆ ಎನ್ನುವದು ಬಹುಮಟ್ಟಿಗೆ ಸ್ವಯಂ ಅಶುದ್ಧವೂ ಮತ್ತು ಕೆಟ್ಟದ್ದು ಆಗಿರುತ್ತದೆ. ದೇವರು ನಮಗೆ ಏನು ಮಾತಾಡಿರುತ್ತಾನೋ ಅದನ್ನು ಕೇಳಿಸಿಕೊಳ್ಳುವದಕ್ಕೆ ಅಸಮರ್ಥರಾಗಿರುವಂತೆ ನಮ್ಮ ಸ್ವಾರ್ಥ ಆಸಕ್ತಿಗಳನ್ನು ತೃಪ್ತಿಗೊಳಿಸುವ ಕ್ರಮದಲ್ಲಿ ಏನನ್ನಾದರೂ ಮಾಡುವದರ ಮೇಲೆ ನಾವು ತುಂಬಾ ಕೇಂದ್ರಿಕೃತರಾಗಿರುತ್ತೇವೆ. ಇದು ನಮಗೆ ಸರಿಯೆಂದು ಕಾಣಿಸುತ್ತದೆ, ಆದರೆ ಇದು ಸ್ವಯಂತನದಿಂದ ಪ್ರೇರಿಸಲ್ಪಟ್ಟರೆ, ಇದರ ಫಲವು ಸಂತೋಷಕರವಾಗಿರುವದಿಲ್ಲ ಅಥವಾ ದೇವರನ್ನು ಮಹಿಮೆಪಡಿಸುವಂತದ್ದಾಗಿರುವದಿಲ್ಲ.

ಸ್ವಯಂಚಾಲಿತ ಎನ್ನುವದು ಮೊಂಡರಾಗಿರುವದು ಎನ್ನುವದಕ್ಕೆ ಹತ್ತಿರದಿಂದ ಸಂಪರ್ಕವುಳ್ಳದ್ದಾಗಿದೆ. ನಾವು ಮೊಂಡರಾಗಿದ್ದಾಗ, ಬೇರೆ ದಾರಿಯನ್ನಲ್ಲ, ನಮ್ಮ ಸ್ವಂತ ದಾರಿಯನ್ನು ಹೊಂದುವದರ ಮೇಲೆ ಹಟಹಿಡಿಯುವ ಒಂದು ಮನೋವೃತ್ತಿಯನ್ನು ನಾವು ಹೊಂದಿರುತ್ತೇವೆ. ಮೊಂಡುತನವು ತಪ್ಪಾದ ಹೃದಯದ ಮನೋವೃತಿಯಾಗಿದೆ, ಇದು ಆಗಾಗ್ಗೆ ಆತ್ಮೀಕ ಗರ್ವದಿಂದ ಜನ್ಮ ತಾಳುತ್ತದೆ. ನಾವು ಬೇರೆಯವರಿಂದ ಕಲಿತುಕೊಳ್ಳುವದಕ್ಕೆ, ದೈವಿಕ ಸಮಾಲೋಚನೆಯನ್ನು ಪಡೆಯುವದಕ್ಕೆ, ಬೋಧಿಸಲ್ಪಡುವದಕ್ಕೆ, ಆತ್ಮೀಕ ಅನುಭವ ಅಥವಾ ಪ್ರಕಟನೆಯ ಶ್ರೇಷ್ಠತೆಯ ಹಕ್ಕು ಸಾಧಿಸುವದಕ್ಕೆ, ಇತ್ಯಾದಿಗಳಿಗೆ ಇಷ್ಟಪಡುವದಿಲ್ಲ (ಟಿಪ್ಪಣಿ: ನಾವು ಮೊಂಡರಾಗಿರುವದಕ್ಕೆ ಅಗತ್ಯವಿರುವದರಲ್ಲಿ ಒಂದು ಉತ್ತಮವಾದ ಅರ್ಥವಿದೆ, ಅದು ನಮ್ಮ ತೀರ್ಮಾನದಲ್ಲಿ ಪೂರ್ಣವಾದ ದೃಢಸಂಕಲ್ಪವಾಗಿರುತ್ತದೆ. ಇಲ್ಲಿ ನಾವು ಕೆಟ್ಟ ರೀತಿಯ ಮೊಂಡತನವನ್ನು ಉಲ್ಲೇಖಿಸುತ್ತಿದ್ದೇವೆ).

ದೇವರು ತನ್ನ ಜನರ ಜೊತೆಯಲ್ಲಿ ಹೋಗುವದಿಲ್ಲ ಎನ್ನುವದು ಮೋಶೆಯನ್ನು ಬಹಳವಾಗಿ ಭಯಗೊಳಿಸಿದಂತ ಒಂದು ಸಂಗತಿಯಾಗಿತ್ತು. ಅವರೊಂದಿಗೆ ದೇವರ ಪ್ರಸನ್ನತೆಯಿಲ್ಲದೆ ಅವರೂ ಏನು ಅಲ್ಲವೆನ್ನುವದು ಮೋಶೆಗೆ ಗೊತ್ತಿತ್ತು (ಮೋ-33:14-15). ಆದದರಿಂದ ಅವರ ಪಾಪವನ್ನು ಮತ್ತು ಮೊಂಡತನವನ್ನು ಕ್ಷಮಿಸುವಂತೆ ಮೋಶೆಯು ದೇವರನ್ನು ಕೇಳಿಕೊಂಡನು ಮತ್ತು ತನ್ನ ಜನರ ಜೊತೆಯಲ್ಲಿ ಹೋಗುವಂತೆ ಪ್ರಾರ್ಥಿಸಿದನು.

ವಿಮೋಚನಾಕಾಂಡ-34:9

**ಕರ್ತನೇ, ನಿನ್ನ ಅನುಗ್ರಹವು ನನಗೆ ದೊರಕಿದ್ದಾದರೆ ನೀನೇ ನಮ್ಮ ಜೊತೆಯಲ್ಲಿ ಬರಬೇಕು. ನಮ್ಮ ಜನರು ಮೊಂಡರೇ; ಆದಾಗ್ಯೂ ನೀನು ನಮ್ಮ ಪಾಪಗಳನ್ನೂ ಅಧರ್ಮಗಳನ್ನೂ ಕ್ಷಮಿಸಿ ನಿನ್ನ ಜನರಾಗುವಂತೆ ನಮ್ಮನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದನು.**

ಆ ಮೊಂಡತನವು ಒಂದು ಹೃದಯದ ಸಮಸ್ಯೆ ಎಂಬುದನ್ನು ಮೋಶೆಯು ಗಮನ ಸೆಳೆಯುತ್ತಾನೆ.

ಧರ್ಮೋ.10:16

**ಆದದರಿಂದ ನೀವು ಆಜ್ಞೆಗೆ ಮಣಿಯದ ನಿಮ್ಮ ದು:ಸ್ವಭಾವವನ್ನು ಬಿಟ್ಟುಬಿಟ್ಟು ನಿಮ್ಮ ಹೃದಯದಲ್ಲೇ ಸುನ್ನತಿ ಮಾಡಿಕೊಳ್ಳಿರಿ.**

**(ಈಜಿ ಟು ರೀಡ್ ವರ್ಷನ್) – ಮೊಂಡತನವನ್ನು ನಿಲ್ಲಿಸಿರಿ. ನಿಮ್ಮ ಹೃದಯಗಳನ್ನು ದೇವರಿಗೆ ಕೊಡಿರಿ.**

ಸ್ವಾಧೀನಪಡಿಸುವ ಸ್ಥಳಕ್ಕೆ ಬಂದರೆ, ನಮ್ಮ ಹೃದಯಗಳನ್ನು ದೇವರಿಗೆ ಒಪ್ಪಿಸಿಕೊಟ್ಟು, ನಮ್ಮ ಆಶೆಗಳು, ಕನಸುಗಳು, ಯೋಜನೆಗಳು, ಮತ್ತು ಪ್ರಯತ್ನಗಳ ಮೇಲೆ ಆತನಿಗೆ ಹಕ್ಕನ್ನು ಕೊಡುವಿಕೆಯು, ತಾನು ಎಂಬುದಕ್ಕೆ ಮತ್ತು ಮೊಂಡತನಕ್ಕೆ ಪ್ರತಿರೋಧಕವಾಗಿದೆ. ನಾವು ಆತನಿಗೆ ಅಧೀನಪಡಿಸಿಕೊಂಡು ಮತ್ತು ಒಪ್ಪಿಸಿಕೊಟ್ಟು ಜೀವಿಸಿದಾಗ ನಮ್ಮ ಜೀವಿತಗಳಲ್ಲಿ ದೇವರ ಮಾರ್ಗದರ್ಶನವನ್ನು ಹೊಂದಿಕೊಳ್ಳುವದಕ್ಕೆ ನಾವು ಒಂದು ಉತ್ತಮವಾದ ಸ್ಥಳದಲ್ಲಿರುತ್ತೇವೆ.

ಕೀರ್ತನೆ-25:9

**ಆತನು ದೀನರನ್ನು ತನ್ನ ವಿಧಿಗನುಗುಣವಾಗಿ ನಡಿಸುವನು; ಅವರಿಗೆ ತನ್ನ ಮಾರ್ಗವನ್ನು ತೋರಿಸುವನು.**

## ಗುರಿಯಿಲ್ಲದಿರುವ ಅಸ್ತಿತ್ವವನ್ನು ದೂರವಿರಿಸುವದು

ಈಗ ನಾವು ಶರಣಾಗುವದು ಮತ್ತು ಒಪ್ಪಿಸಿಕೊಡುವದರ ಕುರಿತಾಗಿ ಮಾತಾಡುವಾಗ, ಕೆಲವು ಜನರು ಜವಾಬ್ದಾರಿಯನ್ನು ತೆಗೆದುಕೊಳ್ಳುವದರಲ್ಲಿ ಎಲ್ಲಿ ಸೋತುಹೋಗಿದ್ದಾರೋ ಆ ಅತಿರೇಕಕ್ಕೆ ಜೋತಾಡುತ್ತಾರೆ ಮತ್ತು ಈ ಕಾರಣದಿಂದ ಗುರಿಯಿಲ್ಲದ ಮತ್ತು ಉದ್ದೇಶರಹಿತವಾದ ಜೀವಿತಗಳನ್ನು ಜೀವಿಸುತ್ತಾರೆ. ಅವರು ಯೋಜಿಸುವದರಲ್ಲಿ, ಕಾರ್ಯತಂತ್ರದಲ್ಲಿ, ಮತ್ತು ಸಿದ್ಧತೆಯಲ್ಲಿ ತಪ್ಪಾದ ಅಭಿಪ್ರಾಯವನ್ನು ಹೊಂದಿರುತ್ತಾರೆ, ಇವು ಸ್ವಂತ ಅಭಿವ್ಯಕ್ತಿಗಳಾಗಿದ್ದು ಈ ಕಾರಣದಿಂದ ಅವರು ಯಾವುದೇ ಯೋಜನೆಗಳನ್ನು ಅಥವಾ ಸಿದ್ಧತೆಗಳನ್ನು ಮಾಡಿಕೊಳ್ಳುವದಿಲ್ಲ.

ನಮ್ಮ ಜೀವಿತಗಳಿಗಾಗಿ ದೇವರ ಮಾರ್ಗದರ್ಶನವನ್ನು ಮತ್ತು ನಿರ್ದೇಶನವನ್ನು ಹುಡುಕುವದು ನಮ್ಮ ಧ್ಯಾನವಾಗಿರಬೇಕು, ನಂತರ ಕಷ್ಟಪಟ್ಟು ಕೆಲಸ, ಯೋಜನೆ, ಕಾರ್ಯತಂತ್ರ ಮಾಡಿ, ಆತನ ಉದ್ದೇಶಗಳು ನೆರವೇರಿರುವದನ್ನು ನೋಡುವದಕ್ಕೆ ನಮ್ಮನ್ನು ಸಿದ್ಧಪಡಿಸಿಕೊಳ್ಳಬೇಕು.

ನಾವು ಯೋಜನೆ ಮಾಡಿದ ನಂತರವೂ ಸಹ, ನಾವು ನಮ್ಮ ಕೆಲಸಗಳನ್ನು ಕರ್ತನಿಗೆ ಒಪ್ಪಿಸಿ, ನಾವು ಮಾಡಿರುವದನ್ನು ಸ್ಥಾಪಿಸುವದಕ್ಕೆ ಆತನ ಮೇಲೆ ಅವಲಂಬಿತರಾಗಿರಬೇಕು. ಆತನು ನಮಗೆ ಕೊಟ್ಟಿರುವ ಮಾರ್ಗದರ್ಶನಕ್ಕೆ ಅನುಸಾರವಾಗಿ ನಾವು ಯೋಜನೆ ಮಾಡುತ್ತೇವೆ, ಮತ್ತು ನಾವು ಆ ಯೋಜನೆಗೆ ತಯಾರಿ ಮಾಡಿಕೊಂಡಿರುವ ಹಾಗೆ, ದೇವರು ನಮ್ಮ ಹೆಜ್ಜೆಗಳನ್ನು ನಿರ್ದೇಶಿಸುತ್ತಾನೆ ಎಂಬುದನ್ನು ನಾವು ತಿಳಿದಿರುತ್ತೇವೆ.

ಜ್ಞಾನೋಕ್ತಿ–16:3, 9

**3–ನಿನ್ನ ಕಾರ್ಯಭಾರವನ್ನು ಯೆಹೋವನಿಗೆ ವಹಿಸಿದರೆ ನಿನ್ನ ಉದ್ದೇಶಗಳು ಸಫಲವಾಗುವವು.**

**9–ಮನುಷ್ಯನು ತನ್ನ ಮನದಂತೆ ದಾರಿಯನ್ನಾರಿಸಿಕೊಂಡರೂ ಯೆಹೋವನೇ ಅವನಿಗೆ ಗತಿಯನ್ನು ಏರ್ಪಡಿಸುವನು.**

ಕೇವಲ ಏನಾದರೊಂದನ್ನು ಮಾಡುವದಕ್ಕೆ ದೇವರು ನಮ್ಮನ್ನು ಮುನ್ನಡೆಸಿ ನಿರ್ದೇಶನ ಮಾಡುವದರಿಂದ ದಾರಿಯು ಯಾವಾಗಲೂ ಸುಲಭವಾಗಿ ಹೋಗುತ್ತದೆ ಎಂದು ಅರ್ಥವಲ್ಲ. ನಾವು ದೇವರಿಂದ ಹೊಂದಿಕೊಂಡಿರುವ ಮಾರ್ಗದರ್ಶನದ ಮೇಲೆ ಆಧಾರಗೊಂಡಿರುವ ದೇವರ ಒಂದು ಯೋಜನೆಯನ್ನು ನಾವು ತಯಾರಿ ಮಾಡಿಕೊಂಡಿರುವ ಹಾಗೆ ತಾಳ್ಮೆಯನ್ನು, ಶ್ರದ್ಧೆಯನ್ನು ಮತ್ತು ಸಹನಶಕ್ತಿಯನ್ನು ಅಭ್ಯಾಸ ಮಾಡಬೇಕು.

ಜ್ಞಾನೋಕ್ತಿ–21:5

**ಶ್ರಮಶೀಲರಿಗೆ ತಮ್ಮ ಯತ್ನಗಳಿಂದ ಸಮೃದ್ಧಿ; ಆತುರಪಡುವವರಿಗೆಲ್ಲ ಕೊರತೆಯೇ.**

## ವ್ಯಾಕುಲತೆಗಳನ್ನು ದೂರವಿರಿಸುವದು

ದೇವರು ನಮಗೆ ಮಾಡುವದಕ್ಕೆ ಯಾವುದನ್ನು ನಿರ್ದೇಶಿಸಿದ್ದಾನೋ ಅಥವಾ ವಹಿಸಿಕೊಟ್ಟಿದ್ದಾನೋ ಅದರ ಮೇಲೆ ಗಮನ ಕೊಡುವದಕ್ಕೆ ನಾವು ಕಲಿತುಕೊಳ್ಳಬೇಕು. ನಮ್ಮ ಗಮನವನ್ನು ಮುರಿಯುವದಕ್ಕೆ ವ್ಯಾಕುಲತೆಗಳು ನಮ್ಮ ದಾರಿಗೆ ಅಡ್ಡ ಬರುತ್ತವೆ. ನಮ್ಮ ಗಮನವು ಮುರಿದು ಹೋದಾಗ, ನಾವು ಸಮಯವನ್ನು, ಬಲವನ್ನೂ ಮತ್ತು ನಾವು ಮಾಡುತ್ತಿರುವದನ್ನು ಯೋಚಿಸದಿರುವ ಸಂಗತಿಗಳ ಮೇಲಿನ ಸಂಪನ್ಮೂಲಗಳನ್ನು ವ್ಯರ್ಥಗೊಳಿಸುವದಕ್ಕೆ ಹವಣಿಸುತ್ತೇವೆ.

ನೀವು ದೇವರ ನಿರ್ದೇಶನವನ್ನು ಹೊಂದಿಕೊಂಡಾಗ ಅದನ್ನು ಅನುಸರಿಸಿರಿ. ಅದಕ್ಕೆ ವಿಷಯಗಳನ್ನು ಸೇರಿಸುವದಕ್ಕೆ ಪ್ರಯತ್ನಿಸಬೇಡಿರಿ, ಅದನ್ನು ನಿಮಗಾಗಿ ದೇವರು ಎಂದಿಗೂ ಸಂಕಲ್ಪಿಸಿಲ್ಲ. ಬೇರೆಯವರಿಂದ ನಕಲು ಮಾಡಬೇಡಿರಿ. ನಮ್ಮನ್ನು

ಸುಲಭವಾಗಿ ವ್ಯಾಕುಲಗೊಳಿಸುವ ಮತ್ತು ನಮ್ಮನ್ನು ನಿಧಾನಗೊಳಿಸುವ ಹೆಚ್ಚಾದ ಎಲ್ಲಾ ಭಾರಗಳನ್ನೂ ಮತ್ತು ಪಾಪಗಳನ್ನೂ ಪಕ್ಕಕ್ಕಿರಿಸಿ. ಗಮನದೊಂದಿಗೆ ಓಟವನ್ನು ಓಡಿರಿ.

## ಕರ್ತನೇ ನಾನು ಮಾರ್ಗದಲ್ಲಿದ್ದಂತೆಯೇ ನನ್ನನ್ನು ಮುನ್ನಡೆಸು

ಆದಿ-24:27

**ನನ್ನ ದಣಿಯಾದ ಅಬ್ರಹಾಮನ ದೇವರಾಗಿರುವ ಯೆಹೋವನಿಗೆ ಸ್ತೋತ್ರವಾಗಲಿ. ಆತನು ತನ್ನ ಪ್ರೀತಿಯನ್ನೂ ಸತ್ಯತೆಯನ್ನೂ ನನ್ನ ದಣಿಯಿಂದ ತೆಗೆಯಲಿಲ್ಲ; ನನ್ನನ್ನು ನನ್ನ ದಣಿಯ ಬಂಧುಗಳ ಮನೆಗೆ ನೀಟಾದ ದಾರಿಯಿಂದಲೇ ಕರಕೊಂಡು ಬಂದಿದ್ದಾನೆ ಅಂದನು.**

ನಿಲ್ಲಿಸಿರುವ ವಾಹನವನ್ನು ದಾರಿಗೆ ತಿರುಗಿಸುವದು ನಿಜವಾಗಿಯೂ ಯಾವ ಅರ್ಥವನ್ನು ಉಂಟುಮಾಡುವದಿಲ್ಲ. ನಾವು ಇದನ್ನು ಮಾಡುವದಿಲ್ಲ. ಆದರೆ ಒಂದು ಸಲ ವಾಹನವು ಚಲಿಸುವದಕ್ಕೆ ಪ್ರಾರಂಭಿಸಿದರೆ ಆಗ ಅದನ್ನು ತಿರುಗಿಸುವ ಅಗತ್ಯರುತ್ತದೆ ಮತ್ತು ಹಾಗೆ ಮಾಡುವದು ಅನುಕೂಲವೂ ಮತ್ತು ಅವಶ್ಯಕವೂ ಆಗಿರುತ್ತದೆ.

ಕೆಲವು ಸಲ ನಮ್ಮ ಆಲಸ್ಯ ಮತ್ತು ಅನುಮಾನಗಳು, ನಮ್ಮ ಜೀವಿತಗಳಿಗಾಗಿ ದೇವರ ನಿರ್ದೇಶನವನ್ನು ಹೊಂದಿಕೊಳ್ಳುವದರಿಂದ ನಿಜ ವಾಗಿಯೂ ನಮ್ಮನ್ನು ತಡೆಯುತ್ತವೆ. ನಾವು ''ನಿಲ್ಲಿಸಲ್ಪಟ್ಟಿದ್ದರೆ'' (parked), ಬಹುಶ: ದೇವರು ನಮಗೆ ಮಾಡುವ ಯಾವುದೇ ಉಪದೇಶ, ಮಾರ್ಗದರ್ಶನ ಅಥವಾ ನಿರ್ದೇಶನವು ನಮಗೆ ಯಾವ ಅರ್ಥವನ್ನು ಉಂಟುಮಾಡುವದಿಲ್ಲ. ಇಗ್ನಿಷನ್ ಆಫ್ ಆಗಿರುತ್ತದೆ. ಹ್ಯಾಂಡ್‌ಬ್ರೇಕ್ ಆನ್ ಆಗಿರುತ್ತದೆ. ಮತ್ತು ದೇವರು ನನ್ನನ್ನು ದಾರಿಗೆ ನಡೆಸುತ್ತಿಲ್ಲ(ಮುನ್ನಡೆಸುವದು, ಮಾರ್ಗದರ್ಶಿಸುವದು) ಎಂದು ನಾವು ದೂರು ಹೇಳುತ್ತೇವೆ. ಒಳ್ಳೇದು, ಆತನ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಹೊಂದಿಕೊಳ್ಳುವ ಕ್ರಮದಲ್ಲಿ, ನಾವು ಇಗ್ನಿಶನ್ ಆನ್ ಮಾಡುವದು ಅಗತ್ಯ, ಮತ್ತು ವಾಹನವನ್ನು ಚಲನೆಯೊಳಗಿಟ್ಟು ಆ್ಯಕ್ಸಿಲರೇಟರ್ ಮೇಲೆ ಕಾಲಿಡಬೇಕು. ಆಗ ಆತನ ಮಾರ್ಗದರ್ಶನವೂ ಮತ್ತು ನಿರ್ದೇಶನವು ನಮ್ಮನ್ನು ತಿರುಗಿಸಿ ಆತನ ಉದ್ದೇಶಗಳೊಳಗೆ ನಮ್ಮನ್ನು ತೆಗೆದುಕೊಂಡು ಹೋಗುತ್ತದೆ.

ಇಸಾಕನಿಗಾಗಿ ಒಬ್ಬ ಮದುಮಗಳನ್ನು ಹುಡುಕುವ ಕೆಲಸದೊಂದಿಗೆ ಕಳುಸಲ್ಪಟ್ಟಿದ್ದ ಅಬ್ರಹಾಮನ ಸೇವಕನ ಕುರಿತು ಆಲೋಚಿಸಿರಿ (ಆದಿ-24). ಅವನು ಕೇವಲ ಪ್ರಾರ್ಥಿಸಿ ಏನನ್ನೂ ಮಾಡದೇ ಇರಲಿಲ್ಲ. ಅವನು ತನ್ನ ಕೆಲಸದ ಮೇಲೆ ಹೊರಟು, ತನ್ನ ಕೆಲಸವು ಯಶಸ್ವಿಯಾಗುವಂತೆ ಮಾಡು ಎಂದು ದೇವರನ್ನು ಪ್ರಾರ್ಥಿಸಿದನು.

ನಾನು ನನ್ನ ದಾರಿಯಲ್ಲಿದ್ದಾಗಲೇ ಕರ್ತನು ನನ್ನನ್ನು ಸರಿಯಾದ ವ್ಯಕ್ತಿಯ ಬಳಿಗೆ ಅಂದರೆ ರೆಬೆಕ್ಕ ಮತ್ತು ಆಕೆಯ ಮನೆಯವರ ಬಳಿಗೆ ನಡೆಸಿದನು. ಹಾಗೇ ನಾವೂ ಸಹ, ನಮ್ಮ ಜೀವಿತಗಳಲ್ಲಿ ಆತನ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಹೊಂದಿಕೊಳ್ಳುವದಕ್ಕೆ ನಾವು ಆಶಿಸಿದರೆ, ವಿಧೇಯತೆ ಮತ್ತು ಕ್ರಿಯೆ ಮಾಡುವದಕ್ಕೆ ಸಿದ್ಧವಾಗಿರುವ ಒಂದು ಸ್ಥಳದಲ್ಲಿ ನಾರಬೇಕು ಮತ್ತು ಆತನು ಹೇಳಿದ್ದನ್ನು ಮಾಡಬೇಕು.

ದೇವರನ್ನು ನಿರೀಕ್ಷಿಸುವದಕ್ಕೆ ನಾವೆಲ್ಲರೂ ಕರೆಯಲ್ಪಟ್ಟಿದ್ದೇವೆ. ಆದರೆ ದೇವರನ್ನು ನಿರೀಕ್ಷಿಸುವದು ಆಲಸ್ಯವುಳ್ಳದ್ದಲ್ಲ. ದೇವರನ್ನು ನಿರೀಕ್ಷಿಸುವದು ಅಂದರೆ ಒಂದು ಜಡತ್ವದ ಸ್ಥಿತಿಯಲ್ಲಿರುವದಲ್ಲ. ದೇವರನ್ನು ನಿರೀಕ್ಷಿಸುವದು ಅಂದರೆ ಒಂದು ಸಕ್ರಿಯ ನಿಲುವಾಗಿದೆ. ನಾವು ಆತನ ಅರ್ಪಣೆಯನ್ನು ಮಾಡುವದಕ್ಕೆ ಆತನ ಮುಂದೆ, ಆತನಿಗಾಗಿ ಇರುತ್ತೇವೆ. ದೇವರೇ ಕೇವಲ ನಿನ್ನೊಂದಿಗಿರುವದಕ್ಕಾಗಿ ನಾನಿಲ್ಲಿದ್ದೇನೆ, ಆದ್ದರಿಂದ ಏನಾದರೂ ಮಾಡುವದಕ್ಕೆ ನನಗೆ ಹೇಳಬೇಡ, ಎಂದು ಹೇಳುತ್ತಾ ಒಂದು ವರ್ತನೆಯೊಂದಿಗೆ ನಾವು ಆತನ ಮುಂದಿರುವದಿಲ್ಲ. ದೇವರೇ ನಾನು ಇಲ್ಲಿದ್ದೇನೆ, ಕೇವಲ ನಿನ್ನೊಂದಿಗಿರುವದಕ್ಕೆ ಮತ್ತು ಮಾಡುವದಕ್ಕೆ ನೀನು ಹೇಳುವ ಏನನ್ನಾದರೂ ಮಾಡುವದಕ್ಕೆ ನಾನು ಸಿದ್ಧನಿದ್ದೇನೆ. ನಾನಿಲ್ಲಿದ್ದೇನೇ, ನನ್ನನ್ನು ಕಳುಹಿಸು ಎಂದು ಹೇಳುವ ವರ್ತನೆಯೊಂದಿಗೆ ನಾವು ಆತನ ಮುಂದೆ ಇದ್ದು ಆತನೊಂದಿಗೆ ಸಮಯ ಕಳೆಯುತ್ತಾ ಆತನಿಗಾಗಿ ನಿರೀಕ್ಷಿಸುತ್ತೇವೆ. ನಿರೀಕ್ಷಿಸುವ ಈ ಸ್ಥಿತಿಯಲ್ಲಿ ನಾವಿದ್ದಾಗ, ದೇವರು ತನ್ನ ಮಾರ್ಗದರ್ಶನವನ್ನು ಮತ್ತು ನಿರ್ದೇಶನವನ್ನು ಮಾತಾಡುತ್ತಾನೆ.

## ಗತಕಾಲದಲ್ಲಿನ ವಾಸಸ್ಥಳವನ್ನು ದೂರವಿರಿಸಿರಿ, ಮುಂದೆ ನೋಡಿರಿ

ಫಿಲಿಪ್ಪಿ-3:13-14

**13-ಸಹೋದರರೇ, ನಾನಂತು ಹಿಡಿದುಕೊಂಡವನೆಂದು ನನ್ನನ್ನು ಈವರೆಗೆ ಎಣಿಸಿಕೊಳ್ಳುವದಿಲ್ಲ; ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವದಕ್ಕೆ**
**14-ಎದೆ ಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ.**

ಒಂದು ಕೊನೆಯ ಮಾತು ಮತ್ತು ಮುಕ್ತಾಯದ ಆಲೋಚನೆಯೇನೆಂದರೆ, ಜೀವಿತದ ಮೂಲಕವಾದ ನಮ್ಮ ಪ್ರಯಾಣದಂತೆ ನಮ್ಮ ಜೀವಿತಗಳ ಮೇಲಿನ ಆತನ ಮುನ್ನಡೆಸುವಿಕೆ, ಮಾರ್ಗದರ್ಶನ ಮತ್ತು ನಿರ್ದೇಶನಕ್ಕೆ ವಿಧೇಯತೆಯಲ್ಲಿ ನಡೆಯುವದಕ್ಕೆ ನಮ್ಮ ಕಟ್ಟಕಡೆಯದನ್ನು ಮಾಡುವದಾಗಿದೆ. ನಾವು ಪರ್ವತದಂತ ಉನ್ನತವಾದ ಅನುಭವಗಳ ಮೂಲಕವಾಗಿ ಹೋಗುತ್ತೇವೆ. ನಾವು ಜೀವನದ

ಕೆಲವು ಸವಾಲಿನ ಕಾಲಗಳ ಮೂಲಕವಾಗಿಯೂ ಸಹ ನಡೆಯಬೇಕಾಗುತ್ತದೆ. ಆದರೆ ಅಪೊಸ್ತಲನಾದ ಪೌಲನು ಹೇಳಿರುವಂತೆ, ನಾವು ಹಿಂದಿನ ಸಂಗತಿಗಳನ್ನು ಮರೆತು ಬಿಡುವದಕ್ಕೆ ಕಲಿಯಬೇಕು ಮತ್ತು ಮುಂದಿರುವದನ್ನು ತಲುಪುವದಕ್ಕೆ ಮುಂದೆ ಹೋಗುತ್ತಿರಬೇಕು. ನಾವು ಹಿಂದಿನ ಮಹಿಮೆಗಳಲ್ಲಿ ಜೀವಿಸುವದಕ್ಕೆ ಸಾಧ್ಯವಿಲ್ಲ. ನಾವು ಹಿಂದಿನ ಸೋಲುಗಳಲ್ಲಿ, ನಿರಾಶೆಗಳಲ್ಲಿ, ನೋವುಗಳಲ್ಲಿ ಅಥವಾ ಅನಾಹುತಗಳಲ್ಲಿ ಸಿಕ್ಕಿಬಿದ್ದಿರುವದಿಲ್ಲ. ಮುಕ್ತಾಯದ ಗೆರೆಯು ನಮ್ಮ ಮುಂದಿರುತ್ತದೆ, ನಮ್ಮ ಹಿಂದಿರುವದಿಲ್ಲ. ನಮ್ಮ ಮುಂದಿರುವ ಗುರಿಯ ಕಡೆಗೆ ಚಲಿಸುವದಕ್ಕೆ ನಾವು ಪಡೆದುಕೊಂಡಿರುವ ಎಲ್ಲವನ್ನೂ ಇಟ್ಟು ನಮ್ಮ ಮುಂದೆ ಇಡಲ್ಪಟ್ಟಿರುವ ಓಟವನ್ನು ಮುಗಿಸಬೇಕು. ಹಿಂಬದಿಯಲ್ಲಿರುವದನ್ನು ನೋಡುವ ಕನ್ನಡಿಯಲ್ಲಿ ಯಾವಾಗಲೂ ನೋಡುತ್ತಾ ನಾವು ವಾಹನವನ್ನು ಓಡಿಸುವದು ಸಾಧ್ಯವಿಲ್ಲ. ಒಂದು ಅನಿಯುತವಾದ ಕ್ಷಣ ದೃಷ್ಟಿಯು ಚೆನ್ನಾಗಿರುತ್ತದೆ. ಆದರೆ ಹೆಚ್ಚಾದ ಸಮಯ ನಾವು ಮುಂದಿರುವದನ್ನು ನೋಡುತ್ತಿರಬೇಕು.

ಹಿಂದಿನದನ್ನು ಬಿಟ್ಟುಬಿಡಿರಿ. ಹೊಸದನ್ನು ಆರಂಭಿಸಿರಿ. ದೇವರು ಎಲ್ಲಾ ಸಂಗತಿಗಳನ್ನು ಹೊಸದನ್ನಾಗಿ ಮಾಡುತ್ತಾನೆ. ಆತನ ಮಾರ್ಗದರ್ಶನವನ್ನು ಹೊಂದಿಕೊಳ್ಳಿರಿ. ಮುಂದಕ್ಕೆ ಸಾಗಿರಿ. ನಿಮ್ಮ ಊಹೆಗಿಂತಲೂ ಭವಿಷ್ಯವು ತುಂಬ ದೊಡ್ಡದಾಗಿದೆ. ನಿಮಗಾಗಿ ಆತನ ಉನ್ನತವಾದ ಮತ್ತು ಉತ್ತಮವಾದುದರೊಳಗೆ ಕರ್ತನು ನಿಮ್ಮನ್ನು ಮುನ್ನಡೆಸಲಿ.

## ಪರ್ಯಾಲೋಚನೆ

1) ದೇವರ ಮಾರ್ಗದರ್ಶನದ ಹಾಗೆ ನಾವು ಯಾವುದನ್ನು ಹೊಂದಿಕೊಳ್ಳುತ್ತೇವೋ ಅದರಿಂದ ಹೊರನಡೆಯುವದಕ್ಕಿಂತ ಮೊದಲು ಅದನ್ನು ಪರೀಕ್ಷಿಸುವದು ಮತ್ತು ಊರ್ಜಿತಗೊಳಿಸುವದು ಯಾಕೆ ಪ್ರಾಮುಖ್ಯವಾದುದಾಗಿದೆ?

2) ನಮ್ಮ ಜೀವಿತಗಳಲ್ಲಿ ಆತನ ಮಾರ್ಗದರ್ಶನವನ್ನು ನಾವು ಅನುಸರಿಸುವಂತೆ, ನಂಬಿಕೆಯ ಒಂದು ಅಪಾಯವನ್ನು ತೆಗೆದು ಕೊಳ್ಳುವದು ಮತ್ತು ಎಚ್ಚರಿಕೆಯ ಪಕ್ಕದಲ್ಲಿ ನಿಲ್ಲುವದು ಯಾವಾಗ ಎನ್ನುವದನ್ನು ನಾವು ಹೇಗೆ ತಿಳಿದುಕೊಳ್ಳುತ್ತೇವೆ?

3) ಆತನ ಕೊನೆಯ ಉಪದೇಶದೊಂದಿಗೆ ವಾಸಿಸುವದು ಎಂಬುದರ ಅರ್ಥವೇನು?

4) ದೇವರು ನಮ್ಮ ಜೀವಿತಗಳಿಗಾಗಿ ತನ್ನ ಮಾರ್ಗದರ್ಶನವನ್ನೂ ಮತ್ತು ನಿರ್ದೇಶನವನ್ನೂ ಪ್ರಕಟಿಸಿದರೆ, ಇದನ್ನು ಕಾರ್ಯಗತಗೊಳಿಸುವದಕ್ಕೆ ನಾವು ಯಾಕೆ ಯೋಜನೆ, ಕಾರ್ಯತಂತ್ರ, ಮತ್ತು ಸಿದ್ಧತೆ ಮಾಡುವ ಅಗತ್ಯ ನಮಗೆ ಇನ್ನೂ ಇರುತ್ತದೆ?

5) ನೀವು ದೇವರ ಮಾರ್ಗದರ್ಶನವನ್ನು ಹೊಂದಿಕೊಂಡಾಗ, ಮತ್ತು ನಿಮ್ಮ ಜೀವಿತಗಳಲ್ಲಿ ದೇವರು ನಿಮ್ಮನ್ನು ಹೋದದಾರಿಗೆ ಮತ್ತೆ ಹಿಂದಕ್ಕೆ ತಂದಾಗ ನೀವು ಎಲ್ಲಿ ಇದನ್ನು ಕಳೆದುಕೊಂಡೆ ಎನ್ನುವ ಒಂದು ಅಥವಾ ಹೆಚ್ಚು ಪರಿಸ್ಥಿತಿಗಳನ್ನು ನೀವು ಆಲೋಚಿಸಬಹುದಾ? ಅಂತಹ ಒಂದು ಪರಿಸ್ಥಿತಿಯನ್ನು ಹಂಚಿಕೊಳ್ಳಿರಿ.

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು(ಮೈಕ್ರೋಸಾಫ್ಟ್ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ಧೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಆಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

ಶ್! ಹರಟೆ ಬೇಡ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ–ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಬುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ಧೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

"**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**" (ಅಪೊಸ್ತಲರ ಕೃತ್ಯ 10:43)

"**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**" (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, "ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

## DOWNLOAD THE FREE APP!

*Search for*

"All Peoples Church Bangalore"
in the App or Google play stores.







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ಟಿಪ್ಪಣಿಗಳು

ಟಿಪ್ಪಣಿಗಳು

ಟಿಪ್ಪಣಿಗಳು

ಟಿಪ್ಪಣಿಗಳು

ಟಿಪ್ಪಣಿಗಳು

ಸತ್ಯವೇದ ಶಾಲೆ
ಮತ್ತು ಸೇವಾತರಬೇತಿಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

APC-BC is accredited by the
Nations Association for Theological
Accreditation (NATA).

ದೇವರು ನಮ್ಮನ್ನು ಮುನ್ನಡೆಸುತ್ತಾನೆ ಮತ್ತು ಮಾರ್ಗದರ್ಶಿಸುತ್ತಾನೆ ಎಂಬುದಾಗಿ ವಾಗ್ದಾನ ಮಾಡಿದ್ದಾನೆ. ನಮ್ಮ ಜೀವಿತಕ್ಕಾಗಿ ದೇವರ ಮಾರ್ಗದರ್ಶನ ಪಡೆಯುವುದರ ಅನೇಕ ಮಾರ್ಗಗಳನ್ನು ಈ ಪುಸ್ತಕದಲ್ಲಿ ಹಂಚಿಕೊಳ್ಳುತ್ತೇವೆ.

1. ದೇವರ ವಾಕ್ಯ
2. ವಾಸಿಸುವ ಆತ್ಮ
3. ಪವಿತ್ರಾತ್ಮನ ಸ್ವರ
4. ಪವಿತ್ರಾತ್ಮನ ವರಗಳು
5. ಕನಸುಗಳ ಮತ್ತು ದರ್ಶನಗಳು
6. ಪ್ರವಾದನೆಗಳು
7. ದೇವದೂತರು
8. ದೈವಿಕ ಸಲಹೆ
9. ನವಿಕೃತ ಮನಸ್ಸು
10. ಸಂದರ್ಭಗಳು ಮತ್ತು ದೈವಿಕ ವಾದ್ಯವೃಂದ

ಇದನ್ನು ದೃಷ್ಟಾಂತ ಪಡಿಸಲು ಸಹಾಯಕ್ಕಾಗಿ ಅನೇಕ ವೈಯಕ್ತಿಕ ಕಥೆಗಳನ್ನು ನಾವು ಹಂಚಿಕೊಂಡಿದ್ದೇವೆ. ನೀವು ದೇವರಿಂದ ಹೇಗೆ ಕೇಳಿಸಿಕೊಳ್ಳುತ್ತೀರಿ ಎಂಬುದನ್ನು ನೀವು ಕಲಿಯುತ್ತೀರಿ ಮತ್ತು ಆತನ ಮಾರ್ಗದರ್ಶನ ಪಡೆಯಿತ್ತೀರಿ ಆದ್ದರಿಂದ ನಿಮ್ಮ ಜೀವಿತಕ್ಕಾಗಿರುವ ದೇವರ ಉದ್ದೇಶಗಳನ್ನು ನೆರವೇರಿಸಬಹುದು.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org